ಹುಬ್ಬಳ್ಳಿ
ಮಂಗಳವಾರ, 3 ಮಾರ್ಚ್ 2026
ಸಂಪುಟ 15, ಸಂಚಿಕೆ 344, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಹೋಳಿ ಹಬ್ಬದ ಶುಭಾಶಯಗಳು
ಲೋಕಹಿತಂ ಮಮ ಕರಣೀಯಂ



ಪಾಕಿಸ್ತಾನಕ್ಕೆ ಅಫ್ಘಾನಿಸ್ತಾನ ಡ್ರೋನ್ ಆಘಾತ | ೦೭
ಅಗ್ಗದ ತಂತ್ರಜ್ಞಾನದ ಹೊಸ ಪ್ರಯೋಗ | ೦೭
ಇಪಿಎಫ್ ಬಡ್ಡಿದರ ಬದಲಾವಣೆಯಿಲ್ಲ | ೦೭

ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಹುಣ್ಣಿಮೆ, ನಕ್ಷತ್ರ : ಮಘೆ

ದಿನದ ಮಾತು

ಚಿಕ್ಕದೇ ಆಗಲಿ, ದೊಡ್ಡದೇ ಆಗಲಿ ಪ್ರತಿಯೊಂದು ವಸ್ತುವಿಗೂ ತನ್ನದೇ ಆದ ಪರಿಪೂರ್ಣತೆ ಇರುತ್ತದೆ.
▲ಲೋಕೋಕ್ತಿ

ಗೋಕೃಪಾಮೃತ ಭೂಮಿಗೆ ಅಮೃತ

ಧರಣಿ ಮಂಡಲ
• ಕೆ.ಎನ್.ಶೈಲೇಶ್ ಹೊಳ್ಳ
• ಪುಟ ೬

ಕಿರುಸುದ್ದಿ

ಚಂದ್ರಗ್ರಹಣ: ದೇಗುಲಗಳಲ್ಲಿ ಪೂಜಾ ಸಮಯ ಬದಲು

• **ಬೆಂಗಳೂರು:** ಕೇತುಗ್ರಸ್ತ ಚಂದ್ರಗ್ರಹಣವು ಮಾ.3ರಂದು ಗೋಚರಿಸುವ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ದೇವಾಲಯಗಳಲ್ಲಿ ಪೂಜಾ ಸಮಯ



ಬದಲಾವಣೆಯಾಗಲಿದೆ. ಮಧ್ಯಾಹ್ನ 3.30 ರಿಂದ ಸಂಜೆ 6.48 ರವರೆಗೆ ಚಂದ್ರಗ್ರಹಣ ಗೋಚರಿಸಲಿದ್ದು, ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಶ್ರೀ ಗವಿಗಂಗಾಧರೇಶ್ವರ, ಹಲಸೂರಿನ ಸೋಮೇಶ್ವರ ದೇವಾಲಯ, ಬೇಲೂರು ಚನ್ನಕೇಶವ, ಶ್ರೀ ಕ್ಷೇತ್ರ ಧರ್ಮಸ್ಥಳ, ಹೊರನಾಡು ಅನ್ನಪೂರ್ಣೇಶ್ವರಿ, ಮೈಸೂರಿನ ಚಾಮುಂಡೇಶ್ವರಿ ದೇವಾಲಯ, ಮಲೆ ಮಹದೇಶ್ವರ ಬೆಟ್ಟ, ಮೈಸೂರು ಚಾಮುಂಡೇಶ್ವರಿ ಸೇರಿದಂತೆ ರಾಜ್ಯದ ವಿವಿಧ ದೇವಾಲಯ ಗಳಲ್ಲಿ ಪೂಜೆ ಹಾಗೂ ಪ್ರಸಾದ ಸಮಯದಲ್ಲಿ ಬದಲಾವಣೆ ಮಾಡಲಾಗಿದೆ.

• ಪುಟ ೫

ರಾಮಲಲಾ ದರ್ಶನದ ಸಮಯ ಬದಲಾವಣೆ

• ಪುಟ ೭

ದುಬೈನಲ್ಲಿ ಸಿಲುಕಿದ ತುಮಕೂರಿನ ಐವರು

• ಪುಟ ೫

ಭಾರತೀಯರನ್ನು ಸುರಕ್ಷಿತವಾಗಿ ಕರೆತರಲು ಕೇಂದ್ರ ಬದ್ಧ: ಎಚ್ಕೆ

• ಪುಟ ೫

ವಟವೃಕ್ಷವಾಗಿ ಬೆಳೆದ ಸಂಘ

• ಪುಟ ೬

ತಿ.ನರಸೀಪುರ ರೇಷ್ಮೆ ಕಾರ್ಖಾನೆ ಮುಚ್ಚುವುದಿಲ್ಲ

• ಪುಟ ೫

ಹಳೆಯ ಮೀಸಲಾತಿಯಂತೆ ನೇಮಕ: ಜಾರಕಿಹೊಳಿ

• ಪುಟ ೫

ಪಿಯು ಪರೀಕ್ಷೆ: 1,802 ವಿದ್ಯಾರ್ಥಿಗಳ ಗೈರು

• ಪುಟ ೫

ಮಧ್ಯಪ್ರಾಚ್ಯ ದೇಶಗಳಲ್ಲಿ ಹೆಚ್ಚುತ್ತಿದೆ ಯುದ್ಧದ ಕಾವು | ಇಸ್ರೇಲ್–ಅಮೆರಿಕ ಜಂಟಿ ದಾಳಿಗಳಿಗೆ ಇರಾನ್ ಬೆಂಬಲಿತ ಉಗ್ರ ಗುಂಪುಗಳಿಂದ ಕ್ಷಿಪಣಿ ಮಳೆ | ಕುವೈತ್‌ನಲ್ಲಿ ಮೂರು ಯುಎಸ್ ಯುದ್ಧ ವಿಮಾನ ನಾಶ

9 ದೇಶಗಳಿಗೆ ಸಮರ ವಿಸ್ತರಣೆ

• **ದುಬೈ/ ಜೆರುಸಲೇಂ/ವಾಷಿಂಗ್ಟನ್/ಹೊಸದಿಲ್ಲಿ:** ಇರಾನ್ ಮತ್ತು ಅದರ ಬೆಂಬಲಿತ ಉಗ್ರ ಗುಂಪುಗಳು ಸೋಮವಾರ ಇಸ್ರೇಲ್, ಕೆಲವು ಅರಬ್ ರಾಷ್ಟ್ರಗಳು ಹಾಗೂ ಅಮೆರಿಕ ಸೇನಾ ಗುರಿಗಳ ಮೇಲೆ ಕ್ಷಿಪಣಿಗಳು ಮತ್ತು ಡ್ರೋನ್ ದಾಳಿಗಳನ್ನು ನಡೆಸಿದರೆ, ಇಸ್ರೇಲ್ ಮತ್ತು ಅಮೆರಿಕ ಇರಾನ್ ಮೇಲಿನ ವಾಯುದಾಳಿಗಳನ್ನು ತೀವ್ರಗೊಳಿಸಿದವು. ಈ ಮೂಲಕ ಯುದ್ಧವು 9 ದೇಶಗಳಿಗೆ ವಿಸ್ತರಿಸಿದೆ. ಕುವೈತ್ ತನ್ನ ವಾಯುಪ್ರದೇಶದಲ್ಲಿ ತಪ್ಪಾಗಿ ಅಮೆರಿಕದ ಮೂರು ಯುದ್ಧ ವಿಮಾನಗಳನ್ನು ಹೊಡೆದುರುಳಿಸಿದ ಘಟನೆ ಕೂಡ ನಡೆದಿದೆ.



ಯುದ್ಧವು ಮಧ್ಯಪೂರ್ವದ ರಾಜಕೀಯ ಮತ್ತು ಆರ್ಥಿಕ ಸ್ಥಿರತೆಗೆ ಗಂಭೀರ ಸವಾಲು ಒಡ್ಡಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ತೀವ್ರಗೊಳ್ಳುವ ಸಾಧ್ಯತೆಯಿದೆ. ದಾಳಿಗಳ ತೀವ್ರತೆ, ಇರಾನ್‌ನ ಪರಮೋಚ್ಚ ನಾಯಕ ಖಮೇನಿ ಸಾವಿನ ಸುದ್ದಿ ಹಾಗೂ ಯಾವುದೇ ಸಂಧಾನ ಮಾತುಕತೆ ಕಾಣದಿರುವುದು ಯುದ್ಧವು ಶೀಘ್ರ ಅಂತ್ಯವಾಗುವ ಸಾಧ್ಯತೆಯನ್ನು ಕಡಿಮೆ ಮಾಡಿದೆ. ಮಧ್ಯಪ್ರಾಚ್ಯದ ಸುರಕ್ಷಿತ ತಾಣಗಳೆಂದು ಪರಿಗಣಿಸಲ್ಪಟ್ಟ ದುಬೈ ಸೇರಿದಂತೆ ಹಲವೆಡೆಗಳಿಗೆ ದಾಳಿ ತಲುಪಿದ್ದು, ಜಾಗತಿಕ ಮಟ್ಟದಲ್ಲಿ ಸಾವಿರಾರು ವಿಮಾನ ಪ್ರಯಾಣಿಕರು ಸಿಲುಕಿದ್ದಾರೆ. ತೈಲ ಬೆಲೆ ಏರಿಕೆಯಾಗಿದೆ.

ಕುವೈತ್‌ನಲ್ಲಿ ಅಮೆರಿಕ ರಾಯಭಾರಿ ಕಚೇರಿ ಆವರಣದಲ್ಲಿ ಬೆಂಕಿ ಮತ್ತು ಹೊಗೆ ಕಾಣಿಸಿಕೊಂಡಿದೆ. ಪುಟ ೪

ಇರಾನ್ ಪ್ರತಿ ದಾಳಿ: 9 ರಾಷ್ಟ್ರಗಳಿಗೆ ಯುದ್ಧ ಹಾನಿ

ಇಸ್ರೇಲ್, ಬಹ್ರೈನ್, ಇರಾಕ್, ಜೋರ್ಡಾನ್, ಕುವೈತ್, ಕತಾರ್, ಸೌದಿ ಅರೇಬಿಯಾ, ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ), ಒಮಾನ್



ಇರಾನ್ ಅಣು ಸ್ಥಾವರಕ್ಕೆ ಹಾನಿ

ಇತ್ತೀಚೆಗೆ ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಮಿಲಿಟರಿ ಕಾರ್ಯಾಚರಣೆಯ ವೇಳೆ ಇರಾನ್‌ನ ಬೃಹತ್ ನಟಾಂಜ್ ಪರಮಾಣು ಕೇಂದ್ರಕ್ಕೆ ಹಾನಿಯಾಗಿದೆ. ದಾಳಿಗೊಳಗಾದ ಸ್ಥಳದಿಂದ ವಿಕಿರಣ ಸೂಸುವಿಕೆ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ, ಇದು ಬಹಳ ಕಳವಳಕಾರಿ ಬೆಳವಣಿಗೆ ಎಂದು ಅಂತಾರಾಷ್ಟ್ರೀಯ ಪರಮಾಣು ಇಂಧನ ಸಂಸ್ಥೆ (ಐಎಇಎ) ಹೇಳಿದೆ. ಅಂತೆಯೇ ಪ್ರಾದೇಶಿಕ ಉದ್ವಿಗ್ನತೆ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಪರಮಾಣು ಕೇಂದ್ರಗಳು ಅಪಾಯದಲ್ಲಿವೆ ಎಂದು ಎಚ್ಚರಿಕೆ ನೀಡಿದೆ. ಆದರೆ, ಈ ಬಗ್ಗೆ ಇಸ್ರೇಲ್ ಮತ್ತು ಅಮೆರಿಕ ಈ ಕುರಿತು ಪ್ರತಿಕ್ರಿಯೆ ನೀಡಿಲ್ಲ.

ತೈಲಮೂಲಸೌಕರ್ಯಗಳ ಮೇಲೆ ಇರಾನ್ ದಾಳಿ

ಸೌದಿ ಅರೇಬಿಯಾದ ರಾಸ್ ತನುರಾ ತೈಲ ಶುದ್ಧೀಕರಣಾಗಾರದ ಮೇಲೆ ಡ್ರೋನ್ ದಾಳಿ ನಡೆದಿದ್ದು, ರಕ್ಷಣಾ ವ್ಯವಸ್ಥೆ ಡ್ರೋನ್ ಹೊಡೆದುರುಳಿಸಿದೆ. ಘಟನೆಯ ನಂತರ ಶುದ್ಧೀಕರಣಾಗಾರವನ್ನು ಮುನ್ನೆಚ್ಚರಿಕಾ ಕ್ರಮವಾಗಿ ತಾತ್ಕಾಲಿಕವಾಗಿ ಮುಚ್ಚಲಾಗಿದೆ. ಒಮಾನ್ ಕರಾವಳಿಯ ಬಳಿ ತೈಲ ಸಾಗಣೆ ಹಡಗಿನ ಮೇಲೆ ನಡೆದ ಡ್ರೋನ್ ದಾಳಿಯಲ್ಲಿ ಭಾರತೀಯ ನಾವಿಕ ಮೃತಪಟ್ಟಿದ್ದಾನೆ. ಕತಾರ್ ತನ್ನ ದ್ರವೀಕೃತ ನೈಸರ್ಗಿಕ ಅನಿಲ ಉತ್ಪಾದನೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವುದಾಗಿ ಘೋಷಿಸಿದೆ. ಹಾರ್ಮುಜ್ ಜಲಸಂಧಿಯಲ್ಲಿಯೂ ಹಡಗುಗಳ ಮೇಲೆ ದಾಳಿ ನಡೆದಿದೆ.

ಹಿಜ್ಬುಲ್ಲಾ ದಾಳಿ, ಇಸ್ರೇಲ್ ಪ್ರತಿ ದಾಳಿ

ಹಿಜ್ಬುಲ್ಲಾ ಲೆಬನಾನ್‌ನಿಂದ ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿದೆ. ಪ್ರತಿಯಾಗಿ ಇಸ್ರೇಲ್ ಲೆಬನಾನ್ ಮೇಲೆ ವಾಯುದಾಳಿ ನಡೆಸಿ ಕನಿಷ್ಠ 31 ಮಂದಿಯನ್ನು ಹತ್ಯೆ ಮಾಡಿದೆ. ಇಸ್ರೇಲ್ ಉತ್ತರ ಕಮಾಂಡ್ ಮುಖ್ಯಸ್ಥ ಮೇಜರ್ ಜನರಲ್ ರಾಫಿ ಮಿಲೋ ದಾಳಿಗಳ ತೀವ್ರತೆ ಹೆಚ್ಚಿಸಲಾಗುವುದು ಎಂದು ಹೇಳಿದ್ದಾರೆ.

ಪ್ರಾದೇಶಿಕ ಅಶಾಂತಿ

ಇರಾಕ್‌ನ ಬೆಂಬಲಿತ ಉಗ್ರ ಗುಂಪುಗಳು ಅಮೆರಿಕ ಸೇನೆ ಗುರಿಯಾಗಿಸಿ ಡ್ರೋನ್ ದಾಳಿ ನಡೆಸಿವೆಯೆಂದು ಹೇಳಿಕೊಂಡಿವೆ. ಯುನೈಟೆಡ್ ಅರಬ್ ಎಮಿರೇಟ್ಸ್, ಕುವೈತ್ ಮತ್ತು ಬಹರೇನ್‌ಗಳಲ್ಲಿ ಕೂಡ ದಾಳಿಗಳು ವರದಿಯಾಗಿವೆ. ಯುಎಇಯಲ್ಲಿ ಮೂವರು, ಕುವೈತ್ ಮತ್ತು ಬಹರೇನ್‌ನಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ.

ವಿಶ್ವ ಪೂರೈಕೆ ವ್ಯತ್ಯಯ, ಗಗನಕ್ಕೇರಿದ ತೈಲ ಬೆಲೆ



ತೈಲ ರಾಷ್ಟ್ರ ಇರಾನ್ ಮತ್ತು ಅಮೆರಿಕ-ಇಸ್ರೇಲ್ ನಡುವಿನ ಯುದ್ಧ ಸಂಘರ್ಷದಿಂದ ಜಾಗತಿಕ ಇಂಧನ ಪೂರೈಕೆ ವ್ಯತ್ಯಯ ಉಂಟಾಗಿದ್ದು, ಸೋಮವಾರ ತೈಲ ಬೆಲೆಗಳು ತೀವ್ರ ಏರಿಕೆ ಕಂಡಿವೆ. ಪರ್ಷಿಯನ್ ಗಲ್ಫ್‌ನ ಪ್ರವೇಶ ದ್ವಾರ ಹೋರ್ಮುಜ್ ಜಲಸಂಧಿ ಮೂಲಕ ಸಂಚರಿಸುತ್ತಿದ್ದ ಎರಡು ಹಡಗುಗಳ ಮೇಲಿನ ದಾಳಿ ಸೇರಿದಂತೆ ಈ ಪ್ರದೇಶದೆಲ್ಲೆಡೆ ನಡೆಯುತ್ತಿರುವ ಸಂಘರ್ಷಗಳು ತೈಲ ರಫ್ತಿನ ಮೇಲೆ ಕೆಟ್ಟ ಪರಿಣಾಮ ಬೀರಿವೆ. ಇರಾನ್ ಮತ್ತು ಮಧ್ಯಪ್ರಾಚ್ಯದ ಇತರ ಭಾಗಗಳಿಂದ ತೈಲ ಪೂರೈಕೆ ಸ್ಥಗಿತಗೊಳ್ಳಬಹುದೆಂಬ ಆತಂಕದಲ್ಲಿ ಹೂಡಿಕೆದಾರರಿದ್ದಾರೆ. ಇಂಧನ ತಜ್ಞರ ಪ್ರಕಾರ, ಈ ದಾಳಿಗಳು ಮುಂದುವರಿದರೆ ಕಚ್ಚಾ ತೈಲ ಮತ್ತು ಪೆಟ್ರೋಲ್ ಬೆಲೆಗಳು ಮತ್ತಷ್ಟು ಏರಿಕೆ ಯಾಗಲಿವೆ. ಸೋಮವಾರ ಮುಂಜಾನೆ ಪ್ರತಿ ಬ್ಯಾರೆಲ್‌ಗೆ 72.79 ಡಾಲರ್‌ಗೆ ಮಾರಾಟವಾಯಿತು. ಇದು ಶುಕ್ರವಾರದ ಬೆಲೆಗಿಂತ (ಸುಮಾರು 67) ಶೇ.8.6ರಷ್ಟು ಹೆಚ್ಚಾಗಿದೆ. ಪುಟ ೪

ಅಮೆರಿಕ ಎಚ್ಚರಿಕೆ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಕುವೈತ್‌ನಲ್ಲಿ ಅಮೆರಿಕ ಸೈನಿಕರ ಸಾವಿಗೆ ಪ್ರತೀಕಾರ ತೀರಿಸಲಾಗುವುದು ಎಂದು ಹೇಳಿದ್ದಾರೆ. ಯುದ್ಧ ಕಾರ್ಯಾಚರಣೆಗಳು ಸಂಪೂರ್ಣ ಶಕ್ತಿಯಿಂದ ಮುಂದುವರಿಯುತ್ತವೆ. ಅಮೆರಿಕಾ ಬಿ–2 ಸ್ಟೆಲ್ತ್ ಬಾಂಬರ್ ವಿಮಾನಗಳು ಇರಾನ್‌ನ ಕ್ಷಿಪಣಿ ತಾಣಗಳ ಮೇಲೆ 2 ಸಾವಿರ ಪೌಂಡ್ ಬಾಂಬ್‌ಗಳನ್ನು ಸುರಿದಿವೆ. ಟ್ರಂಪ್ ಸಾಮಾಜಿಕ ಜಾಲತಾಣದಲ್ಲಿ ಇರಾನ್ ನೌಕಾಪಡೆ ಮುಖ್ಯ ಕಚೇರಿ, 9 ಯುದ್ಧ ಹಡಗು ನಾಶವಾಗಿವೆ ಎಂದು ತಿಳಿಸಿದ್ದಾರೆ.

ಪರಿಸ್ಥಿತಿ ಕಳವಳಕಾರಿ: ಪ್ರಧಾನಿ ಮೋದಿ

• **ಹೊಸದಿಲ್ಲಿ:** ನರೇಂದ್ರ ಮೋದಿ ಅವರು ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನ



ಪರಿಸ್ಥಿತಿಯ ಕುರಿತು ಮೊದಲ ಬಾರಿಗೆ ಪ್ರತಿಕ್ರಿಯೆ ನೀಡಿದ್ದು, ಇರಾನ್ ವಿರುದ್ಧ ಅಮೆರಿಕ–ಇಸ್ರೇಲ್ ಜಂಟಿ ದಾಳಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಪರಿಸ್ಥಿತಿ ಗಂಭೀರ ಕಳವಳಕಾರಿ ಎಂದಿದ್ದಾರೆ. ಇರಾನ್ ತನ್ನ ಸರ್ವೋಚ್ಚ ನಾಯಕ ಅಲಿ ಖಮೇನಿ ಅವರ ಹತ್ಯೆ ಹಿನ್ನೆಲೆಯಲ್ಲಿ ಭಾರತದ ಮೌನವನ್ನು ಪ್ರಶ್ನಿಸಿ, ಸ್ಪಷ್ಟ ನಿಲುವು ತಿಳಿಸಲು ಮನವಿ ಮಾಡಿತ್ತು. ಪುಟ ೪

ಕೋಮು ಹಿಂಸೆ ಸಾಧ್ಯತೆ: ಕೇಂದ್ರ ಗೃಹ ಸಚಿವಾಲಯ ಎಚ್ಚರಿಕೆ

ನಿಗಾ ವಹಿಸಲು ರಾಜ್ಯಗಳಿಗೆ ಸೂಚನೆ

• **ಹೊಸದಿಲ್ಲಿ:** ಇರಾನ್ ಒಳಗೊಂಡಂತೆ ಸಂಘರ್ಷ ಮುಂದುವರಿದಿರುವ ಹಿನ್ನೆಲೆಯಲ್ಲಿ ಭಾರತದಲ್ಲೂ ಕೋಮು ಹಿಂಸಾಚಾರಗಳ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ, ಹಾಗಾಗಿ ಸನ್ನದ್ಧ ಸ್ಥಿತಿಯಲ್ಲಿದ್ದುಕೊಂಡು ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಕೇಂದ್ರ ಗೃಹ ಖಾತೆ ರಾಜ್ಯಗಳನ್ನು ಎಚ್ಚರಿಸಿದೆ.

ರಾಜ್ಯಗಳಿಗೆ ಕೇಂದ್ರ ಪತ್ರ

ಪಶ್ಚಿಮ ಏಷ್ಯಾದಲ್ಲಿನ ಸದ್ಯದ ಮಿಲಿಟರಿ ಬೆಳವಣಿಗೆಗಳು ಭಾರತದಲ್ಲಿ ವ್ಯಾಪಕ ಪರಿಣಾಮ ಬೀರುವ ಸಾಧ್ಯತೆಯಿದೆ. ಮುಖ್ಯವಾಗಿ ಧಾರ್ಮಿಕ ಸಮಾವೇಶಗಳು ಅಥವಾ ಸಾರ್ವಜನಿಕ ಸಭೆಗಳಲ್ಲಿ ವಿದೇಶಗಳ ಘಟನಾವಳಿಗಳ ಬಗ್ಗೆ ಪ್ರಚೋದನಾತ್ಮಕ ಪ್ರಸ್ತಾವಗಳು ಕೋಮು ಹಿಂಸಾಚಾರಗಳಿಗೆ ಕಾರಣವಾಗಲಿದೆ. ಹಾಗಾಗಿ ಹಿಂಸಾಚಾರಗಳಿಗೆ ಪ್ರಚೋದನೆ ನೀಡುವ ವ್ಯಕ್ತಿ, ಗುಂಪುಗಳತ್ತ ತೀವ್ರ ನಿಗಾ ಇಡಿ ಎಂದು ಗೃಹ ಖಾತೆ ರಾಜ್ಯಗಳಿಗೆ ಬಿಡುಗಡೆ ಮಾಡಿರುವ ಪತ್ರದಲ್ಲಿ ಎಚ್ಚರಿಸಿದೆ. ಪುಟ ೪



ಕಾಶ್ಮೀರಕ್ಕೆ ಹೆಚ್ಚುವರಿ ಪೊಲೀಸ್

ಶ್ರೀನಗರದಲ್ಲಿ ಭದ್ರತಾ ವ್ಯವಸ್ಥೆ ಬಿಗಿಗೊಳಿಸಲಾಗಿದೆ. ಲಾಲ್‌ಚೌಕ್‌ನಲ್ಲಿನ ಘಂಟಾಘರ್‌ನ್ನು ಬ್ಯಾರಿಕೇಡ್ ಬಳಸಿ ಮುಚ್ಚಲಾಗಿದೆ. ಅಪಾರ ಸಂಖ್ಯೆಯಲ್ಲಿ ಜನರ ಜಮಾವಣೆ ತಡೆಯಲು ಹೆಚ್ಚುವರಿ ಪೊಲೀಸ್, ಸಿಆರ್‌ಪಿಎಫ್ ಪಡೆ ನಿಯೋಜಿಸಲಾಗಿದೆ. ಪುಟ ೪

ವಿಶೇಷ ವಿಮಾನ, ಅಂತರ ಸಚಿವಾಲಯ ಕಾರ್ಯಪಡೆ ಸ್ಥಾಪಿಸಿ

ಕನ್ನಡಿಗರ ರಕ್ಷಣೆ: ಮೋದಿಗೆ ಸಿಎಂ ಪತ್ರ

• **ಬೆಂಗಳೂರು:** ಯುದ್ಧಪೀಡಿತ ದೇಶಗಳಲ್ಲಿ ಸಿಲುಕಿರುವ ಕನ್ನಡಿಗರು ಮತ್ತು ಭಾರತೀಯರ ರಕ್ಷಣೆಯ ಕ್ರಮಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.




ಮಧ್ಯಪ್ರಾಚ್ಯ ದೇಶಗಳಲ್ಲಿ ಸಿಲುಕಿರುವ ಕನ್ನಡಿಗರು ಮತ್ತು ಭಾರತೀಯ ನಾಗರಿಕರ ಜತೆ ನಿರಂತರ ಮೇಲ್ವಿಚಾರಣೆ, ರಕ್ಷಣೆ ಮತ್ತು ಮಾರ್ಗದರ್ಶನವನ್ನು ಖಚಿತಪಡಿಸಿಕೊಳ್ಳಲು ಭಾರತೀಯ ರಾಯಭಾರ ಕಚೇರಿಗಳು ಮತ್ತು ಕಾನ್ಸುಲೇಟ್‌ಗಳ ಮೂಲಕ ರಾಜತಾಂತ್ರಿಕ ಪ್ರಯತ್ನಗಳನ್ನು ಚುರುಕುಗೊಳಿಸುವುದು. ಸಂಕಷ್ಟದಲ್ಲಿರುವ ನಾಗರಿಕರನ್ನು ಸುರಕ್ಷಿತವಾಗಿ ದೇಶಕ್ಕೆ ಕರೆತರಲು ಆದ್ಯತೆಯ ಮೇರೆಗೆ ಸ್ಥಳಾಂತರಿಸುವಿಕೆ ಅಥವಾ ವಿಶೇಷ ವಿಮಾನಗಳ ವ್ಯವಸ್ಥೆ ಮಾಡಲು ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಮನವಿ ಮಾಡಿದ್ದಾರೆ. ಪುಟ ೪

ರಕ್ಷಣೆಗೆ ಕಾರ್ಯಪ್ರವೃತ್ತ: ಸಚಿವ ಕೃಷ್ಣ ಬೈರೇಗೌಡ

• **ಬೆಂಗಳೂರು:** ಮಧ್ಯಪ್ರಾಚ್ಯದ ಯುದ್ಧಪೀಡಿತ ದೇಶಗಳಲ್ಲಿರುವ ಕನ್ನಡಿಗರು ಯಾರೂ ಆತಂಕ ಪಡುವುದು ಬೇಡ. ನಮ್ಮ ವಿಪತ್ತು ನಿರ್ವಹಣೆ ವಿಭಾಗ ಕಾರ್ಯಪ್ರವೃತ್ತವಾಗಿದೆ. ಶನಿವಾರ ರಾತ್ರಿಯಿಂದಲೇ ಕೆಲಸ ಕೈಗೊಳ್ಳಲಾಗಿದೆ. ವಿದೇಶಾಂಗ ಕಚೇರಿ ಜತೆ ನಿರಂತರವಾಗಿ ಸಂಪರ್ಕದಲ್ಲಿದ್ದೇವೆ ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ. ವಿಧಾನಸೌಧದಲ್ಲಿ ಸೋಮವಾರ ಮಾಧ್ಯಮಗಳ ಜತೆ ಮಾತನಾಡಿದ ಸಚಿವರು, ಇಲ್ಲಿವರೆಗೆ 109 ಜನ ಮಾಹಿತಿ ಕೊಟ್ಟಿದ್ದಾರೆ. ವಿದೇಶಾಂಗ ಸಚಿವಾಲಯ, ಅಲ್ಲಿರುವ ಕನ್ನಡಿಗರನ್ನು ಸಂಪರ್ಕಿಸುತ್ತಿದ್ದಾರೆ. ಪುಟ ೪

ಸುಪ್ರೀಂಗೆ ಟಿಡಿಬಿ ಅಫಿಡವಿಟ್

• **ತಿರುವನಂತಪುರಂ:** ಶಬರಿಮಲೆ ದೇಗುಲದಲ್ಲಿ ಪಾಲಿಸುತ್ತಿರುವ ಇತರ ಎಲ್ಲಾ ಸಂಪ್ರದಾಯಗಳನ್ನು ಈಗ ಇರುವಂತೆಯೇ ರಕ್ಷಿಸಬೇಕು, 10ರಿಂದ 50 ವರ್ಷದೊಳಗಿನ ಮಹಿಳೆಯರಿಗೆ ದೇಗುಲ ಪ್ರವೇಶ ನಿರಾಕರಿಸಬೇಕು ಎಂದು ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ಸುಪ್ರೀಂಕೋರ್ಟ್‌ಗೆ ಅಫಿಡವಿಟ್ ಸಲ್ಲಿಸುವುದಾಗಿ ಹೇಳಿದೆ.



ಶಬರಿಮಲೆ ದೇಗುಲ ಪ್ರವೇಶ

ಅಫಿಡವಿಟ್ ಸಲ್ಲಿಸುವ ಬಗ್ಗೆ ದೇವಸ್ವಂ ಮಂಡಳಿಯ ಬೋರ್ಡ್ ಮೀಟಿಂಗ್‌ನಲ್ಲಿ ಚರ್ಚಿಸಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಮಂಡಳಿಯ ಅಧ್ಯಕ್ಷ ಕೆ.ಜಯಕುಮಾರ್ ಹೇಳಿದ್ದಾರೆ. ಸದ್ಯ ಪಾಲಿಸುತ್ತಿರುವ ಸಂಪ್ರದಾಯಗಳನ್ನು ಹೀಗೆಯೇ ಉಳಿಸಿಕೊಳ್ಳಬೇಕು ಎನ್ನುವ ವಿಚಾರದ ಬಗ್ಗೆ ಮಂಡಳಿಯ ಯಾವುದೇ ಸದಸ್ಯರಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಪುಟ ೪

ಅಪರೂಪದ ಖನಿಜಗಳ ಪೂರೈಕೆಗೆ ಭಾರತ–ಕೆನಡಾ ಕ್ರಮ

ಪರಮಾಣು ಒಪ್ಪಂದಕ್ಕೆ ಸಹಿ

• **ಹೊಸದಿಲ್ಲಿ:** ಯುರೇನಿಯಂ ಹಾಗೂ ಅಪರೂಪದ ಖನಿಜಗಳ ಪೂರೈಕೆಗೆ ಸಂಬಂಧಿಸಿ ಮಹತ್ವದ ಒಪ್ಪಂದಗಳಿಗೆ ಭಾರತ ಮತ್ತು ಕೆನಡಾ ಸೋಮವಾರ ಸಹಿ ಹಾಕಿದವು. ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದವನ್ನು ಶೀಘ್ರ ಅಂತಿಮಗೊಳಿಸುವ ಸಂಕಲ್ಪ ತೊಟ್ಟವು. 2030ರ ವೇಳೆ ದ್ವಿಪಕ್ಷೀಯ ವಾರ್ಷಿಕ ವ್ಯಾಪಾರ ವಹಿವಾಟುಗಳನ್ನು 50 ಬಿಲಿಯನ್ ಡಾಲರ್‌ಗಳಿಗೇರಿಸುವುದೂ ಸೇರಿದಂತೆ ಪರಸ್ಪರ ದ್ವಿಪಕ್ಷೀಯ ಬಾಂಧವ್ಯವನ್ನು ನವ ಔನ್ನತ್ಯಕ್ಕೇರಿಸಲು ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ನಿರ್ಧರಿಸಿದ್ದಾರೆ.

ಭಾರತದ ಪರಮಾಣು ಶಕ್ತಿ ರಂಗಕ್ಕೆ ಬೆಂಬಲ: ರಕ್ಷಣೆ, ಅತ್ಯಾಧುನಿಕ ಸಂಕ್ಲಿಷ್ಟ ತಂತ್ರಜ್ಞಾನಗಳು, ಸಣ್ಣ ಮತ್ತು ಮಧ್ಯಮ ಪರಮಾಣು ರಿಯಾಕ್ಟರ್‌ಗಳು, ಶಿಕ್ಷಣ ಮತ್ತು ಪುನಶ್ಚೇತನಶೀಲ ಇಂಧನ ರಂಗಗಳಲ್ಲಿ ಸಹಕಾರ ಕೊಂಡಿಯನ್ನು ಬಲಿಷ್ಠಗೊಳಿಸಲು ಉಭಯ ನಾಯಕರು ಸಂಕಲ್ಪ ತೊಟ್ಟರು. ಉಭಯ ರಾಷ್ಟ್ರಗಳ ನಡುವಿನ ಬಾಂಧವ್ಯ ಈಗ ನವಶಕ್ತಿ ಮತ್ತು ಪರಸ್ಪರ ವಿಶ್ವಾಸ, ಧನಾತ್ಮಕತೆಯಿಂದ ತುಂಬಿ ತುಳುಕುತ್ತಿದೆ. 2.6 ಬಿಲಿಯನ್ ಡಾಲರ್ ಮೊತ್ತದ ಯುರೇನಿಯಂ ಪೂರೈಕೆ ಒಪ್ಪಂದದಲ್ಲಿ, ಭಾರತದ ನಾಗರಿಕ ಪರಮಾಣು ಶಕ್ತಿ ರಂಗಕ್ಕೆ ಬೆಂಬಲ ವಿಸ್ತರಿಸಲು ಕೆನಡಾ ಸಂಪೂರ್ಣ ಸಹಮತ ವ್ಯಕ್ತಪಡಿಸಿದೆ. ಪುಟ ೪



ಭಾರತದತ್ತ ಮುಖ ಮಾಡಿದ ಕೆನಡಾ

ಮಾತುಕತೆ ವೇಳೆ ಉಭಯ ರಾಷ್ಟ್ರಗಳ ನಡುವಿನ ವ್ಯಾಪಾರ ಬಾಂಧವ್ಯಗಳ ವಿಸ್ತರಿಸಲು ಪ್ರಾಧಾನ್ಯತೆ ನೀಡಲಾಗಿದೆ. ಮುಖ್ಯವಾಗಿ ಅಮೆರಿಕದೊಂದಿಗಿನ ಕೆನಡಾದ ಆರ್ಥಿಕ ಕೊಂಡಿಗಳು ಮಸುಕಾಗುತ್ತಿರುವಾಗಲೇ, ಕೆನಡಾ ಭಾರತದೊಂದಿಗೆ ವ್ಯಾಪಾರ ಬಾಂಧವ್ಯ ಬಲಗೊಳಿಸಲು ನಿರ್ಧರಿಸಿರುವುದು ಗಮನಾರ್ಹ. ಪುಟ ೪

ಲಕ್ಷಕ್ಕೂ ಹೆಚ್ಚು ಇ–ಸ್ವತ್ತು ಅರ್ಜಿ ವಿಲೇವಾರಿ

• **ಬೆಂಗಳೂರು:** ಇ–ಸ್ವತ್ತು 2.0 ತಂತ್ರಾಂಶದಲ್ಲಿ ಇದುವರೆಗೆ ರಾಜ್ಯದಲ್ಲಿ 1,14,907 ಅರ್ಜಿಗಳನ್ನು ಅನುಮೋದಿಸಿ ವಿಲೇವಾರಿ ಮಾಡಲಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ವಿಕಾಸಸೌಧದಲ್ಲಿ ಸೋಮವಾರ ಗ್ರಾಮೀಣಾಭಿವೃದ್ಧಿ ಇಲಾಖೆ ಅಧಿಕಾರಿಗಳ ಸಭೆ ನಡೆಸಿದ ಸಚಿವರು, ಸಾರ್ವಜನಿಕರಿಂದ ಇದುವರೆಗೆ ಒಟ್ಟು 1,38,470 ಅರ್ಜಿಗಳು ಸ್ವೀಕೃತವಾಗಿದ್ದು, 23,563 ಅರ್ಜಿಗಳು ಅನುಮೋದನೆಗಾಗಿ ಬಾಕಿ ಉಳಿದಿವೆ ಎಂದಿದ್ದಾರೆ. ಪುಟ ೪

23 ಸಾವಿರ ಅರ್ಜಿ ಬಾಕಿ: ಸಚಿವ ಪ್ರಿಯಾಂಕ್ ಖರ್ಗೆ

ಕಿರುಸುದ್ದಿ

ವಿಶ್ವ ಟೈಲರ್ ದಿನಾಚರಣೆ

ಅಳ್ನಾವರ: ಪಟ್ಟಣದ ವಿಠ್ಠಲ ರುಕ್ಮಾಯಿ ದೇವಸ್ಥಾನದಲ್ಲಿ ನಾಮದೇವ ಸಿಂಪಿ ಸಮಾಜದಿಂದ ಬಟ್ಟೆ ಹೊಲೆಯುವ ಯಂತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ವಿಶ್ವ ಟೈಲರ್ ದಿನವನ್ನು ಇತ್ತಿಚೆಗೆ ಆಚರಿಸಲಾಯಿತು.

ಸಮಾಜದ ಅಧ್ಯಕ್ಷ ಏಕನಾಥ ಶಿಂಪಿ ಮಾತನಾಡಿ, ಸಾಮಾನ್ಯ ಬಟ್ಟೆಯನ್ನು ಅದ್ಬುತ ವಿನ್ಯಾಸದ ಉಡುಪನ್ನಾಗಿಸಿ ಪರಿವರ್ತಿಸುವ ಕಲೆಯಿರುವುದು ಸಿಂಪಿಗನಿಗೆ ಮಾತ್ರ. ಆದರೆ ಇತ್ತಿಚಿನ ದಿನಗಳಲ್ಲಿ ಕೈಗಾರಿಕೆ ಆಕ್ರಮಣದಿಂದಾಗಿ ಗುಡಿಕೈಗಾರಿಕೆಗಳು ನಾಶವಾಗುತ್ತಿದ್ದು, ಇದರಿಂದ ಸಿಂಪಿ ಸಮಾಜದವರು ತಮ್ಮ ಮೂಲ ಕಾಯಕವನ್ನು ಬಿಟ್ಟು ಬೇರೆ ಕೆಲಸಗಳತ್ತ ಮುಖ ಮಾಡುತ್ತಿದ್ದಾರೆ, ಸರ್ಕಾರ ವಿಶೇಷ ಯೋಜನೆಯಡಿ ಸಿಂಪಿಗರಿಗಾಗಿ ತರಬೇತಿ, ಸಬ್ಸಿಡಿ ದರದಲ್ಲಿ ಸಾಲಸೌಲಭ್ಯ ಮತ್ತು ಸಿದ್ಧ ಪಡಿಸಿದ ಬಟ್ಟೆಗಳಿಗೆ ಮಾರುಕಟ್ಟೆ ಕಲ್ಪಿಸಬೇಕು ಎಂದರು.

ಸಿಂಪಿಗರ ಮೂಲ ಉದ್ಯೋಗ ಹೊಲಿಗೆಯಾಗಿದ್ದು ಇವರಿಗೆ ವಿಶೇಷ ಸೌಲತ್ತುಗಳನ್ನು ಜಾರಿಗೊಳಿಸಲು ಸಮಾಜದಿಂದ ಆಗ್ರಹ ಮಾಡಿದರು. ಕಾರ್ಯಕ್ರಮದಲ್ಲಿ ಉಮೇಶ ರೇಳೆಕರ, ಸುರೇಶ ಪೋರೆ, ಪರಶುರಾಮ ಗಾಯಡೊಳ್ಳಿ, ಶ್ರೀನಿವಾಸ ಬೊಂಗಾಳೆ, ಶಿವರಾಮ ಬೊಂಗಾಳೆ, ಜಗನ್ನಾಥ ಅನಸ್ಕರ, ನಿವೃತ್ತಿ ಬೊಂಗಾಳೆ, ಮಹೇಶ ಮೊಸಳೆ ಮತ್ತಿತರರು ಇದ್ದರು.

ಸಿಎ ಪರೀಕ್ಷೆಯಲ್ಲಿ ಸಮೃದ್ಧಿ ಉತ್ತೀರ್ಣ



ಹುಬ್ಬಳ್ಳಿ: ದೆಹಲಿಯ ಭಾರತೀಯ ಚಾರ್ಟಡ್ ಅಕೌಂಟೆಂಟ್ಸ್ ಸಂಸ್ಥೆಯು ಇತ್ತೀಚೆಗೆ ನಡೆಸಿದ ಲೆಕ್ಕಪರಿಶೋಧಕದ ಅಂತಿಮ ಪರೀಕ್ಷೆಯಲ್ಲಿ ಸಮೃದ್ಧಿ ಮುಂಗರವಾಡಿ ಅವರು ಉತ್ತೀರ್ಣರಾಗಿದ್ದಾರೆ. ಸಿದ್ಧಾರೂಢದ ಸ್ವಾಮಿ ಮಠದ ಟ್ರಸ್ಟ್ ಕಮಿಟಿ ಅಧ್ಯಕ್ಷರಾದ ಹಾಗೂ ಹಿರಿಯ ಲೆಕ್ಕಪರಿಶೋಧಕ ಚನ್ನವೀರ ಮುಂಗರವಾಡಿ ಅವರು ಪುತ್ರಿಯಾಗಿದ್ದಾರೆ. ತಂದೆ ಮಾರ್ಗದರ್ಶನದಲ್ಲಿ ಆರ್ಟಿಕಲ್ ಶಿಪ್ ತರಬೇತಿಯನ್ನು ಪೂರ್ಣಗೊಳಿಸಿದ್ದಾರೆ.

ವಿಜ್ಞಾನ ವಸ್ತು ಪ್ರದರ್ಶನ; ಅನುಷಾ ಪ್ರಥಮ




ಧಾರವಾಡ: ಬೆಂಗಳೂರಿನ ದಿ ವರ್ಲ್ಡ್ ಸ್ಕೂಲ್ ಏರ್ಪಡಿಸಿದ ರಾಜ್ಯ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ನಗರದ ಪ್ರಜೆಂಟೇಷನ್ ಕಾನ್ವೆಂಟ್ ಶಾಲೆಯ 8ನೇ ತರಗತಿ ವಿದ್ಯಾರ್ಥಿನಿ ಅನುಷಾ ರಾಜೂರ ರೂ.50 ಸಾವಿರ ನಗದು ಒಳಗೊಂಡ ಪ್ರಥಮ ಸ್ಥಾನದ ಪ್ರಶಸ್ತಿ ಪಡೆದಿದ್ದಾಳೆ. ವಿದ್ಯಾರ್ಥಿನಿಗೆ ರುಫಿನಾ ಮತ್ತು ದೀಪಾ ಮಾರ್ಗದರ್ಶಕರಾಗಿದ್ದು, ಶಾಲೆ ಪ್ರಾಚಾರ್ಯೆ ಸಿಸ್ಟರ್ ಸಿಲ್ವಿಯಾ ಮತ್ತು ಸಿಬ್ಬಂದಿ ಅಭಿನಂದಿಸಿದ್ದಾರೆ.

ಪಿಎಚ್‌ಡಿ ಪ್ರದಾನ



ಧಾರವಾಡ: ಗಣಿತಶಾಸ್ತ್ರ ವಿಭಾಗದ ಸಂಶೋಧನಾ ವಿದ್ಯಾರ್ಥಿ ಅಭಿಷೇಕ ಸಂಗೊಳ್ಳಿ ಮಂಡಿಸಿದ 'ಎ ಸ್ಟಡಿ ಆಫ್ ವೆವ್ಲಟ್ಟಿ ಥಿಯರಿ ಆ್ಯಂಡ್ ಇಟ್ಸ್ ಅಪ್ಲಿಕೇಶನ್ಸ್ ಟು ಸಾಲ್ಟ್ ಲುಬ್ರಿಕೇಶನ್ ಆ್ಯಂಡ್ ಮೈಕ್ರೋಪೋಲಾರ್ ಫೂಯಿಡಿ ಫ್ಲೋ ಪ್ರಾಬ್ಲೆಮ್ಸ್' ಎಂಬ ಪ್ರೌಢ ಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ಪ್ರದಾನಿಸಿದೆ. ಇವರಿಗೆ ಗಣಿಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಎಸ್.ಶಿ.ಶಿರಾಳಶೆಟ್ಟಿ ಮಾರ್ಗದರ್ಶನ ಮಾಡಿದ್ದಾರೆ.



ಉಪ್ಪಿನಬೆಟಗೇರಿ: ಅಮ್ಮಿನಬಾವಿ ಗ್ರಾಮದ ಸಂಸ್ಥಾನ ಪಂಚಗೃಹ ಹಿರೇಮಠದಲ್ಲಿ ಹೋಳಿಹುಣ್ಣಿಮೆ ಅಂಗವಾಗಿ ಪ್ರತಿಷ್ಠಾಪಿಸಿರುವ ಕಾಮಣ್ಣ ಮತ್ತು ರತಿದೇವಿ ಮೂರ್ತಿಗಳು ಗಮನಸೆಳೆಯುತ್ತವೆ. ಮಠದ ಶ್ರೀಗಳಾದ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಹಾಗೂ ಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿಯವರ ಸಮುಖದಲ್ಲಿ ಉಭಯ ಮೂರ್ತಿಗಳಿಗೆ ಸೋಮವಾರ ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸಲಾಯಿತು.



ಅಳ್ನಾವರ: ಪಟ್ಟಣದ ವಿಠ್ಠಲ ರುಕ್ಮಾಯಿ ದೇವಸ್ಥಾನದಲ್ಲಿ ನಾಮದೇವ ಸಿಂಪಿ ಸಮಾಜದಿಂದ ಬಟ್ಟೆ ಹೊಲೆಯುವ ಯಂತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ವಿಶ್ವ ಟೈಲರ್ ದಿನವನ್ನು ಇತ್ತಿಚೆಗೆ ಆಚರಿಸಲಾಯಿತು.

ಸಮಾಜದ ಅಭಿವೃದ್ಧಿಗೆ ಸಹಕರಿಸಿ: ವೀರಬಸವ ದೇವರು

ನವಲಗುಂದ: ರೇಣುಕಾಚಾರ್ಯರ ಜಯಂತಿ ಕೇವಲ ಜಂಗಮರಿಗೆ ಮಾತ್ರ ಸೀಮಿತವಾಗಿಲ್ಲ, ಎಲ್ಲ ಜಾತಿಯನ್ನೊಳಗೊಂಡ ಧರ್ಮವೇ ವೀರಶೈವ ಆಗಿದ್ದು ಜಾತಿಗೆ ಸೀಮಿತರಾಗದೆ ಎಲ್ಲ ಸಮಾಜದವರು ಒಗ್ಗೂಡಿಕೊಂಡು ಜಯಂತಿಯನ್ನು ಆಚರಿಸಿ ಸಮಾಜದ ಅಭಿವೃದ್ಧಿಗೆ ಸಹಕರಿಸಬೇಕೆಂದು ಪಂಚಾಗ್ರಹ ಹಿರೇಮಠದ ನಿಯೋಜಿತ ಉತ್ತರಾಧಿಕಾರಿ ವೀರಬಸವ ದೇವರು ಅಭಿಪ್ರಾಯಪಟ್ಟರು.

ಅವರು ಸೋಮವಾರ ಇಲ್ಲಿಯ ತಹಶೀಲ್ದಾರ್ ಕಾರ್ಯಲಯದಲ್ಲಿ ತಾಲೂಕು ಆಡಳಿತದ ವತಿಯಿಂದ ಏರ್ಪಡಿಸಿದ ರೇಣುಕಾಚಾರ್ಯರ ಜಯಂತಿಯಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಇದೇ ವೇಳೆ ತಹಶೀಲ್ದಾರ್ ಸುಧೀರ ಸಾವುಕಾರ ಅವರು ರೇಣುಕಾಚಾರ್ಯರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಮಾತನಾಡಿ, ವೀರಶೈವ ಧರ್ಮವು ಶಿಕ್ಷಣ, ದಾಸೋಹದಲ್ಲಿ ಎತ್ತಿದ ಕೈ, ತ್ರಿವಿಧ ಶಿಕ್ಷಣ, ದಾಸೋಹದ ಮೂಲಕ ಸಮಾಜದ ಅಭಿವೃದ್ಧಿಗೆ ಶ್ರಮಿಸಿದೆ. ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ವೈಜ್ಞಾನಿಕವಾಗಿ ಸಮಾಜಕ್ಕೆ ಕೊಡುಗೆ ನೀಡಿದೆ ಎಂದು ತಿಳಿಸಿದರು. ತಾಪಂ ಇಒ ಇ.ಆರ್. ಬಡೇಖಾನ, ಸಮಾಜದ ಮುಖಂಡರಾದ ಎಂ.ಡಿ.ಕುಲಕರ್ಣಿ, ಮುರಗಯ್ಯ ಬಾಳಿಹಳ್ಳಿಮಠ, ಸಿದ್ದಲಿಂಗಯ್ಯ ಹಿರೇಮಠ, ಅಣ್ಣಪ್ಪ ಬಾಗಿ, ಅಶೋಕ ಮಜ್ಜಿಗುಡ್ಡ, ಚರಂತಯ್ಯ ಹಿರೇಮಠ, ಬಸವರಾಜ ಕೇರಿಮಠ, ಕೊಟ್ರೇಶ ಹಿರೇಮಠ, ಶಶಿಧರ ಭರತಭೋಜನಮಠ, ಶರ್ಮಾ ಹಿರೇಮಠ, ಕಲ್ಲಯ್ಯ ಹೊಸಮನಿ, ಮುತ್ತು ಹಿರೇಮಠ, ಸಂಗಯ್ಯ ಹಿರೇಮಠ, ಶಂಕ್ರಯ್ಯ ಸುಭೆದಾರಮಠ ಸೇರಿದಂತೆ ತಾಲೂಕ ಆಡಳಿತ ವರ್ಗ ರವಿ ಕಿರೆಸೂರ, ಮಂಜು ಮಲ್ಲಾಡಿ, ಇದ್ದರು.



ನವಲಗುಂದ: ಇಲ್ಲಿಯ ತಹಶೀಲ್ದಾರ್ ಕಾರ್ಯಲಯದಲ್ಲಿ ತಾಲೂಕು ಆಡಳಿತದ ವತಿಯಿಂದ ಏರ್ಪಡಿಸಿದ ರೇಣುಕಾಚಾರ್ಯರ ಜಯಂತಿಯಲ್ಲಿ ಪಂಚಾಗ್ರಹ ಹಿರೇಮಠದ ನಿಯೋಜಿತ ಉತ್ತರಾಧಿಕಾರಿ ವೀರಬಸವ ದೇವರು ಮಾತನಾಡಿದರು. ತಹಶೀಲ್ದಾರ್ ಸುಧೀರ ಸಾವುಕಾರ, ತಾಪಂ ಇಒ ಇ.ಆರ್. ಬಡೇಖಾನ, ಸಮಾಜದ ಮುಖಂಡರಾದ ಎಂ.ಡಿ.ಕುಲಕರ್ಣಿ, ಮುರಗಯ್ಯ ಬಾಳಿಹಳ್ಳಿಮಠ, ಸಿದ್ದಲಿಂಗಯ್ಯ ಹಿರೇಮಠ, ಅಣ್ಣಪ್ಪ ಬಾಗಿ, ಅಶೋಕ ಮಜ್ಜಿಗುಡ್ಡ, ಚರಂತಯ್ಯ ಹಿರೇಮಠ ಇತರರು ಇದ್ದರು.

ಓಕಳಿ ಬಗ್ಗೆ ಜಾಗೃತಿ ಅಗತ್ಯ | ಹಬ್ಬವು ಬದುಕಿಗೆ ಮಾರಕ ಆಗದಿರಲಿ

ರಂಗಿನಾಟ ನೈಸರ್ಗಿಕ ಇರಲಿ

ಮಹಾಂತೇಶ ಕಣವಿ

ಧಾರವಾಡ: ಭಾರತದ ಹಬ್ಬಗಳ ಪರಂಪರೆಯಲ್ಲಿ ಬಹುತೇಕ ಹಬ್ಬಗಳು ಮಹಿಳಾ ಪ್ರಧಾನವಾಗಿವೆ. ಗಣೇಶ ಚತುರ್ಥಿ, ಕಾರು ಹುಣ್ಣಿಮೆ ಹಾಗೂ ಹೋಳಿ ಹಬ್ಬಗಳು ಪುರುಷ ಪ್ರಧಾನಿವಾಗಿವೆ. ಹೋಳಿ ಹಬ್ಬದ ಓಕಳಿಗೆ ನೈಸರ್ಗಿಕ ಬಣ್ಣಗಳು ರಂಗು ತುಂಬಲಿ.

ಬೇಸಿಗೆ ಆರಂಭವಾಗಿ ತಾಪಮಾನ ಹೆಚ್ಚಿದೆ. ನಗರ ಹಾಗೂ ಗ್ರಾಮೀಣ ಪ್ರದೇಶ ಧೂಳಿನಿಂದ ಕೂಡಿವೆ. ಹೀಗಾಗಿ ಪಾಲ್ಗುಣ ಮಾಸದಲ್ಲಿ ಬರುವ ಹೋಳಿ ಹಬ್ಬದ ರಂಗಿನಾಟ ವಿದ್ಯಾಕಾಶಿಯ ಸಾರ್ವಜನಿಕರ ಆರೋಗ್ಯಕ್ಕೂ ಯಾವುದೇ ಮಾರಕ ಆಗಬಾರದು.

ಒಂದಡೆ ಬಿಸಿಲಿನ ಝಳಕ್ಕೆ ತತ್ತರಿಸಿದ ಮಹಾಜನತೆ, ಮತ್ತೊಂದಡೆ ಸಾಂಕ್ರಾಮಿಕ ಕಾಯಿಲೆಗಳಿಂದ ಬಳಲುವಂತಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಮಾರುಕಟ್ಟೆಯಲ್ಲಿ ರಾಸಾಯನಿಕ ಮಿಶ್ರಿತ ಬಣ್ಣಗಳು ಲಗ್ಗೆ ಇಟ್ಟಿವೆ. ಜನರು ಇವುಗಳು ಬಳಕೆ ಸ್ವಯಂ ನಿಯಂತ್ರಿಸಬೇಕಿದೆ.

ಬಿಸಿಲಿನ ತಾಪಮಾನ 40 ಡಿಗ್ರಿ ದಾಟಿದೆ. ಜನರಲ್ಲಿ ಅನೇಕ ಚರ್ಮರೋಗಗಳು, ಕಣ್ಣುರಿ, ಧೂಳಿನಿಂದ ಅಸ್ತಮಾ, ಕೆಮ್ಮ ಇತ್ಯಾದಿ ಸಾಂಕ್ರಾಮಿಕ ರೋಗಗಳು ಒಕ್ಕರಿಸಿವೆ. ಹೀಗಾಗಿ ರಾಸಾಯನಿಕ ಬಣ್ಣಗಳ ಬಳಿಕೆ ಮತ್ತಷ್ಟು ದುಷ್ಪರಿಣಾಮ ಬೀರಲಿದೆ.



ರಂಗಿನಾಟಕ್ಕೆ ನೈಸರ್ಗಿಕ ಬಣ್ಣ ಬಳಸಿ

- ನೈಸರ್ಗಿಕವಾಗಿ ಹಬ್ಬದ ಆಚರಿಸಬೇಕಿದೆ. ಅಂದರೆ, ಮನೆಯಲ್ಲಿ ಪರಿಸರ ಸ್ನೇಹಿ ಬಣ್ಣಗಳು ತಯಾರಿಸಬೇಕು. ಪಾಲಕ್-ಪುದೀನಾ ಸೊಪ್ಪಿನ ರಸ ಬೆರೆಸಿದಾಗ ಹಸಿರು ಬಣ್ಣ ಉತ್ಪತ್ತಿ ಆಗಲಿದೆ. ಇದರ ಬಳಕೆಯಿಂದ ಆರೋಗ್ಯಕ್ಕೆ ಯಾವುದೇ ಹಾನಿ ಇಲ್ಲ. ಬದಲಿಗೆ ಮುಖಕ್ಕೆ ಹಚ್ಚಿದರೂ, ಮುಖದಲ್ಲಿನ ಮೊಡವೆ, ಕಪ್ಪು ಕಲೆ ಹೋಗಲಿವೆ.
- ಕೆಮ್ಮಣ್ಣು(ಕೆಂಪು ಮಣ್ಣು) ನೀರನಲ್ಲಿ ಕರಗಿಸಿ, ಅದಕ್ಕೆ ಬೀಟ್ರೂಟ್ ರಸ ಸೇರಿಸಿದರೆ ನೈಸರ್ಗಿಕ ಕೆಂಪು ಬಣ್ಣ ಬರಲಿದೆ. ಇದ್ದಿಲು ನೀರಿನಲ್ಲಿ ತೇಯ್ದು ಫೈನಾಫಲ್ ಹಣ್ಣಿನ ರಸ ಸೇರಿಸಿದರಡೆ ಕಪ್ಪು ಬಣ್ಣ, ಅರಿಶಿಣಪುಡಿ ಅಥವಾ ಅಶ್ವಗಂಧದ ಪುಡಿಗೆ ನೀರು ಬೆರೆಸಿದರೆ ಹಳದಿ ಬಣ್ಣ ಬರಲಿದ್ದು, ಇವುಗಳ ಬಳಕೆಯಿಂದ ಹೋಳಿ ಹಬ್ಬ ಆಚರಿಸಬಹುದು.

ಮಾರುಕಟ್ಟೆಯಲ್ಲಿ ದೊರೆಯುವ ಹಾನಿಕಾರಕ ರಾಸಾಯನಿಕ ಬಣ್ಣಗಳ ಬಳಕೆಯು ಅನೇಕ ರೋಗಗಳನ್ನು ಹರಡುತ್ತವೆ. ಹಸಿರು ಬಣ್ಣದಲ್ಲಿ ಕಾಪರ್ ಸ್ಲಪೇಟ್ ಇರುವ ಕಾರಣದಿಂದ ಜನರಲ್ಲಿ ಕಣ್ಣಿನ ತುರಿಕೆ ಮತ್ತು ಕಣ್ಣು ಕೆಂಪಾಗುವ ಕಾಯಿಲೆ ಕೂಡ ಹರಡಲಿದೆ.

ಮರ್ಕುರಿ ಸಲ್ಫೇಟ್ ಒಳಗೊಂಡ ಕೆಂಪು ಬಣ್ಣ ಬಳಕೆ ಚರ್ಮದ ಕ್ಯಾನ್ಸರ್‌ಗೆ ದಾರಿ ಮಾಡಲಿದೆ. ಕಪ್ಪು ಬಣ್ಣಕ್ಕೆ ಸೀಸ್ (ಲೈಡ್ ಆಕ್ಸೈಡ್) ಮಿಶ್ರಣ ಇರುವ ಕಾರಣದಿಂದ ಬಳಸಿದ ವ್ಯಕ್ತಿಗಳ ಮೂತ್ರ ಜನಾಂಗಕ್ಕೆ (ಕಿಡ್ನಿ) ತೊಂದರೆಯೂ ಕೂಡ ಉಂಟು ಮಾಡಲಿದೆ.

ಕ್ರೋಮಿಯಂ ಆಯೋಡೈಡ್ ಒಳಗೊಂಡ ನೇರಳೆ ಬಣ್ಣ ಬಳಕೆ ಅಸ್ತಮಾ ಹಾಗೂ ಬ್ರೋಮೈಡ್ ಮಿಕ್ಸ್ ಮಾಡಿದ ಸುನೇರಿ ಬಣ್ಣ ಬಳಕೆ ಕಣ್ಣು-ಕಿವಿ ಮತ್ತು ಚರ್ಮದ ತುರಿಕೆ ಜೊತೆ ಅಪಾಯಕಾರಿ ಕಾಯಿಲೆಗಳು ಹರಡುತ್ತವೆ ಎನ್ನುವೆ ವೈದ್ಯಕೀಯ ಮೂಲ.

ವರ್ಷಕ್ಕೊಮ್ಮೆ ಬರುವ ಬಣ್ಣದೋಕಳಿ ಹಬ್ಬ ವಿಜೃಂಭಣೆ, ಸಂತೋಷದಿಂದ ಆಚರಿಸಲು ವಿದ್ಯಾನಗರಿ ಜನತೆ ಸನ್ನದ್ಧುಗೊಂಡಿದೆ. ಯುವಕರು ಬಣ್ಣದ ಆಟವಾಡುವಾಗ ಚಿಕ್ಕಮಕ್ಕಳು, ವೃದ್ಧರು, ಮಹಿಳೆಯರ ಕುರಿತು ಜಾಗೃತಿ ವಹಿಸಬೇಕಿದೆ.

ಸಮೃದ್ಧ ಭಾರತಕ್ಕೆ ವಿಜ್ಞಾನಿಗಳ ಪಾತ್ರ ಅಗತ್ಯ

ಧಾರವಾಡ: ಜಗತ್ತಿನ ವಿಜ್ಞಾನ ಕ್ಷೇತ್ರಕ್ಕೆ ಭಾರತೀಯರ ಕೊಡುಗೆಯೂ ಅಮೋಘ. ಸಮೃದ್ಧ ಭಾರತ ಕಟ್ಟುವಲ್ಲಿ ವಿಜ್ಞಾನ ಮತ್ತು ವಿಜ್ಞಾನಿಗಳ ಪಾತ್ರ ಬಹಳ ಅಗತ್ಯವಿದೆ ಎಂದು ಭೌತಶಾಸ್ತ್ರ ವಿಷಯದ ನಿವೃತ್ತ ಪ್ರಾಧ್ಯಾಪಕ ಡಾ. ಜಗದೀಶ ಟೋಣಣ್ಣವರ ಹೇಳಿದರು.

ಜನತಾ ಶಿಕ್ಷಣ ಸಮಿತಿಯ ಬನಶಂಕರ ಕಲಾ-ವಾಣಿಜ್ಯ ಹಾಗೂ ಗುಬ್ಬಿ ವಿಜ್ಞಾನ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಲ್ಲಿ 'ವಿಜ್ಞಾನ ಬೆಳೆದು ಬಂದ ದಾರಿ ಹಾಗೂ ವಿದ್ಯಾರ್ಥಿಗಳ ಭವಿಷ್ಯದ ಸೂತ್ರಗಳ' ಕುರಿತು ಉಪನ್ಯಾಸ ನೀಡಿದರು.

ಭವಿಷ್ಯದಲ್ಲಿ ವಿಜ್ಞಾನ ವಿಷಯದ ಮಹತ್ವ, ಸಂಶೋಧನೆಯ ಅವಶ್ಯಕತೆ ಹಾಗೂ ದೊರೆಯುವ ವಿಫುಲ ಅವಕಾಶಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದ ಅವರು, ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಹಾಗೂ ಪ್ರಶ್ನಿಸುವ ಗುಣ ಬೆಳೆಸಲು ಹೇಳಿದರು.

ಉದ್ಘಾಟಿಸಿದ ಜೆಎಸ್ಸೆಸ್ ಶ್ರೀ ಮಂಜುನಾಥೇಶ್ವರ ಎಂಸಿಎ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ಸೂರಜ್ ಜೈನ್, ಶಿಕ್ಷಕರು ವಿಜ್ಞಾನ ವಿಷಯವನ್ನು ಆಸಕ್ತಿಯಿಂದ ಬೋಧಿಸಬೇಕು. ವಿದ್ಯಾರ್ಥಿಗಳು ಲಭಿಸುವ ಅವಕಾಶ ಸದ್ಬಳಸಿಕೊಳ್ಳುಂತೆ ಸಲಹೆ ನೀಡಿದರು.

ವಿಜ್ಞಾನ ಕ್ಷೇತ್ರಕ್ಕೆ ಮಹಿಳೆಯರ ಪಾತ್ರದ ಕುರಿತು ಮಾತನಾಡಿದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ.ವೆಂಕಟೇಶ ಮುತಾಲಿಕ, ಕಲ್ಪನಾ ಚಾವ್ಲಾ, ಜಾನಕಿ ಅಮ್ಮಾಲ್, ಕಮಲಾ ಸೋಹನಿ, ಅಸಿಮಾ ಚಟರ್ಜಿ ಇತರರ ಕೊಡುಗೆ ಸ್ಮರಣೆ ಮಾಡಿದರು.

ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳಿಗೆ ವಿಜ್ಞಾನ ಮಾದರಿ, ರೇಖಾಚಿತ್ರಗಳ ಪ್ರದರ್ಶನದ ಸ್ಪರ್ಧೆ ಏರ್ಪಡಿಸಿತ್ತು. ಆಸಕ್ತಿಯಿಂದ ಪಾಲ್ಗೊಂಡಿದ್ದ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ, ಅಭಿನಂದನೆ ಸಲ್ಲಿಸಿದರು.

ಇದೇ ವೇಳೆ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ವೇದಿಕೆಯಲ್ಲಿ ಉಪಪ್ರಾಚಾರ್ಯೆ ಆವಂತಿಕಾ ರೊಟ್ಟಿ, ಡಾ.ಅರುಣಕುಮಾರ ಶಿರಹಟ್ಟಿ, ಟಿ.ಎಂ. ಶ್ರೀಧರ, ಡಾ. ಸುಮಂಗಲಾದೇವಿ, ಮಮತಾ ಮಾಂಡವಿ ಸೇರಿದಂತೆ ಅನೇಕರು ಇದ್ದರು. ಡಾ.ಶಶಿಕಾಂತ, ಡಾ.ಶಿವಪ್ರಸಾದ ಪಾಲ್ಗೊಂಡಿದ್ದರು. ಸದನಾಂದ ಮತ್ತು ದೀಪಿಕಾ ಪ್ರಾರ್ಥಿಸಿದರು. ವಿಜ್ಞಾನ ಸಂಘದ ಅಧ್ಯಕ್ಷೆ ಡಾ.ರತ್ನಾ ಐರಸಂಗ ಸ್ವಾಗತಿಸಿದರು. ಸಂಯೋಜಕಿ ಬಿ.ಎಂ.ಬಿಂದುಶ್ರೀ ಪರಿಚಯಿಸಿದರು. ಡಾ. ಆರ್.ವಿ.ಪತ್ತಾರ ವಂದಿಸಿದರು.



ಕೌಶಲ್ಯ, ಸೃಜನಶೀಲತೆ ಅಳವಡಿಸಿಕೊಳ್ಳಿ

ಹುಬ್ಬಳ್ಳಿ: ಕೃತಕ ಬುದ್ಧಿಮತ್ತೆಯ ಪ್ರಸಕ್ತ ಕಾಲಘಟ್ಟದಲ್ಲಿ ಬಿಸಿಎ ವಿದ್ಯಾರ್ಥಿಗಳ ಪಾತ್ರ ಮಹತ್ವದ್ದಿದ್ದು, ಕೌಶಲ್ಯ, ಸೃಜನಶೀಲತೆ ಹಾಗೂ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಲು ಸ್ವರ್ಣ ಸಮೂಹದ ಚೇರಮನ್, ಉದ್ಯಮಿ ವಿ.ಎಸ್.ವಿ.ಪ್ರಸಾದ ಹೇಳಿದರು.

ಕೆ.ಎಲ್.ಇ ಸೊಸೈಟಿಯ ಪಿ.ಸಿ. ಜಾಬಿನ್ ವಿಜ್ಞಾನ ಕಾಲೇಜಿನ ಬಿಸಿಎ ವಿಭಾಗ ಏರ್ಪಡಿಸಿದ ವಾರ್ಷಿಕ ರಾಷ್ಟ್ರೀಯ ಮಟ್ಟದ ಐಟಿ ಉತ್ಸವ "ಅಕ್ಯುಮೆನ್-2026" ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಇಂತಹ ಉತ್ಸವಗಳಲ್ಲಿನ ಸಾಂಸ್ಕೃತಿಕ ಮತ್ತು ನಿರ್ವಹಣಾ ಚಟುವಟಿಕೆಗಳಲ್ಲಿ ಪಾಲ್ಗೊಂಡು ವಿದ್ಯಾರ್ಥಿಗಳು ಆತ್ಮವಿಶ್ವಾಸ ಮತ್ತು ಪ್ರಾಯೋಗಿಕ ಜ್ಞಾನವನ್ನು ಪಡೆಯಲು ಸಾಧ್ಯವಾಗುತ್ತದೆ ಎಂದರು.

ಅನೇಕ ದೈತ್ಯ ಕಂಪನಿಗಳು ಉದ್ಯೋಗ ಕಡಿತಗೊಳಿಸುತ್ತಿದ್ದು, ಹೊಸ ಚಿಂತನೆಗಳನ್ನು ಮೈಗೂಡಿಸಿಕೊಂಡು ದೇಶದ ಅನ್ನದಾತರಿಗೆ ಅನುಕೂಲಕರವಾಗುವ ಯತ್ನ ಮಾಡಬೇಕು. ಉದ್ಯೋಗಿಯಾಗುವ ಬದಲು ನೀವೇ ಉದ್ಯೋಗ ಸೃಷ್ಟಿಸಿ ಎಂದು ಹೇಳಿದರು.

ವಿವಿಧ ಜಿಲ್ಲೆಗಳಿಂದ ಒಟ್ಟು 37 ಕಾಲೇಜುಗಳು, 400 ವಿದ್ಯಾರ್ಥಿಗಳು ಪಾಲ್ಗೊಂಡು ಹಲವಾರು ತಾಂತ್ರಿಕ ಮತ್ತು ತಾಂತ್ರಿಕೇತರ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ವಿಜೇತರಿಗೆ ಸ್ವರ್ಣ ಗ್ರೂಪ್ ಪ್ರಾಯೋಜಕತ್ವದ 5000 ರೂ ಮೌಲ್ಯದ ನಗದು ಬಹುಮಾನ ವಿತರಿಸಲಾಯಿತು.

ಪ್ರಾಂಶುಪಾಲರಾದ ಡಾ.ಸಂಧ್ಯಾ ಕುಲಕರ್ಣಿ, ಬಿಸಿಎ ಸಂಯೋಜಕ ಸಿದ್ದಲಿಂಗಪ್ಪ, ಶಿವರಾಜ, ಪೂರ್ಣಿಮಾ ಸೇರಿದಂತೆ ಅನೇಕರು ವೇದಿಕೆ ಮೇಲಿದ್ದರು.





ಹುಬ್ಬಳ್ಳಿ: ಹೋಳಿ ಹಬ್ಬದ ಹಿನ್ನೆಲೆಯಲ್ಲಿ ನಗರದ ಕೊರ್ಟ್ ಸರ್ಕಲ್‌ನಲ್ಲಿ ಹಲಿಗೆ ಖರೀದಿಗೆ ಮುಗಿಬಿದ್ದ ಯುವಕರು.

ಜಗ್ಗಲಗಿ ಹಬ್ಬದ ಲಾಂಛನ ಬಿಡುಗಡೆ



ಹುಬ್ಬಳ್ಳಿ: ನಗರದ ಜಗ್ಗಲಗಿ ಸಮಿತಿ ವತಿಯಿಂದ ಜಗ್ಗಲಗಿ ಹಬ್ಬದ ಲಾಂಛನವನ್ನು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಸೋಮವಾರ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಹುಬ್ಬಳ್ಳಿ ಜಗ್ಗಲಗಿ ಸಮಿತಿಯವರು ಕಳೆದ 15 ವರ್ಷಗಳಿಂದ ಈ ಕಾರ್ಯಕ್ರಮವನ್ನು ಮಹೇಶ ಟೆಂಗಿನಕಾಯಿ ನೇತೃತ್ವದಲ್ಲಿ ಅದ್ದೂರಿಯಾಗಿ ಆಚರಿಸಲಾಗುತ್ತಿದೆ. ಸಾರ್ವಜನಿಕರ ಒತ್ತಡದ ಜೀವನದಲ್ಲಿ ಹೋಳಿ ಹಬ್ಬವನ್ನು ಆಚರಿಸಬೇಕು. ಒಂದು ದಿನವಾದರೂ ನೆಮ್ಮದಿಯಿಂದ ಹಬ್ಬದಲ್ಲಿ ತೊಡಗಿಕೊಳ್ಳಬೇಕು ಎಂದು ತಿಳಿಸಿದರು.

ಶಾಸಕ ಮಹೇಶ ಟೆಂಗಿನಕಾಯಿ ಮಾತನಾಡಿದರು. ಸತೀಶ್ ಶೇಜ್ವಾಡಕರ್, ಪಾಲಿಕೆ ಸದಸ್ಯ ಶಿವು ಮೆಣಸಿನಕಾಯಿ, ಪ್ರಕಾಶ್ ಕ್ಯಾರಕಟ್ಟಿಮ, ಪ್ರಭು ನವಲಗುಂದ ಮಠ, ಜಗದೀಶ್ ಬಳ್ಳಾನವರ, ರವಿ ನಾಯಕ, ಪ್ರವೀಣ ಜೈನ, ಪ್ರವೀಣ ಪವಾರ್, ಸಂಗಮ ಹಂಜಿ ಇದ್ದರು.



ಹುಬ್ಬಳ್ಳಿ: ಶ್ರೇಯಾ ಜನ ಸೇವಾ ಫೌಂಡೇಶನ್‌ನ 6ನೇ ವಾರ್ಷಿಕೋತ್ಸವ ಹಾಗೂ ಶ್ರೀ ರೇಣುಕಾಚಾರ್ಯ ಜಯಂತಿ ಅಂಗವಾಗಿ ಕನಕದಾಸ ಶಿಕ್ಷಣ ಸಮೀತಿಯ ಸಭಾಂಗಣದಲ್ಲಿ ಹಮ್ಮಿಕೊಂಡ ಆರೋಗ್ಯ ತಪಾಸಣಾ ಶಿಬಿರದಲ್ಲಿ ಸಮಾಜ ಸೇವೆಯಲ್ಲಿ ನಿರತರಾದ ನಜೀರಅಹ್ಮದ್ ಕೋಲಕಾರ ಅವರಿಗೆ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ರಮೇಶ ಮಹದೇವಪ್ಪನವರ, ಸಂಭಾಜಿ ಕಲಾಲ ಹಾಗೂ ಬಿರೇಶ ತಿರಕಪ್ಪನವರ ಮುಂತಾದವರು ಉಪಸ್ಥಿತರಿದ್ದರು.



ಹುಬ್ಬಳ್ಳಿ: ಇಲ್ಲಿಯ ಪ್ರವಾಸ ಮಂದಿರದಲ್ಲಿ ಹು-ಧಾ ಸೆಂಟ್ರಲ್ ಕ್ಷೇತ್ರದ 20 ಮಹಿಳಾ ಫಲಾನುಭವಿಗಳಿಗೆ ದೇವರಾಜು ಅರಸು ನಿಗಮದಿಂದ ಹೊಲಿಗೆ ಯಂತ್ರ ವಿತರಿಸಲಾಯಿತು.ಶಾಸಕ ಮಹೇಶ ಟೆಂಗಿನಕಾಯಿ ಯಂತ್ರಗಳ ವಿತರಿಸಿದರು. ಸೆಂಟ್ರಲ್ ಕ್ಷೇತ್ರದ ಅಧ್ಯಕ್ಷೆ ಸೀಮಾ ಲದ್ವಾ, ಮುಖಂಡ ರವಿ ನಾಯಕ, ಪಾಲಿಕೆ ಸದಸ್ಯ ಚಂದ್ರಿಕಾ ಮೇಸ್ತ್ರಿ, ಸುಮಾ ಶಿವನ್‌ಗೌಡರ, ವಿಜಯಾ ಗುಡಗೇರಿ, ದೇವರಾಜ ಅರಸು ನಿಗಮದ ಜಿಲ್ಲಾ ವ್ಯವಸ್ಥಾಪಕ ಕುಶಾಲ ಚೌಗಲಾ, ಶಂಕರ ತಳವಾರ ಇದ್ದರು.

ಮಕ್ಕಳಿಗೆ ಉತ್ತಮ ಸಂಸ್ಕಾರ ಅವಶ್ಯ: ಕೆ.ಎಫ್. ಕುಮಾರ

ಉಪ್ಪಿನಬೆಟಗೇರಿ: ಧಾರವಾಡ ತಾಲೂಕಿನ ತಡಕೋಡ ಗ್ರಾಪಂ ಆವರಣದಲ್ಲಿ ಇತ್ತೀಚಿಗೆ ನಡೆದ ಶ್ರೀ ರಾಮಕೃಷ್ಣ ವಿವೇಕಾನಂದ ಜ್ಞಾನ ವಿಕಾಸ ಶಿಕ್ಷಣ ಸಂಸ್ಥೆಯ ಶ್ರೀ ಶಾರದಾಮಾತಾ ಪಬ್ಲಿಕ್ ಶಾಲೆಯ ವತಿಯಿಂದ ಕಲಾ ಪ್ರತಿಭೋತ್ಸವ ಕಾರ್ಯಕ್ರಮ ನಡೆಯಿತು.

ಧಾರವಾಡ ಗ್ರಾಮೀಣ ವಲಯ ಕ್ಷೇತ್ರ ಸಮನ್ವಯಾಧಿಕಾರಿ ಕೆ.ಎಫ್. ಕುಮಾರ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿ, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುರುಕುಲ ಪದ್ಧತಿಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಆ ವಿದ್ಯಾರ್ಥಿಗಳಿಗೆ ಸಂಸ್ಕಾರ ನೀತಿ ಶಿಕ್ಷಣ ನೀಡುವ ಶಾಲೆ ಇದಾಗಿದ್ದು ವಿದ್ಯಾರ್ಥಿಗಳು ಚಿಕ್ಕ ವಯಸ್ಸಿನಲ್ಲೇ ಸಂಸ್ಕಾರವಂತರಾದರೆ ಮುಂದಿನ ದಿನಗಳಲ್ಲಿ ಸಮಾಜ ಸುವ್ಯವಸ್ಥಿತವಾಗಿ ಭಾರತ ದೇಶದ ಭದ್ರ ಬುನಾದಿಯನ್ನು ಹಾಕಲು ಸಾಧ್ಯ ಎಂದು ಹೇಳಿದರು.

ಸಂಸ್ಥೆಯ ಅಧ್ಯಕ್ಷ ವೀರನಗೌಡ ಮರಿಗೌಡರ ಪ್ರಾಸ್ತಾವಿಕವಾಗಿ ಮಾತನಾಡಿ, ಈ ಸಂಸ್ಥೆ ಯಾವಾಗಲೂ ಸಮಾಜಮುಖಿ ಕಾರ್ಯಗಳನ್ನು ನಿರ್ವಹಿಸುತ್ತಾ ಆಧ್ಯಾತ್ಮಿಕ ಸೃಜನಶೀಲ ವ್ಯಕ್ತಿತ್ವ ಶೈಕ್ಷಣಿಕ, ನೈತಿಕ ವಿಕಸನ ತರಬೇತಿ ಹಾಗೂ ಸ್ವಯಂ ಉದ್ಯೋಗ ತರಬೇತಿ ಮತ್ತು ಆರೋಗ್ಯ ಶಿಬಿರ ಕಾರ್ಯಗಳನ್ನು ಸಾಮಾಜಿಕವಾಗಿ ಗ್ರಾಮೀಣ ಭಾಗದಲ್ಲಿ ಉತ್ತಮ ಜೀವನ ನಡೆಸಲು ಪ್ರೇರಣಾದಾಯಿ ಕಾರ್ಯ ನಡೆಯುತ್ತಿದೆ ಎಂದು ಹೇಳಿದರು.



ಬೇಲೂರು ಯುಫ್ಲೆಕ್ಸ್ ಲಿಮಿಟೆಡ್ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಅರುಣ ಹೆಬ್ಳೀಕರ್ ಮಾತನಾಡಿ ಗ್ರಾಮದ ಯುವಕರು ಉತ್ತಮ ವಿದ್ಯಾಭ್ಯಾಸದೊಂದಿಗೆ ಸಮಾಜಮುಖಿ ಕಾರ್ಯಗಳನ್ನು ಮಾಡುವ ಮೂಲಕ ಉದ್ಯೋಗದಲ್ಲಿ ಅಭಿವೃದ್ಧಿ ಹೊಂದಿ ತಾವು ಆದರ್ಶ ಕುಟುಂಬ ಜೀವನ ನಡೆಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ರುದ್ರಪ್ಪ ಮುರಾರಿ ವಹಿಸಿ ಮಾತನಾಡಿದರು ನಂತರ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಬೇಲೂರು ವಾಲ್ಮಿ ವಾಟರ್ ಆಂಡ್ ಲ್ಯಾಂಡ್ ಮ್ಯಾನೇಜ್ಮೆಂಟ್ ಇನ್ಸಿಟ್ಯೂಟ್ ಸಹ ಪ್ರಾಧ್ಯಾಪಕ ಪ್ರದೀಪ ದೇವರಮನಿ ಹಾಗೂ ಶಾಲಾ ಪಾಲಕರು, ವಿದ್ಯಾರ್ಥಿಗಳು, ಶಾಲಾ ಶಿಕ್ಷಕರು ಸೇರಿದಂತೆ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು. ಸೌಮ್ಯ ಮಾತಾಜಿ ಸ್ವಾಗತಿಸಿದರು ಲಕ್ಷ್ಮೀ ಮರಿಗೌಡರ ನಿರೂಪಿಸಿದರು ಶೀತಲ ಮಾತಾಜಿ ವಂದಿಸಿದರು.

ಹೋಳಿ ಶಾಂತಿಯುತವಾಗಿ ಆಚರಿಸಿ

ಅಣ್ಣಿಗೇರಿ: ಹೋಳಿ ಹಬ್ಬಕ್ಕೆ ನೈಸರ್ಗಿಕವಾದ ಬಣ್ಣವನ್ನು ಮಾತ್ರ ಬಳಸಬೇಕು. ಕೆಮಿಕಲ್ ಬಣ್ಣ ಮೊಟ್ಟೆ ಬಳಸಬಾರದು ಎಂದು ಪಿಎಸ್ಐ ಉಮಾದೇವಿ ಸಿ. ತಿಳಿಸಿದರು.

ಹೋಳಿ ಮತ್ತು ರಂಜಾನ್ ಹಬ್ಬದ ಪ್ರಯುಕ್ತವಾಗಿ ಅಣ್ಣಿಗೇರಿ ಪೊಲೀಸ್ ಠಾಣೆಯಲ್ಲಿ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹೋಳಿ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಬೇಕು. ಒತ್ತಾಯ ಪೂರ್ವಕವಾಗಿ ಬಣ್ಣ ಹಚ್ಚುವುದು ಮಾಡಬಾರದು ಹಾಗೂ ರಂಜಾನ ಹಬ್ಬ ಶಾಂತಿಯುತವಾಗಿ ಆಚರಿಸಬೇಕು ಯಾವುದೇ ಹಿತಕರ ಘಟನೆಗಳು ಆಗದಂತೆ ಹಿಂದೂ ಮತ್ತು ಮುಸ್ಲಿಂ ಹಿರಿಯರು ಜಾಗೃತಿ ವಹಿಸಬೇಕು. ಯಾವುದೇ ಅಹಿತಕರ ಘಟನೆಗಳು ನಡೆದರೆ ಕಾನೂನು ರೀತಿ ಕ್ರಮ ಜರುಗಿಸಲಾಗುವುದು ಎಂದು ಮಾತನಾಡಿದರು.

ಪುರಸಭೆ ಉಪಾಧ್ಯಕ್ಷ ನಾಗಪ್ಪ ದಳವಾಯಿ ಮಾತನಾಡಿದರು. ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಮುದುಕಣ್ಣ ಭಜಂತ್ರಿ, ಲಕ್ಷ್ಮಣ ಬೆಂತೂರ, ಫಕ್ರು ಸಾಬ್ ಲೋಕ ಪುರಿ, ಹಿರಿಯರಾದ ಬಸವರಾಜ್ ಕೊಳಿವಾಡ, ಐ.ಜೆ. ಸಮುದ್ರಿ, ಭಗವಂತಪ್ಪ ಪುಟ್ಟಣ್ಣವರ, ನಿಂಗಪ್ಪ ಬಡ್ಡೆಪ್ಪನವರ, ವಿವಿಧ ಸಂಘ ಸಂಸ್ಥೆಗಳ ಅಧ್ಯಕ್ಷರು, ರೈತ ಮುಖಂಡರು ಉಪಸ್ಥಿತರಿದ್ದರು.



ಅಭಿವೃದ್ಧಿ ಕಾರ್ಯಗಳು ಗುಣಮಟ್ಟದ್ದಾಗಿರಲಿ

ಕುಂದಗೋಳ: ಗ್ರಾಮೀಣ ಭಾಗಗಳ ಪ್ರಗತಿಗೆ ಸಮರ್ಪಕ ರಸ್ತೆ ಸಂಪರ್ಕ ಅತಿ ಅವಶ್ಯಕ. ಗ್ರಾಮಗಳನ್ನು ಪರಸ್ಪರ ಸಂಪರ್ಕಿಸುವ ರಸ್ತೆಗಳು ಸುಧಾರಿತವಾಗಿದ್ದಾಗ ಮಾತ್ರ ಸುಗಮ ಸಂಚಾರ, ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ವೇಗ ಸಿಗುತ್ತದೆ ಎಂದು ಶಾಸಕ ಎಂ.ಆರ್. ಪಾಟೀಲ ಅಭಿಪ್ರಾಯಪಟ್ಟರು.

ಅವರು ಸೋಮವಾರ ತಾಲೂಕಿನ ಬು.ಕೊಪ್ಪದಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಲೆಕ್ಕಶೀರ್ಷಿಕೆ 5054 ಅಡಿ 50 ಲಕ್ಷ ರೂ. ವೆಚ್ಚದಲ್ಲಿ ಬು.ಕೊಪ್ಪ ಗ್ರಾಮದ ಶಿಬಾರಗಟ್ಟಿಯಿಂದ ಬು.ಕೊಪ್ಪ-ಕೂಬಿಹಾಳ ಸಂಪರ್ಕ ರಸ್ತೆ ನಿರ್ಮಾಣಕ್ಕೆ ಅಂದಾಜು 50 ಲಕ್ಷ ರೂ. ವೆಚ್ಚದ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಚಾಲನೆ ನೀಡಿ ಮಾತನಾಡಿ, ತಮ್ಮ ಅಧಿಕಾರಾವಧಿಯಲ್ಲಿ ಕ್ಷೇತ್ರದ ಎಲ್ಲಾ ಪ್ರಮುಖ ಗ್ರಾಮೀಣ ರಸ್ತೆಗಳನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸುವ ಸಂಕಲ್ಪ ಹೊಂದಿರುವುದಾಗಿ ತಿಳಿಸಿದರು.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ಸಹಕಾರದೊಂದಿಗೆ ವಿವಿಧ ಇಲಾಖೆಗಳ ಮೂಲಕ ಅನುದಾನವನ್ನು ತರಲು ಪ್ರಯತ್ನಿಸಲಾಗುತ್ತಿದೆ. ರಸ್ತೆ, ಶಿಕ್ಷಣ, ಕುಡಿಯುವ ನೀರು ಸೇರಿದಂತೆ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಅವರು ಭರವಸೆ ನೀಡಿದರು.

ಗ್ರಾಮೀಣ ಪ್ರದೇಶದ ಜನರಿಗೆ ಉತ್ತಮ ಸಂಚಾರ ವ್ಯವಸ್ಥೆ ಒದಗಿಸುವುದು ತಮ್ಮ ಪ್ರಮುಖ ಗುರಿಯಾಗಿದ್ದು, ಅಭಿವೃದ್ಧಿ ಕಾರ್ಯಗಳು ಪಾರದರ್ಶಕ ಹಾಗೂ ಗುಣಮಟ್ಟದ ರೀತಿಯಲ್ಲಿ ನಡೆಯಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ತಾಲೂಕು ಬಿಜೆಪಿ ಅಧ್ಯಕ್ಷ ನಾಗನಗೌಡ ಸಾತ್ಮರ, ಮುಖಂಡರಾದ ಪ್ರಕಾಶ ಕುಬಿಹಾಳ, ಇಂದ್ರಗೌಡ್ರ ಪಾಟೀಲ, ರಾಜುಗೌಡ ಪಾಟೀಲ, ಬಸವರಾಜ ಅಂಗಡಿ, ಮಂಜುನಾಥ ವಿಜಾಪುರ, ಯಲ್ಲಪ್ಪ ಶಿಗ್ಗಾವಿ, ಚಂದ್ರಶೇಖರ ಶಿಗ್ಗಾವಿ, ಈರಪ್ಪ ಪೂಜಾರ, ಜಗದೀಶ ಹುರಳಿ, ಈರಣ್ಣ ಪೂಜಾರ, ಯಲ್ಲಪ್ಪ ಶಿಗ್ಗಾಂವಿ, ಶಿವಾನಂದ ಪೂರ,ಸೇರಿದಂತೆ ಬಿಜೆಪಿ ಕಾರ್ಯಕರ್ತರು ಸ್ಥಳೀಯ ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.



ಬು.ಕೊಪ್ಪ-ಕೂಬಿಹಾಳ ಸಂಪರ್ಕ ರಸ್ತೆ ನಿರ್ಮಾಣಕ್ಕೆ ಅಂದಾಜು 50 ಲಕ್ಷ ರೂ. ವೆಚ್ಚದ ಕಾಮಗಾರಿಗೆ ಭೂಮಿಪೂಜೆ

ಮಾಜಿ ಸಂಸದ ಮಂಜುನಾಥ ಕುನ್ನೂರ ಆಗ್ರಹ

ವಿಸ್ತೃತ ಯೋಜನಾ ವರದಿ ಡಿಪಿಆರ್‌ನಲ್ಲಿ ಸೇರಿಸಿ

ಹಾವೇರಿ: ಬೇಡ್ತಿ-ವರದಾ ನದಿ ಜೋಡಣೆ ಪಿಎಫ್‌ಆರ್ (ಪ್ರೀ ಪಿಸಿಬಲ್ ರಿಪೋರ್ಟ್)ನಲ್ಲಿ ಸೂಚಿಸಿದ ಪ್ರಕಾರ ಬೇಡ್ತಿ ನದಿ ನೀರನ್ನು ಪೈಪ್‌ಲೈನ್ ಮೂಲಕ ಸಾಗಿಸುವ ಕಾಮಗಾರಿಯಿಂದ ಹಾವೇರಿ ಜಿಲ್ಲೆಗೆ ಅನುಕೂಲ ಆಗುವುದಿಲ್ಲ. ಹಾಗಾಗಿ, ಇದನ್ನು ತಿದ್ದುಪಡಿ ಮಾಡಿ ಜಿಲ್ಲೆಯಲ್ಲಿ ಡ್ಯಾಮ್ ನಿರ್ಮಿಸುವ ಕುರಿತು ವಿಸ್ತೃತ ಯೋಜನಾ ವರದಿ (ಡಿಪಿಆರ್)ನಲ್ಲಿ ಸೇರಿಸಬೇಕು ಎಂದು ಮಾಜಿ ಸಂಸದ ಮಂಜುನಾಥ ಕುನ್ನೂರ ಆಗ್ರಹಿಸಿದರು.

ಶಿಗ್ಗಾವಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಮುದ್ರಕ್ಕೆ ವ್ಯರ್ಥವಾಗಿ ಹೋಗುವ ನೀರನ್ನು ವರದಾ ನದಿಗೆ ಹರಿಸಬೇಕೆಂಬುದು ಈ ಭಾಗದ ಜನರ ಬಹುಕಾಲದ ಬೇಡಿಕೆ. ಆದರೆ, ಮೂಲಗಳ ಪ್ರಕಾರ ಪಿಎಫ್‌ಆರ್‌ನಲ್ಲಿ ಈ ಭಾಗದ ಆಶಯಕ್ಕೆ ವ್ಯತಿರಿಕ್ತವಾದ ಅಂಶಗಳು ಎದ್ದು ಕಾಣುತ್ತಿವೆ. ಬೇಡ್ತಿ, ವರದಾ ನದಿ ಪಾತ್ರದಲ್ಲಿ ಅಥವಾ ಹಾವೇರಿ ಜಿಲ್ಲೆಯಲ್ಲಿ ಯಾವುದೇ ಡ್ಯಾಮ್ ಅಥವಾ ಜಲಾಶಯ ನಿರ್ಮಿಸದೇ ಪೈಪ್‌ಲೈನ್ ಹಾಗೂ ಗ್ರಾವಿಟಿ ಮೂಲಕ ಕೆರೆಗಳಿಗೆ ನೀರು ಹರಿಸುವ ಕುರಿತು ಪಿಎಫ್‌ಆರ್‌ನಲ್ಲಿದೆ. ಮಳಗಿ, ಪಾಳಾ, ಹೀಗೆ ಹಾನಗಲ್ಲ, ಶಿಗ್ಗಾವಿ, ಸವಣೂರ, ಲಕ್ಷ್ಮೇಶ್ವರ, ತಾಲೂಕಿನ ಹಳ್ಳಿಗಳ ಮೂಲಕ ಹಿರೇವಡ್ಡಟ್ಟಿ ಡ್ಯಾಮ್‌ಗೆ ನೀರು ಹರಿಸಲು ಉದ್ದೇಶಿಸಲಾಗಿದೆ ಎಂದರು.ಕೇಂದ್ರ ಸರ್ಕಾರದ ಜಲಸಂಪನ್ಮೂಲ ಇಲಾಖೆ ಪಿಎಫ್‌ಆರ್ ಅಂಶಗಳನ್ನೇ ಡಿಪಿಆರ್‌ನಲ್ಲಿ ಸೇರಿಸಿದರೆ ಹಾವೇರಿ ಜಿಲ್ಲೆಯ ಜನರಿಗೆ ಯಾವುದೇ ಲಾಭ ಸಿಗುವುದಿಲ್ಲ. ಗದಗ, ಕೊಪ್ಪಳ ಮತ್ತು ಆಂಧ್ರಪ್ರದೇಶಕ್ಕೆ ಇದರ ಲಾಭ ಸಿಗಲಿದೆ. ಹಾಗಾಗಿ, ಪಿಎಫ್‌ಆರ್‌ಗೆ ತಿದ್ದುಪಡಿ ತರಲೇಬೇಕು. ಹಾವೇರಿ ಜಿಲ್ಲೆಯಲ್ಲಿ ಸೂಕ್ತವಾದ ಸ್ಥಳದಲ್ಲಿ ಡ್ಯಾಮ್ ಅಥವಾ ಸಮಾಂತರ ಜಲಾಶಯ ನಿರ್ಮಿಸುವ ಕುರಿತು ಡಿಪಿಆರ್‌ನಲ್ಲಿ ಸೇರಿಸಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ರಾಮಣ್ಣ ಕೆಂಚಳ್ಳೇರ, ಜಿಪಂ ಮಾಜಿ ಸದಸ್ಯ ಸಿ.ಎಸ್.ಪಾಟೀಲ, ಈರಣ್ಣ ಬಡ್ಡಿ, ಬಸವರಾಜ ರಾಗಿ, ಎಚ್.ಎಚ್. ಮುಲ್ಲಾ, ಮರಿಗೌಡ್ರ ಪಾಟೀಲ ಇತರರಿದ್ದರು.



ರಕ್ತ ಕೊಟ್ಟಾದರೂ ನೀರು ತರುತ್ತೇವೆ

ಮೂಲ ನದಿಗೆ ಯಾವುದೇ ಧಕ್ಕೆ ಆಗದಂತೆ ಬೇಡ್ತಿಯಿಂದ ವರದೆಗೆ ನದಿ ಜೋಡಿಸಿ, ಅಲ್ಲಲ್ಲಿ ಚೆಕ್ ಡ್ಯಾಂ ಮಾಡಿದರೆ ಜಿಲ್ಲೆಯ ರೈತರಿಗೆ ಅನುಕೂಲ ಆಗುತ್ತದೆ. ವರದಾ ತುಂಗಭದ್ರಾಕ್ಕೆ, ತುಂಗಭದ್ರಾ ಕೃಷ್ಣಾ ನದಿಗೆ ಸೇರುತ್ತದೆ. ಇದರಿಂದ ಉತ್ತರ ಕರ್ನಾಟಕ ಹಾಗೂ ಆಂಧ್ರಪ್ರದೇಶಕ್ಕೂ ಅನುಕೂಲ ಆಗುತ್ತದೆ. ನಾವು ಮತ್ತೊಂದು ಜಿಲ್ಲೆ, ರಾಜ್ಯಕ್ಕೆ ಬೇಡ ಎನ್ನುವುದಿಲ್ಲ. ಮೊದಲು ನಮ್ಮ ಜಿಲ್ಲೆಗೆ ಅನುಕೂಲ ಆಗಲಿ ಎಂಬುದು ನಮ್ಮ ಆಗ್ರಹ. ರಕ್ತ ಕೊಟ್ಟಾದರೂ ನೀರು ತರುತ್ತೇವೆ ಎಂದು ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಬಳ್ಳಾರಿ ಎಚ್ಚರಿಕೆ ನೀಡಿದರು.

ಕ್ಯಾನ್ಸರ್ ಪೀಡಿತ ಮಕ್ಕಳ ಆರೋಗ್ಯ ರಕ್ಷಣೆಗಾಗಿ ಸೈಕಲ್ ಅಭಿಯಾನ

ಶಿರಸಿ: ಕ್ಯಾನ್ಸರ್ ಪೀಡಿತ ಮಕ್ಕಳ ಆರೋಗ್ಯ ರಕ್ಷಣೆಗಾಗಿ ಸೈಕಲ್ ಚಲಾಯಿಸುವ ಮೂಲಕ ಹಣ ಸಂಗ್ರಹಿಸುವ ಮತ್ತು ಸಾರ್ವಜನಿಕರಲ್ಲಿ ಆರೋಗ್ಯ ಜಾಗೃತಿ ಮೂಡಿಸುವ ವಿನೂತನ ಅಭಿಯಾನಕ್ಕೆ ಶಿರಸಿ ಸೈಕ್ಲಿಂಗ್ ಕ್ಲಬ್ ಚಾಲನೆ ನೀಡಿದೆ.

ಶಿರಸಿ ಮಾರಿಕಾಂಬಾ ಜಾತ್ರೆಯ ಸಂದರ್ಭದಲ್ಲಿ ಕ್ಲಬ್‌ನ ಮುಖ್ಯಸ್ಥ ಡಾ.ದಿನೇಶ್ ಹೆಗಡೆ ನೇತೃತ್ವದಲ್ಲಿ 14ಕ್ಕೂ ಹೆಚ್ಚು ಸೈಕಲ್ ಸವಾರರು ಜಾತ್ರಾ ಗದ್ದುಗೆ ಹಾಗೂ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸುವ ಮೂಲಕ ಗಮನಸೆಳೆದರು.

ಮುಂಬೈ ಮೂಲದ 'ಕ್ಯಾನ್‌ಕಿಡ್ಸ್' ಸಂಸ್ಥೆಯು ಪ್ರತಿವರ್ಷ ಫೆಬ್ರವರಿ 4ರ ವಿಶ್ವ ಕ್ಯಾನ್ಸರ್ ದಿನದಿಂದ 40 ದಿನ ಈ ಸೈಕಲ್ ರ‍್ಯಾಲಿ ಆಯೋಜಿಸುತ್ತದೆ. ಈ ಅಭಿಯಾನದಡಿ ನೋಂದಾಯಿಸಿಕೊಂಡ ಸವಾರರು ಚಲಾಯಿಸುವ ಪ್ರತಿ ಕಿಲೋಮೀಟರ್‌ಗೆ ಕಾರ್ಪೋರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯಿಂದ ಸಂಸ್ಥೆಗೆ ಅಂದಾಜು 50 ರೂ.ಅನುದಾನ ದೊರೆಯುತ್ತದೆ. ಈ ಹಣವನ್ನು ದೇಶದ 22 ರಾಜ್ಯಗಳ 60 ಕೇಂದ್ರಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ 1.5 ಲಕ್ಷಕ್ಕೂ ಅಧಿಕ ಕ್ಯಾನ್ಸರ್ ಪೀಡಿತ ಮಕ್ಕಳ ಆರೈಕೆಗೆ ಬಳಸಲಾಗುತ್ತದೆ.



ಈ ಕುರಿತು ಮಾಹಿತಿ ನೀಡಿದ ಡಾ. ದಿನೇಶ್ ಹೆಗಡೆ, ಶಿರಸಿ ಸೈಕ್ಲಿಂಗ್ ಕ್ಲಬ್ ಸದಸ್ಯರು 40 ದಿನಗಳಲ್ಲಿ ಕನಿಷ್ಠ 10,000 ಕಿ.ಮೀ. ಸಂಚರಿಸುವ ಮೂಲಕ ಸರಿಸುಮಾರು 5 ಲಕ್ಷ ರೂ. ಅನುದಾನ ಕ್ರೋಢೀಕರಿಸುವ ಗುರಿ ಹೊಂದಿದ್ದಾರೆ. ಈ ಪುಣ್ಯ ಕೆಲಸದಲ್ಲಿ ಸಾರ್ವಜನಿಕರು ಭಾಗವಹಿಸುವ ಮೂಲಕ ನೊಂದ ಮಕ್ಕಳ ಚಿಕಿತ್ಸೆಗೆ ನೆರವಾಗುವುದರ ಜೊತೆಗೆ ತಮ್ಮ ಆರೋಗ್ಯವನ್ನೂ ಸುಧಾರಿಸಿಕೊಳ್ಳಬಹುದು ಎಂದರು.

ಜಾಥಾದಲ್ಲಿ ಕ್ಲಬ್‌ನ ಸದಸ್ಯರಾದ ಡಾ.ವಿನಾಯಕ ಸುಬ್ರಹ್ಮಣ್ಯ, ನಾಗರಾಜ್ ಭಟ್ ಅಜಂತಾ, ಎಸ್.ಆರ್.ನಾಗರಾಜ್ ಭಟ್, ನರಸಿಂಹ ಜೋಶಿ, ದೀಪಕ್ ಕಾಮತ್, ವಿನಾಯಕ ಪ್ರಭು, ರವೀಂದ್ರ ಹೆಗಡೆ, ವಿನಯ್ ಹೆಗಡೆ, ಗಜಾನನ್ ನಾಯಕ್ ಹಾಗೂ ಗೌರವ್ ಪ್ರಭು ಪಾಲ್ಗೊಂಡಿದ್ದರು.

ಕಿರುಸುದ್ದಿ

ಬ್ಯಾಡಗಿ ಮೆಣಸಿನಕಾಯಿ ದರ ಸ್ಥಿರ

ಬ್ಯಾಡಗಿ: ಪಟ್ಟಣದ ಅಂತಾರಾಷ್ಟ್ರೀಯ ಕೃಷಿ ಉತ್ಪನ್ನ ಮಾರುಕಟ್ಟೆಗೆ ಸೋಮವಾರ 1,46,126 ಮೆಣಸಿನಕಾಯಿ ಚೀಲಗಳು ಆವಕ ಆಗಿದ್ದು, ದರವು ಕಳೆದ ವಾರಕ್ಕೆ ಹೋಲಿಸಿದರೆ ಸ್ಥಿರವಾಗಿದೆ. ಬ್ಯಾಡಗಿ ಕಡ್ಡಿ ಮೆಣಸಿನಕಾಯಿ ಕಳೆದ ವಾರಕ್ಕೆ ಹೋಲಿಸಿದರೆ ದರದಲ್ಲಿ ಇಳಿಕೆ ಕಡಿಮೆ



4.239ರೂ. 100ಕೆಜಿ ಸರಾಸರಿ ದರ 100 ಕೆಜಿಗೆ 47.529ರೂ. ಅತಿ ಹೆಚ್ಚು,100ಕೆಜಿಗೆ 61.569ರೂ.ಬ್ಯಾಡಗಿ ಡಬ್ಬಿ ಕಳೆದ ವಾರಕ್ಕೆ ಹೋಲಿಸಿದರೆ ಈ ವಾರ ಅತಿ ಹೆಚ್ಚು ದರ ಕಡಿಮೆ ಪ್ರತಿ 100 ಕೆಜಿಗೆ 5.289ರೂ. ಸರಾಸರಿ ದರ ಪ್ರತಿ 100 ಕೆಜಿಗೆ 51.659ರೂ. ಹೆಚ್ಚು ದರ ಪ್ರತಿ 100 ಕೆಜಿಗೆ 67.279ರೂ. ಗುಂಟೂರು ಒಣಮೆಣಸಿಕಾಯಿ ಕಡಿಮೆ ಬಿಳಿಕಾಯಿ ದರ ಪ್ರತಿ 100 ಕೆಜಿಗೆ 1689ರೂ. ಸರಾಸರಿ ದರ ಪ್ರತಿ 100 ಕೆಜಿಗೆ 14.009ರೂ. ಅತಿ ಹೆಚ್ಚು ದರ ಪ್ರತಿ 100 ಕೆಜಿಗೆ 18.009ರೂ.ಗಳು.

ವಿದ್ಯಾರ್ಥಿಗೆ ವಂಚಿಸಿದ ಶಿಕ್ಷಕ ಅಮಾನತು

ಧಾರವಾಡ: ವಿದ್ಯಾರ್ಥಿಗೆ ಪ್ರಶ್ನೆಪತ್ರಿಕೆ ಆಮಿಷವೊಡ್ಡಿ ವಂಚಿಸಿದ ಆರೋಪದ ಅಡಿ ವಿದ್ಯಾರಣ್ಯ ಪ್ರೌಢಶಾಲೆ ಶಿಕ್ಷಣ ರಾಜಶೇಖರ ವಡತೇರ ಅವರನ್ನು ಕೆ.ಇ.ಬೋರ್ಡ್ ಸಂಸ್ಥೆ ಅಮಾನತುಗೊಳಿಸಿದೆ. ಶಿಕ್ಷಕ ರಾಜಶೇಖರ ತನ್ನದೇ ಶಾಲೆಯ ಓರ್ವ ವಿದ್ಯಾರ್ಥಿಯಿಂದ ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಗಳ ಪೂರ್ವಭಾವಿ ಪರೀಕ್ಷೆ ಪ್ರಶ್ನೆಪತ್ರಿಕೆ ಮುಂಚಿತವಾಗಿ ನೀಡುವ ಆಮಿಷವೊಡ್ಡಿ ಚಿನ್ನಾಭರಣ ದೋಚಿದ್ದರು. ವಿಷಯ ತಿಳಿದ ಪಾಲಕರು ಆಡಳಿತ ಮಂಡಳಿ ಹಾಗೂ ಪೊಲೀಸ್ ಠಾಣೆಗೂ ಸಹ ದೂರು ನೀಡಿತ್ತು. ಎಚ್ಚೆತ್ತ ಆಡಳಿತ ಮಂಡಳಿ ಶಿಕ್ಷಕನಿಗೆ ಅಮಾನತು ಶಿಕ್ಷೆ ವಿಧಿಸಿ ಆದೇಶ ಹೊರಡಿಸಿ, ತನಿಖೆಗೆ ಆದೇಶಿಸಿದೆ.

ಕುರಿಗಾಹಿ ಬಲಿ ಪಡೆದ ಕರಡಿ ಕೊಂದ ಜನ

ವಿಜಯನಗರ: ಕುರಿಗಾಹಿ ಮೇಲೆ ದಾಳಿ ನಡೆಸಿ ಬಲಿ ಪಡೆದಿರುವ ಕರಡಿಯನ್ನು ಗ್ರಾಮಸ್ಥರು ಹೊಡೆದು ಕೊಂದಿರುವ ಘಟನೆ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಹಲಸಾಗರ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ನಡೆದಿದೆ. ಹಲಸಾಗರ ಗ್ರಾಮದ ಓಬಣ್ಣ(30) ಮೃತ ದುರ್ದೈವಿ.

ಕುರಿ ಮೇಯಿಸಲು ಹೋಗಿದ್ದ ಓಬಣ್ಣ ಸಂಜೆಯಾದರೂ, ಮನೆಗೆ ವಾಪಸ್ ಬರದಿದ್ದರಿಂದ ಕುಟುಂಬಸ್ಥರು ಹುಡುಕಾಟ ನಡೆಸಿದಾಗ ಕರಡಿ ದಾಳಿಯಿಂದ ಮೃತ ಪಟ್ಟಿರುವುದು ಬೆಳಕಿಗೆ ಬಂದಿದೆ. ಇದರಿಂದ ರೊಚ್ಚಿಗೆದ್ದ ಜನರು, ಕರಡಿಯನ್ನು ಅಟ್ಟಾಡಿಸಿಕೊಂಡು ಹೊಡೆದು ಕೊಲೆ ಮಾಡಿದ್ದಾರೆ. ಗುಡೇಕೋಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಸುತ್ತೂರು ಶ್ರೀಗಳಿಂದ ಅಡುಗೆ ಮನೆ ಉದ್ಘಾಟನೆ

ಕಲಬುರಗಿ: ನಗರದ ಐತಿಹಾಸಿಕ ಶರಣಬಸವೇಶ್ವರ ಪುಣ್ಯಕ್ಷೇತ್ರದ ದಾಸೋಹ ಮಹಾಮನೆಯಲ್ಲಿ ಸೋಮವಾರ ಸುತ್ತೂರಿನ ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ತಮ್ಮ ದಿವ್ಯ ಅಮೃತ ಹಸ್ತದಿಂದ ಮಹಾ ಮನೆಯಲ್ಲಿ ಹೊಸದಾಗಿ ನಿರ್ಮಿಸಿದ (ಹೈಟೆಕ್ ಕಿಚನ್) ಅಡುಗೆ ಮನೆ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಸುತ್ತೂರಿನ ಶ್ರೀಗಳು, ಕಳೆದ 200 ವರ್ಷಗಳಿಗೂ ಹೆಚ್ಚು ಕಾಲದಿಂದ ಕಾರ್ಯನಿರ್ವಹಿಸುತ್ತಿದ್ದ ಹಳೆಯ ಅಡುಗೆ ಮನೆ ಇದಾಗಿದ್ದು, ದೇಗುಲಕ್ಕೆ ಭೇಟಿ ನೀಡುವ ಭಕ್ತರ ಹಸಿವನ್ನು ನೀಗಿಸಲು ಅನ್ನ ದಾಸೋಹಕ್ಕಾಗಿ ಆಹಾರವನ್ನು ಬೇಯಿಸುವ ಮೂಲಕ ದೇಗುಲಕ್ಕೆ ಆಗಮಿಸುವ ಭಕ್ತರ ಹಸಿವನ್ನು ನೀಗಿಸುತ್ತಿದೆ ಎಂದರು.



ಈ ಹೈಟೆಕ್ ಅಡುಗೆ ಮನೆಯು 11 ಬೃಹತ್ ಅಡುಗೆ ಪಾತ್ರೆ ಹೊಂದಿದ್ದು, 30 ಕೆಜಿಯಿಂದ 1 ಕ್ವಿಂಟಾಲ್ ವರೆಗೆ ಅನ್ನ, ಸಾಂಬಾರ್ ಮತ್ತು ಸಜ್ಜಕ ಸೇರಿದಂತೆ ಇತರ ಆಹಾರ ಬೇಯಿಸುವ ಸಾಮರ್ಥ್ಯ ಹೊಂದಿದೆ.

ಈ ಅಡುಗೆ ಮನೆಯು ಹಗಲಿನಲ್ಲಿ ಸೌರಶಕ್ತಿಯ ಮೇಲೆ ಕಾರ್ಯನಿರ್ವಹಿಸುತ್ತದೆ ಮತ್ತು ರಾತ್ರಿಯಲ್ಲಿ ಇದನ್ನು ಎಲ್‌ಪಿಜಿಯಿಂದ ನಿರ್ವಹಿಸಲಾಗುತ್ತದೆ. ಒಂದು ಗಂಟೆಯಲ್ಲಿ 5000ರಿಂದ 6000 ಜನರಿಗೆ ಆಹಾರ ತಯಾರಿಸುವ ಸಾಮರ್ಥ್ಯ ಹೊಂದಿದ್ದು, ಆಧುನಿಕ ಅಡುಗೆಮನೆಯ ಉದ್ಘಾಟನೆಯಿಂದ, ದಾಸೋಹ ಮಹಾ ಮನೆಯಲ್ಲಿ ಬಡಿಸುವ ಆಹಾರ, ಅಡುಗೆ ಮಾಡುವ ಪ್ರಕ್ರಿಯೆ ಸುಲಭಗೊಳಿಸುತ್ತದೆ ಎಂದ ಅವರು ಆರೋಗ್ಯಕರ ಅಡುಗೆ ತಯಾರಿಸಲಾಗುತ್ತದೆ ಎಂದರು.

ಶರಣಬಸವೇಶ್ವರ ಸಂಸ್ಥಾನದ 9ನೇ ಪೀಠಾಧಿಪತಿ ಪೂಜ್ಯ ದೊಡ್ಡಪ್ಪ ಅಪ್ಪಾಜಿ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ ಮಾತೋಶ್ರೀ ಡಾ. ದಾಕ್ಷಾಯಿಣಿ ಅವ್ವಾಜಿ, ಕಾರ್ಯದರ್ಶಿ ಬಸವರಾಜ ದೇಶಮುಖ ಅವರೊಂದಿಗೆ, ಸುತ್ತೂರು ಮಠದ ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಹೊಸದಾಗಿ ನಿರ್ಮಿಸಿದ ಅಡುಗೆಮನೆ ಉದ್ಘಾಟಿಸಿದರು.

ಭವಾನಿ ಎಸ್ ಅಪ್ಪಾ, ಶಿವಾನಿ ಎಸ್ ಅಪ್ಪಾ ಮತ್ತು ಮಹೇಶ್ವರಿ ಎಸ್ ಅಪ್ಪಾ, ಡಾ.ಅಲ್ಲಮಪ್ರಭು ದೇಶಮುಖ, ಶರಣಬಸವ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಅನಿಲಕುಮಾರ ಬಿಡವೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಸಿಲಿಂಡರ್ ಸ್ಫೋಟ: ಮನೆ ಛಿದ್ರ

ಬಳ್ಳಾರಿ: ಅಡುಗೆ ಅನಿಲ ಸ್ಫೋಟಗೊಂಡು ಮನೆಯೊಂದು ಛಿದ್ರ ಛಿದ್ರವಾಗಿರುವ ಘಟನೆ ಸಂಡೂರು ತಾಲೂಕಿನ ತಾಳೂರ ಗ್ರಾಮದಲ್ಲಿ ಸೋಮವಾರ ನಡೆದಿದೆ.

ಘಟನೆಯಲ್ಲಿ ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿಯಾಗಿಲ್ಲ. ಗ್ರಾಮದ ಸುಭಾನಿ ಸಾಬ್ ಎನ್ನುವವರ ಮನೆಯಲ್ಲಿ ಘಟನೆ ಸಂಭವಿಸಿದ್ದು, ಅಡುಗೆ ಅನಿಲದ ಸಿಲಿಂಡರ್ ಸ್ಫೋಟದ ತೀವ್ರತೆಗೆ ಮನೆ ಛಿದ್ರ ಛಿದ್ರಗೊಂಡಿದೆ. ಬೆಳಗ್ಗೆ ಹೊಸ ಸಿಲಿಂಡರ್ ತಂದು ಕೂಡಿಸುವಾಗ ಗ್ಯಾಸ್ ಲೀಕೆಜ್ ಆಗಿದೆ. ಕೂಡಲೇ ಮನೆಯವರೆಲ್ಲ ಹೊರಗೆ ಬಂದಿದ್ದಾರೆ.

ಕ್ಷಣಾರ್ಧದಲ್ಲಿ ಸಿಲಿಂಡರ್ ಬ್ಲಾಸ್ಟ್ ಆಗಿದೆ ಎಂದು ತಿಳಿದು ಬಂದಿದ್ದು, ಸುಬಾನಿ ಸಾಬ್ ಸೇರಿದಂತೆ ಇನ್ನಿಬ್ಬರಿಗೆ ಗಾಯಗಳಾಗಿದ್ದು, ಸಮೀಪದ ತೋರಣಗಲ್ಲು ಸಂಜೀವಿನಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳಕ್ಕೆ ತೋರಣಗಲ್ಲು ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು. ಪ್ರಕರಣ ದಾಖಲಾಗಿದೆ.



ಇರಾನ್ ಅಧ್ಯಕ್ಷನ ಹತ್ಯೆಯಿಂದ ಶಿಯಾ ಸಮುದಾಯಕ್ಕೆ ನೋವಾಗಿದೆ: ಎಂಬಿಪಾ

ವಿಜಯಪುರ: ಇರಾನ್ ಅಧ್ಯಕ್ಷ ಖಮೇನಿ ಹತ್ಯೆಯಿಂದ ಶಿಯಾ ಸಮುದಾಯಕ್ಕೆ ನೋವಾಗಿದೆ. ಖಮೇನಿ ಓರ್ವ ರಾಷ್ಟ್ರದ ಅಧ್ಯಕ್ಷ ಅಷ್ಟೇ ಅಲ್ಲ, ಶಿಯಾ ಸಮುದಾಯದ ಧರ್ಮಗುರು ಆಗಿದ್ದರು. ಹಾಗಾಗಿ ಧರ್ಮ ಗುರುಗಳನ್ನು ಕಳೆದುಕೊಂಡಿರುವ ಆ ಸಮುದಾಯದವರು ಪ್ರತಿಭಟನೆ ಮಾಡುತ್ತಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಹೇಳಿದರು.ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಮೆರಿಕಾ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಮಾಡಿದ್ದು ತಪ್ಪು. ಒಂದು ದೇಶದ ಅಧ್ಯಕ್ಷರನ್ನು ಅಪಹರಿಸುತ್ತಾರೆ. ಒಂದು ದೇಶದ ಅಧ್ಯಕ್ಷರನ್ನ ಹತ್ಯೆ ಮಾಡಿಸುತ್ತಾರೆ. ಇದು ಸರಿಯಲ್ಲ. ಇಂದು ಅವರಿಗೆ ಮಾಡಿದ್ದಾರೆ. ನಾಳೆ ನಮಗೆ ಕೂಡ ಮಾಡುತ್ತಾರೆ ಎಂದರು.



ಬಿಪಿಎಲ್ ಕಾರ್ಡ್ ಇದ್ದವರಿಗೆ ಗ್ಯಾರಂಟಿ ಯೋಜನೆಗಳನ್ನು ಕೊಡಬೇಕೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಎಂ.ಬಿ. ಪಾಟೀಲ್ ಅಂತಹವರಿಗೆ 2000 ರೂ. ಬೇಕಾ ಹೇಳಿ ಎಂದು ತಮ್ಮನ್ನೇ ಉದಾಹರಿಸಿ, ಶ್ರೀಮಂತರು ತಾವಾಗಿಯೇ ಬಿಟ್ಟು ಕೊಡಬೇಕು ಎಂದರು.

ಪ್ರತಿಭಟನೆ ಮಾಡುವವರು ದೇಶದ್ರೋಹಿಗಳು: ಯತ್ನಾಳ

ವಿಜಯಪುರ: ಇರಾನ್ ಅಧ್ಯಕ್ಷ ಖಮೇನಿ ಹತ್ಯೆಯನ್ನು ಖಂಡಿಸಿ ರಾಜ್ಯದಲ್ಲಿ ಪ್ರತಿಭಟನೆ ಮಾಡುವವರು ದೇಶದ್ರೋಹಿಗಳು ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಾರತ ಎಲ್ಲ ದೇಶಗಳ ಜೊತೆಗೆ ಉತ್ತಮ ಸಂಬಂಧ ಹೊಂದಿದೆ ಮತ್ತು ಈ ಯುದ್ಧದಲ್ಲಿ ನಮ್ಮದೇನು ಪಾತ್ರವಿಲ್ಲ, ನಾವು ಶಾಂತಿ ಬಯಸುತ್ತೇವೆ ಎಂದಿದ್ದಾರೆ.

ರಾಜ್ಯದಲ್ಲಿ ಪ್ರತಿಭಟನೆ ಮಾಡುವವರು ದೇಶದ್ರೋಹಿಗಳು. ಅಲ್ಲಿನ ಘಟನೆಗೂ ಇಲ್ಲಿಗೂ ಏನು ಸಂಬಂಧ ? ಭಾರತದಲ್ಲಿ ಆರಾಮಾಗಿದ್ದಾರೆ. ಆರಾಮಾಗಿ ಇರಿ. ಅಲ್ಲಿ ಸತ್ತಿದಕ್ಕೆ ಇಲ್ಲಿ ಹೋರಾಟ ಮಾಡುತ್ತಿರಿ ಏಕೆ? ಎಂದು ಪ್ರಶ್ನಿಸಿದ್ದಾರೆ.

ಮಹಿಳೆ ಕೊಲೆ ಪ್ರಕರಣ

ಪತ್ನಿ ಕೊಲೆಗೆ ಪತಿ ಸುಪಾರಿ!



ಧಾರವಾಡ: ಸವದತ್ತಿ ರಸ್ತೆಯಲ್ಲಿ ಅಪಘಾತಪಡಿಸಿ, ಕೊಲೆ ಮಾಡಿದ ತಾಲೂಕಿನ ನರೇಂದ್ರ ಗ್ರಾಮದ ಲಲಿತಾ ಉದಯ ಹಾತರಕಿ ಕೊಲೆ ಪ್ರಕರಣ ಬೇಧಿಸುವಲ್ಲಿ ಧಾರವಾಡ ಗ್ರಾಮೀಣ ಠಾಣೆಯ ಪೊಲೀಸರು ಯಶಸ್ವಿಯಾಗಿದ್ದಾರೆ.

ನರೇಂದ್ರ ಗ್ರಾಮದ ಉದಯಕುಮಾರ ಹಾತರಕಿ(ಪತಿ), ಗರಗ ಗ್ರಾಮದ ನಾಗಪ್ಪ ಪಡೇಕರ, ಕಿತ್ತೂರು ತಾಲೂಕಿನ ನಿಚ್ಚಣಕಿ ಗ್ರಾಮದ ಅಭಿಷೇಕ ವರಗನ್ನವರ ಮತ್ತು ದೊಡ್ಡವಾಡದ ನಾಗರಾಜ ಉಪ್ಪಿನ ಕೊಲೆ ಮಾಡಿದ ಆರೋಪಿಗಳು.

ಉದಯಕುಮಾರ ಹಾಗೂ ಲಲಿತಾ ದಂಪತಿ. ಉದಯಕುಮಾರ 2ನೇ ಮದುವೆ ಆಗಿದ್ದು, ಲಲಿತಾ ತವರು ಮನೆ ಸೇರಿದ್ದಳು. ಅಲ್ಲದೇ, ಗಂಡನ ಆಸ್ತಿಯಲ್ಲಿ ಪಾಲು ನೀಡುವಂತೆ ನ್ಯಾಯಾಲಯದ ಮೋರೆಯೂ ಹೋಗಿದ್ದಳು. ಇದರಿಂದ ಕುಪಿತಗೊಂಡ ಪತಿ ಉದಯಕುಮಾರ, ಪತ್ನಿ ಲಲಿತಾ ಕೊಲೆಗೆ ರೂ.40 ಲಕ್ಷಕ್ಕೆ ಸಪಾರಿ ನೀಡಿದ್ದು, ಸವದತ್ತಿ ರಸ್ತೆಯ ದುರ್ಗಾದೇವಿ ದೇವಸ್ಥಾನಕ್ಕೆ ಬರುವಂತೆ ದೂರವಾಣಿ ಕರೆ ಮಾಡಿದ್ದ ಎನ್ನಲಾಗಿದೆ.

ಪತಿ ಕರೆಗೆ ಓಗೊಟ್ಟು ಫೆ.26ರಂದು ಬಂದ ಲಲಿತಾಗೆ ಆರೋಪಿಗಳು ಸವದತ್ತಿ ರಸ್ತೆಯಲ್ಲಿ ಥಾರ್ ವಾಹನದಿಂದ ಅಪಘಾತಪಡಿಸಿದ್ದರು. ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡ ಲಲಿತಾ ಸ್ಥಳದಲ್ಲಿಯೇ ಮೃತಪಟ್ಟಿದ್ದಳು.

ಥಾರ್ ವಾಹನಕ್ಕೆ ನಂಬರ್ ಪ್ಲೇಟ್ ಅಳವಡಿಸಿದೆ ಅಪಘಾತದ ಮರಣ ಅಂತಲೂ ಬಿಂಬಿಸಿದ್ದರು.

ಮೃತಳ ತಂದೆ ದೂರಿನ ಮೇರೆಗೆ ತನಿಖೆ ನಡೆಸಿದ ಪೊಲೀಸರು, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬಂಧಿತರಿಂದ ಕಪ್ಪು ಬಣ್ಣದ ಥಾರ್ ಕಾರು, ನಾಲ್ಕು ಮೊಬೈಲ್, ರೂ.20 ಸಾವಿರ ನಗದು ವಶಕ್ಕೆ ಪಡೆಯಲಾಗಿದೆ. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೂ ಒಪ್ಪಿಸಿದ್ದು, ಪೊಲೀಸ್ ತನಿಖೆ ಮುಂದುವರಿದಿದೆ.

ಮಲ್ಲಿಕಾರ್ಜುನ ಮುತ್ಯಾ ವಿರುದ್ಧ ಉದ್ದೇಶ ಪೂರ್ವಕ ಪ್ರಕರಣ ದಾಖಲು

ಕಲಬುರಗಿ(ಬೆಂಗಳೂರು): ಯಾದಗಿರಿ ಜಿಲ್ಲೆಯ ಮಹಲ್ ರೋಜಾದ ಪೀಠಾಧಿಪತಿ ಮಲ್ಲಿಕಾರ್ಜುನ ಮುತ್ಯಾ ವಿರುದ್ಧ ಉದ್ದೇಶಪೂರ್ವಕವಾಗಿ ಪ್ರಕರಣ ದಾಖಲಿಸಿರುವುದು ಖಂಡನೀಯ. ಮಲ್ಲಿಕಾರ್ಜುನ ಮುತ್ಯಾ ಅವರು ಅನೇಕ ಸಾಮಾಜಿಕ ಸೇವೆ ಮಾಡುತ್ತಿದ್ದಾರೆ. ಅವರ ಚಿಕ್ಕ ವಯಸ್ಸಿನ ಏಳಿಗೆಯನ್ನು ಸಹಿಸಿದ ಕೆಲ ಜನರು ಅವರ ತೇಜೋವಧೆ ಮಾಡುತ್ತಿದ್ದಾರೆ ಎಂದು ಎಂಎಲ್ಸಿ ಎನ್.ರವಿಕುಮಾರ್ ಹೇಳಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಮಲ್ಲಿಕಾರ್ಜುನ ಮುತ್ಯಾ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ ಅದನ್ನು ಪೋಕ್ಸೋ ಪ್ರಕರಣವಾಗಿ ಪರಿಗಣಿಸಿರುವುದು ಸರಿಯಲ್ಲ. ಏಳು ವರ್ಷದ ಬಾಲಕಿಗೆ ಮಮತೆಯಿಂದ ವರ್ತಿಸಿದ್ದನ್ನು ತಪ್ಪಾಗಿ ಬಣ್ಣಿಸಲಾಗಿದೆ. ಕೆಲ ಸಾಮಾಜಿಕ ಜಾಲತಾಣಗಳು ಹಾಗೂ ಕೆಲವು ಮಾಧ್ಯಮಗಳು ಆ ವಿಡಿಯೋವನ್ನು ತಿರುಚಿ ಬೇರೆ ಅರ್ಥ ಕಲ್ಪಿಸಿ ಪ್ರಸಾರ ಮಾಡಿವೆ.



ಬಾಲಕಿಯ ಪೋಷಕರು ಯಾವುದೇ ದೂರು ಸಹ ನೀಡಿಲ್ಲ.ಅಲ್ಲದೆ ಬಾಲಕಿಯ ಪೋಷಕರು ಮಲ್ಲಿಕಾರ್ಜುನ ಮುತ್ಯಾ ಅವರ ಬಗ್ಗೆ ಗೌರವ ಹೊಂದಿದ್ದು, ಅವರ ಭಕ್ತರಾಗಿದ್ದಾರೆ ಎಂಬ ಮಾಹಿತಿಯೂ ಇದೆ.ಆದರೂ ದುರುದ್ದೇಶದಿಂದ ಈ ಪ್ರಕರಣವನ್ನು ಸ್ವಯಂ ಪ್ರೇರಿತವಾಗಿ ಪೋಕ್ಸೋ ಅಡಿಯಲ್ಲಿ ದಾಖಲಿಸಲಾಗಿದೆ. ಆದ್ದರಿಂದ ಪೊಲೀಸ್ ಇಲಾಖೆ ಈ ಪ್ರಕರಣದ ನಿಜಸ್ಥಿತಿಯನ್ನು ಸಮಗ್ರವಾಗಿ ತನಿಖೆ ನಡೆಸಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗೂ ಈ ಪ್ರಕರಣವನ್ನು ರದ್ದುಪಡಿಸಬೇಕು ಎಂದರು.ಇದೇ ವೇಳೆ ರಾಜ್ಯದ ಜನತೆಗೆ ಈ ಪ್ರಕರಣದ ಸತ್ಯಾಸತ್ಯತೆಯನ್ನು ಸರ್ಕಾರ ಹೊರತರಬೇಕು ಹಾಗೂ ನಿರಪರಾಧಿಗಳ ಮೇಲೆ ಅನಗತ್ಯವಾಗಿ ಪ್ರಕರಣ ದಾಖಲಿಸುವುದನ್ನು ತಪ್ಪಿಸಬೇಕೆಂದು ಸರ್ಕಾರಕ್ಕೆ ಆಗ್ರಹಿಸಿದರು.

ಕೆಐಎಡಿಬಿ ಸ್ಥಳಾಂತರ ಸ್ಥಗಿತ: ಸಚಿವ ಜೋಶಿ ಅಭಿನಂದನೆ

ಹುಬ್ಬಳ್ಳಿ: ಧಾರವಾಡದ ಕೆಐಎಡಿಬಿ ವಲಯ ಕಚೇರಿಯನ್ನು ಸ್ಥಳಾಂತರಿಸುವ ರಾಜ್ಯ ಸರ್ಕಾರದ ನಿರ್ಧಾರವನ್ನು ಸ್ಥಗಿತಗೊಳಿಸಿರುವ ಹಿನ್ನೆಲೆಯಲ್ಲಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರು ರಾಜ್ಯದ ಬೃಹತ್, ಮಧ್ಯಮ ಕೈಗಾರಿಕೆಗಳು ಮತ್ತು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಅವರಿಗೆ ಧನ್ಯವಾದ ತಿಳಿಸಿದ್ದಾರೆ.



ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಜೋಶಿ, ಧಾರವಾಡದ ಕೆಐಎಡಿಬಿ ವಲಯ ಕಛೇರಿ ಸುಮಾರು ನಲವತ್ತು ವರ್ಷಕ್ಕಿಂತಲೂ ಹಳೆಯ ಕಚೇರಿಯಾಗಿದ್ದು, ಉತ್ತರ ಕರ್ನಾಟಕದ ಅಭಿವೃದ್ಧಿ ಅದರಲ್ಲೂ ವಿಶೇಷವಾಗಿ ಧಾರವಾಡ ಜಿಲ್ಲೆಯ ಕೈಗಾರಿಕೆಗೆ ಸಂಬಂಧಪಟ್ಟಂತೆ ಕಾರ್ಯನಿರ್ವಹಿಸುತ್ತಿರುವ ಏಕೈಕ ವಲಯ ಕಚೇರಿಯಾಗಿದೆ. ಅದನ್ನು ಬೇರೆಡೆಗೆ ಸ್ಥಳಾಂತರ ಮಾಡುವ ನಿರ್ಧಾರ ಹಿಂಪಡೆಯುವಂತೆ ಕೇಂದರ ಸಚಿವ ಜೋಶಿ ಆಗ್ರಹಿಸಿದ್ದರು. ಸಚಿವರ ಆಗ್ರಹಕ್ಕೆ ಸ್ಪಂದಿಸಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ಮೂಲಸೌಕರ್ಯ ಅಭಿವೃದ್ಧಿಯ ಸಚಿವ ಎಂ. ಬಿ ಪಾಟೀಲ ಅವರು ಧಾರವಾಡದ ಕೆ.ಐ.ಎ.ಡಿ.ಬಿ. ವಲಯ ಕಚೇರಿ ಸ್ಥಳಾಂತರವನ್ನು ಸ್ಥಗಿತಗೊಳಿಸಿದ್ದು ಇಲ್ಲಿಯೇ ಮುಂದುವರೆಸಲು ಒಪ್ಪಿದ್ದಾರೆ.

ರಾಜ್ಯ ಸರ್ಕಾರ ಇನ್ನೂ ಹೆಚ್ಚಿನ ಆಡಳಿತಾತ್ಮಕ ಕಚೇರಿ ಆವಶ್ಯಕತೆ ಮನಗಂಡಲ್ಲಿ ಈಗಿರುವ ಕಚೇರಿಗಳನ್ನೂ ಸ್ಥಳಾಂತರಿಸದೆ ಅವಶ್ಯಕತೆ ಇದ್ದಲ್ಲಿ ಅಲ್ಲಿನ ಕೈಗಾರಿಕಾ ಬೆಳವಣಿಗೆಗೆ ಪೂರಕವಾಗಿದೆ. ಉತ್ತರ ಕರ್ನಾಟಕದ ಪ್ರಮುಖ ನಗರಗಳಲ್ಲಿ ಹೊಸ ಕಚೇರಿಗಳನ್ನು ಪ್ರಾರಂಭಿಸುವಂತೆಯೂ ಸಚಿವ ಜೋಶಿ ಅವರು ಪತ್ರ ಬರೆದು ಆಗ್ರಹಿಸಿದ್ದರು.

ತಮ್ಮ ಮನವಿಗೆ ಸ್ಪಂದಿಸಿದ ಸಚಿವ ಎಂ. ಬಿ. ಪಾಟೀಲರು ಈ ಕಚೇರಿಯಿಂದ ರೈತರ ಸಮಸ್ಯೆಗಳ ಪರಿಹಾರಕ್ಕೂ ಹಾಗೂ ಬೆಂಗಳೂರು ಬಿಟ್ಟರೆ ಕರ್ನಾಟಕದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರ ಹುಬ್ಬಳ್ಳಿಯೇ ಸೂಕ್ತವೆಂದು ಪರಿಗಣಿಸಿ, ಕೆಐ.ಎ.ಡಿ.ಬಿ ಕಚೇರಿ ಇಲ್ಲಿಯೇ ಮುಂದುವರೆಸಲು ಆದೇಶಿಸಿದ್ದಾರೆ. ಈ ಹಿನ್ನೆಲೆ ಸಚಿವರಿಗೆ ಧನ್ಯವಾದ ತಿಳಿಸಿದರು.

ಅಕ್ರಮ ಮರಳು ಸಾಗಾಟ: ಟ್ರ್ಯಾಕ್ಟರ್ ವಶ

ಸುರೇಬಾನ: ಪೊಲೀಸರ ಕಣ್ಣು ತಪ್ಪಿಸಿ ಅಕ್ರಮವಾಗಿ ಮರಳು ಸಾಗಿಸುತ್ತಿದ್ದ ನೀಲಿ ಬಣ್ಣದ ನಂಬರ್ ಪ್ಲೇಟ್ ಇಲ್ಲದ ಟ್ರ್ಯಾಕ್ಟರ್ ವಶಕ್ಕೆ ಪಡೆದಿದ್ದು, ಚಾಲಕ ಪರಾರಿಯಾಗಿದ್ದಾನೆಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ.

ಹಲವಾರು ತಿಂಗಳುಗಳಿಂದ ಅಕ್ರಮವಾಗಿ ಮರಳು ಮಾರಾಟ ಮಾಡಲು ಸಾಗಿಸುತ್ತಿದ್ದ ಎಂಬ ಖಚಿತ ಮಾಹಿತಿಯ ಮೇರೆಗೆ ಭಾನುವಾರ ಬೆಳಗಿನ ಜಾವ ಶಬರಿ ಕೊಳ್ಳದ ಕ್ರಾಸ್ ಹತ್ತಿರ ಸುರೇಬಾನ ಪೊಲೀಸರು ಟ್ರ್ಯಾಕ್ಟರ್ ವಶ ಪಡಿಸಿಕೊಂಡಿದ್ದಾರೆ. ರಾಮದುರ್ಗ ತಾಲೂಕಿನ ಸುರೇಬಾನ ಸಮೀಪದ ಕಿತ್ತೂರ ಗ್ರಾಮದ ಗದಿಗೆಪ್ಪ ಭಜಂತ್ರಿ ಎಂಬುವವರಿಗೆ ಸೇರಿದ ಟ್ರ್ಯಾಕ್ಟರ್ ಎಂದು ತಿಳಿದುಬಂದಿದೆ. ಸುರೇಬಾನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತಣಿಕೆ ನಡೆಸಿದ್ದಾರೆ. ದಾಳಿ ವೇಳೆ ಸುರೇಬಾನ ಪೊಲೀಸ್ ಠಾಣೆಯ ಪಿಎಸ್‌ಐ ಗುರುರಾಜ ಕಲಬುರ್ಗಿ, ಸಿಬ್ಬಂದಿಗಳಾದ ರಮೇಶ ಚಿಕ್ಕಣ್ಣವರ, ರವಿ ಗಾಣಿಗೇರ ಹಾಗೂ ಪಂಚರಾಗಿ ಸಿದ್ದಪ್ಪ ಕುದರಿ, ಮುತ್ತಣ್ಣ ವಾಘ್ಮೋಡೆ ಇದ್ದರು.



ಮಿಶ್ರಿಕೋಟಿ ಗ್ರಾಮದೇವಿಯರ ಜಾತ್ರೆಗೆ ಚಾಲನೆ

ಕಲಘಟಗಿ: ತಾಲೂಕಿನ ಮಿಶ್ರಿಕೋಟಿ ಗ್ರಾಮದಲ್ಲಿ 9 ದಿನ ನಡೆಯುವ ಗ್ರಾಮದೇವಿಯರ ಜಾತ್ರೆಗೆ ಭಾನುವಾರ ಅದ್ದೂರಿ ಚಾಲನೆ ನೀಡಲಾಯಿತು.

ಮಿಶ್ರಿಕೋಟಿ ಹೊಸ ಬಸ್ ನಿಲ್ದಾಣ ಪಕ್ಕದ ಚೌತಮನೆ ಕಟ್ಟೆಯಲ್ಲಿ, ದೇವಿಯರನ್ನು ಕಿಲೆ ಓಣಿ ಗ್ರಾಮದೇವಿ ದೇವಸ್ಥಾನದಿಂದ ಭವ್ಯ ಮೆರವಣಿಗೆ ಮೂಲಕ ತಂದು ಪ್ರತಿಷ್ಠಾಪಿಸಲಾಯಿತು.

ಮೆರವಗೆಣಿಯಲ್ಲಿ ಭಂಡಾರ (ಹೋನ್ನಾಟ) ಸಹಿತ ಡೊಳ್ಳು ಕುಣಿತ, ಕರಡಿ ಮಜಲು, ಜಗ್ಗಲಗಿ, ಜಾಂಜು, ಮಕ್ಕಳು ಹಾಗೂ ಮಹಿಳೆಯರಿಂದ ಕೋಲಾಟ ಮೆರಗು ನೀಡಿದವು.

ಈ ವೇಳೆ ಭಕ್ತರಿಂದ ಉದೋ ಉದೋ ಮಂಗಳ ಘೋಷ ಮೆರವಣಿಗೆಯ ಉದ್ದಕ್ಕೂ ಹರ್ಷ ತಂದಿತು.ಐದು ವರ್ಷಕೊಮ್ಮೆ ಜರುಗುವ ಜಾತ್ರೆಗೆ ಹಿಂದಿನ ಪದ್ಧತಿಯಂತೆ ದೇವಿಯರಿಗೆ ಭಕ್ತಿಯಿಂದ ಸೇವೆ ಸಲ್ಲಿಸಿದರು.



ಕಿಲೆ ಓಣಿ, ಸುಣಗಾರ ಓಣಿ, ನದಾಫ್ ಓಣಿ, ಪೊಲೀಸ್ ಚೌಕ್, ಹಳೇ ಬಸ್ ನಿಲ್ದಾಣ, ಪ್ಯಾಟಿ ಬಸವೇಶ್ವರ ದೇವಸ್ಥಾನ ಎದುರಿನಿಂದ, ಮಧ್ಯಾಹ್ನ ಓಣಿ, ಚಲವಾದಿ ಓಣಿ ಹಾಗೂ ಜಾಡಗೇರಿ ಓಣಿಯ ರಾಜಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ದಾರಿಯುದ್ದಕ್ಕೂ ಮಹಿಳೆಯರು ಮನೆ ಎದುರಿನಲ್ಲಿ ಬಣ್ಣ ಬಣ್ಣದ ರಂಗೋಲಿ ಬಿಡಿಸಿ ಪಲ್ಲಕ್ಕಿ ಹೊತ್ತವರ ಕಾಲಿಗೆ ತುಂಬಿದ ಕೊಡದಿಂದ ನೀರು ಹಾಕಿ ನಮಸ್ಕರಿಸಿದರು.

ಗ್ರಾಮದೇವಿಯರ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಮಿಶ್ರಿಕೋಟಿ ಹಾಗೂ ಚವರಗುಡ್ಡ ಗುರು ಹಿರಿಯರು ಸುತ್ತಮುತ್ತಲಿನ ಗ್ರಾಮಸ್ಥರು ಭಾಗಿಯಾಗಿದ್ದರು ದೇವಿಯರ ಆಶೀರ್ವಾದ ಪಡೆದುಕೊಂಡರು. ಸೋಮವಾರದಿಂದ ಧಾರ್ಮಿಕ ಕಾರ್ಯಕ್ರಮ ನಡೆಯಲಿದ್ದು, ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ನಿರೀಕ್ಷೆ ಇದ್ದು 9 ದಿನ ನಿತ್ಯ ಬಗೆ ಬಗೆಯ ಊಟದ ವ್ಯವಸ್ಥೆ ಹಾಗೂ ಉತ್ಸವದ ಸಕಲ ಸಿದ್ಧತೆ ಮಾಡಿಕೊಂಡಿದೆ ಎಂದು ಜಾತ್ರಾ ಉತ್ಸವ ಸಮಿತಿಯವರು ತಿಳಿಸಿದರು.

ಸರ್ಕಾರದ ಲೋಪದೋಷ ಚರ್ಚೆ: ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ

ರಾಜ್ಯದ ಆರ್ಥಿಕ ದುಸ್ಥಿತಿಯ ವಿರುದ್ಧ ಹೋರಾಟ

ಬೆಂಗಳೂರು: ಈ ಬಾರಿಯ ಬಜೆಟ್ ಅಧಿವೇಶನದಲ್ಲಿ ಸರ್ಕಾರದ ಲೋಪದೋಷಗಳನ್ನು ಚರ್ಚಿಸಲಾಗುವುದು. ರಾಜ್ಯದ ಆರ್ಥಿಕ ದುಸ್ಥಿತಿಯ ವಿರುದ್ಧ ಹೋರಾಟ ಮಾಡಲಾಗುವುದು ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.



ಸುದ್ದಿಗೋಷ್ಠಿ ನಡೆಸಿದ ಅವರು, ಈ ಬಾರಿಯ ಬಜೆಟ್‌ನಲ್ಲಿ ಕಾಂಗ್ರೆಸ್ ಸರ್ಕಾರದ ದೋಷಗಳನ್ನು ಸಮರ್ಥವಾಗಿ ಮಂಡನೆ ಮಾಡಲಾಗುವುದು. ರಾಜ್ಯ ಸರ್ಕಾರ 3.5 ಲಕ್ಷ ಕೋಟಿ ರೂ. ಸಾಲ ಮಾಡಿದೆ. ಹಿಂದಿನ ಎಲ್ಲ ಮುಖ್ಯಮಂತ್ರಿಗಳನ್ನು ಮೀರಿ ಸಿದ್ದರಾಮಯ್ಯ ಸಾಲ ಮಾಡಿದ್ದು, ಅವಧಿ ಮುಗಿಯುವ ವೇಳೆಗೆ ಸಾಲದ ಪ್ರಮಾಣ 6 ಲಕ್ಷ ಕೋಟಿ ರೂ. ಗೆ ಹೋಗಲಿದೆ. ಪ್ರತಿ ವ್ಯಕ್ತಿಯ ಮೇಲೆ 1 ಲಕ್ಷ ರೂ. ಸಾಲ ಇರಲಿದೆ. ಇಂತಹ ಆರ್ಥಿಕ ದುಸ್ಥಿತಿಯ ವಿರುದ್ಧ ಹೋರಾಟ ಮಾಡುತ್ತೇವೆ ಎಂದರು.


ಕಾಂಗ್ರೆಸ್ ಒಡೆದ ಮನೆಯಾಗಿದ್ದು, ಶಾಸಕರು ಬೀದಿಯಲ್ಲಿ ನಿಂತು ಧಮಕಿ ಹಾಕುತ್ತಿದ್ದಾರೆ. ಕಾಂಗ್ರೆಸ್ ಆಡಳಿತದ ಅವಧಿ ಮುಗಿಯುತ್ತಾ ಬಂದಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಅಕ್ರಮ ನಡೆದಿದೆ. ಕಳೆದ ಮೂರು ಬಜೆಟ್‌ನಲ್ಲಿ ಅನುದಾನ ಘೋಷಣೆಯಾದರೂ ಬಿಡುಗಡೆಯಾಗಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ದಾಖಲೆ ಮಟ್ಟದಲ್ಲಿ ಸಾಲ ಮಾಡಿದ್ದಾರೆ. ಹಿಂದುಗಳ ಮೇಲೆ ಹಲ್ಲೆಯಾಗುತ್ತಿದೆ. ಬೆಂಗಳೂರಿನಲ್ಲಿ ಕಸದ ಸಮಸ್ಯೆ ಹೆಚ್ಚಿದೆ. ಕಂದಾಯ ಇಲಾಖೆಯಲ್ಲಿ ಇ ಖಾತಾ ಸಮಸ್ಯೆ ಇದೆ. ಈ ಎಲ್ಲ ವಿಷಯಗಳ ಬಗ್ಗೆ ಸದನದಲ್ಲಿ ಚರ್ಚೆ ಮಾಡುತ್ತೇವೆ ಎಂದು ತಿಳಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಟುವಟಿಕೆಗಳ ಮೇಲೆ ನಿಗಾ ಇರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಎಸ್‌ಪಿ ನೇತೃತ್ವದಲ್ಲಿ ಅನಧಿಕೃತವಾಗಿ ತಂಡ ರಚಿಸಿದ್ದಾರೆ. ಅನುದಾನ ಕಡಿತ ಮಾಡುವುದು, ಫೋನ್ ಟ್ಯಾಪ್ ಮಾಡುವುದು ಹೀಗೆ ಎಲ್ಲ ಕಾರ್ಯಗಳನ್ನು ಮಾಡುತ್ತಿದ್ದಾರೆ. ಇದು ಕಣ್ಣಿಗೆ ಕಾಣದ ಎಸ್‌ಐಟಿ ಆಗಿದೆ. ಅಡುಗೆ ಅನಿಲ ಸಬ್ಸಿಡಿ ಬಹಳ ವರ್ಷಗಳಿಂದ ಇತ್ತು. ನರೇಂದ್ರ ಮೋದಿ ಪ್ರಧಾನಿಯಾದ ಬಳಿಕ ಬಿಟ್ಟುಕೊಡಿ ಎಂದು ಕರೆ ನೀಡಿದ್ದರು. ಆದರೆ, ಗ್ಯಾರಂಟಿ ಯೋಜನೆಯನ್ನು ಚುನಾವಣೆಯಲ್ಲಿ ಘೋಷಣೆ ಮಾಡಲಾಗಿತ್ತು. ಉಳ್ಳವರಿಗೂ ಕೊಡುತ್ತೇನೆಂದು ಸಿದ್ದರಾಮಯ್ಯ ಆಗಲೇ ಹೇಳಿದ್ದರು. ಈಗ ಉಳ್ಳವರು ಬಿಟ್ಟುಕೊಡಿ ಎಂದು ಹೇಳುವುದು ತಪ್ಪಾಗುತ್ತದೆ ಎಂದರು. ಗುತ್ತಿಗೆದಾರರಿಗೆ 37,000 ಕೋಟಿ ರೂ. ಬಾಕಿ ಕೊಡಬೇಕಿದೆ. ಅದನ್ನು ಕೊಡುವುದು ಬಿಟ್ಟು ಹಿಂದಿನ ಬಿಜೆಪಿ ಬಾಕಿ ಉಳಿಸಿಕೊಂಡಿದೆ ಎಂದು ಸಿದ್ದರಾಮಯ್ಯ ಹೇಳುತ್ತಾರೆ. ಕೋವಿಡ್ ನಂತರ ಬಸವರಾಜ ಬೊಮ್ಮಾಯಿ ಕೊರತೆ ಇಲ್ಲದ ಬಜೆಟ್ ಮಂಡಿಸಿದ್ದರು. ಅದನ್ನು ಸಿದ್ದರಾಮಯ್ಯ ಮುಂದುವರಿಸಬೇಕಿತ್ತು. ಆಗ ಪ್ರಶ್ನೆ ಮಾಡದವರು ಈಗ ಆರೋಪ ಮಾಡುತ್ತಾರೆ ಎಂದು ಹೇಳಿದರು.

ಖಮೇನಿ ಪರ ಮೆರವಣಿಗೆ ಸಲ್ಲ

ಇರಾನ್ ಅಧ್ಯಕ್ಷನಾಗಿದ್ದ ಖಮೇನಿ ಸರ್ವಾಧಿಕಾರಿಯಾಗಿದ್ದು, ಆತನ ವಿರುದ್ಧ ಆಂತರಿಕ ದಂಗೆಯಾಗಿತ್ತು. ಅಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆದಿತ್ತು. ಸಾವಿರಾರು ಜನರನ್ನು ಗುಂಡಿಟ್ಟು ಸಾಯಿಸಲಾಗಿತ್ತು. ಆದರೆ, ಬೆಂಗಳೂರು ಸೇರಿದಂತೆ ಭಾರತದ ಅನೇಕ ಕಡೆ ಖಮೇನಿ ಪರವಾಗಿ ಮುಸ್ಲಿಮರು ಪ್ರತಿಭಟನೆ ಮಾಡಿದ್ದಾರೆ. ಸರ್ವಾಧಿಕಾರಿ ಖಮೇನಿ ಪರ ಮೆರವಣಿಗೆ ಮಾಡಬಾರದು. ಕಾನೂನು ಕೈಗೆ ತೆಗೆದುಕೊಂಡು ಪ್ರತಿಭಟನೆ ನಡೆಸಿದವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕಿದೆ ಎಂದು ಅಶೋಕ ಒತ್ತಾಯಿಸಿದರು.

ರಾಮ ಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೇನೇಜಿ

ರಾಮಾಯಣ, ಮಹಾಭಾರತ ಮತ್ತು ಪುರಾಣಗಳ ಬಗ್ಗೆ ಓದದೆಯೇ ರೈಲು ಬಿಡುವ ಕೆಟ್ಟ ಪರಂಪರೆ ಬೆಳೆಯುತ್ತಿದೆ
- ವೀಣಾ ಬನ್ನಂಜೆ

-ಓದದೆಯೇ ಒದರುವ ಮಂದಿಗೆ ಒದೆತ ಬಿದ್ದರೆ ಮಾತ್ರ ಸರಿಯಾದೀತೇನೋ?

ದಿನ ಭವಿಷ್ಯ

ಮೇಷ ಎಲ್ಲ ವಿಚಾರದಲ್ಲಿ ನಿಮಗಿಂದು ಅನುಕೂಲ. ಧನವೃದ್ಧಿ. ಕಾರ್ಯದಲ್ಲಿ ಯಶಸ್ಸು. ಪ್ರೀತಿ ಸಫಲ. ಆರೋಗ್ಯ ಸಮಸ್ಯೆ ಪರಿಹಾರ. ನೆಮ್ಮದಿ.

ವೃಷಭ ನಿಮ್ಮನ್ನು ತುಳಿಯಲು ಕೆಲವರ ಯತ್ನ. ಆದರೆ ಅದು ಫಲ ನೀಡದು. ಅವರ ಮುಂದೆಯೇ ಯಶಸ್ಸು ಸಾಧಿಸುವಿರಿ.

ಮಿಥುನ ನೀವು ನಿರೀಕ್ಷಿಸದ ಬದಲಾವಣೆ ಸಂಭವ. ಅದನ್ನು ಒಪ್ಪಿಕೊಳ್ಳಿ. ಕುಟುಂಬಸ್ಥರು ಕಿವಿಮಾತು ಹೇಳಿದರೆ ಅದನ್ನು ಪಾಲಿಸುವುದು ವಿಹಿತ.

ಕಟಕ ಸ್ವಂತ ಉದ್ದಿಮೆಯಲ್ಲಿ ಆಂಶಿಕ ಯಶಸ್ಸು. ಅನುಚಿತ ಆಹಾರ ಸೇವನೆಯಿಂದ ಗ್ಯಾಸ್ಟ್ರಿಕ್ ಸಮಸ್ಯೆ. ಪ್ರೀತಿಯ ವಿಚಾರದಲ್ಲಿ ಬಿಕ್ಕಟ್ಟು.

ಸಿಂಹ ಉತ್ಸಾಹ ಹೆಚ್ಚಿಸುವ ಬೆಳವಣಿಗೆ. ಕಾಡುತ್ತಿದ್ದ ಸಮಸ್ಯೆಗೆ ಪರಿಹಾರ ಸಮೀಪಿಸಿದೆ. ಅದೃಷ್ಟ ಜತೆಗಿದೆ, ಪೂರಕ ಪ್ರಸಂಗ ಸೃಷ್ಟಿಯಾಗಲಿದೆ.

ಕನ್ಯಾ ಏನೋ ಕಳಕೊಂಡ ಭಾವ ಕಾಡುವುದು. ಭಾವುಕ ಸನ್ನಿವೇಶ ಎದುರಿಸುವಿರಿ. ದೈಹಿಕ ನೋವೂ ಕಾಡಲಿದೆ. ಧ್ಯಾನ, ಯೋಗ ಸಹಕಾರಿ.

ತುಲಾ ಆತ್ಮೀಯರ ಹಿತಕ್ಕಾಗಿ ಇಂದು ಹೆಚ್ಚು ಗಮನ ಹರಿಸುವಿರಿ. ಕೆಲವು ಏರುಪೇರು ಎದುರಿಸುವ ಪ್ರಸಂಗ ಬಂದೀತು. ಮನೋದೃಢತೆಯಿರಲಿ.

ವೃಶ್ಚಿಕ ಅದೃಷ್ಟ ನಿಮ್ಮ ಜತೆಗಿರದು. ಎಷ್ಟೇ ಪ್ರಯತ್ನ ಹಾಕಿದರೂ ಸೂಕ್ತ ಫಲ ದೊರಕದು. ಹಣ ಗಳಿಕೆಯ ವಿಚಾರದಲ್ಲೂ ಹಿನ್ನಡೆ ಕಾಣುವಿರಿ.

ಧನು ದಿನವಿಡೀ ಒತ್ತಡ. ಯಾವುದೇ ಕೆಲಸ ಮುಗಿಸಿದರೂ ಮತ್ತೊಂದು ಕೆಲಸ ಹೆಗಲೇರುತ್ತದೆ. ಅಜೀರ್ಣ ಸಮಸ್ಯೆ ಕಾಡಬಹುದು.

ಮಕರ ನಿಮ್ಮ ಸಾಮರ್ಥ್ಯ ಅನಾವರಣಗೊಳ್ಳುವ ಪ್ರಸಂಗ ಒದಗೀತು. ಯಾವುದೋ ವಿಷಯ ಮನಸ್ಸಿಗೆ ಕಿರಿಕಿರಿ ತರುತ್ತದೆ. ಆರ್ಥಿಕ ಒತ್ತಡ.

ಕುಂಭ ಎಲ್ಲ ವಿಧದಲ್ಲೂ ಇಂದು ಸವಾಲಿನ ದಿನ. ಮನಸ್ಸು ಶಾಂತಗೊಳಿಸುವ ಹವ್ಯಾಸದಲ್ಲಿ ತೊಡಗಿ. ಬಂಧುಗಳ ಸಮಸ್ಯೆ ನಿಮ್ಮ ಮೇಲೆ ಎಳೆದುಕೊಳ್ಳದಿರಿ.

ಮೀನ ಎಂದಿಗಿಂತ ಹೆಚ್ಚು ಕಾರ್ಯದೊತ್ತಡ. ಈಡೇರಿಸಲಾಗದ ಆಶ್ವಾಸನೆ ಯಾರಿಗೂ ಕೊಡಬೇಡಿ. ಆಪ್ತ ಬಂಧು ಜತೆ ಮುನಿಸು.

ರಾಹುಕಾಲ: 3.00- 4.30
ಗುಳಿಕಕಾಲ: 12.00-1.30

ಅದೃಷ್ಟ ಸಂಖ್ಯೆ: 7,3,0,2

ರಾಷ್ಟ್ರೋತ್ಥಾನ ಪರಿವಾರ ಸಂಗಮದಲ್ಲಿ 3500 ಕಾರ್ಯಕರ್ತರು ಭಾಗಿ

ವಟವೃಕ್ಷವಾಗಿ ಬೆಳೆದ ಸಂಘ





ಬೆಂಗಳೂರು: ಅರವತ್ತರ ಸೇವಾಸಂಭ್ರಮದ ಅಂಗವಾಗಿ ರಾಷ್ಟ್ರೋತ್ಥಾನ ಪರಿವಾರ ಸಂಗಮ-2026 ಕಾರ್ಯಕ್ರಮವು ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ನಡೆಯಿತು. ರಾಜ್ಯಾದ್ಯಂತ ಇರುವ ಪರಿಷತ್ ಪರಿವಾರದ ಸುಮಾರು 3500ಕ್ಕೂ ಹೆಚ್ಚಿನ ಉದ್ಯೋಗಿ ಕಾರ್ಯಕರ್ತರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್ 100 ವಿಷಯವಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ್ ಮಂಗೇಶ್ ಭೆಂಡೆ ಮಾತನಾಡಿ, ಸಂಘವನ್ನು ಅರಿಯಬೇಕಾದರೆ ಸ್ಥಾಪಕ ಡಾ.ಹೆಡ್ಗೆವಾರ್ ಅವರನ್ನು ತಿಳಿದುಕೊಳ್ಳಲೇಬೇಕು. ಅವರ ಜನ್ಮಜಾತ ದೇಶಭಕ್ತಿ, ತಾಯಿಯನ್ನು ಕಳೆದುಕೊಂಡು ಅನಾಥರಾದರೂ ಅವರನ್ನು ಎಂದೂ ಕಾಡದ ಅನಾಥಪ್ರಜ್ಞೆ, ಸಂಘದ ಸ್ಥಾಪನೆಯ ಉದ್ದೇಶ ಮೊದಲಾದ ವಿಚಾರಗಳನ್ನು ಹಂಚಿಕೊಂಡರು. ಸಂಘಕ್ಕೆ ನೋಂದಣಿ, ಶುಲ್ಕ, ಹಾಜರಾತಿ ಯಾವುದೂ ಇಲ್ಲ, ಸಂಘದ ಶಾಖೆಯೆಂದರೆ ಏನೆಂದು ತಿಳಿಯಲು ಕೆಲವು ವಿದೇಶಿಯರು ಕುತೂಹಲದಿಂದ ನೋಡ ಬಂದಿದ್ದೂ ಇದೆ. ಸಾಮಾನ್ಯ ವ್ಯಕ್ತಿಯೊಬ್ಬ ಅಸಾಮಾನ್ಯ ವ್ಯಕ್ತಿಯಾಗಿ ಬದಲಾಗುವುದೇ ಶಾಖೆಯ ವಿಶೇಷತೆಯಾಗಿದೆ. ಸ್ವಯಂಸೇವಕರು ಈ ಕಾರ್ಯ ತಾನು ಮಾಡುತ್ತಿಲ್ಲ, ಭಗವಂತ ಮಾಡಿಸುತ್ತಿದ್ದಾನೆ ಎಂದೇ ಭಾವಿಸಿ ಮಾಡುತ್ತಿದ್ದಾರೆ. ಇಂತಹ ಸಮರ್ಪಿತ ಕಾರ್ಯಕರ್ತರೇ ಸಂಘದ ನಿಜವಾದ ಬಲ. ಸಂಘವು ಪ್ರತಿರೋಧಕ್ಕಾಗಿ ಜನಿಸಿದ್ದಲ್ಲ, ಆರೋಪಕ್ಕೆ ಪ್ರತ್ಯಾರೋಪ ಮಾಡಲಿಲ್ಲ, ತನ್ನ ಕೆಲಸವನ್ನು ನಿರಂತರ ಮಾಡುತ್ತಾ ಮುಂದೆ ಸಾಗಿದೆ. ಸಂಘದ ಸ್ವಯಂಸೇವಕರು ತಲುಪದ ಕ್ಷೇತ್ರವಿಲ್ಲ ಎಂದು ಹೇಳಿದರು.

> ಸಾತ್ವಿಕ ಕೆಲಸಕ್ಕೆ ಸಮಾಜವೇ ಬಲ ನೀಡುತ್ತದೆ ಎನ್ನುವ ನಂಬಿಕೆಯೊಂದರಿಂದಲೇ ರಾಷ್ಟ್ರೋತ್ಥಾನ ಪರಿಷತ್ತು ಆರಂಭಗೊಂಡಿತು.
> ■ ನಾ. ದಿನೇಶ್ ಹೆಗ್ಡೆ, ಪ್ರಧಾನ ಕಾರ್ಯದರ್ಶಿ ರಾಷ್ಟ್ರೋತ್ಥಾನ ಪರಿಷತ್

> ಸೋದರ ಮಾವ ಮೆದುಳಿನ ರಕ್ತಸ್ರಾವದಿಂದ ಇಂಚಿಂಚಾಗಿ ಮರಣಿಸಿದ್ದನ್ನು ಕಂಡು ನಾನು ವೈದ್ಯನಾದೆ. ಹಿಮೋಫೀಲಿಯಾ ರೋಗಿಗಳಿಗೆ ರಕ್ತದ ಅಗತ್ಯ ತುಂಬಾ ಇರುವುದರಿಂದ ಸ್ವಯಂಪ್ರೇರಿತ ರಕ್ತದಾನಿಗಳ ಸಂಖ್ಯೆ ಮತ್ತಷ್ಟು ಹೆಚ್ಚಾಗಬೇಕು.
> ■ ಡಾ. ಸುರೇಶ್ ಹನಗವಾಡಿ, ಪದ್ಮಶ್ರೀ ಪುರಸ್ಕೃತ

ಆರ್‌ಎಸ್‌ಎಸ್ ಸಹಸರಕಾರ್ಯವಾಹ ಸಿ.ಆರ್. ಮುಕುಂದ ಮಾತನಾಡಿ, ರಾಷ್ಟ್ರೋತ್ಥಾನ ಪರಿಷತ್‌ನ ನಿರ್ಮಾತೃಗಳಲ್ಲಿ ಒಬ್ಬರಾದ ಜಯದೇವ ಅವರ ವ್ಯಕ್ತಿತ್ವವು ತಂದೆಯ ರೀತಿಯದ್ದಾಗಿತ್ತು. ಅವರು ಕಾರ್ಯಕರ್ತರನ್ನು ಮಕ್ಕಳಂತೆ ಬೆಳೆಸುತ್ತಿದ್ದರು. ಸಾರ್ವಜನಿಕ ಸಂಸ್ಥೆಗಳಲ್ಲೂ ಮೌಲ್ಯ ನಿರ್ಮಾಣಕ್ಕೆ ಅವರು ಒತ್ತುಕೊಟ್ಟಿದ್ದರು ಎಂದು ಸ್ಮರಿಸಿದರು.

ಸಂಘದ ಜ್ಯೇಷ್ಠ ಪ್ರಚಾರಕ ಸು. ರಾಮಣ್ಣ, ಸಂಘ ಶತಾಬ್ದದ ಅಶ್ವಮೇಧ ಕುದುರೆ ದೇಶದ ತುಂಬೆಲ್ಲ ಓಡಾಡುತ್ತಿದ್ದು, ಹೆಚ್ಚಿನ ಅಡೆತಡೆ ಬಂದಿಲ್ಲ. ಸಂಘವು ಎರಡಾಗಿ ಒಡೆಯದೇ ಅದರ ಟಿಸಿಲು ಎಲ್ಲೆಡೆ ಹಬ್ಬಿ ವಟವೃಕ್ಷದಂತಾಗಿದೆ. ಅದಕ್ಕೆ ಕಾರಣ ಸಂಘದಲ್ಲಿ ವ್ಯಕ್ತಿತ್ವದ ವೈಭವೀಕರಣವಾಗಲಿ, ವ್ಯಕ್ತಿಪೂಜೆಯಾಗಲಿ ಇಲ್ಲ. ಡಾ. ಹೆಡ್ಗೆವಾರ್ ಅವರಂತೆ ರಾಷ್ಟ್ರಕ್ಕಾಗಿ ಎಲ್ಲವೂ ಎನ್ನುವ ತತ್ತ್ವದ ವಾರಸಿಕೆಯನ್ನು ಮುಂದುವರೆಸಿರುವ ಸಂಘದ ಕಾರ್ಯಕರ್ತರ ಸಾಲಿನಲ್ಲಿ ಜಯದೇವ ಅವರೂ ಒಬ್ಬರು. ಜ್ಯೇಷ್ಠತೆ, ಶ್ರೇಷ್ಠತೆ ಎರಡೂ ಇರುವ ಅಪೂರ್ವ ವ್ಯಕ್ತಿ ಎಂದು ನೆನಪಿಸಿಕೊಂಡರು. ಇದೇ ವೇಳೆ ಪದ್ಮಶ್ರೀ ಭಾಜನರಾಗಿರುವ ದಾವಣಗೆರೆಯ ಡಾ.ಸುರೇಶ್ ಹನಗವಾಡಿ ಅವರನ್ನು ಸನ್ಮಾನಿಸಲಾಯಿತು. ಮುಂದಿನ ದಿನಗಳಲ್ಲಿ ಲೋಕಾರ್ಪಣೆಯಾಗಲಿರುವ ರಾಷ್ಟ್ರೋತ್ಥಾನದ ಶಿಲ್ಪಿಗಳಲ್ಲಿ ಒಬ್ಬರಾಗಿರುವ ಮೈ. ಚ. ಜಯದೇವ ಅವರ ಕೃತಿಯ ರಚನಕಾರರಾದ ಡಾ.ಬಾಬು ಕೃಷ್ಣಮೂರ್ತಿ, ಬೇಳೂರು ಸುದರ್ಶನ, 48 ವರ್ಷಗಳಿಂದ ರಾಷ್ಟ್ರೋತ್ಥಾನದ ಸಾಹಿತ್ಯ ಕೃಷಿಗೆ ಅನುಪಮ ಕಾಣಿಕೆ ನೀಡುತ್ತಿರುವ ನಾಡೋಜ ಡಾ.ಎಸ್.ಆರ್.ರಾಮಸ್ವಾಮಿ ಹಾಗೂ ಪರಿಷತ್‌ನಲ್ಲಿ 20 ವರ್ಷಕ್ಕೂ ಮೇಲ್ಪಟ್ಟು ನಿರಂತರ ಸೇವೆಯಲ್ಲಿರುವ 28 ಸೇವಾಬಂಧುಗಳನ್ನು ಗೌರವಿಸಲಾಯಿತು.

ರಾಷ್ಟ್ರೋತ್ಥಾನದ ಅಧ್ಯಕ್ಷ ಎಂ.ಪಿ.ಕುಮಾರ್, ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಉಪಸ್ಥಿತರಿದ್ದರು.

ಕನ್ನಡಿಗರ ರಕ್ಷಣೆ: ಮೋದಿಗೆ ಸಿಎಂ ಪತ್ರ

ವಿದೇಶಾಂಗ ವ್ಯವಹಾರಗಳ ಸಚಿವಾಲಯ, ನಾಗರಿಕ ವಿಮಾನಯಾನ ಸಚಿವಾಲಯ, ರಾಜ್ಯ ಸರ್ಕಾರಗಳು ಮತ್ತು ವಿಮಾನಯಾನ ಸಂಸ್ಥೆಗಳ ನಡುವಿನ ಸಂವಹನ ಸುಗಮಗೊಳಿಸಲು ಅಂತರ-ಸಚಿವಾಲಯ ಕಾರ್ಯಪಡೆ ಸ್ಥಾಪಿಸುವುದು, ನಾಗರಿಕರ ಕುಟುಂಬಗಳಿಗಾಗಿ ನೋಂದಣಿ, ಪತ್ತೆಹಚ್ಚುವಿಕೆ ಮತ್ತು ಸಲಹೆಗಳ ನೈಜ-ಸಮಯದ ಪ್ರಸಾರಕ್ಕಾಗಿ ಕೇಂದ್ರೀಕೃತ ಡಿಜಿಟಲ್ ವ್ಯವಸ್ಥೆ ರೂಪಿಸಬೇಕೆಂದು ಕೋರಿದ್ದಾರೆ.



ಅಗತ್ಯಕ್ಕೆ ಅನುಗುಣವಾಗಿ ಪ್ರಯಾಣ ವೇಳಾಪಟ್ಟಿ ವಿಸ್ತರಣೆ, ಹೆಚ್ಚುವರಿ ಶುಲ್ಕಗಳನ್ನು ಮನ್ನಾ ಮಾಡಲು ಮತ್ತು ಅಗತ್ಯವಿರುವ ಕಡೆ ಮಾನವೀಯ ನೆರವು ನೀಡಲು ವಿಮಾನಯಾನ ಸಂಸ್ಥೆಗಳಿಗೆ ಸಲಹಾ ನಿರ್ದೇಶನಗಳನ್ನು ನೀಡುವ ಬಗ್ಗೆ ಮನವಿ ಮಾಡಿದ್ದಾರೆ.

ಭಾರತ ಸರ್ಕಾರವು ನಮ್ಮ ನಾಗರಿಕರ ಸುರಕ್ಷತೆ, ಘನತೆ ಮತ್ತು ಯೋಗಕ್ಷೇಮ ಕೈಗೊಳ್ಳಲು ಎಲ್ಲಾ ಅಗತ್ಯ ಮತ್ತು ಸಕಾಲಿಕ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ನಾನು ಭಾವಿಸುತ್ತೇನೆ. ಈ ನಿಟ್ಟಿನಲ್ಲಿ ಕೈಗೊಳ್ಳಲಾಗುವ ಎಲ್ಲಾ ಪ್ರಯತ್ನಗಳಿಗೆ ಕರ್ನಾಟಕ ಸರ್ಕಾರವು ತನ್ನ ಸಂಪೂರ್ಣ ಸಹಕಾರವನ್ನು ನೀಡುತ್ತದೆ ಎಂದು ತಿಳಿಸಿದ್ದಾರೆ.

ನೋಡಲ್ ಅಧಿಕಾರಿ ನೇಮಕ: ಕನ್ನಡಿಗರ ನೆರವಿಗಾಗಿ ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳನ್ನು ಪ್ರಧಾನಿ ಗಮನಕ್ಕೆ ತರಲಾಗಿದ್ದು, ರಾಜ್ಯ ತುರ್ತು ಕಾರ್ಯಾಚರಣೆ, ಕೇಂದ್ರ ಮತ್ತು ಎಲ್ಲಾ ಜಿಲ್ಲಾ ತುರ್ತು ಕಾರ್ಯಾಚರಣೆ ಕೇಂದ್ರಗಳನ್ನು ದಿನದ 24 ಗಂಟೆಯೂ ಕಾರ್ಯನಿರ್ವಹಿಸುವಂತೆ ಸಕ್ರಿಯಗೊಳಿಸಿದೆ. ದಿಲ್ಲಿಯಲ್ಲಿರುವ ಕರ್ನಾಟಕ ಭವನದ ಆಯುಕ್ತರ ಕಚೇರಿ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕ್ಷಿಪ್ರ ಪ್ರತಿಕ್ರಿಯೆ ಘಟಕದೊಂದಿಗೆ ನಿರಂತರ ಸಮನ್ವಯದಲ್ಲಿದ್ದೇವೆ. ಕೇಂದ್ರದ ಅಧಿಕಾರಿಗಳೊಂದಿಗೆ ತಡೆರಹಿತ ಸಹಕಾರವನ್ನು ಖಚಿತಪಡಿಸಿಕೊಳ್ಳಲು ಹಿರಿಯ ನೋಡಲ್ ಅಧಿಕಾರಿಗಳನ್ನು ತಕ್ಷಣದ ಸಂಪರ್ಕಕ್ಕಾಗಿ ನಿಯೋಜಿಸಲಾಗಿದೆ ಎಂದು ಅವರು ಉಲ್ಲೇಖಿಸಿದ್ದಾರೆ. ಸಂಕಷ್ಟದಲ್ಲಿರುವ ಪ್ರಯಾಣಿಕರಿಗೆ ಅಗತ್ಯ ನೆರವು, ವಿಮಾನಗಳ ಮರು ಹೊಂದಾಣಿಕೆ, ದಂಡ ಶುಲ್ಕಗಳ ವಿನಾಯಿತಿ ಮತ್ತು ಮಧ್ಯಂತರ ಬೆಂಬಲವನ್ನು ನೀಡಲು ವಿಮಾನಯಾನ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುವಂತೆ ನಾಗರಿಕ ವಿಮಾನಯಾನ ಸಚಿವಾಲಯವನ್ನು ವಿನಂತಿಸಲಾಗಿದೆ ಎಂದು ತಿಳಿಸಿದ್ದಾರೆ.

ರಕ್ಷಣೆಗೆ ಕಾರ್ಯಪ್ರವೃತ್ತ: ಕೃಷ್ಣ ಬೈರೇಗೌಡ

ಯಾರೂ ಆತಂಕಕ್ಕೆ ಒಳಗಾಗಬಾರದು. ಇದು ಅನಿರೀಕ್ಷಿತ ಘಟನೆ. ಸರ್ಕಾರ ನಿಮ್ಮ ನೆರವಿಗೆ ಬರಲಿದೆ. ಅಲ್ಲಿ ಅವಕಾಶ ಸಿಗುವವರೆಗೆ ನೀವು ಕಾಯಬೇಕು. ಶಾಂತಿ, ತಾಳ್ಮೆಯಿಂದ ಇರಬೇಕೆಂದು ಮನವಿ ಮಾಡಿದ್ದಾರೆ. ನಮ್ಮನ್ನು ರಕ್ಷಣೆ ಮಾಡಿ, ವಿಶೇಷ ವಿಮಾನಕ್ಕೆ ಕಳಿಸಿ ಎಂದು ಕೇಳುತ್ತಿದ್ದಾರೆ, ಕೇಂದ್ರದ ಜತೆ ನಾವು ಮಾತುಕತೆ ನಡೆಸುತ್ತಿದ್ದೇವೆ. ಅಲ್ಲಿ ವಿಮಾನ ಹಾರಾಟ ನಿಷೇಧವಿದೆ. ಹಾಗಾಗಿ ವಿಶೇಷ ವಿಮಾನ ಮಾಡೋಕೆ ಆಗಲ್ಲ, ಅಲ್ಲಿ ವಿಮಾನ ಹಾರಾಟಕ್ಕೆ ಅವಕಾಶ ಸಿಗಬೇಕು. ನಿಷೇಧ ತೆರವುಗೊಳ್ಳಬೇಕು. ಅಲ್ಲಿಯವರೆಗೆ ಶಾಂತವಾಗಿ ಇರಬೇಕು. ವಾರ ಆಗಬಹುದು, 4 ದಿನ ಆಗಬಹುದು. ಕದನ ವಿರಾಮ ಆಗುವವರೆಗೂ ವಿಮಾನ ಹಾರಾಟ ಇರಲ್ಲ ಎಂದರು. ಏರ್ಪೋರ್ಟ್‌ಗೆ ತೆರಳಿರುವವರನ್ನು ಸಂಪರ್ಕಿಸಲಾಗುತ್ತಿದೆ. ಅವರನ್ನು ರಕ್ಷಿಸಲು ಸಹಾಯವಾಣಿ ಮಾಡಿದ್ದೇವೆ. 22253707 ಸಂಖ್ಯೆಗೆ ಫೋನ್ ಮಾಡಬಹುದು. ಇದು ನಮ್ಮ ಸಹಾಯವಾಣಿ ಕೇಂದ್ರವಾಗಿದೆ. ದುಬೈ, ಬಹ್ರೇನ್ ಏರ್‌ಪೋರ್ಟ್‌ನಲ್ಲಿ ಕನ್ನಡಿಗರು ಸಿಲುಕಿದ್ದಾರೆ. ಏರ್‌ಪೋರ್ಟ್‌ನಲ್ಲಿ ಸೌಲಭ್ಯ ಇಲ್ಲ ಎನ್ನುತ್ತಿದ್ದಾರೆ. ಹೊರಗೆ ಹೋಗೋಕೆ ವೀಸಾ ಇಲ್ಲ ಎಂದು ಎನ್ನುತ್ತಿದ್ದಾರೆ. ಹಾಗಾಗಿ ಅವರ ಮಾಹಿತಿಯನ್ನು ನಮ್ಮ ವಿದೇಶಾಂಗ ಇಲಾಖೆಗೆ ಕೊಡುತ್ತೇವೆ. ಅವರು ಸ್ಥಳೀಯ ರಾಯಭಾರ ಕಚೇರಿಗೆ ತಿಳಿಸಲಿದ್ದು, ನೆರವು ಸಿಗಲಿದೆ ಎಂದು ಮಾಹಿತಿ ನೀಡಿದರು.

ನಿಗಾ ವಹಿಸಲು ರಾಜ್ಯಗಳಿಗೆ ಸೂಚನೆ

ಗುಪ್ತಚರ ಪಡೆಗೆ ಸೂಚನೆ: ಇರಾನ್ ಪರ ಪ್ರಚೋದನಾತ್ಮಕವಾಗಿ ಮಾತನಾಡುವ ಮತ್ತು ಹಿಂಸಾಚಾರಗಳಿಗೆ ಕಾರಣವಾಗಬಲ್ಲ ಧರ್ಮೋಪದೇಶ ಮಾಡುವವರು ಕೋಮು ಭಾವನೆಗಳನ್ನು ಕೆರಳಿಸುವ ಆತಂಕವಿದೆ. ಹಾಗಾಗಿ ಇಂತಹ ವ್ಯಕ್ತಿಗಳ ಬಗ್ಗೆ ಬೇಹುಗಾರಿಕಾ ಪಡೆ ನಿಕಟ ನಿಗಾ ಇರಿಸಬೇಕಿದೆ ಮತ್ತು ಕಾನೂನು ಸುವ್ಯವಸ್ಥೆ ಹದಗೆಡದಂತೆ ತಡೆಯುವಲ್ಲಿ ಸಕಾಲಿಕವಾಗಿ ಸಹಕರಿಸಬೇಕೆಂದು ಪತ್ರದಲ್ಲಿ ಸೂಚಿಸಲಾಗಿದೆ.

ತಾಳ್ಮೆಗೆ ಸರಕಾರ ಕರೆ: ಇರಾನ್ ಮೇಲೆ ಅಮೆರಿಕ-ಇಸ್ರೇಲ್‌ಗಳ ಜಂಟಿ ದಾಳಿ ನಂತರ ಮಧ್ಯಪ್ರಾಚ್ಯದಲ್ಲಿ ಪರಿಸ್ಥಿತಿ ತೀರಾ ಹದಗೆಟ್ಟಿದೆ. ಇದೇ ಹಿನ್ನೆಲೆಯಲ್ಲಿ ಗೃಹ ಖಾತೆ ರಾಜ್ಯಗಳಿಗೆ ಮುನ್ನೆಚ್ಚರಿಕೆ ನೀಡಿದೆ. ಕೊಲ್ಲಿ ವಲಯದಲ್ಲಿ ಭಾರತೀಯರು ಸಾಕಷ್ಟು ಸಂಖ್ಯೆಯಲ್ಲಿರುವ ಕಾರಣ ವಿದ್ಯಮಾನಗಳತ್ತ ನಿಕಟ ನಿಗಾ ಹೊಂದಿರುವ ಕೇಂದ್ರ ಸರಕಾರ, ತಾಳ್ಮೆ ಕಾಯ್ದುಕೊಳ್ಳುವಂತೆ ಜನರಿಗೆ ಕರೆ ನೀಡಿದೆ.

ಕಾಶ್ಮೀರದಲ್ಲಿ ಮೊಬೈಲ್ ಇಂಟರ್ನೆಟ್ ವೇಗ ಕಡಿತ: ಭಯೋತ್ಪಾದಕ ಶಕ್ತಿಗಳು ದೇಶದಲ್ಲಿ ಹಿಂಸಾಚಾರ ತಾಂಡವಿಸಲು ಅಂತಾರಾಷ್ಟ್ರೀಯ ವಿದ್ಯಮಾನಗಳನ್ನು ಬಳಸಿಕೊಳ್ಳುವ ಸಾಧ್ಯತೆಯಿದೆ ಎಂಬ ಆತಂಕಗಳ ಮಧ್ಯೆ, ಸರಕಾರ ಕೇವಲ ಭೌಗೋಳಿಕ-ರಾಜಕೀಯ ದೃಷ್ಟಿಯಿಂದಷ್ಟೇ ಅಲ್ಲ, ವಿದೇಶಗಳಲ್ಲಿನ ವಿದ್ಯಮಾನಗಳು ದೇಶೀಯವಾಗಿ ಬೀರಬಹುದಾದ ಪರಿಣಾಮಗಳ ಹಿನ್ನೆಲೆಯಲ್ಲಿ ಪ.ಏಷ್ಯಾ ಸನ್ನಿವೇಶಗಳತ್ತ ನಿಕಟ ನಿಗಾ ಇರಿಸಿದೆ. ಜಮ್ಮು ಕಾಶ್ಮೀರದ ಹಲವೆಡೆಗಳಲ್ಲಿ ಈಗಾಗಲೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇರಾನ್‌ನ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆ ವಿರುದ್ಧ ಪ್ರತಿಭಟನೆಗಳ ಹಿನ್ನೆಲೆಯಲ್ಲಿ ಸೋಮವಾರ ಕಣಿವೆಯಾದ್ಯಂತ ಮೊಬೈಲ್ ಇಂಟರ್‌ನೆಟ್‌ಗಳ ವೇಗ ಕಡಿತಗೊಳಿಸಲಾಗಿದೆ. ಕಾನೂನು ಸುವ್ಯವಸ್ಥೆ ಕಾಪಾಡಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾಶ್ಮೀರಕ್ಕೆ ಹೆಚ್ಚುವರಿ ಪೊಲೀಸ್

ಜಂಟಿ ಕಾರ್ಯಾಚರಣೆಯಲ್ಲಿ ಇರಾನ್ ನಾಯಕ ಖಮೇನಿ ಹತ್ಯೆಯಾದ ಬೆನ್ನಲ್ಲೇ ಭಾರತದ ಕೆಲವು ಪ್ರದೇಶಗಳ ಸಹಿತ ಹಲವೆಡೆಗಳಲ್ಲಿ ಪ್ರತಿಭಟನೆ- ಶೋಕಸಭೆಗಳು ನಡೆದಿವೆ. ಶ್ರೀನಗರದ ಲಾಲ್‌ಚೌಕ್, ಸೈದಾ ಕಾದಲ್, ಬಡ್ಗಾಮ್, ಬಂಡಿಪೋರ, ಅನಂತನಾಗ್, ಪುಲ್ವಾಮಾಗಳಲ್ಲಿ ಪ್ರತಿಭಟನಾ ಪ್ರದರ್ಶನಗಳು ನಡೆದಿವೆ. 15 ಲಕ್ಷ ಶಿಯಾ ಜನಸಂಖ್ಯೆಯಿರುವ ಕಾಶ್ಮೀರದಲ್ಲಿ ಜನರು ಬೃಹತ್ ಪ್ರತಿಭಟನೆ ನಡೆಸಿದ್ದಾರೆ.

ಸುಪ್ರೀಂಗೆ ಟಿಡಿಬಿ ಅಫಿಡವಿಟ್

ಆದ್ದರಿಂದ ಈ ಬಗ್ಗೆ ಒಮ್ಮತದಿಂದ ಸುಪ್ರೀಂ ಮೊರೆ ಹೋಗುವುದಾಗಿ ಹೇಳಿದ್ದಾರೆ.

ಮಾ.14ರೊಳಗೆ ಸುಪ್ರೀಂ ಕೋರ್ಟ್‌ಗೆ ತಿಳಿಸಬೇಕು. ನ್ಯಾಯಾಲಯಕ್ಕೆ ಮಾಹಿತಿ ನೀಡಲು ಸಂಬಂಧಿಸಿದ ವ್ಯಕ್ತಿಗಳನ್ನು ನೇಮಿಸಲು ನಾವು ನಿರ್ಧರಿಸಿದ್ದೇವೆ ಮತ್ತು ಮಂಡಳಿಯ ಸಭೆಯಲ್ಲಿ ಈ ನಿಟ್ಟಿನಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು. ಶಬರಿಮಲೆಗೆ ಋತುಸ್ರಾವದ ವಯಸ್ಸಿನ ಮಹಿಳೆಯರ ಪ್ರವೇಶಕ್ಕೆ ಅನುಮತಿ ನೀಡುವ ಸುಪ್ರೀಂ ಕೋರ್ಟ್‌ನ 2018ರ ತೀರ್ಪನ್ನು ಟಿಡಿಬಿ ಬೆಂಬಲಿಸುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು. ಆದರೆ ತೀರ್ಪನ್ನು ಮರುಪರಿಶೀಲಿಸಬೇಕೇ ಎಂಬುದು ಮಂಡಳಿಯ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳಿದರು.

ದೇವಸ್ವಂಗೆ ಒಂದೇ ಒಂದು ನಿಲುವು ಇದೆ-ಸಂಪ್ರದಾಯಗಳನ್ನು ರಕ್ಷಿಸಬೇಕು ಮತ್ತು ಅನುಸರಿಸಬೇಕು. ಸಿಪಿಐ (ಎಂ) ಸರ್ಕಾರವು ಅದೇ ಸ್ಥಾನವನ್ನು ಹೊಂದಿದೆಯೇ ಎಂದು ಕೇಳಿದಾಗ, ಟಿಡಿಬಿ ಅಧ್ಯಕ್ಷರು ತನಿಖೆಯನ್ನು ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಹೇಳಿದ್ದಾರೆ.

ಪರಮಾಣು ಒಪ್ಪಂದಕ್ಕೆ ಸಹಿ

ಭಾರತೀಯರ ಸುರಕ್ಷೆಗೆ ನಿರಂತರ ಶ್ರಮ: ಭಯೋತ್ಪಾದನೆ, ಉಗ್ರವಾದ, ಹಿಂಸಾಪರವಾದಗಳು ಭಾರತ, ಕೆನಡಾಗೆ ಮಾತ್ರವಲ್ಲ ಇಡೀ ಮಾನವ ಸಮುದಾಯಕ್ಕೆ ಎದುರಾಗಿರುವ ಗಂಭೀರ ಸವಾಲುಗಳಾಗಿವೆ. ಜಾಗತಿಕ ಶಾಂತಿ, ಸ್ಥಿರತೆಗಾಗಿ ಈ ಪಿಡುಗುಗಳ ವಿರುದ್ಧದ ಹೋರಾಟದಲ್ಲಿ ನಮ್ಮೊಳಗೆ ನಿಕಟ ಸಹಕಾರ ಅಗತ್ಯವೆಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ. ಪ. ಏಷ್ಯಾದಲ್ಲಿನ ಅನಿಶ್ಚಿತ ಭದ್ರತಾ ಸನ್ನಿವೇಶ ಕುರಿತು ಉಭಯ ನಾಯಕರು ಚರ್ಚಿಸಿದ್ದಾರೆ. ಎಲ್ಲಾ ಸಂಘರ್ಷಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಮಾತುಕತೆ ಮತ್ತು ರಾಜತಾಂತ್ರಿಕತೆ ಮುಖೇನ ನಡೆವ ಎಲ್ಲಾ ಪ್ರಯತ್ನಗಳಿಗೆ ಭಾರತ ತುಂಬು ಬೆಂಬಲ ನೀಡುವುದೆಂದು ಪ್ರಧಾನಿ ಮೋದಿ ಭರವಸೆ ನೀಡಿದ್ದಾರೆ.

ಭಾರತದತ್ತ ಮುಖ ಮಾಡಿದ ಕೆನಡಾ

2030ರ ವೇಳೆ 50ಬಿಲಿಯನ್ ಡಾಲರ್ ವ್ಯಾಪಾರ ವಹಿವಾಟು ನಮ್ಮ ಗುರಿ. ಆರ್ಥಿಕ ಸಹಕಾರಗಳ ಗರಿಷ್ಠ ಅವಕಾಶಗಳನ್ನು ಬಳಸಿಕೊಳ್ಳುವುದಕ್ಕೆ ನಮ್ಮ ಆದ್ಯತೆ. ಹಾಗಾಗಿ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದವನ್ನು ಶೀಘ್ರ ಅಂತಿಮಗೊಳಿಸಲು ನಿರ್ಧರಿಸಿದ್ದೇವೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

9 ದೇಶಗಳಿಗೆ ಸಮರ ವಿಸ್ತರಣೆ

ಅಮೆರಿಕ ಸೆಂಟ್ರಲ್ ಕಮಾಂಡ್ ಮಾಹಿತಿ ಪ್ರಕಾರ, ಕುವೈತ್ ತಪ್ಪಾಗಿ ಮೂರು ಎಫ್-15ಇ ಯುದ್ಧ ವಿಮಾನಗಳನ್ನು ಹೊಡೆದುರುಳಿಸಿದೆ. ಆರು ಪೈಲಟ್‌ಗಳು ಸುರಕ್ಷಿತವಾಗಿ ಹೊರಬಂದಿದ್ದಾರೆ. ಇರಾನ್ ರೆಡ್ ಕ್ರೆಸೆಂಟ್ ಸೊಸೈಟಿ ಪ್ರಕಾರ, ಅಮೆರಿಕ-ಇಸ್ರೇಲ್ ಸಂಯುಕ್ತ ದಾಳಿಗಳಿಂದ ಇರಾನ್‌ನಲ್ಲಿ ಇದುವರೆಗೆ ಕನಿಷ್ಠ 555 ಮಂದಿ ಸಾವಿಗೀಡಾಗಿದ್ದಾರೆ. ಇಸ್ರೇಲ್‌ನಲ್ಲಿ 11 ಮಂದಿ ಮತ್ತು ಲೆಬನಾನ್‌ನಲ್ಲಿ 31 ಮಂದಿ ಮೃತಪಟ್ಟಿದ್ದಾರೆ.

ಲೆಬನಾನ್ ಪ್ರಧಾನಿ ನವಾಫ್ ಸಲಾಂ, ಹಿಜ್ಬುಲ್ಲಾ ಉಗ್ರ ಸಂಘಟನೆ ನಡೆಸಿದ ದಾಳಿಯನ್ನು ಅಕ್ರಮ ಎಂದು ಹೇಳಿ, ಶಸ್ತ್ರಾಸ್ತ್ರಗಳನ್ನು ಹಸ್ತಾಂತರಿಸುವಂತೆ ಆಗ್ರಹಿಸಿದ್ದಾರೆ.

ನಾಗರಿಕರ ರಕ್ಷಣೆಗೆ ಡಬ್ಲ್ಯುಎಚ್‌ಒ ಕರೆ: ಮಧ್ಯಪೂರ್ವದಲ್ಲಿ ಹೆಚ್ಚುತ್ತಿರುವ ಯುದ್ಧದ ನಡುವೆ ನಾಗರಿಕರು ಮತ್ತು ಆರೋಗ್ಯ ಸಂಸ್ಥೆಗಳ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಬೇಕೆಂದು ವಿಶ್ವ ಆರೋಗ್ಯ ಸಂಸ್ಥೆ ಮನವಿ ಮಾಡಿದೆ.

ನೆತನ್ಯಾಹು ಕಚೇರಿ ಮೇಲೆ ದಾಳಿ ನಿರಾಕರಿಸಿದ ಇಸ್ರೇಲ್ : ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕಚೇರಿ ಮತ್ತು ವಾಯುಪಡೆಯ ಪ್ರಧಾನ ಕಚೇರಿಯನ್ನು ಗುರಿಯಾಗಿಸಿಕೊಂಡು ಖೈಬರ್ ಕ್ಷಿಪಣಿಗಳಿಂದ ದಾಳಿ ನಡೆಸಿರುವುದಾಗಿ ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಸೋಮವಾರ ಹೇಳಿಕೊಂಡಿದೆ. ಆದರೆ ಇದನ್ನು ಇಸ್ರೇಲ್ ನಿರಾಕರಿಸಿದೆ.

ವಿಶ್ವ ಪೂರೈಕೆ ವ್ಯತ್ಯಯ, ಗಗನಕ್ಕೇರಿದ ತೈಲ ಬೆಲೆ


ಬ್ರೆಂಟ್ ಕ್ರೂಡ್, ಅಂತಾರಾಷ್ಟ್ರೀಯ ಗುಣಮಟ್ಟದ ತೈಲವು ಪ್ರತಿ ಬ್ಯಾರೆಲ್‌ಗೆ 79.41 ತಲುಪಿದ್ದು, ಶುಕ್ರವಾರಕ್ಕಿಂತ ಶೇ.9 ಏರಿಕೆಯಾಗಿದೆ.

ಸಾಮಾನ್ಯ ಜನರ ಮೇಲೆ ಪರಿಣಾಮ: ಜಾಗತಿಕ ಇಂಧನ ಬೆಲೆ ಏರಿಕೆಯಿಂದ ಗ್ರಾಹಕರು ಪೆಟ್ರೋಲ್ ಬಂಕ್‌ಗಳಲ್ಲಿ ಹೆಚ್ಚಿನ ಹಣ ಪಾವತಿಸಬೇಕಾಗುತ್ತದೆ. ಈಗಾಗಲೇ ಹಣದುಬ್ಬರದಿಂದ ಕಂಗಾಲಾಗಿರುವ ಜನರಿಗೆ ದಿನಸಿ ಮತ್ತು ಇತರ ಅಗತ್ಯ ವಸ್ತುಗಳ ಬೆಲೆ ಏರಿಕೆ ಮತ್ತಷ್ಟು ಹೊರೆಯಾಗಲಿದೆ.

ಪರಿಸ್ಥಿತಿ ಕಳವಳಕಾರಿ: ಮೋದಿ

ಇದರ ಬೆನ್ನಲ್ಲೇ ಸೋಮವಾರ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಅವರೊಂದಿಗೆ ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಪ್ರಧಾನಿ ಮೋದಿ ಮಾತನಾಡಿದರು.

ಭಾರತ ಶಾಂತಿ ಮತ್ತು ಸ್ಥಿರತೆ ಪರವಾಗಿ ನಿಲ್ಲುತ್ತದೆ. ಇಂತಹ ವಿವಾದಗಳಿಗೆ ಪರಿಹಾರ ಕಂಡುಹಿಡಿಯಲು ಸಂವಾದ ಮತ್ತು ರಾಜತಾಂತ್ರಿಕತೆಯೇ ಸರಿಯಾದ ಮಾರ್ಗ ಎಂದು ಮೋದಿ ಹೇಳಿದರು. ಸಂಘರ್ಷಗಳ ಶಾಂತಿಯುತ ಪರಿಹಾರದ ಕುರಿತ ಭಾರತದ ದೀರ್ಘಕಾಲದ ನಿಲುವನ್ನು ಅವರು ಪುನರುಚ್ಚರಿಸಿದರು.



ಈ ಪ್ರದೇಶದಲ್ಲಿ ನೆಲೆಸಿರುವ ಭಾರತೀಯ ಪ್ರಜೆಗಳ ಸುರಕ್ಷತೆ ಬಗ್ಗೆ ಸರ್ಕಾರ ಅತ್ಯಂತ ಎಚ್ಚರಿಕೆಯಿಂದ ಕಾರ್ಯನಿರ್ವಹಿಸುತ್ತಿದೆ ಎಂದು ಅವರು ಭರವಸೆ ನೀಡಿದರು. ಎಲ್ಲಾ ಭಾರತೀಯರ ಭದ್ರತೆಯನ್ನು ಖಚಿತಪಡಿಸಲು ಸಂಬಂಧಿತ ದೇಶಗಳೊಂದಿಗೆ ನಾವು ನಿಕಟ ಸಂಪರ್ಕದಲ್ಲಿದ್ದೇವೆ ಎಂದು ಹೇಳಿದರು.

ಇದಕ್ಕೂ ಮುನ್ನ, ಪಶ್ಚಿಮ ಏಷ್ಯಾದ ಪರಿಸ್ಥಿತಿ ಚರ್ಚಿಸಲು ಪ್ರಧಾನಿ ಮೋದಿ ಭದ್ರತೆಯ ಕುರಿತಾದ ಸಂಪುಟ ಸಮಿತಿಯ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯ ನಂತರ ಅವರು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಸೌದಿ ಅರೇಬಿಯಾದ ಯುವರಾಜ ಮೊಹಮ್ಮದ್ ಬಿನ್ ಸಲ್ಮಾನ್ ಅಲ್ ಸೌದ್ ಮತ್ತು ಬಹ್ರೇನ್‌ನ ದೊರೆ ಹಮದ್ ಬಿನ್ ಇಸಾ ಅಲ್ ಖಲೀಫಾ ಅವರೊಂದಿಗೆ ಪ್ರತ್ಯೇಕವಾಗಿ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯ ನಡುವೆಯೇ ಭಾರತದ ನಿಲುವು ಶಾಂತಿ, ಸಂವಾದ ಮತ್ತು ರಾಜತಾಂತ್ರಿಕತೆಗೆ ಆದ್ಯತೆ ನೀಡುವುದಾಗಿ ಪ್ರಧಾನಿ ಸ್ಪಷ್ಟಪಡಿಸಿದ್ದಾರೆ.

ಲಕ್ಷಕ್ಕೂ ಹೆಚ್ಚು ಇ-ಸ್ವತ್ತು ಅರ್ಜಿ ವಿಲೇವಾರಿ

ಇ-ಸ್ವತ್ತು 2.0 ತಂತ್ರಾಂಶದ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಲು ಮತ್ತು ಉಳಿದ ಮಾಡ್ಯೂಲ್‌ಗಳನ್ನು ಆದ್ಯತೆ ಮೇರೆಗೆ ಅಭಿವೃದ್ಧಿಪಡಿಸಲು ಕಳೆದ ಜನವರಿಯಲ್ಲಿ ಕೇಂದ್ರದ ಮಾಹಿತಿ ತಂತ್ರಜ್ಞಾನ ಸಚಿವರಿಗೆ ತಾವು ಬರೆದಿದ್ದ ಪತ್ರಕ್ಕೆ ಸಂಬಂಧಿಸಿದಂತೆ ಇ-ಸ್ವತ್ತು 2.0 ತಂತ್ರಾಂಶದಲ್ಲಿ ಬದಲಾವಣೆ ಮಾಡಿ ಕೆಲವು ಸಮಸ್ಯೆಗಳನ್ನು ಬಗೆಹರಿಸಲಾಗಿದೆ ಎಂದರು.

ಹೊಸ ಬಡಾವಣೆಗಳಿಗೆ ಅರ್ಜಿ ಸಲ್ಲಿಸಲು ಗ್ರಾಮ ಪಂಚಾಯಿತಿ ಹಂತದಲ್ಲಿ ಅವಕಾಶ ನೀಡಲಾಗಿದ್ದು, ಈವರೆಗೆ 478 ಹೊಸ ಬಡಾವಣೆಗಳಿಗೆ ಅರ್ಜಿ ಸಲ್ಲಿಕೆಯಾಗಿದ್ದು, ಅವುಗಳಲ್ಲಿ 54 ಹೊಸ ಬಡಾವಣೆಗಳಿಗೆ ಗ್ರಾಮ ಪಂಚಾಯತಿ ಹಂತದಲ್ಲಿ ಅನುಮೋದನೆ ನೀಡಲಾಗಿದೆ ಹಾಗೂ ಹೊಸ ಬಹುಮಹಡಿ (ಅಪಾರ್ಟ್‌ಮೆಂಟ್) ಕಟ್ಟಡಗಳಿಗೆ ಅರ್ಜಿಗಳನ್ನು ಸಲ್ಲಿಸಲು ಗ್ರಾಮ ಪಂಚಾಯತಿ ಹಂತದಲ್ಲಿ ಅವಕಾಶ ನೀಡಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.


ಲಾಗಿನ್ ಸಮಸ್ಯೆಗೆ ತ್ವರಿತ ಪರಿಹಾರ : ಹೊಸದಾಗಿ ಅನುಮೋದನೆಗೊಂಡ ಆಸ್ತಿಗಳಿಗೆ ತಿದ್ದುಪಡಿ ಮಾಡುವ ಅವಕಾಶ ಹಾಗೂ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಮಾರ್ಗಸೂಚಿ ದರವನ್ನು ಇ-ಸ್ವತ್ತು ತಂತ್ರಾಂಶದೊಂದಿಗೆ ಸಂಯೋಜನೆ ಮಾಡುವ ಕಾರ್ಯವನ್ನು ಮುಂದಿನ 10 ದಿನದೊಳಗೆ ನಡೆಸಲಾಗುವುದು. ಇ-ಸ್ವತ್ತು ತಂತ್ರಾಂಶದ ಬಳಕೆದಾರರು ಎದುರಿಸುತ್ತಿರುವ ಲಾಗಿನ್‌ನಲ್ಲಿ ಉಂಟಾಗುತ್ತಿರುವ ಸಣ್ಣಪುಟ್ಟ ತಾಂತ್ರಿಕ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಲಾಗುವುದು ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಸಾರ್ವಜನಿಕರಿಗೆ ಅನುಕೂಲವಾಗುವಂತೆ ಇ-ಸ್ವತ್ತು ತಂತ್ರಾಂಶದಲ್ಲಿರುವ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಿ, ಮತ್ತಷ್ಟು ಸರಳೀಕರಿಸಲು ಕ್ರಮ ವಹಿಸಲಾಗುತ್ತಿದೆ. ಅರ್ಜಿ ಸಲ್ಲಿಸಲು ಯಾವುದೇ ಕಾಲಾವಧಿಯನ್ನು ನಿಗದಿಪಡಿಸಿಲ್ಲವಾದ್ದರಿಂದ ಸಾರ್ವಜನಿಕರು ಗ್ರಾಮ ಪಂಚಾಯಿತಿ ಕಚೇರಿಗೆ ಭೇಟಿ ನೀಡದೆಯೇ ತಾವಿರುವಲ್ಲಿಯೇ ತಮ್ಮ ಆಸ್ತಿಗೆ ಸಂಬಂಧಿಸಿದಂತೆ ನಮೂನೆಗಳನ್ನು ಇ-ಸ್ವತ್ತು ತಂತ್ರಾಂಶದ ಮೂಲಕ ಪಡೆಯಬಹುದಾಗಿದ್ದು ಸಾರ್ವಜನಿಕರು ಸಹಕರಿಸಬೇಕೆಂದು ಖರ್ಗೆ ಮನವಿ ಮಾಡಿದರು.

ಸೆಂಟ್ಸ್ ಅಳತೆ ಚ.ಮೀ.ಗೆ ಪರಿವರ್ತನೆ: ದಕ್ಷಿಣ ಕನ್ನಡ ಜಿಲ್ಲೆಯ ನಿಯೋಗವೊಂದು ತಮ್ಮನ್ನು ಭೇಟಿಯಾಗಿ ಇ-ಸ್ವತ್ತು ತಂತ್ರಾಂಶದ ಸಿಟಿಜನ್ ಇಂಟರ್‌ಫೇಸ್ ಮೂಲಕ ಅರ್ಜಿಗಳನ್ನು ಸಲ್ಲಿಸುವಾಗ ತಮ್ಮ ಭಾಗದಲ್ಲಿ ಚಾಲ್ತಿಯಲ್ಲಿರುವ ಸೆಂಟ್ಸ್ ಪದ್ಧತಿಯಂತೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸುವಂತೆ ಕೋರಿದ್ದರು. ಅದರಂತೆ ಗುಂಟೆ ಮತ್ತು ಸೆಂಟ್ಸ್ ಅಳತೆಯಲ್ಲಿರುವ ಭೂಮಿಯ ವಿಸ್ತೀರ್ಣವನ್ನು ಚ.ಮೀ.ನಲ್ಲಿ ಪರಿವರ್ತಿಸಿ, ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಉಳ್ಳಾಲ ಮಸೀದಿ ಬಳಿ ಬಾಂಬ್ ಸ್ಫೋಟ ಬೆದರಿಕೆ: ಕೇಸ್ ದಾಖಲು

ಉಳ್ಳಾಲ: ಉಳ್ಳಾಲದ ಮಸೀದಿ ಬಳಿ ಬಾಂಬ್ ಸ್ಫೋಟಿಸುತ್ತೇನೆ, ಸಪೋರ್ಟ್ ಮಾಡಿ ಎಂದು ಬಜ್ಪೆಯಲ್ಲಿ ಕೊಲೆಯಾಗಿದ್ದ ಹಿಂದೂ ಸಂಘಟನೆ ಕಾರ್ಯಕರ್ತ ಸುಹಾಸ್ ಶೆಟ್ಟಿ ಭಾವಚಿತ್ರವುಳ್ಳ ಇನ್ಸ್ಟಾ ಪೇಜ್‌ನ ಪೋಸ್ಟ್‌ನಲ್ಲಿ ಪ್ರಚೋದನಕಾರಿ ಕಮೆಂಟ್ ಹಾಕಿರುವ ಕಿಡಿಗೇಡಿಯ ವಿರುದ್ಧ ಉಳ್ಳಾಲ ಪೊಲೀಸರು ಸುಮೊಟೊ ಕೇಸ್ ದಾಖಲಿಸಿದ್ದಾರೆ.



ಬಜ್ಪೆಯಲ್ಲಿ ಕಳೆದ ವರ್ಷ ದುಷ್ಕರ್ಮಿಗಳಿಂದ ಬರ್ಬರವಾಗಿ ಹತ್ಯೆಗೀಡಾಗಿದ್ದ ಸುಹಾಸ್ ಶೆಟ್ಟಿಯ ಭಾವ ಚಿತ್ರವುಳ್ಳ ಇನ್ಸ್ಟಾ ಪೋಸ್ಟ್ ಒಂದರಲ್ಲಿ shankar11916 ಎಂಬ ಇನ್ಸ್ಟಾ ಖಾತೆಯಿಂದ 'ಸಪೋರ್ಟ್ ಮಾಡಿ ಬ್ರೋ ಉಳ್ಳಾಲ ಮಸ್ಜಿದ್ ಹತ್ರ ಬಾಂಬ್ ಬ್ಲಾಸ್ಟ್ ಮಾಡ್ತೀನಿ' ಎಂಬ ಪ್ರಚೋದನಕಾರಿ ಸಂದೇಶವನ್ನು ಹಾಕಲಾಗಿದ್ದು, ಈ ಪೋಸ್ಟ್ ವೈರಲ್ ಆಗಿತ್ತು.

ಸೋಮವಾರದಂದು ಸಾಮಾಜಿಕ ಜಾಲತಾಣದ ಮೋನಿಟರಿಂಗ್ ಕರ್ತವ್ಯ ನಿರ್ವಹಿಸುತ್ತಿದ್ದ ಉಳ್ಳಾಲ ಪೊಲೀಸ್ ಠಾಣಾ ಸಿಬ್ಬಂದಿ ಸಂತೋಷ್ ದೊಡ್ಡಮನಿ ಅವರು ಈ ಸಂದೇಶವನ್ನು ಗಮನಿಸಿದ್ದು ಈ ಬಗ್ಗೆ ಅವರು ನೀಡಿದ ದೂರಿನಡಿ ಉಳ್ಳಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರೋಪಿಯು ಜನರ ಮಧ್ಯೆ ವೈರತ್ವ ಉಂಟುಮಾಡಿ ಹಿಂಸೆಗೆ ಪ್ರಚೋದಿಸಿ ಜನರನ್ನು ಎತ್ತಿ ಕಟ್ಟುವಂತೆ ಮಾಡುವ ಉದ್ದೇಶದಿಂದ ಜಾಲತಾಣದ ಇನ್ಸ್ಟ್ರಾಗ್ರಾಮ್‌ನಲ್ಲಿ ಪ್ರಚೋದನಾಕಾರಿಯಾಗಿ ಕಾಮೆಂಟ್ ಮಾಡಿದ್ದು, ಸೂಕ್ತ ಕಾನೂನು ಕ್ರಮದ ಬಗ್ಗೆ ದೂರಿನಲ್ಲಿ ಉಲ್ಲೇಖಿಸಲಾಗಿದೆ.



ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಸೋಮವಾರ ಅಂಗನವಾಡಿ ಕಾರ್ಯಕರ್ತರು ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ ಮಾಡಿದರು.

ಗ್ರಹಣ: ಪೂಜೆ ಸಮಯ ಬದಲು

ಬೆಂಗಳೂರು: ಕೇತುಗ್ರಸ್ತ ಚಂದ್ರಗ್ರಹಣವು ಮಾ.3ರಂದು ಗೋಚರಿಸುವ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ದೇವಾಲಯಗಳಲ್ಲಿ ಪೂಜಾ ಸಮಯ ಬದಲಾವಣೆಯಾಗಲಿದೆ.

ಮಧ್ಯಾಹ್ನ 3.30 ರಿಂದ ಸಂಜೆ 6.48 ರವರೆಗೆ ಚಂದ್ರಗ್ರಹಣ ಗೋಚರಿಸಲಿದ್ದು, ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಶ್ರೀ ಗವಿಗಂಗಾಧರೇಶ್ವರ, ಹಲಸೂರಿನ ಸೋಮೇಶ್ವರ ದೇವಾಲಯ, ಬೇಲೂರು ಚನ್ನಕೇಶವ, ಶ್ರೀ ಕ್ಷೇತ್ರ ಧರ್ಮಸ್ಥಳ, ಹೊರನಾಡು ಅನ್ನಪೂರ್ಣೇಶ್ವರಿ, ಮೈಸೂರಿನ ಚಾಮುಂಡೇಶ್ವರಿ ದೇವಾಲಯ, ಮಲೆ ಮಹದೇಶ್ವರ ಬೆಟ್ಟ ಮೈಸೂರು ಚಾಮುಂಡೇಶ್ವರಿ ಸೇರಿದಂತೆ ರಾಜ್ಯದ ವಿವಿಧ ದೇವಾಲಯಗಳಲ್ಲಿ ಪೂಜೆ ಹಾಗೂ ಪ್ರಸಾದ ಸಮಯದಲ್ಲಿ ಬದಲಾವಣೆ ಮಾಡಲಾಗಿದೆ.

ಶ್ರೀ ಗವಿಗಂಗಾಧರೇಶ್ವರ ದೇವಸ್ಥಾನದಲ್ಲಿ ಎಂದಿನಂತೆ ಪೂಜಾ ಪುನಸ್ಕಾರಗಳು, ಜಲಾಭಿಷೇಕ, ವಿಶೇಷ ಪೂಜೆ ನೆರವೇರಿದ ಬಳಿಕ 9 ಗಂಟೆಗೆ ದೇವಾಲಯನ್ನು ಬಂದ್ ಮಾಡಲಾಗುತ್ತದೆ. ಸಂಜೆ 7.30 ಗೆ ದೇವಸ್ಥಾನದ ಬಾಗಿಲನ್ನು ತೆರೆದು ಮತ್ತೆ ಪೂಜೆ ನೆರವೇರಿಸಲಾಗುವುದು. ಬುಧವಾರ ಬೆಳಗ್ಗೆ ದೇವಾಲಯವನ್ನು ಶುಚಿಗೊಳಿಸಿ ದೇವರ ದರ್ಶನಕ್ಕೆ ಅನುವು ಮಾಡಿಕೊಡಲಾಗುವುದು ಎಂದು ದೇವಾಲಯದ ಆಡಳಿತ ಮಂಡಳಿ ತಿಳಿಸಿದೆ.

ಹಲಸೂರಿನಸೋಮೇಶ್ವರದೇವಾಲಯದಲ್ಲಿಬೆಳಿಗ್ಗೆ11ಗಂಟೆಗೆಮಹಾಮಂಗಳಾರತಿ ನಂತರ ದೇವಾಲಯವನ್ನು ಮುಚ್ಚಲಾಗುವುದು. ಗ್ರಹಣ ಮೋಕ್ಷದ ನಂತರ ರಾತ್ರಿ 9 ಗಂಟೆಗೆ ಪೂಜಾ ಕಾರ್ಯಗಳು ನಡೆಯಲಿವೆ.

ಹೊರನಾಡು ಶ್ರೀ ಅನ್ನಪೂರ್ಣೇಶ್ವರಿ ದೇವಾಲಯದಲ್ಲಿ ಮಧ್ಯಾಹ್ನ 3 ಗಂಟೆಯಿಂದ ಸಂಜೆ 7 ರವರೆಗೆ ದೇವರ ದರ್ಶನಕ್ಕೆ ಅವಕಾಶ ಇರುವುದಿಲ್ಲ. ಬೆಳಗ್ಗೆ 9 ರಿಂದ ಮಧ್ಯಾಹ್ನ 12 ಗಂಟೆ ಮತ್ತೆ ರಾತ್ರಿ 9 ಗಂಟೆಗೆ ಮಹಾಮಂಗಳಾರತಿ ನೆರವೇರಲಿದೆ. ಮಧ್ಯಾಹ್ನ ಪ್ರಸಾದ 12 ಗಂಟೆವರೆಗೆ ಲಭ್ಯವಿರುತ್ತದೆ. ಗ್ರಹಣ ಮುಕ್ತಾಯವಾದ ನಂತರ ಭೋಜನಾ ವ್ಯವಸ್ಥೆ ಇರಲಿದೆ.

ಕಿರುಸುದ್ದಿ

ಪಿಯು ಪರೀಕ್ಷೆ: 1,802 ವಿದ್ಯಾರ್ಥಿಗಳ ಗೈರು

ಬೆಂಗಳೂರು : ರಾಜ್ಯದಲ್ಲಿ ದ್ವಿತೀಯ ಪಿಯು ಭೂಗೋಳಶಾಸ್ತ್ರ, ಸಂಖ್ಯಾಶಾಸ್ತ್ರ, ಮನಃಶಾಸ್ತ್ರ ಪರೀಕ್ಷೆಯಲ್ಲಿ 1,802 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಭೂಗೋಳಶಾಸ್ತ್ರ, ಸಂಖ್ಯಾಶಾಸ್ತ್ರ, ಮನಃಶಾಸ್ತ್ರ ಪರೀಕ್ಷೆಗೆ 77,184 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದರು. ಇವರಲ್ಲಿ 75,382 ವಿದ್ಯಾರ್ಥಿಗಳು (ಶೇ.97.67) ಪರೀಕ್ಷೆಗೆ ಹಾಜರಾಗಿದ್ದಾರೆ. ಮೈಸೂರಿನಲ್ಲಿ ಗರಿಷ್ಠ 265 ವಿದ್ಯಾರ್ಥಿಗಳು ಗೈರಾಗಿದ್ದು, ಹಾವೇರಿ ಜಿಲ್ಲೆಯಲ್ಲಿ 231, ಬೆಂಗಳೂರು ದಕ್ಷಿಣ 144, ಧಾರವಾಡ 126, ಬೆಂಗಳೂರು ಉತ್ತರ 123 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ. ಚಿಕ್ಕಬಳ್ಳಾಪುರ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಕನಿಷ್ಠ ತಲಾ ಒಂದು ವಿದ್ಯಾರ್ಥಿಗಳು ಗೈರಾಗಿದ್ದು, ಚಿಕ್ಕಬಳ್ಳಾಪುರ ಶೇ.97.87 ಮತ್ತು ಚಿತ್ರದುರ್ಗ ಶೇ. 99.64 ಹಾಜರಾತಿ ದಾಖಲಾಗಿದೆ.

ವಿಶ್ವಾಸಕ್ಕೆ ತೆಗೆದುಕೊಂಡು ನೇಮಕ ಮಾಡಿ: ಬೊಮ್ಮಾಯಿ

ಬೆಂಗಳೂರು: ರಾಜ್ಯ ಸರ್ಕಾರ ಖಾಲಿ ಹುದ್ದೆಗಳ ನೇಮಕ ಮಾಡುವ ಸಂದರ್ಭದಲ್ಲಿ ಒಳ ಮೀಸಲಾತಿ ಪರಿಗಣನೆಗೆ ಎಲ್ಲಾ ಸಮುದಾಯದ ಜೊತೆ ಚರ್ಚೆ ಮಾಡಿ, ವಿಶ್ವಾಸಕ್ಕೆ ತೆಗೆದುಕೊಂಡು ನೇಮಕ ಮಾಡಬೇಕು ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯಪಾಲರು ಒಳ ಮೀಸಲಾತಿಗೆ ಅಂಕಿತ ಹಾಕಿ



ಆದೇಶ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ರಾಜ್ಯ ಸರ್ಕಾರ ಭರ್ತಿ ಮಾಡಬೇಕಿರುವ ನೇಮಕಾತಿಗೆ ಯಾವ ರೀತಿ ಮಾಡಬೇಕು ಎನ್ನುವ ಬಗ್ಗೆ ಸ್ಪಷ್ಟನೆ ಬೇಕಿದೆ. ಸರ್ಕಾರ ಗೊಂದಲಕ್ಕೆ ಸಿಲುಕಿದೆ. ನೇಮಕಾತಿಯ ಮೊದಲು ಎಲ್ಲಾ ಸಮುದಾಯದ ಜೊತೆ ಚರ್ಚೆ ಮಾಡಿ, ವಿಶ್ವಾಸಕ್ಕೆ ತೆಗೆದುಕೊಂಡು ನೇಮಕ ಆಗಬೇಕು ಎಂದರು. ರಾಜ್ಯ ಸರ್ಕಾರ ಒಳ ಮೀಸಲಾತಿ ಜಾರಿಗೆ ಕಾನೂನು ಮಾಡಿದ್ದಾರೆ. ಹಾಗಾಗಿ, ಎಲ್ಲ ಸಮುದಾಯದವರೂ ಒಳ ಮೀಸಲಾತಿ ಕೊಡಿ ಎಂದಿದ್ದಾರೆ. ಸಮಸ್ಯೆ ಸರಳೀಕರಿಸಬೇಕು, ಕಾನೂನು ತಜ್ಞರ ಸಲಹೆ ಪಡೆದು ಮಾಡಬೇಕು. ಸಂವಿಧಾನದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕೊಡಬೇಕು ಎಂದು ಅಂಬೇಡ್ಕರ್ ಹೇಳಿದ್ದಾರೆ. ನ್ಯಾ. ನಾಗಮೋಹನ್ ದಾಸ್ ಕಮಿಟಿ ಮುಂದೆ ಸಮುದಾಯಗಳು ಹೋಗಿವೆ. ಅದನ್ನು ನೋಡಿ ಕ್ರಮ ಆಗಬೇಕು ಎಂದು ತಿಳಿಸಿದರು.

ಅನಾಹುತಕ್ಕೂ ಮೊದಲು ಯುದ್ಧ ನಿಲ್ಲಿಸಬೇಕು: ಇಸ್ರೇಲ್ ಇರಾನ್ ಮೇಲೆ ಯುದ್ಧ ಮಾಡುತ್ತಿದ್ದು, ಇರಾನ್ ಪ್ರತ್ಯುತ್ತರ ನೀಡುತ್ತಿರುವುದು ದೊಡ್ಡ ಆತಂಕವಾಗಿದೆ. ಇನ್ನಷ್ಟು ಅನಾಹುತ ಆಗುವ ಮೊದಲು ವಿಶ್ವದ ನಾಯಕರು ಯುದ್ಧ ನಿಲ್ಲಿಸಬೇಕು. ಹಲವು ಯುದ್ಧಗಳ ಸಂಧರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಭಾರತೀಯರನ್ನು ಸುರಕ್ಷಿತವಾಗಿ ಕರೆತಂದಿದ್ದಾರೆ. ಶಾಂತಿ ನೆಲೆಸಿದ ಬಳಿಕ ಕರೆ ತರಬಹುದು. ದುಬೈ, ಅಬುದಾಬಿ, ಸೌದಿ ಅರೇಬಿಯಾ ಒಂದೇ ಬಾರಿ ಯುದ್ಧ ನಡೆಯುತ್ತಿದೆ. ಹಾಗಾಗಿ ಒಟ್ಟಿಗೆ ಸಮಸ್ಯೆ ಆಗಿದೆ. ಎಲ್ಲಾ ಕಡೆ ಭಾರತೀಯರಿದ್ದಾರೆ. ಭಾರತ ಸರ್ಕಾರ ಮಹತ್ವದ ಪಾತ್ರವಿದೆ. ಭಾರತ ಸರ್ಕಾರ ಎಲ್ಲಾ ರಾಯಭಾರಿ ಕಚೇರಿಗೆ ಸಂಪರ್ಕ ಮಾಡಿ, ಅವರಿಗೆ ಅನ್ನ, ವಸತಿ ನೀಡುವ ಕ್ರಮ ಆಗಬೇಕು ಎಂದರು.

ಬೆಳೆಗಾರರಿಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಭರವಸೆ
ತಂಬಾಕು ಚರ್ಚೆಗೆ ಸಿದ್ಧ

ಮೈಸೂರು: ರಾಜ್ಯದ ತಂಬಾಕು ಮಾರುಕಟ್ಟೆಗಳಲ್ಲಿ ರೈತರಿಂದ ಹಿಂದಿನ ಸರಾಸರಿ ಅಥವಾ ಅದಕ್ಕಿಂತ ಹೆಚ್ಚು ಬೆಲೆಗೆ ಉತ್ಪನ್ನ ಖರೀದಿಸಬೇಕು. ತಂಬಾಕು ಮಂಡಲಿಯು ಹರಾಜು ಪ್ರಕ್ರಿಯೆ ಮೇಲೆ ನಿಗಾ ವಹಿಸಬೇಕು ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಸೂಚಿಸಿದರು.

ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಎಫ್‌ಸಿವಿ ತಂಬಾಕು ಹರಾಜಿಗೆ ಸಂಬಂಧಿಸಿದಂತೆ ಇರುವ ಬಿಕ್ಕಟ್ಟಿನ ಬಗ್ಗೆ ತಂಬಾಕು ಬೆಳೆಯುವ ಪ್ರದೇಶಗಳ ಜನಪ್ರತಿನಿಧಿಗಳು, ಬೆಳೆಗಾರರು, ಖರೀದಿದಾರರು ಹಾಗೂ ತಂಬಾಕು ಮಂಡಳಿ ಉನ್ನತ ಅಧಿಕಾರಿಗಳ ಜತೆ ಮಹತ್ವದ ಸಭೆ ನಡೆಸಿ ಮಾತನಾಡಿದ ಅವರು, ಈಗಾಗಲೇ ಕೊಟ್ಟ ವಾತಿನಂತೆ ರೈತರಿಂದ ತಂಬಾಕು ಖರೀದಿ ಮಾಡಬೇಕು ಎಂದು ವರ್ತಕರಿಗೆ ತಾಕೀತು ಮಾಡಿದರು. ರೈತರನ್ನು ಕಾಪಾಡಿಕೊಳ್ಳಬೇಕಿದೆ. ಅವರಿಗೆ ನೀವು ಮಾತು ಕೊಟ್ಟಂತೆ ನಡೆದುಕೊಳ್ಳಿ. ನೆರೆ ರಾಜ್ಯ ಆಂಧ್ರ ಪ್ರದೇಶದಂತೆ ಇಲ್ಲಿಯೂ ಉತ್ತಮ ದರವನ್ನು ಕೊಟ್ಟು, ತಂಬಾಕು ಖರೀದಿ ಮಾಡಿ. ಸುಂಕ ಸೇರಿದಂತೆ ನಿಮಗಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಲು ಕೇಂದ್ರ ಸರ್ಕಾರ ಸಿದ್ಧವಿದೆ. ಅದಕ್ಕೂ ಮೊದಲು ನಿಗದಿಯಾದಂತೆ ತಂಬಾಕು ಖರೀದಿ ಮಾಡಿ ಎಂದು ಹೇಳಿದರು.

ಕೇಂದ್ರ ಸರ್ಕಾರ ಸಿಗರೇಟಿನ ಮೇಲೆ ಅಧಿಕ ಸುಂಕ ಹಾಕಿದೆ ಎಂದು ಹೇಳುತ್ತೀರಿಮ ಆದರೆ, ನೀವು ಸುಂಕ ಏರಿಕೆಯ ಭಾರವನ್ನು ಸಿಗರೇಟ್ ಸೇದುವ ಗ್ರಾಹಕನ ಮೇಲೆ ವಿಧಿಸುತ್ತೀರಿ. ಆದರೆ, ಇದಕ್ಕೆ ಸಂಬಂಧವೇ



ಇಲ್ಲದ ಬೆಳೆಗಾರನ ಮೇಲೆ ಏಕೆ ಬರೆ ಎಳೆಯುತ್ತೀರಿ ಎಂದು ವರ್ತಕರನ್ನು ಪ್ರಶ್ನಿಸಿದರು.

ನಿಮ್ಮ ಸಮಸ್ಯೆಗಳನ್ನು ಕೇಳಲು ನಾವು ಸಿದ್ಧರಿದ್ದೇವೆ. ನಾನು ಮತ್ತು ಸಂಸದ ಯದುವೀರ್ ಅವರು ಸತತವಾಗಿ ಸಂಬಂಧಪಟ್ಟ ಎಲ್ಲರ ಜತೆ ಮಾತುಕತೆ ನಡೆಸಿದ್ದೇವೆ. ಸುಂಕ ಇಳಿಕೆ ಬಗ್ಗೆ ನಾವು ಕೇಂದ್ರದ ವಿತ್ತ ಸಚಿವರನ್ನು ಭೇಟಿಯಾಗಿ ಮನವಿ ಮಾಡುತ್ತೇವೆ. ಆದರೆ, ರೈತರಿಗೆ ನೀವು ಕೊಟ್ಟ ಮಾತನ್ನು ಉಳಿಸಿಕೊಳ್ಳಿ ಎಂದು ವರ್ತಕರಿಗೆ ಹೇಳಿದರು.

ಹರಾಜು ಪ್ರಕ್ರಿಯೆಯಲ್ಲಿ ಯಾವ, ಯಾವ ಖರೀದಿದಾರರು ಭಾಗಿಯಾಗುತ್ತಿದ್ದಾರೆ ಎಂದು ತಂಬಾಕು ಮಂಡಳಿ ಅಧಿಕಾರಿಗಳಿಂದ ಮಾಹಿತಿ ಪಡೆದ ಸಚಿವರು, ವಿದೇಶೀ ಕಂಪನಿಗಳು ಹರಾಜಿನಲ್ಲಿ ಭಾಗಿಯಾಗಲು ಏನಾದರೂ ನಿರ್ಬಂಧಗಳು ಇವೆಯೇ ಎಂದು ಮಂಡಳಿ ಅಧಿಕಾರಿಗಳನ್ನು ಪ್ರಶ್ನಿಸಿದರು. ಅದಕ್ಕೆ ಅಧಿಕಾರಿಗಳು, ಯಾವುದೇ ನಿರ್ಬಂಧ ಇಲ್ಲ ಎಂಬ ಅಂಶವನ್ನು ಕೇಂದ್ರ ಸಚಿವರ ಗಮನಕ್ಕೆ ತಂದರು.

ಸಭೆಯಲ್ಲಿ ಪಶುಸಂಗೋಪನಾ ಸಚಿವ ಕೆ. ವೆಂಕಟೇಶ್, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಶಾಸಕರಾದ ಜಿ.ಡಿ.ಹರೀಶ್ ಗೌಡ, ಎ. ಮಂಜು, ವಿಧಾನ ಪರಿಷತ್ ಸದಸ್ಯರಾದ ಸಿ.ಎನ್. ಮಂಜೇಗೌಡ, ಕೆ. ವಿವೇಕಾನಂದ ಉಪಸ್ಥಿತರಿದ್ದರು.

ಎಲ್ಲಾ ಸರ್ಕಾರದಲ್ಲೂ ಫೋನ್ ಟ್ಯಾಪಿಂಗ್ ಇತ್ತು

ಮೈಸೂರು: ಎಲ್ಲಾ ಸರ್ಕಾರದಲ್ಲೂ ಫೋನ್ ಟ್ಯಾಪಿಂಗ್ ಇತ್ತು. ಈಗಲೂ ಫೋನ್ ಟ್ಯಾಪಿಂಗ್ ಇದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲವರು ಫೋನ್ ಟ್ಯಾಪಿಂಗ್ ಮಾಡಿಯೂ ಪತಿವ್ರತೆ ರೀತಿ ವರ್ತಿಸುತ್ತಾರೆ. ನಾನು ಸತ್ಯ ಹೇಳುತ್ತೇನೆ, ಎಲ್ಲಾ ಸರ್ಕಾರದಲ್ಲೂ ಫೋನ್ ಟ್ಯಾಪಿಂಗ್ ಇತ್ತು. ಇವತ್ತಿನ ಸರ್ಕಾರದಲ್ಲಿ ಅದು ಎಷ್ಟು ಹೆಚ್ಚಾಗಿದೆ ಎಂಬುದು ಅವರನ್ನೇ ಕೇಳಬೇಕು. ಅವರದ್ದೇ ಶಾಸಕರ ಮೇಲೆ ಅವರದ್ದೇ ಸಚಿವರು ಗುಪ್ತಚಾರಿಕೆ ಮಾಡುತ್ತಿರುವುದು ಇದೇ ಮೊದಲು. ಸಿಎಂ ಆಗಬೇಕೆಂದುಕೊಂಡವರು ಅವರ ಸರ್ಕಾರದ ಮೇಲೆ ಗುಪ್ತಚಾರಿಕೆ ಆರಂಭಿಸಿರುವುದು ದುರಂತ ಎಂದರು.

ಅಧಿವೇಶನದಲ್ಲಿ ಮಂಡಿಸಲು ಕ್ರಮ: ಹೊರಟ್ಟಿ
ಸದನದಲ್ಲಿ ಹಕ್ಕುಗಳ ರಕ್ಷಣೆ ಕುರಿತು ಚರ್ಚೆ

ಬೆಂಗಳೂರು: ರಾಜ್ಯದಲ್ಲಿನ ಮಕ್ಕಳ ಸಮಸ್ಯೆಗಳು ಹಾಗೂ ಪರಿಹಾರಗಳ ಕುರಿತ ವಿಷಯಗಳನ್ನು ಮಂಡಿಸಲು ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆ ಕುರಿತು ಚರ್ಚೆಗೆ ಈ ಬಾರಿಯ ವಿಧಾನಸಭೆ ಅಧಿವೇಶನದಲ್ಲಿ ಒಂದು ದಿನ ಮೀಸಲಿಡಲು ಕ್ರಮವಹಿಸಲಾಗುವುದು ಎಂದು ಸಭಾಪತಿ



ಬಸವರಾಜ ಹೊರಟ್ಟಿ ಹೇಳಿದರು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ವತಿಯಿಂದ ನಗರಾಡಳಿತಗಳಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆ ಕುರಿತು ವಿಕಾಸಸೌಧದ ಸಭಾಗಣದಲ್ಲಿ ಸೋಮವಾರ ಏರ್ಪಡಿಸಿದ್ದ ರಾಜ್ಯ ಮಟ್ಟದ ಸಮಾಲೋಚನಾ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು. ಮಕ್ಕಳ ಹಕ್ಕುಗಳ ರಕ್ಷಣೆಯು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ. ಪ್ರಸ್ತುತ ದಿನಮಾನಗಳಲ್ಲಿ ಬದಲಾಗುತ್ತಿರುವ ಜಗತ್ತಿನಲ್ಲಿ ಮಕ್ಕಳ ಅಭಿವೃದ್ಧಿಯು ಸಹ ಕಾಲ ಕ್ರಮೇಣ ವಿಕಸನ ಗೊಳ್ಳುತ್ತಿದ್ದು, ಮಕ್ಕಳು ಪ್ರಶ್ನಾತೀತ ಮನವೋಭಾವವನ್ನು ಬೆಳೆಸಿಕೊಂಡು ಪ್ರಜಾಸಾತ್ಮಕ ನಿಲುವುಗಳನ್ನು ಹೊಂದುತ್ತಿರುವುದರಿಂದ ಇಂದಿನ ಮಕ್ಕಳೇ ಇಂದಿನ ಪ್ರಜೆಗಳು ಎನ್ನುವ ಮಾತು ಸರ್ವ ಕಾಲಕ್ಕೂ ಸತ್ಯ ಎಂದು ಎಂದು ತಿಳಿಸಿದರು.

> ರಾಜ್ಯಾದ್ಯಂತ ದುಡಿಮೆಗಾಗಿ ಹಳ್ಳಿಗಳಿಂದ ನಗರ ಪ್ರದೇಶಗಳಿಗೆ ಜನಸಾಮಾನ್ಯರು ತಮ್ಮ ಮಕ್ಕಳೊಂದಿಗೆ ಧಾವಿಸುತ್ತಾರೆ. ಅಂತಹ ಮಕ್ಕಳ ಶಿಕ್ಷಣ, ರಕ್ಷಣೆ ಹಾಗೂ ಪೋಷಣೆ ಸಕಾರಗೊಳಿಸಲು ಪ್ರತಿಯೊಬ್ಬ ಅಧಿಕಾರಿಗಳು ಮಕ್ಕಳ ಕಾರ್ಯಪ್ರವೃತ್ತರಾಗಬೇಕು.
> ■ ಶಶಿಧರ್ ಕೋಸಂಬೆ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ

ಸಚಿವ ರಹೀಂ ಖಾನ್ ಮಾತನಾಡಿ, ಮಕ್ಕಳ ವಿಶೇಷ ನಗರಸಭೆ ಆಯೋಜಿಸಲು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರಾದ ಶಶಿಧರ್ ಕೋಸಂಬೆ ಅವರು ಮನವಿ ಮಾಡಿದ್ದನ್ನು ಪರಿಗಣಿಸಿ, ಮಕ್ಕಳ ಸಮಸ್ಯೆಗಳನ್ನು ಆಲಿಸಿ, ತ್ವರಿತ ಪರಿಹಾರ ಒದಗಿಸಲು ನಗರ ಪ್ರದೇಶಗಳಲ್ಲಿಯೂ ಸಹ ಮಕ್ಕಳ ವಿಶೇಷ ನಗರಸಭೆ ಆಯೋಜಿಸಲು ಸುತ್ತೋಲೆ ಹೊರಡಿಸುವಂತೆ ಇಲಾಖಾ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಭಾರತೀಯರನ್ನು ಸುರಕ್ಷಿತವಾಗಿ ಕರೆತರಲು ಕೇಂದ್ರ ಬದ್ಧ: ಎಚ್ಡಿಕೆ

ಮೈಸೂರು: ಇರಾನ್- ಇಸ್ರೇಲ್ ನಡುವೆ ಯುದ್ಧ ಸಂಘರ್ಷದಿಂದಾಗಿ ವಿವಿಧ ದೇಶಗಳಲ್ಲಿ ಸಿಲುಕಿಕೊಂಡಿರುವ ಭಾರತೀಯರನ್ನು ಸುರಕ್ಷಿತವಾಗಿ ಕರೆತರಲು ಕೇಂದ್ರದಿಂದ ತೀವ್ರ ಪ್ರಯತ್ನ ನಡೆದಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಭರವಸೆ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆದರೆ ಸದ್ಯದ ಪರಿಸ್ಥಿತಿಯಲ್ಲಿ ಕನ್ನಡಿಗರನ್ನು ಯುದ್ಧ ಸಂಪೂರ್ಣ ನಿಲ್ಲುವವರೆಗೂ ರಾಜ್ಯಕ್ಕೆ ಕರೆಸುವುದು ಕಷ್ಟ. ಯುದ್ಧ ಕಾರಣದಿಂದ ರದ್ದುಗೊಂಡಿರುವ ವಿಮಾನ ಹಾರಾಟ ಮತ್ತೆ ಆರಂಭವಾದರೆ ಎಲ್ಲರೂ ಬಹುಬೇಗ ಸುರಕ್ಷಿತವಾಗಿ ಬರುತ್ತಾರೆ ಎಂದು ತಿಳಿಸಿದರು. ಮಧ್ಯ ಪ್ರಾಚ್ಯ ದೇಶಗಳಲ್ಲಿ ಯುದ್ಧ ನಡೆಯುತ್ತಿರುವ್ಯದರಿಂದ ವಿಮಾನ ಹಾರಾಟ ಬಂದ್ ಆಗಿ, ಸಮಸ್ಯೆಯಾಗಿದೆ. ದುಬೈನಲ್ಲಿ ಕೆಲಸಮಾಡುತ್ತಿರುವಕನ್ನಡಿಗರುಸಾಧ್ಯವಾದಷ್ಟು ಕನ್ನಡಿಗರ ಸಹಾಯಕ್ಕೆ ಬಂದಿದ್ದಾರೆ. ನನ್ನ ಜೊತೆಯೂ ಬಹಳಷ್ಟು ಜನ ಸಂಪರ್ಕದಲ್ಲಿದ್ದಾರೆ. ಕೇಂದ್ರ ಕೂಡ ಎಲ್ಲಾ ಭಾರತೀಯರ ಸುರಕ್ಷತೆ ಒತ್ತು ಕೊಟ್ಟಿದೆ. ರಾಜ್ಯ ಸರ್ಕಾರವೂ ಕೇಂದ್ರದ ಮಾತುಕತೆ ನಡೆಸುತ್ತಿದೆ ಎಂದು ಹೇಳಿದರು. ಇಂಥ ಸಂಕಷ್ಟ ಸಂದರ್ಭಗಳನ್ನು ಮೋದಿ ಅವರು ಯಶಸ್ವಿಯಾಗಿ ನಿಭಾಯಿಸಿದ್ದಾರೆ ಎಂದರು.

ಕನ್ನಡಿಗರನ್ನು ಸಂಪರ್ಕಿಸಿದ್ದೇವೆ

ಕೊಲ್ಲಿ ಪ್ರದೇಶದಲ್ಲಿ ಉಂಟಾಗಿರುವ ಉದ್ವಿಗ್ನತೆಯಲ್ಲಿ ಸಿಲುಕಿಕೊಂಡಿರುವ ಎಲ್ಲಾ ಕನ್ನಡಿಗರನ್ನು ಸುರಕ್ಷಿತವಾಗಿ ವಾಪಸ್ ಕರೆತರಲು ಕೇಂದ್ರ ಸರ್ಕಾರ ಎಲ್ಲಾ ಕ್ರಮಗಳನ್ನು ಕೈಗೊಂಡಿದೆ. ಈ ಹಿಂದೆ ಇಂಥದೇ ಅನೇಕ ಸಂದರ್ಭಗಳಲ್ಲಿ ನರೇಂದ್ರ ಮೋದಿ ಅವರ ಸರ್ಕಾರ ಎಲ್ಲಾ ಭಾರತೀಯರನ್ನು ಸುರಕ್ಷಿತವಾಗಿ ಏರ್ ಲಿಫ್ಟ್ ಮಾಡಿತ್ತು. ಈ ಬಾರಿಯೂ ಎಲ್ಲರನ್ನೂ ಸುರಕ್ಷಿತವಾಗಿ ವಾಪಸ್ ಕರೆ ತರಲು ಸರ್ವ ಪ್ರಯತ್ನ ಮಾಡಲಾಗುತ್ತಿದೆ. ಈಗಾಗಲೇ ಪ್ರಧಾನಿಗಳು ಕ್ರಮ ವಹಿಸಿದ್ದಾರೆ ಎಂದು ಹೇಳಿದರು. ನಾನು ಕೂಡ ಯುದ್ಧ ಕಾರ್ಮೋಡ ಇರುವ ವಿವಿಧ ದೇಶಗಳಲ್ಲಿ ಸಿಲುಕಿಕೊಂಡಿರುವ ಕನ್ನಡಿಗರನ್ನು ಸಂಪರ್ಕಿಸಿದ್ದೇನೆ. ಎಲ್ಲರೂ ಸುರಕ್ಷಿತರಾಗಿದ್ದಾರೆ. ಅವರೆಲ್ಲರೂ ವಾಪಸ್ ಬರಲಿದ್ದಾರೆ. ಯಾವುದೇ ಅನುಮಾನ ಬೇಡ ಎಂದು ಹೇಳಿದರು.

ದುಬೈನಲ್ಲಿ ಸಿಲುಕಿದ ಶಾಸಕ ನಾರಾ ಭರತ್ ರೆಡ್ಡಿ | ವಿಡಿಯೋ ರಿಲೀಸ್
ನಾವು ಸುರಕ್ಷಿತವಾಗಿದ್ದೇವೆ, ಆತಂಕ ಬೇಡ

ಬಳ್ಳಾರಿ: ಇಸ್ರೇಲ್, ಅಮೆರಿಕ, ಇರಾನ್ ಮಧ್ಯೆ ನಡೆಯುತ್ತಿರುವ ಭೀಕರ ವೈಮಾನಿಕ ದಾಳಿ ಹಿನ್ನೆಲೆಯಲ್ಲಿ ದುಬೈನಲ್ಲಿ ಸಿಲುಕಿದ್ದ ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ವಿಡಿಯೋ ರಿಲೀಸ್ ಮಾಡಿ, ನಾವೆಲ್ಲರೂ ಸುರಕ್ಷಿತರಾಗಿದ್ದೇವೆ. ಯಾವುದೇ ಆತಂಕ ಬೇಡ ಎಂದು ತಿಳಿಸಿದ್ದಾರೆ.



ವೈಮಾನಿಕ ದಾಳಿಯ ಕಿಚ್ಚು ಕನ್ನಡಿಗರನ್ನು ಆತಂಕಕ್ಕೆ ತಳ್ಳಿದ್ದು, ಪ್ರವಾಸಕ್ಕೆಂದು ದುಬೈಗೆ ತೆರಳಿದ್ದ ಬಳ್ಳಾರಿಯ ನಗರ ಶಾಸಕ ನಾರಾ ಭರತ್ ರೆಡ್ಡಿ ಸೇರಿ 50 ಜನರ ತಂಡ ಲಾಕ್ ಆಗಿದ್ದು, ಕುಟುಂಬಸ್ಥರಲ್ಲಿ ಸಹಜವಾಗಿ ಆತಂಕ ಮನೆ ಮಾಡಿದೆ.

ಬಳ್ಳಾರಿಯ 35 ಜನರ ತಂಡ ಸಿರುಗುಪ್ಪ 15 ಜನರು ಸೇರಿ 50 ಜನರ ತಂಡ ಸಿಲುಕಿಕೊಂಡಿದ್ದು, ಈ ತಂಡದ ಸದಸ್ಯರು ವಿಡಿಯೋ ಕಾಲ್ ಮಾಡಿ ಸಮಸ್ಯೆಯ ಅಳಲನ್ನು ತೋಡಿಕೊಂಡಿದ್ದರು. ಆದರೆ, ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು, ಮಾತನಾಡಿರಲಿಲ್ಲ, ಆಪ್ತರೊಂದಿಗೆ ಮಾತ್ರ ಕಾಲ್ ಮಾಡಿ ಮಾತನಾಡಿದ್ದರು. ಸಹಜವಾಗಿ ಅವರ ಅಭಿಮಾನಿಗಳು, ಪಕ್ಷದ ಕಾರ್ಯಕರ್ತರಿಗೆ ಆತಂಕ ಮನೆ ಮಾಡಿತ್ತು. ಒಂದು ನಿಮಿಷ ಮಾತನಾಡಿದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತದೆ.

ನಾನುಹಾಗೂನಮ್ಮಕುಟುಂಬದಸದಸ್ಯರುಸುರಕ್ಷಿತರಾಗಿದ್ದೇವೆ. ಯಾವುದೇ ಆತಂಕ ಬೇಡ, ಜೊತೆಗೆ ನಮ್ಮ ಬಳ್ಳಾರಿಯ 35 ಜನರ ತಂಡವು ಸುರಕ್ಷಿತವಾಗಿದೆ. ಎಲ್ಲರೊಂದಿಗೂ ಸಂಪರ್ಕದಲ್ಲಿರುವೆ. ಸರ್ಕಾರವು ಎಲ್ಲ ವ್ಯವಸ್ಥೆ ಕಲ್ಪಿಸಿದೆ. ಜೊತೆಗೆ ನಮ್ಮ ಕಚೇರಿಯ ಸಿಬ್ಬಂದಿ ಎಲ್ಲ ವ್ಯವಸ್ಥೆ ಮಾಡಿದ್ದಾರೆ ಎಂದು ತಿಳಿಸಿದ್ದಾರೆ.

ಮಧ್ಯಪ್ರಾಚ್ಯದಲ್ಲಿ ಸಿಲುಕಿದ ತುಮಕೂರಿನ ಐವರು

ತುಮಕೂರು: ಮಧ್ಯ ಪ್ರಾಚ್ಯ ಹಾಗೂ ಕೊಲ್ಲಿ ದೇಶಗಳಲ್ಲಿ ತುಮಕೂರು ಜಿಲ್ಲೆಯಲ್ಲಿ ಸದ್ಯ ಐವರು ಈ ಯುದ್ಧ ಪೀಡಿತ ದೇಶಗಳಲ್ಲಿ ಸಿಲುಕಿದ್ದಾರೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರ ಮಾಹಿತಿ ನೀಡಿದೆ. ಮನೋಜ್ ಆರ್.ಎಸ್.(ಇರಾನ್) ರಾಂಪುರ , ಗುಬ್ಬಿ ತಾಲೂಕು, ಯೋಗೀಶ್ವರ್, ಶಿವಪರತಿ.ಎಚ್.ಎಸ್.,ಯುದಿತ್ ಶ್ರೀ ತುಮಕೂರು ನಗರದ ಸಿದ್ದರಾಮೇಶ್ವರ ಬಡವಣೆಯ ಒಂದೇ ಕುಟುಂಬದ ಮೂವರು ದುಬೈನಲ್ಲಿ ಸಿಲುಕಿದ್ದಾರೆ. ಪ್ರಿಯಾಂಕ ತುಮಕೂರು ನಗರದ ಜಯನಗರ ನಿವಾಸಿ ದುಬೈನಲ್ಲಿ ಸಿಲುಕಿದ್ದಾರೆ. ಮೇಲ್ಕಂಡ 5ಮಂದಿ ಯುದ್ಧಪೀಡಿತ ದೇಶದಲ್ಲಿದ್ದು ಸಹಾಯಕೇಂದ್ರಕ್ಕೆ ಕರೆ ಮಾಡಿ ಮಾಹಿತಿ ಒದಗಿಸಿದ್ದಾರೆ. ಈ ಮಾಹಿತಿಯನ್ನು ಜಿಲ್ಲಾಡಳಿತದಿಂದ ಸರ್ಕಾರಕ್ಕೆ ಮಾಹಿತಿ ಒದಗಿಸಲಾಗುವುದು ಎಂದು ಹೆಚ್ಚುವರಿ ಡಿಸಿ ಡಾ.ಎನ್.ತಿಪ್ಪೇಸ್ವಾಮಿ ತಿಳಿಸಿದ್ದಾರೆ.

ದುಬೈನಲ್ಲಿ ಯುದ್ಧ ಭೀತಿ: 10 ಮಂದಿ ಪರದಾಟ

ವಿಜಯನಗರ: ಮಧ್ಯಪ್ರಾಚ್ಯದ ಎಲ್ಲೆಡೆ ವಾಯು ದಾಳಿ ನಡೆಯುತ್ತಿರುವುದ್ದು, ದುಬೈನಲ್ಲಿ ಬಿಡಿಸಿಸಿ ಅಧ್ಯಕ್ಷ ಗುಂಡುಮುಣುಗು ತಿಪ್ಪೇಸ್ವಾಮಿ ಸೇರಿದಂತೆ ಜಿಲ್ಲೆಯ 10 ಜನರು ಸಿಲುಕಿದ್ದಾರೆ. ದುಬೈನಲ್ಲಿ ಖಾಸಗಿ ಸಂಸ್ಥೆ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಕಾರ್ಯ ಕ್ರಮದಲ್ಲಿ ಪಾಲ್ಗೊಳ್ಳಲು ಬಿಡಿಸಿಸಿ ಅಧ್ಯಕ್ಷ ಗುಂಡುಮುಣುಗು ತಿಪ್ಪೇಸ್ವಾಮಿ ತೆರಳಿದ್ದರು. ಇನ್ನುಳಿದಂತೆ ಹೊಸಪೇಟೆಯ ಚಿತ್ತವಾಡಗಿಯ ಮೊಹಮ್ಮದ್ ನಜರ್, ಸೈಫುಲ್ಲಾ ಅಹಮ್ಮದ್ ಬಣಗಾರ್, ಮೊಹಮ್ಮದ್ ಫೈಯಾಜ್, ಸೈಯದ್ ಅನೀಸ್ ಉರ್ ರೆಹಮಾನ್, ಮುಜೀಬ್ ಉಲ್ ಹಕ್, ಅರವಿಂದ್ ನಗರದ ಇದ್ರಿಸ್ ಅಲಿ, ಅಬೀರ್ ಬಾರಿ, ಶೇಖ್ ಅಹಮ್ಮದ್ ಅಲಿ, ಶೇಖ್ ರಿಯಾದ್ ದುಬೈನಲ್ಲಿ ಸಿಲುಕಿದ್ದಾರೆ. ಇವರೆಲ್ಲರೂ ಕೆಲಸದ ನಿಮಿತ್ತ ದುಬೈಗೆ ತೆರಳಿದ್ದು, ಯುದ್ಧ ಭೀತಿಯಿಂದ ಅವರೆಲ್ಲರೂ ಭಾರತಕ್ಕೆ ಮರಳಲು ತುದಿಗಾಲಲ್ಲಿ ನಿಂತಿದ್ದಾರೆ. ಆದರೆ, ಎಲ್ಲರೂ ಸುರಕ್ಷಿತವಾಗಿದ್ದಾರೆ ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಮಾಹಿತಿ ನೀಡಿದರು.

ರಾಜಕೀಯ ಅನಗತ್ಯ: ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಎಚ್.ಸಿ.ಮಹದೇವಪ್ಪ
ತಿ.ನರಸೀಪುರ ರೇಷ್ಮೆ ಕಾರ್ಖಾನೆ ಮುಚ್ಚುವುದಿಲ್ಲ

ಮೈಸೂರು: ಜಿಲ್ಲೆಯ ತಿ.ನರಸೀಪುರದಲ್ಲಿರುವ ಪ್ರತಿಷ್ಠಿತ ಮೈಸೂರು ರೇಷ್ಮೆ ನೂಲು ಉತ್ಪಾದನಾ ಕಾರ್ಖಾನೆಯನ್ನು ಯಾವುದೇ ಕಾರಣಕ್ಕೂ ಮುಚ್ಚುವುದಿಲ್ಲ. ಕ್ರೀಡಾಂಗಣ ನಿರ್ಮಾಣವನ್ನು ಸರಕಾರ ಪ್ರತಿಷ್ಠೆಯಾಗಿ ತೆಗೆದುಕೊಂಡಿಲ್ಲ ಎಂದು ಸಚಿವ ಎಚ್.ಸಿ.ಮಹದೇವಪ್ಪ ಹೇಳಿದರು.

ಸೋಮವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕ್ರೀಡಾಂಗಣ ನಿರ್ಮಾಣಕ್ಕಾಗಿ ತಿ.ನರಸೀಪುರದ ಸಿಲ್ಕ್ ಫ್ಯಾಕ್ಟರಿ ಮುಚ್ಚಲು ಸಾಧ್ಯವೇ ? ನಾವೆಲ್ಲೂ ಕಾರ್ಖಾನೆಯನ್ನು ಮುಚ್ಚಿ ಕ್ರೀಡಾಂಗಣ ಕಟ್ಟುತ್ತೇವೆ ಎಂದು ಹೇಳಿಲ್ಲ. ಈ ವಿಷಯದಲ್ಲಿ ಕೆಲವರು ಅನಗತ್ಯವಾಗಿ ರಾಜಕೀಯ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ರೇಷ್ಮೇ ಎಂಬುದು ವಿಶ್ವ ವಿಕಾಸಗೊಂಡಿರುವಂತದ್ದು ಟಿಪ್ಪು ಅವರು ಮೈಸೂರಿಗೆ ರೇಷ್ಮೆ ತಂದವರು. ಮೈಸೂರಿನ ಪರಂಪತೆ ಮತ್ತು ಪ್ರತಿಷ್ಠೆಯನ್ನು ಹೆಚ್ಚಿಸುವ ಮೈಸೂರು ಸಿಲ್ಕ್ ಫ್ಯಾಕ್ಟರಿ, ಮೈಸೂರು ಸ್ಯಾಂಡಲ್ ಸೋಪ್ ಅಂತಹ ಕಾರ್ಖಾನೆಯನ್ನು ಮುಚ್ಚಲು ಸಾಧ್ಯವೇ ? ಈ ಸಂಬಂದ ಈಗಾಗಲೇ ರೇಷ್ಮೆ ಇಲಾಖೆಯ ಅಧಿಕಾರಿಗಳು, ಕ್ರೀಡಾ ಇಲಾಖೆ ಅಧಿಕಾರಿಗಳ ಜೊತೆಗೆ ಮಾತುಕತೆ ನಡೆಸಲಾಗಿದೆ. ಒಂದು ವೇಳೆ ಸಿಲ್ಕ್ ಫ್ಯಾಕ್ಟರಿ ಅಸ್ತಿತ್ವಕ್ಕೆ ಅಥವಾ ವಿಸ್ತರಣೆಗೆ ಒಂಚಿಂಚು ಕೊರತೆಯಾದರೂ ನಾವು ಕ್ರೀಡಾಂಗಣ



ಮಾಡುವುದಿಲ್ಲ. ಇದು ಪ್ರತಿಷ್ಠೆಯ ಪ್ರಶ್ನೆಯೇ ಅಲ್ಲ ಎಂದು ಸ್ಪಷ್ಟಪಡಿಸಿದರು.

ಸಿಲ್ಕ್‌ಫ್ಯಾಕ್ಟರಿ ವಿಷಯದಲ್ಲಿ ಕೆಲವರು ಅನಗತ್ಯ ರಾಜಕೀಯ ಮಾಡುತ್ತಿದ್ದಾರೆ. ಫ್ಯಾಕ್ಟರಿಗೆ ತೊಂದರೆ ಆದಾಗಲೆಲ್ಲ ಕಾಲ, ಕಾಲಕ್ಕೆ ಹಣ ಕೊಡುತ್ತಿರುವುದು ಸಿದ್ದರಾಮಯ್ಯ ಸರಕಾರವೇ ವಿನಃ ಮಾತನಾಡುತ್ತಿರುವವರಲ್ಲ. ಈಗಾಗಲೇ ಸ್ಥಳ ಪರಿಶೀಲಿಸಿ ವರದಿ ನೀಡಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಸಿಲ್ಕ್ ಫ್ಯಾಕ್ಟರಿಗೆ ಒಂದಿಂಚು ಜಾಗ ಕೊರತೆಯಾದರೂ ಕ್ರೀಡಾಂಗಣವನ್ನು ನಾವು ಮಾಡುವುದಿಲ್ಲ. ಬೇರೆ ಸ್ಥಳವನ್ನು ಪರಿಶೀಲಿಸಲಾಗುವುದು ಎಂದು ಹೇಳಿದರು.

ಕಾನೂನಿನಂತೆ ಮೀಸಲಾತಿ

ಮೈಸೂರು: ಮೀಸಲಾತಿ ವಿಷಯದಲ್ಲಿ ಸಂವಿಧಾನ ಮತ್ತು ಕಾನೂನು ಹೇಗೆ ಹೇಳುತ್ತದೆ ಹಾಗೆಯೇ ನಡೆಯುತ್ತದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಎಚ್.ಸಿ.ಮಹದೇವಪ್ಪ ಹೇಳಿದರು. ರಾಜ್ಯದಲ್ಲಿ ತಲೆದೋರಿರುವ ಒಳಮೀಸಲಾತಿ ಗೊಂದಲ ಕುರಿತು ಪ್ರತಿಕ್ರಿಯಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿಯೊಬ್ಬರೂ ಅವರಿಗೆ ತೋಚಿದಂತೆ ಮಾತನಾಡುತ್ತಿದ್ದಾರೆ. ಆದರೆ, ಒಳ ಮೀಸಲಾತಿ ಮಸೂದೆ ಕುರಿತು ಕ್ಯಾಬಿನೆಟ್‌ನಲ್ಲಿ ನಡೆದಿರುವ ಚರ್ಚೆ ಬಗ್ಗೆ ಇಲ್ಲಿ ಹೇಳಲಾರೆ. ಮಾತನಾಡುವುದು, ಟೀಕಿಸುವುದು ಅವರವರ ಹಕ್ಕು. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಮಾತನಾಡುವ ಹಕ್ಕಿದೆ. ಹಾಗಾಗಿ ಮಾತನಾಡುತ್ತಿದ್ದರೆ. ಆದರೆ, ಯಾರಿಗೂ ಪೂರ್ಣ ವಿವರ ಗೊತ್ತಿಲ್ಲ. ನಾನು ಹೇಳಲೂ ಸಾಧ್ಯವಿಲ್ಲ. ಆದರೆ, ಎಲ್ಲರೂ ಹೇಳಿದಂತೆ ಮಾಡಲು ಸಾಧ್ಯವಿಲ್ಲ. ಇದು ಒಂದು ವರ್ಗಕ್ಕೆ ಅನ್ಯಾಯ, ನ್ಯಾಯದ ಪ್ರಶ್ನೆಯಲ್ಲ. ಎಲ್ಲವನ್ನೂ ಸಂವಿಧಾನ ಮತ್ತು ಕಾನೂನು ಹೇಳಿದಂತೆ ಮಾಡಬೇಕಾಗುತ್ತದೆ ಎಂದು ತಿಳಿಸಿದರು.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿಕೆ
ಹಳೆಯ ಮೀಸಲಾತಿಯಂತೆ ನೇಮಕ

ದಾವಣಗೆರೆ: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಜಾರಿಗೊಳಿಸಿದ ನಂತರವೇ 56,432 ಹುದ್ದೆಗಳ ನೇಮಕಾತಿ ಕೈಗೊಳ್ಳಬೇಕೆಂಬ ಒತ್ತಾಯವಿದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನ್ಯಾಯಾಲಯದಲ್ಲಿ ತಡೆಯಾಜ್ಞೆಯಾದರೆ ಏನು ಮಾಡುವುದು? ನ್ಯಾಯಾಲಯದಲ್ಲಿ ಇದೆಲ್ಲಾ ಇತ್ಯರ್ಥವಾಗದೇ ಏನೂ ಮಾಡಲಾಗುವುದಿಲ್ಲ. 9ನೇ ಶೆಡ್ಯೂಲ್ ಗೆ ಸೇರ್ಪಡೆ ಮಾಡಲು ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕಾಗುತ್ತದೆ. ಸದ್ಯಕ್ಕೆ ಹಳೆಯ ಶೇ.15, ಶೇ.3 ಮೀಸಲಾತಿಯಂತೆ ಯಥಾಸ್ಥಿತಿ ಯನ್ನೇ ಮುಂದವರೆಸುತ್ತೇವೆ. 42 ಸಾವಿರ ಹುದ್ದೆಗಳ ನೋಟಿಫಿ ಕೇಷನ್ ಬಾಕಿ ಇದೆ. ಕೇಂದ್ರ ಸರ್ಕಾರ 9ನೇ ಶೆಡ್ಯೂಲ್ ಗೆ ಸೇರ್ಪಡೆ ಮಾಡಿದರೆ ಎಲ್ಲಾ ಗೊಂದಲಗಳೂ ಬಗೆಹರಿಯುತ್ತವೆ. ಹುದ್ದೆಗಳ ನೇಮಕವಾಗಬೇಕು. ಕೆಲಸ ಮಾಡಲು ಜನ ಬೇಕು ಎಂದು ಅವರು ಹೇಳಿದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಇಲ್ಲ: ಮುಖ್ಯಮಂತ್ರಿ ಕುರ್ಚಿ ವಿಚಾರದಲ್ಲಿ ಉಂಟಾಗಿರುವ ಗೊಂದಲಗಳು ಮೊದಲು ಬಗೆಹರಿಯಬೇಕು ಎಂದರು. ರಾಜ್ಯಕ್ಕೆ ಭೇಟಿ ನೀಡಿದ್ದ ವೇಳೆ ನಮ್ಮ ಪಕ್ಷದ ರಾಜ್ಯ ಉಸ್ತುವಾರಿ ಸುರ್ಜೇವಾಲಾ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆಗೆ ಸಭೆ ಮಾಡಿ ಮಾತನಾಡುತ್ತಾರೆ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಇಲ್ಲ. ಎಲ್ಲರ ಆಗ್ರಹವೂ ಒಂದೇ ಆಗಿದ್ದು, ಸಮಸ್ಯೆ ಮೊದಲು ಬಗೆಹರಿಯಬೇಕು. ಬೇಗ ಗೊಂದಲ ನಿವಾರಣೆ ಮಾಡುವಂತೆ ನಾವೂ ಸಹ ಒತ್ತಾಯ ಮಾಡುತ್ತೇವೆ. ಇಲ್ಲದಿದ್ದರೆ ಮುಂದೆ ಸರ್ಕಾರ ಬರುವುದು ಕಷ್ಟವೆಂಬ ಶಾಸಕ ಬಾಲಕೃಷ್ಣ ಹೇಳಿಕೆ ನಿಜ. ನಾನು ಅರ್ಧ ಅಂತಾ ಇವರು, ಪೂರ್ತಿ ಅಂತಾ ಮತ್ತೊಬ್ಬರು ಅನ್ನೋದೇ ಆಗುತ್ತಿದೆ. ಅದನ್ನು ದೆಹಲಿಯ ನಾಯಕರು ಹೇಳಬೇಕು. ಆವಾಗ ಮಾತ್ರ ಎಲ್ಲವೂ ಶಾಂತವಾಗುತ್ತದೆ ಎಂದರು.

> ರಾಜ್ಯದಲ್ಲಿ ಗುತ್ತಿಗೆದಾರರ ಬಾಕಿ ಹಣ ಬಿಡುಗಡೆಗೆ ಸಾಧ್ಯವಾದಷ್ಟು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ಸಿಎಂ ಸಿದ್ದರಾಮಯ್ಯ ಬಜೆಟ್ ಮಂಡನೆ ಮಾಡಲಿದ್ದು, ನಾವು ಯೋಜನೆಗಳ ಪಟ್ಟಿಯನ್ನು ಕೊಟ್ಟಿದ್ದೇವೆ. ರಾಜ್ಯದ ಹೆದ್ದಾರಿಗಳ ದುರಸ್ಥಿ, ನಿರ್ವಹಣೆಗೆ ಪಿಪಿಪಿ ಮಾದರಿ ಟೆಂಡರ್ ಕರೆದಿದ್ದೇವೆ. ಶಿವಮೊಗ್ಗ-ಮರಿಯಮ್ಮನಹಳ್ಳಿ ಸೇರಿ ನಾಲ್ಕು ಕಡೆ ಟೆಂಡರ್ ಸಹ ಆಗಿದೆ.
> ■ ಸತೀಶ ಜಾರಕಿಹೊಳಿ, ಸಚಿವ

ಸಂಪಾದಕೀಯ

ಜಾಗತಿಕ ವ್ಯವಸ್ಥೆಗೆ ಸವಾಲು

ಕಳೆದ ಕೆಲವು ವರ್ಷಗಳಿಂದ ಜಾಗತಿಕ ಶಾಂತಿ ಪದೇಪದೇ ಕದಡುತ್ತಿದೆ. ಉಕ್ರೇನ್ ಮತ್ತು ರಷ್ಯಾ ನಡುವಿನ ಕದನವು ನಾಲ್ಕು ವರ್ಷಗಳಿಂದ ನಡೆಯುತ್ತಾ ಬಂದಿದೆ. ಅದರ ನಂತರ ಇಸ್ರೇಲ್ ಮತ್ತು ಹಮಸ್ ನಡುವಿನ ಸಮರವು ವರ್ಷಗಟ್ಟಲೆ ನಡೆಯಿತಲ್ಲದೆ, ಇನ್ನಿತರ ಕೆಲವು ದೇಶಗಳಿಗೂ ವ್ಯಾಪಿಸಿತು. ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷವು ಕೆಲವೇ ದಿನಗಳಲ್ಲಿ ಮುಗಿಯಿತೆನ್ನುವುದು ಸಮಾಧಾನ. ಪಾಕಿಸ್ತಾನ ಮತ್ತು ಅಫಘಾನಿಸ್ತಾನ ಮಧ್ಯೆ ಕಳೆದೊಂದು ವರ್ಷದಿಂದಲೇ



ಉದ್ವಿಗ್ನ ಸ್ಥಿತಿ ನೆಲೆಸಿದ್ದು, ಅಲ್ಲೂ ಈಗ ಸಮರದ ಸ್ಥಿತಿ ಏರ್ಪಟ್ಟಿದೆ. ಪರಸ್ಪರರ ಮೇಲೆ ದಾಳಿಗಳು ನಡೆಯುತ್ತಿವೆ. ಇಂತಿರುವಾಗಲೇ, ಅಮೆರಿಕ ಮತ್ತು ಇಸ್ರೇಲ್‌ಗಳು ಇರಾನ್ ಮೇಲೆ ದಾಳಿ ನಡೆಸಿ ಅಲ್ಲಿನ ಸರ್ವೋಚ್ಚ ನಾಯಕ ಖಮೇನಿಯನ್ನು ಹತ್ಯೆ ಮಾಡಿದ ಬಳಿಕ ಕೊಲ್ಲಿಯಲ್ಲಿ ಸಮರ ಸ್ಫೋಟಗೊಂಡಿದೆ. ಇರಾನ್ ತನ್ನ ಪ್ರತೀಕಾರದ ಕಿಚ್ಚನ್ನು ಅಮೆರಿಕ, ಇಸ್ರೇಲ್ ಮಾತ್ರವಷ್ಟೇ ಅಲ್ಲದೆ, ಯುಎಇ ಮತ್ತು ಸೌದಿ ಅರೇಬಿಯಾದೆಡೆಗೂ ಹರಿಸಿದೆ. ಹಲವಾರು ದೇಶಗಳ ಮೇಲೆ ಕ್ಷಿಪಣಿ ದಾಳಿ ನಡೆಸಿದೆ.

ದುರಂತವೆಂದರೆ ಕೊಲ್ಲಿಯಲ್ಲಿ ವ್ಯಾಪಿಸಿರುವ ಈ ಸಮರ ಛಾಯೆ ಇಡೀ ವಿಶ್ವದಮೇಲೆಯೆಪ್ರತಿಕೂಲಪರಿಣಾಮಬೀರುವಸಾಧ್ಯತೆಯನ್ನುಹೊಂದಿದೆ. ಇಡೀ ಜಗತ್ತು ತೈಲಕ್ಕಾಗಿ ಕೊಲ್ಲಿ ರಾಷ್ಟ್ರಗಳನ್ನೆ ಅವಲಂಬಿಸಿರುವುದರಿಂದ ತೈಲ ಪೂರೈಕೆಯಲ್ಲಿ ಉಂಟಾಗಬಹುದಾದ ವ್ಯತ್ಯಯವು ಬಹುಆಯಾಮಗಳಲ್ಲಿ ಪರಿಣಾಮ ಬೀರಬಲ್ಲುದು. ಈ ಸಮರವು ಕನಿಷ್ಠ ನಾಲ್ಕು ವಾರಗಳ ತನಕವಾದರೂ ಮುಂದುವರಿಯಬಹುದು ಎಂದು ಸ್ವತಃ ಟ್ರಂಪ್‌ರವರೇ ಹೇಳಿರುವುದರಿಂದ ಇದು ದೀರ್ಘ ಕಾಲ ಮುಂದುವರಿಯುವ ಸಕಲ ಲಕ್ಷಣಗಳೂ ಕಾಣಿಸುತ್ತಿವೆ. ಯುದ್ಧ ಮುಂದುವರಿದಷ್ಟೂ ಅದರ ಹಾನಿಯ ಪ್ರಮಾಣ, ಅದರದುಷ್ಪರಿಣಾಮದಆಯಾಮವಿಸ್ತರಿಸಲಿದೆ. ಅದುಜಾಗತಿಕ ವ್ಯವಸ್ಥೆಗೆ ಧಕ್ಕೆ ತರುವ ಸಾಧ್ಯತೆಗಳೂ ಅಧಿಕ.

ದೇಶವೊಂದರಲ್ಲಿ ಆಡಳಿತ ಬದಲಾವಣೆ ಮಾಡುವುದು ಕಷ್ಟವಲ್ಲ. ಆದರೆ ಸೂಕ್ತ ಪರ್ಯಾಯ ವ್ಯವಸ್ಥೆ ಕಲ್ಪಿಸುವುದೇ ಮುಖ್ಯ ಸಮಸ್ಯೆ. ಇರಾನಿನಲ್ಲಿ ಮುಂದೆ ಜರಗಬಹುದಾದ ಬೆಳವಣಿಗೆಗಳು ಕೂಡಾ ಇದೇ ಭೀತಿಯನ್ನು ತೆರೆದಿಟ್ಟಿವೆ. ಕೊಲ್ಲಿಯಲ್ಲಿ ಅಂತಃಕಲಹಗಳು ಹೆಚ್ಚುವ ಆತಂಕವನ್ನೂ ಹುಟ್ಟಿಸಿವೆ. ಕೊಲ್ಲಿಯಲ್ಲಿ ನಡೆಯುತ್ತಿರುವುದು ಭಾರತದ ಯುದ್ಧವಲ್ಲವಾದರೂ, ಭಾರತದ ಮೇಲೂ ಈ ಸಮರವು ಪರಿಣಾಮ ಬೀರುವ ಸಾಧ್ಯತೆಗಳು ಇದ್ದೇ ಇವೆ. ಹಾಗಾಗಿ ಭಾರತವು ಸಂಭವನೀಯ ಪರಿಸ್ಥಿತಿಗಳನ್ನು ಎದುರಿಸಲು ಸೂಕ್ತ ಸಿದ್ಧತೆಗಳನ್ನು ಮಾಡಬೇಕಾದ ಅನಿವಾರ್ಯತೆಯಿದೆ. ಅದರಲ್ಲಿ ಆದ್ಯವಾದುದು ಅಲ್ಲಿರುವ ತನ್ನ ನಾಗರಿಕರ ಸುರಕ್ಷೆ ಕಾಯುವುದು ಹಾಗೂ ಯುದ್ಧದಿಂದ ನಮ್ಮ ಆರ್ಥಿಕ ಪರಿಸ್ಥಿತಿಗೆ ಪ್ರತಿಕೂಲವಾಗದಂತೆ ನೋಡಿಕೊಳ್ಳುವುದು.

ಸಹವಾಸದ ಗುಣದೋಷಗಳು

ಹೀಯತೇ ಹಿ ಮತಿಸ್ತಾತ ಹೀನೈಸ್ಸಹ ಸಮಾಗಮಾತ್ ।
ಸಮೈಶ್ಚ ಸಮತಾಮೇತಿ ವಿಶಿಷ್ಟೈಶ್ಚ ವಿಶಿಷ್ಟತಾಮ್ ॥ -ಹಿತೋಪದೇಶ

ಹೀನರ ಸಹವಾಸದಿಂದ ಬುದ್ಧಿಯು ಕೆಟ್ಟು ಹೋಗುತ್ತದೆ. ಸಮಾನರ ಒಡನಾಟದಿಂದ ಇದ್ದದ್ದು ಇದ್ದ ಹಾಗೆ ಇರುತ್ತದೆ. ಶ್ರೇಷ್ಠರ ಸಹವಾಸದಿಂದ ವೈಶಿಷ್ಟ್ಯಪೂರ್ಣವಾಗುತ್ತದೆ - ಎಂಬುದು ಶ್ಲೋಕಾರ್ಥ.

ಮನುಷ್ಯರಿಗೆ ಒಳ್ಳೆಯದಾಗುವುದು, ಕೆಟ್ಟದ್ದಾಗುವುದು ಇವೆಲ್ಲವೂ ಸಹವಾಸದಿಂದಲೇ. ಸಹವಾಸದಲ್ಲಿ ಗುಣವೂ ಇದೆ, ದೋಷವೂ ಇದೆ. ಗುಣದೋಷಗಳಿಲ್ಲದವರು ಯಾರೂ ಇಲ್ಲ. ತಾನು ಪಡೆದ ಸಂಸ್ಕಾರದ ಫಲವಾಗಿ ಒಳ್ಳೆಯವನಾಗುತ್ತಾನೆ, ಕೆಟ್ಟವನಾಗುತ್ತಾನೆ.

ಹಾಗಾಗಿ ಸಹವಾಸ ಮಾಡುವಾಗ ತುಂಬಾ ಎಚ್ಚರ ವಹಿಸಬೇಕು. ನಿತ್ಯವೂ ಕೆಲವರ ದೃಷ್ಟಾಂತಗಳು ಸಿಗುತ್ತವೆ. ಉತ್ತಮನು ದುಷ್ಟರ ಸಹವಾಸದಿಂದ ದುಷ್ಟನಾಗುತ್ತಾನೆ.



ಕೆಲವೊಮ್ಮೆ ದುಷ್ಟನು ಒಳ್ಳೆಯವರ ಸಹವಾಸದಿಂದ ಉತ್ತಮ ವ್ಯಕ್ತಿಯಾಗಿ ಬದಲಾಗುತ್ತಾನೆ. ಆದ್ದರಿಂದಲೇ ಸನಾತನ ಪರಂಪರೆ ಎಂಥಹ ವ್ಯಕ್ತಿಗಳ ಸಹವಾಸ ಮಾಡಬೇಕು ಎನ್ನುತ್ತದೆ. ಸಹವಾಸದ ಸಾಧಕ ಬಾಧಕಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ.

ಉತ್ತಮ ನಾಳೆಗಳನ್ನು ಕಾಣಬೇಕೆಂಬ ಹಂಬಲ ಉಳ್ಳವನು ಸಹವಾಸದತ್ತ ವಿಶೇಷ ಗಮನಹರಿಸಬೇಕು. ಯಾವ ಕಾರಣಕ್ಕೂ ಹೀನರ ಒಡನಾಟ ಸಲ್ಲದು. ಹೀನರು ಎಂದ ತಕ್ಷಣ ಅಲ್ಪರು, ಸಹವಾಸಕ್ಕೆ ಅಯೋಗ್ಯರು... ಇತ್ಯಾದಿ ಅರ್ಥವಾಗುತ್ತದೆ. ಹೀನರೆಂದೂ ಉನ್ನತ ಸ್ತರದ ಯೋಚನೆ ಮಾಡುವುದಿಲ್ಲ, ಲೋಕಕಲ್ಯಾಣ ಕಾಯಕದಲ್ಲಿ ತೊಡಗಿಕೊಳ್ಳುವುದಿಲ್ಲ, ಸ್ವಾರ್ಥವರ್ತುಲದಿಂದ ಹೊರಬಂದು ಯೋಚಿಸುವುದಿಲ್ಲ, ಯಾವಾಗಲೂ ಕೀಳುಮಟ್ಟದ ಅಭಿರುಚಿಯಲ್ಲೇ ಸಂತೋಷ ಪಡುತ್ತಾರೆ. ಇಂಥವರ ಸಹವಾಸ ಮಾಡಿದರೆ ನಾವು ಸಣ್ಣವರಾಗುತ್ತೇವೆ. ಬುದ್ಧಿಯು ಕೆಟ್ಟುಹೋಗಿ ಕುಕೃತ್ಯದಲ್ಲೇ ತೊಡಗಲು ಪ್ರೇರಣೆ ಸಿಗುತ್ತದೆ. ಉತ್ತಮನೂ ಕೂಡ ನೀಚರ ಸಹವಾಸದಲ್ಲಿ ಬಿದ್ದು ಅಗೌರವಕ್ಕೆ ಪಾತ್ರನಾಗುತ್ತಾನೆ. ಆದ್ದರಿಂದ ಎಂದಿಗೂ ನೀಚರ ಸಂಪರ್ಕ ಒಳಿತಿಗೆ ಕಾರಣವಾಗಲಾರದು.

ಸಮಾನರ ಒಡನಾಟವೂ ಪ್ರಯೋಜನಕ್ಕೆ ಬಾರದು. ಸಮಾನರ ಸಹವಾಸದಿಂದ ಹೆಚ್ಚಿನದೇನನ್ನೂ ಸಾಧಿಸಲಾಗುವುದಿಲ್ಲ. ಮೇಲಕ್ಕೆ ಏರಲೂ ಸಾಧ್ಯವಾಗುವುದಿಲ್ಲ. ಇದ್ದಲ್ಲೇ ಇರಬೇಕಾಗುತ್ತದೆ. ಮನುಷ್ಯನು ದಿನದಿಂದ ದಿನಕ್ಕೆ, ವರ್ಷದಿಂದ ವರ್ಷಕ್ಕೆ ಊರ್ಧ್ವಮುಖಿವಾಗಿ ಬೆಳೆಯಬೇಕು, ಬೆಳಗಬೇಕು. ಆಗಮಾತ್ರ ಬದುಕಿದ್ದಕ್ಕೆ ಸಾರ್ಥಕತೆ ಬರುತ್ತದೆ. ಕೆಳಮಟ್ಟಕ್ಕಿಳಿಯಲಿಲ್ಲ ಎಂಬುದಕ್ಕಿಂತಲೂ ಮೇಲಿನಸ್ತರಕ್ಕೆ ಏರಿಲ್ಲವಲ್ಲ, ಇದ್ದಲ್ಲೇ ಇದ್ದೇನಲ್ಲ ಎಂದು ಸಮಾಧಾನ ಪಟ್ಟುಕೊಳ್ಳುವುದರಿಂದ ಏನು ಬಂತು? ಯಾವಾಗಲೂ ಊರ್ಧ್ವಮುಖಿಯಾಗಬೇಕು. ಸಾಧನೆಯ ಪಥದಲ್ಲಿ ಹಂತಹಂತವಾಗಿ ಮುಂದುವರಿಯಬೇಕು. ಅದನ್ನು ಬಿಟ್ಟು ಇದ್ದಲ್ಲೇ ಇದ್ದರೆ ಪ್ರಯೋಜನವಿಲ್ಲ. ನಮಗಿಂತಲೂ ಮೇಲಿರುವವರ ಸಹವಾಸ ಬೆಳೆಸಿಕೊಂಡರೇನೇ ಸಾರ್ಥಕ್ಯ.

ಯಾವಾಗಲೂ ಶ್ರೇಷ್ಠರ ಸಹವಾಸಕ್ಕೆ ಹಾತೊರೆಯಬೇಕು. ಶ್ರೇಷ್ಠರಾದವರಿಂದ ಕಲಿಯುವುದು ಸಾಕಷ್ಟಿರುತ್ತದೆ. ಅಳವಡಿಸಿಕೊಳ್ಳುವ ಅಂಶವೂ ಬಹಳಷ್ಟಿರುತ್ತದೆ. ಉತ್ತಮರ ಸಹವಾಸವೇ ವೈಶಿಷ್ಟ್ಯಪೂರ್ಣ. ನಮಗಿಂತಲೂ ಶ್ರೇಷ್ಠರಾದವರನ್ನು ಹುಡುಕಿಕೊಂಡು ಅವರ ಸಹವಾಸ ಮಾಡಬೇಕು. ಅವರ ಮಾರ್ಗದರ್ಶನ ಪಡೆದು ಬದುಕನ್ನು ಮುಂದುವರಿಸಬೇಕು. ಆಗ ಅಪೂರ್ವ ನೆಮ್ಮದಿ ಹಾಗೂ ಆತ್ಮಸಂತೋಷ ಸಿಗುತ್ತದೆ.

ಗೋಕೃಪಾಮೃತ ಭೂಮಿಗೆ ಅಮೃತ



ಒಂದು ಸಮೀಕ್ಷೆಯ ಪ್ರಕಾರ ಭಾರತದಲ್ಲಿ ಪ್ರತಿವರ್ಷ ಸುಮಾರು ಮೂರು ಲಕ್ಷ ಕೋಟಿ ರೂಪಾಯಿಗಿಂತ ಹೆಚ್ಚು ಹಣವನ್ನು ಯೂರಿಯಾಗಾಗಿ ಖರ್ಚು ಮಾಡಲಾಗುತ್ತಿದೆ. ಇದರೊಂದಿಗೆ ಹಲವು ಲಕ್ಷ ಕೋಟಿ ರೂಪಾಯಿಗಳನ್ನು ಕೀಟನಾಶಕಗಳಿಗಾಗಿ ವ್ಯಯ ಮಾಡಲಾಗುತ್ತಿದೆ. ಹಾಗೆಯೇ ದೇಶದಲ್ಲಿ ಶೇಕಡಾ 80ಕ್ಕಿಂತ ಹೆಚ್ಚು ರೈತರು ಕೇವಲ ಎರಡು ಎಕರೆಗಿಂತ ಕಡಿಮೆ ವಿಸ್ತೀರ್ಣವಿರುವ ಭೂಮಿಯಲ್ಲಿ ಇಂದಿಗೂ ಕೃಷಿಯನ್ನು ಮಾಡುತ್ತಿದ್ದಾರೆ. ಹೀಗೆ ಎರಡು ಎಕರೆಯಲ್ಲಿ ಕೃಷಿ ಮಾಡುತ್ತಿರುವ ಎಲ್ಲಾ ರೈತರಿಗೆ ಐದು ಎಕರೆಯಲ್ಲಿ ಸಿಗುವಷ್ಟು ಫಸಲು ದೊರಕಿಸಿಕೊಡಬೇಕೆಂಬ ಛಲದಲ್ಲಿ ಹುಟ್ಟಿದ್ದೇ ಗೋಕೃಪಾಮೃತ ಎಂಬ ಬೆಲೆ ಕಟ್ಟಲಾಗದ ದ್ರಾವಣ.

ಈ ದ್ರಾವಣದ ಕರ್ತೃ ಗುಜರಾತಿನ ಗಾಂಧಿನಗರದಲ್ಲಿರುವ ಬನ್ಸಿ ಗೀರ್ ಗೋಶಾಲೆಯ ಸ್ಥಾಪಕರಾದ ಗೋಪಾಲ್ ಸುತಾರಿಯಾರವರು. ಯಾವುದು ರೈತರಿಗೆ ಇಂದು ಹೊರೆಯಂತೆ ಕಾಣುತ್ತಿದೆಯೋ ಅದನ್ನೇ ಕೇಂದ್ರವಾಗಿಟ್ಟುಕೊಂಡು ರೈತರು ಸ್ವಾಭಿಮಾನದಿಂದ ಕೃಷಿಯನ್ನು ಮಾಡುತ್ತಾ ಹೊಸ ಭಾರತದ ನಿರ್ಮಾಣವನ್ನು ಮಾಡಬೇಕು ಎಂಬ ಉದ್ದೇಶವನ್ನಿಟ್ಟುಕೊಂಡೇ ಈ ಅದ್ಭುತ ದ್ರಾವಣವನ್ನು ಗೋಪಾಲ್ ಸುತಾರಿಯರವರು ಹುಟ್ಟುಹಾಕಿದ್ದಾರೆ. ಅವರೇ ಹೇಳುವಂತೆ ಪಂಚಗವ್ಯದಲ್ಲಿರುವ ಔಷಧೀಯ ತತ್ವಗಳಿಂದಲೇ ಈ ಗೋಕೃಪಾಮೃತದ ಸಂಶೋಧನೆಯಾಗಿದೆಯಂತೆ. ಇವರು ಈ ದ್ರಾವಣವನ್ನು ಹುಟ್ಟುಹಾಕುವ ಮುಖ್ಯ ಉದ್ದೇಶ ದೇಶಿ ಗೋತಳಿಗಳ ರಕ್ಷಣೆ ಮತ್ತು ಅದರ ಮಹತ್ವವನ್ನು ಜಗಜ್ಜಾಹೀರುಪಡಿಸುವುದಾಗಿತ್ತು. ದೇಶಿ ಗೋವುಗಳು ಹಾಲು ಕೊಡದೇ ಇದ್ದರೂ ಸಹ ಅದರ ಗೋಮೂತ್ರ ಮತ್ತು ಗೋಮಯ ಹೊಲಗಳಲ್ಲಿ ಬಂಗಾರವನ್ನು ಬೆಳೆಯುತ್ತದೆ ಎಂಬುದನ್ನು ದೇಶದ ರೈತರಿಗೆ ತೋರಿಸಿಕೊಡಬೇಕಾಗಿತ್ತು. ಯೂರಿಯಾ, ಡಿಎಪಿ ಮತ್ತು ಕೀಟನಾಶಕಗಳಿಲ್ಲದೆ ಕೇವಲ ದೇಶಿ ಗೋವಿನ ಉತ್ಪನ್ನಗಳಿಂದಲೇ ಉತ್ತಮ ಫಸಲನ್ನು ಪಡೆಯಬಹುದು ಎಂಬುದನ್ನು ಸಾಬೀತುಪಡಿಸಬೇಕಾಗಿತ್ತು.

ಭೂಲೋಕದ ಈ ಅಮೃತ ಹೊರಬಂದಿದ್ದು ಇವರ ಸತತ ಏಳು ವರ್ಷಗಳ ನಿರಂತರ ಪ್ರಯೋಗಗಳಿಂದ. 2019ರ ಜೂನ್ ನಂತರವೇ ಇದು ಸಾರ್ವಜನಿಕರಿಗೆ ಮತ್ತು ರೈತರಿಗೆ ಲಭಿಸುವಂತಾಯಿತು. ಪ್ರಾರಂಭದಲ್ಲಿ ಸುಮಾರು 450ಕ್ಕೂ ಹೆಚ್ಚು ದೇಶಿ ಗೋವುಗಳ ಗೋಮೂತ್ರದ ಮೇಲೆ ಇದಕ್ಕಾಗಿ ಸತತ ಸಂಶೋಧನೆಯನ್ನು ಮಾಡಲಾಗಿದೆ. ಹೀಗೆ ಗೋಮೂತ್ರವನ್ನು ನಾನಾ ಪರೀಕ್ಷೆಗಳಿಗೆ ಒಳಪಡಿಸಿದಾಗ ಅದರಲ್ಲಿ ಸುಮಾರು 5100 ಪ್ರಕಾರದ ಪೋಷಕಾಂಶಗಳು ಇದ್ದದ್ದು ಇವರಿಗೆ ಕಂಡು ಬಂದಿದೆ. ಇದರಿಂದ ತಿಳಿದಿದ್ದೇನೆಂದರೆ ಇಂದಿನವರೆಗೆ ಪ್ರಪಂಚದಲ್ಲಿ ಅಲೋಪತಿಯಲ್ಲಿ ಎಷ್ಟು ಪೋಷಕ ತತ್ವಗಳು ಆರೋಗ್ಯಕ್ಕೆ ಅವಶ್ಯಕವೆಂದೂ ಹೇಳಲಾಗಿದೆಯೋ ಅವೆಲ್ಲವೂ ಗೋಮೂತ್ರದಲ್ಲಿ ಪ್ರಾಕೃತಿಕ ರೂಪದಲ್ಲಿ ಇವೆ ಎಂಬುದು. ನಂತರ ಸ್ವರ್ಣಕ್ಷಾರವನ್ನು ಹೊಂದಿರುವ ಕೆಲ ಅಪರೂಪ ಗೋವುಗಳ ಗೋಮೂತ್ರ, ಗೋಮಯ ಮತ್ತು ಪಂಚಗವ್ಯವನ್ನು ಪ್ರತ್ಯೇಕವಾಗಿ ಹೂವಿನ ಕುಂಡಗಳಲ್ಲಿ ಹಾಕಿ ಪರೀಕ್ಷೆಗೆ ಒಳಪಡಿಸಿದಾಗ ಅದರಲ್ಲಿ ಎರೆಹುಳುಗಳ ಪ್ರಮಾಣ ಹೆಚ್ಚಾಗತೊಡಗಿದ್ದು ಕಂಡುಬಂದಿದೆ. ಇದರೊಂದಿಗೆ ಗಿಡಗಳ ಬಣ್ಣ ಹಾಗೂ ರೂಪವು ಸಹ ಬದಲಾಗಿದೆ. ಅವುಗಳ ಈ ಬೆಳವಣಿಗೆಗೆ ಯಾವುದೇ ರೀತಿಯ ಯೂರಿಯಾ, ಡಿಎಪಿ ಅಥವಾ ಕೀಟನಾಶಕದ ಅವಶ್ಯಕತೆ ಕಂಡುಬರಲಿಲ್ಲ. ಇದರಿಂದ ಉತ್ತೇಜನಗೊಂಡ ಇವರು ಇದರ ಮೇಲೆ ಇನ್ನಷ್ಟು ಪ್ರಯೋಗಗಳನ್ನು ಮಾಡಲು ಪ್ರಾರಂಭಿಸಿದರು.

ಮುಂದುವರೆದ ಸತತ ಪ್ರಯೋಗಗಳಿಂದ ಇವರು ಕಂಡುಕೊಂಡಿದ್ದೇನೆಂದರೆ, ದೇಶಿ ಗೋವಿನಿಂದ ಸಿದ್ಧವಾದ ಮೊಸರಿನಲ್ಲಿ ಬೆಳೆಗೆ ಸಹಾಯ ಮಾಡುವ ಒಂದಷ್ಟು ಪ್ರೋಬಯೋಟಿಕ್ ಬ್ಯಾಕ್ಟೀರಿಯಾಗಳು ಅಂದರೆ ಮಿತ್ರ ಜೀವಾಣುಗಳು ಇರುತ್ತವೆ ಎಂಬುದು. ಅಚ್ಚರಿ ಎಂದರೆ ಇದೇ ಜೀವಾಣುಗಳು ನಮ್ಮ ಶರೀರದಲ್ಲಿ ಜೀರ್ಣಕ್ರಿಯೆಯ ಕಾರ್ಯವನ್ನು ಮಾಡುತ್ತವೆ. ಒಂದು ಗ್ರಾಂ ಗೋಮಯದಲ್ಲಿ ನಮ್ಮ ಶರೀರಕ್ಕೆ ಉಪಯುಕ್ತವಾದ ಸುಮಾರು ನೂರು ಕೋಟಿಯಿಂದ ನಾಲ್ಕು ಸಾವಿರ ಕೋಟಿಯವರೆಗೂ ಜೀವಾಣುಗಳು ಇರುತ್ತವೆ. ಇದರೊಂದಿಗೆ ಕೆಲವು ರೋಗಜನಕ ಜೀವಾಣುಗಳು ಸಹ ಇದ್ದು, ಇವು ನಮ್ಮ ದೇಹದಲ್ಲಿ ರೋಗ ಪ್ರತಿರೋಧಕ ಕ್ಷಮತೆಯನ್ನು ಹೆಚ್ಚಿಸುವಲ್ಲಿ ಸಹಾಯ ಮಾಡುತ್ತವೆ. ಹೀಗೆ ನಮ್ಮ ದೇಹಕ್ಕೆ ಪೂರಕವಾಗಿರುವ ಮಿತ್ರ ಜೀವಾಣುಗಳೊಂದಿಗೆ ಪಂಚಗವ್ಯವನ್ನು ಅಥವಾ ದೇಶಿ ಗೋವಿನ ಉತ್ಪನ್ನಗಳನ್ನು ಮಿಶ್ರಣ ಮಾಡಿದಾಗ ಅದು ತನ್ನ ರೂಪವನ್ನು ಬದಲಿಸಿದ್ದು ಇವರಿಗೆ ಕಂಡು ಬಂತು. ಆನಂತರ ನಡೆದ ಕೆಲ ಫಲಪ್ರದ ಪ್ರಯೋಗಗಳಿಂದ ಹುಟ್ಟಿದ್ದೇ ಗೋಕೃಪಾಮೃತ.



ಗೋಕೃಪಾಮೃತವನ್ನು ಸರಳ ಸ್ವರೂಪದಲ್ಲಿ ರೈತರಿಗೆ ತಲುಪಿಸಬೇಕು ಮತ್ತು ರೈತರು ಇದರ ಉಪಯೋಗವನ್ನು ಮಾಡಬೇಕು ಎಂಬುದು ಗೋಪಾಲ್ ಸುತಾರಿಯರವರ ಉದ್ದೇಶವಾಗಿತ್ತು. ಗೋಮಾತೆಯ ಕೃಪೆಯಿಂದಲೇ ಈ ದ್ರಾವಣ ಪ್ರಾಪ್ತವಾಗಿರುವುದರಿಂದ ಇದಕ್ಕೆ ಗೋಕೃಪಾಮೃತ ಎಂಬ ಹೆಸರನ್ನೇ ಇವರು ಇಟ್ಟಿದ್ದು ವಿಶೇಷ. ಈ ದ್ರಾವಣವನ್ನು ಸಮಾಜದ ಮುಂದಿಡಬೇಕಾದರೆ ಎಲ್ಲಾ ರೀತಿಯ ವೈಜ್ಞಾನಿಕ ಸಂಶೋಧನೆಗಳಿಗೆ ಇದನ್ನು ಒಳಪಡಿಸಲಾಗಿತ್ತು. ಆಗ ಇದರಲ್ಲಿ ಸುಮಾರು ಎಂಟಕ್ಕೂ ಹೆಚ್ಚು ಪ್ರಕಾರದ ಬ್ಯಾಕ್ಟೀರಿಯಾಗಳು ಪ್ರಾಕೃತಿಕವಾಗಿ ಗಾಳಿಯಿಂದ ನೈಟ್ರೋಜನ್‌ನ್ನು ಹೀರಿಕೊಂಡು ಗಿಡದ ಬೇರುಗಳಿಗೆ ಒದಗಿಸುವುದು ಕಂಡುಬಂದಿದೆ. ಐದರಿಂದ ಆರಕ್ಕೂ ಹೆಚ್ಚು ಪ್ರಕಾರದ ಬ್ಯಾಕ್ಟೀರಿಯಾಗಳು ರೋಗನಿಯಂತ್ರಕ ಮತ್ತು ಕೀಟನಿಯಂತ್ರಕವಾಗಿ ಕೆಲಸ ಮಾಡುವುದು ಸ್ಪಷ್ಟವಾಗಿದೆ. ಈ ಆರು ಪ್ರಕಾರದ ಬ್ಯಾಕ್ಟೀರಿಯಾಗಳನ್ನು ವೈಜ್ಞಾನಿಕ ಭಾಷೆಯಲ್ಲಿ ಮಿತ್ರ ಜೀವಾಣುಗಳೆಂದು ಕರೆಯಲಾಗುತ್ತದೆ. ಇವು ಗೋಮಯ, ಗೋಮೂತ್ರ ಮತ್ತು ಭೂಮಿಯಲ್ಲಿರುವ ಧಾತು ಮತ್ತು ಖನಿಜ ಪದಾರ್ಥಗಳನ್ನು ಬೇರುಗಳಿಗೆ ಒದಗಿಸುವ ಕಾರ್ಯವನ್ನು ಮಾಡುತ್ತವೆ. ಇದರಲ್ಲಿ ಸಲ್ಫರ್ ಒದಗಿಸುವ ಹಲವಾರು ಬ್ಯಾಕ್ಟೀರಿಯಾಗಳಿದ್ದು, ಬೆಳೆಗಳಿಗೆ ಬಹುಪಯೋಗಿಯಾಗಿರುವುದು ದೃಢಪಟ್ಟಿದೆ. ಈ ಬ್ಯಾಕ್ಟೀರಿಯಾಗಳು ಗೊಬ್ಬರವನ್ನು ಕಾಂಪೋಸ್ಟ್ ಆಗಿ ಪರಿವರ್ತಿಸುವ ಕೆಲಸವನ್ನು ಮಾಡುತ್ತವೆ. ಇದರೊಂದಿಗೆ ರೋಗವನ್ನು ಹರಡುವ ಕೀಟಾಣುಗಳನ್ನು ನಿಯಂತ್ರಣ ಮಾಡುವ ಬ್ಯಾಕ್ಟೀರಿಯಾಗಳು ಇದರಲ್ಲಿರುವುದು ಸಾಬೀತಾಗಿದೆ.

ಅಷ್ಟೇ ಅಲ್ಲದೆ ಇದರಲ್ಲಿ ಸುಮಾರು 12 ಪ್ರಕಾರದ ಬ್ಯಾಕ್ಟೀರಿಯಾಗಳು ಭೂಮಿಯಿಂದ ವಿಷಯುಕ್ತ ಪದಾರ್ಥಗಳನ್ನು ನಷ್ಟ ಮಾಡುವ ಕೆಲಸವನ್ನು ಮಾಡುವುದು ಅಚ್ಚರಿ ಮೂಡಿಸಿದೆ.

ಒಂದು ಲೀಟರ್ ಈ ಗೋಕೃಪಾಮೃತವನ್ನು 200 ಲೀಟರ್ ನೀರಿನಲ್ಲಿ ಬೆರೆಸಿದಾಗ ಈ ಮಿಶ್ರಣದ ಒಂದು ಮಿಲಿ ಲೀಟರ್ ನೀರಿನಲ್ಲಿ ಜೀವಾಣುಗಳ ಸಂಖ್ಯೆ ಹೆಚ್ಚು ಕಡಿಮೆ ಹದಿಮೂರು ಸಾವಿರದಷ್ಟಾಗಿರುವುದು ಕಂಡುಬಂದಿದೆ. ಆನಂತರ ಇದು ಒಂದು ವಾರದಲ್ಲಿ ರಾಸಾಯನಿಕ ಮುಕ್ತ ಬೆಲ್ಲ ಮತ್ತು ದೇಶಿ ಗೋವಿನ ಮಜ್ಜಿಗೆಯ ಉಪಯೋಗದಿಂದ ಹದಿನೆಂಟು ಲಕ್ಷಕ್ಕಿಂತ ಹೆಚ್ಚಾದದ್ದು ಸಂಶೋಧನಾ ವರದಿಯಿಂದ ಸ್ಪಷ್ಟವಾಗಿದೆ. ವಿಶೇಷವೆಂದರೆ ಇದರಲ್ಲಿ ಬೆಳೆಗೆ ಅತ್ಯಂತ ಪೂರಕವಾದ ಜೀವಾಣುಗಳು ಅತಿ ವೇಗವಾಗಿ ವೃದ್ಧಿಹೊಂದಿದ್ದು ದೃಢಪಟ್ಟಿದೆ. ಮುಖ್ಯವಾಗಿ ರೋಗಜನಕ ಜೀವಾಣುಗಳನ್ನು ಇವು ಬೆಳೆಯಲು ಬಿಡದೇ ಇರುವುದು ಸಾಬೀತಾಗಿದೆ. ಹಾಗೆಯೇ ಇದರಲ್ಲಿ ಸಾಮಾನ್ಯವಾಗಿ ಮೂರು ಪ್ರಕಾರದ ಫಾಸ್ಪರಸ್‌ನ ಜೀವಾಣುಗಳು ಕಂಡುಬಂದಿದ್ದು, ಅದರಲ್ಲಿ ಆರರಿಂದ ಏಳು ಪ್ರಕಾರದ ಜೀವಾಣುಗಳು ಕೀಟನಾಶಕದ ಕೆಲಸವನ್ನು ಮಾಡುವುದು ಸಾಬೀತಾಗಿದೆ.

ಈ ಗೋಕೃಪಾಮೃತದ ಬಳಕೆ ಇತ್ತೀಚಿನ ದಿನಗಳಲ್ಲಿ ಅವಶ್ಯಕವಿದೆಯೇ ಎಂಬ ಪ್ರಶ್ನೆ ಸಾಮಾನ್ಯವಾಗಿ ಉದ್ಭವಿಸುತ್ತದೆ. ನಿಮಗೊಂದು ವಿಚಾರ ತಿಳಿದಿರಲಿ. ಸಂಪೂರ್ಣ ಭಾರತವಿಂದು ಅತಿ ಹೆಚ್ಚಿನ ಪ್ರಮಾಣದಲ್ಲಿ ರಾಸಾಯನಿಕ ಮತ್ತು ರಾಸಾಯನಿಕವನ್ನು ಬಳಸಿ ಬೆಳೆದ ಆಹಾರವನ್ನು ಸೇವಿಸುತ್ತಿದೆ. ಇದರಿಂದ ಕ್ಯಾನ್ಸರ್ ಸೇರಿದಂತೆ ನಾನಾ ಭೀಕರ ರೋಗಗಳು ದೇಶಾದ್ಯಂತ ತಾಂಡವವಾಡುತ್ತಿವೆ. ಮತ್ತೊಂದೆಡೆ ದೇಶದಲ್ಲಿ ಕಳೆದ 20 ವರ್ಷಗಳಲ್ಲಿ ಸುಮಾರು 3 ಲಕ್ಷ ರೈತರು ನಾನಾ ಕಾರಣಗಳಿಂದಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇನ್ನು ಬೆಲೆ ಕಟ್ಟಲಾಗದ ದೇಶಿ ಗೋವಿನ ಹಲವು ತಳಿಗಳು, ದೇಶಿ ಬೀಜಗಳು ಇನ್ನಿಲ್ಲವಾಗಿವೆ. ದಿನದಿಂದ ದಿನಕ್ಕೆ ಅಂತರ್ಜಲ ಮತ್ತು ಫಲವತ್ತಾದ ಮಣ್ಣು ಕಣ್ಮರೆಯಾಗುತ್ತಿದೆ. ಕ್ರಮೇಣ ಗ್ರಾಮಗಳು ಖಾಲಿಯಾಗುತ್ತಿದ್ದು, ಕೇವಲ ವಯೋವೃದ್ಧರಷ್ಟೇ ಕಂಡು ಬರುವಂತಾಗಿದೆ. ಯುವಜನತೆ ನಗರಗಳ ಕಡೆಗೆ ಗುಳೆ ಹೊರಡುವುದು ಸಾಮಾನ್ಯವಾಗಿದೆ. ಇದರಿಂದ ಸಹಜವಾಗಿ ನಗರಗಳು ಕಿಕ್ಕಿರಿದು ತುಂಬುತ್ತಿವೆ. ಒಂದು ವಾಕ್ಯದಲ್ಲಿ ಹೇಳಬೇಕೆಂದರೆ ಕಾಗದದ ಹಣವನ್ನು ಬಳಸಿಕೊಂಡು ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಪ್ರಕೃತಿಯನ್ನು ಮನುಷ್ಯ ಇನ್ನಿಲ್ಲವಾಗಿಸುತ್ತಿದ್ದಾನೆ. ನಿಜವಾದ ಹಣವೆಂದರೆ ಭೂಮಿ ಮತ್ತು ಗೋವುಗಳು ಎಂಬುದನ್ನು ಶಾಶ್ವತವಾಗಿ ಮನುಷ್ಯ ಮರೆಯುತ್ತಿದ್ದಾನೆ. ಮುಖ್ಯವಾಗಿ ಆಧುನಿಕ ಆರ್ಥಿಕತೆಯಿಂದ ಉಂಟಾದ ಒತ್ತಡದಿಂದಾಗಿ ಹೆಚ್ಚಿನ ಯುವಕರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಅತಿಗಂಭೀರ ವಿಚಾರವಾಗಿದೆ. ಹೀಗಾಗಿ ಗೋವು ಮತ್ತು ರೈತನ ಸಹಭಾಗಿತ್ವದೊಂದಿಗೆ ಪ್ರತಿಯೊಂದು ಗ್ರಾಮದ ವಿಕಸನ ತುರ್ತಾಗಿ ಆಗಬೇಕಿದೆ. ಗೋವುಗಳು ರೈತನೊಂದಿಗೆ ಮತ್ತು ರೈತ ತನ್ನ ಗ್ರಾಮದಲ್ಲೇ ಇದ್ದು ಸ್ವಾವಲಂಬಿ ಗ್ರಾಮದ ಸ್ಥಾಪನೆಗೆ ಸಹಕರಿಸಬೇಕಾಗಿದೆ. ರೈತವರ್ಗ ಪಟ್ಟಣಗಳಿಗೆ ಗುಳೆ ಹೋಗುವುದು ನಿಂತು ಗ್ರಾಮಗಳು ಅಭಿವೃದ್ಧಿಯಾಗಬೇಕಿದೆ. ಕೃಷಿ ಶೂನ್ಯ ಬಂಡವಾಳವಾಗಿ ಹೆಚ್ಚಿನ ಲಾಭ ತರುವ ಒಂದು ಪ್ರಮುಖ ಉದ್ಯಮವಾಗಬೇಕಿದೆ. ಇದಕ್ಕೆಲ್ಲಾ ಸೂಕ್ತ ಪರಿಹಾರವಾಗಿ ಗೋಕೃಪಾಮೃತ ಕಂಡುಬಂದಿದೆ.

ಅಸ್ಥಿರ ಮಧ್ಯಪ್ರಾಚ್ಯ ಮತ್ತು ಬದಲಾಗುತ್ತಿರುವ ಭೂರಾಜಕೀಯ

ಓಂಕಾರ್ ಯಾದವ್. ಎನ್



ಹಲವು ದಶಕಗಳ ಮಧ್ಯಪ್ರಾಚ್ಯದ ಭೌಗೋಳಿಕ ರಾಜಕೀಯವನ್ನು (Geopolitics) ಅತ್ಯಂತ ಹತ್ತಿರದಿಂದ ಗಮನಿಸುತ್ತಿರುವ ಯಾರಿಗಾದರೂ, ಇತ್ತೀಚಿನ ವಿದ್ಯಮಾನಗಳು ಕೇವಲ ಒಂದು ಪ್ರಾದೇಶಿಕ ಸಂಘರ್ಷ/ ಆಂತರಿಕ ಕಲಹವಾಗಿ ಕಾಣಲು ಸಾಧ್ಯವಿಲ್ಲ. ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ, ಅವರ ಆಪ್ತ ವಲಯ ಮತ್ತು ರಕ್ಷಣಾ ಪಡೆಗಳ ಉನ್ನತ ಕಮಾಂಡರ್‌ಗಳ ಸರಣಿ ಹತ್ಯೆಯು ಜಾಗತಿಕ ಅಧಿಕಾರ ಸಮತೋಲನವನ್ನೇ ಬುಡಮೇಲು ಮಾಡಿದೆ. ಇದು ಆಧುನಿಕ ಯುದ್ಧತಂತ್ರದ ಇತಿಹಾಸದಲ್ಲಿ ಒಂದು ನಿರ್ಣಾಯಕ ಘಟ್ಟ ಮಾತ್ರವಲ್ಲ, ಇಡೀ ಮಧ್ಯಪ್ರಾಚ್ಯದ ಭವಿಷ್ಯವನ್ನು ಮರುನಿರ್ದೇಶಿಸುವ ಕ್ಷಣವಾಗಿದೆ.

'ಡೆಕಾಪಿಟೇಷನ್ ಸ್ಟ್ರಾಟಜಿ' ಮತ್ತು ಇರಾನ್‌ನ ಅನಾಥ ಸ್ಥಿತಿ

ಅಮೆರಿಕ ಮತ್ತು ಇಸ್ರೇಲ್ ಪಡೆಗಳು ಅತ್ಯಂತ ನಿಖರವಾಗಿ ನಡೆಸಿದ ಈ ಕಾರ್ಯಾಚರಣೆಯ ಹಿಂದೆ 'ಡೆಕಾಪಿಟೇಷನ್ ಸ್ಟ್ರಾಟಜಿ' (Decapitation Strategy) ಎಂಬ ಕ್ರೂರ ಹಾಗೂ ಪರಿಣಾಮಕಾರಿ ಯುದ್ಧತಂತ್ರ ಅಡಗಿದೆ. ಒಂದು ವ್ಯವಸ್ಥೆಯ ತಲೆಯನ್ನು (ನಾಯಕತ್ವ) ಕತ್ತರಿಸುವ ಮೂಲಕ ಇಡೀ ಆಡಳಿತ ಯಂತ್ರವನ್ನು ಅಸ್ಥಿರಗೊಳಿಸುವುದು ಇದರ ಉದ್ದೇಶ. ಅಮೆರಿಕ ಮತ್ತು ಇಸ್ರೇಲ್ ದೃಷ್ಟಿಯಲ್ಲಿ ಅದು ಜಾಗತಿಕ ಶಾಂತಿಗಾಗಿ, ಇರಾನಿನ ದೃಷ್ಟಿಯಲ್ಲಿ ಇಸ್ಲಾಂ ವಿರೋಧಿ ಮತ್ತು ಹಸ್ತಕ್ಷೇಪ! ಯಾವುದೇ ಯುದ್ಧದ ಸಂದರ್ಭದಲ್ಲಿ ವ್ಯಾಖ್ಯಾನಗಳು ತಮ್ಮ ಮೂಗಿನ ನೇರಕ್ಕೆ ಮಂಡಿಸಲ್ಪಡುತ್ತವೆಯಾದ್ದರಿಂದ ಕಾರಣಗಳ ವಿಮರ್ಶೆ ವಿವೇಚನೆಗೆ ಬಿಟ್ಟ ಸಂಗತಿಯೆಂದು ಮಾತ್ರ ಹೇಳಬಹುದು. ಆದರೆ ಯುದ್ಧದ ಪರಿಣಾಮಗಳು ಮಾತ್ರ ಎಲ್ಲರ ದೃಷ್ಟಿಯಲ್ಲಿ ಒಂದೇ ಆಗಿರುತ್ತವೆ. ಯುದ್ಧದಲ್ಲಿ ಭಾಗಿಯಾದ ಮತ್ತು ಭಾಗಿಯಾಗದ ದೇಶಗಳ ಮೇಲೂ ಯುದ್ಧ ತನ್ನ ಪರಿಣಾಮವನ್ನು ಬೀರುತ್ತವೆ. ಆ ಪರಿಣಾಮಗಳಲ್ಲೂ ವಿವಿಧತೆಯಿರುತ್ತವೆ. ಇರಾನ್‌ನ ಪರಮೋಚ್ಚ ನಾಯಕ, ಇಸ್ಲಾಮಿಕ್ ಕ್ರಾಂತಿಕಾರಿ ಗಾರ್ಡ್ ಕಾರ್ಪ್ಸ್ (IRGC) ನ ಪ್ರಭಾವಿ ಬ್ರಿಗೇಡಿಯರ್‌ಗಳು ಮತ್ತು ರಕ್ಷಣಾ ಸಚಿವರ ಹತ್ಯೆಯು ಇರಾನ್ ಅನ್ನು ಕ್ಷಣಾರ್ಧದಲ್ಲಿ ಅನಾಥವಾಗಿಸಿದೆ. ದಾಳಿಯ ತೀವ್ರತೆ ಹೆಚ್ಚಾದಾಗ ಖಮೇನಿ ರಷ್ಯಾಕ್ಕೆ ಓಡಿಹೋಗಿ ಆಶ್ರಯ ಪಡೆಯಬಹುದು ಎಂಬ ಊಹೆಗಳಿದ್ದವು. ಆದರೆ ಆತ ನಿರ್ಧಾರ ತೆಗೆದುಕೊಳ್ಳುವ ಮೊದಲೇ ಇಸ್ರೇಲ್ ಮತ್ತು ಅಮೆರಿಕಾ ಪಡೆಗಳು ಆತನನ್ನು ಕೊಂದು ಹಾಕಿವೆ. ಇರಾನ್‌ನ 40ಕ್ಕೂ ಹೆಚ್ಚು ಪ್ರಮುಖ ನಾಯಕರನ್ನು ಅತ್ಯಂತ ನಿಖರವಾಗಿ ಹೊಡೆದುರುಳಿಸಲಾಗಿದೆ. ಈ ಕಾರ್ಯಾಚರಣೆಯು ಹಲವು ವಿಧದ ಮತ್ತು ಸಮಯವನ್ನು ಕಾದು ನಡೆಸಿದ ಮತ್ತು ಅನೇಕ ರಾಜತಾಂತ್ರಿಕ ಭೇಟಿಗಳ ಫಲಶ್ರುತಿಯಾದ್ದರಿಂದ ಇದೊಂದು ವ್ಯವಸ್ಥಿತ ಜಾಗತಿಕ ಸಂಚು ಎನ್ನಬಹುದು.

ಉತ್ತರಾಧಿಕಾರದ ಸ್ಪರ್ಧೆ ಮತ್ತು ಪ್ರತೀಕಾರದ ಧಮಕಿ

ಖಮೇನಿ ಅವರ ಅಂತ್ಯದ ನಂತರ ಇರಾನ್‌ನಲ್ಲಿ ಉತ್ತರಾಧಿಕಾರಕ್ಕಾಗಿ ಆಂತರಿಕ ಸ್ಪರ್ಧೆ ಶುರುವಾದಂತೆ ಕಾಣುತ್ತಿದೆ. ತಮ್ಮ ನಂತರ ಯಾರು ಇಸ್ಲಾಮಿಕ್ ರಿಪಬ್ಲಿಕ್ ಅನ್ನು ಮುನ್ನಡೆಸಬೇಕು ಎಂಬ ಬಗ್ಗೆ ಖಮೇನಿ ಮೊದಲೇ ಒಂದಷ್ಟು ನಾಯಕರನ್ನು ನೇಮಕ ಮಾಡಿದ್ದರು ಎನ್ನಲಾಗಿದೆ. ಇದೇ ವೇಳೆ ಇಸ್ರೇಲ್ ಪ್ರಧಾನಿ ನೆತನ್ಯಾಹು ಅವರ ಫೋಟೋ ಟ್ವೀಟ್ ಮಾಡಿರುವ ಖಮೇನಿ ಪುತ್ರ ಮುಸ್ತಬಾ ಖಮೇನಿ, 'ಟಾರ್ಗೆಟ್ ಫಿಕ್ಸ್ಡ' ಎಂದು ಬರೆದುಕೊಂಡಿರುವುದು ಮುಂದಿನ ಭೀಕರ ಸಂಘರ್ಷದ ಸೂಚನೆಯಾಗಿದೆ.

ಅರಬ್ ರಾಷ್ಟ್ರಗಳ ಮೇಲೆ ಇರಾನ್‌ನ ಆಕ್ರೋಶ

ಅಮೆರಿಕದ ಮೇಲೆ ನೇರ ದಾಳಿ ನಡೆಸುವುದು ಅಸಾಧ್ಯವೆಂದು ಅರಿತಿರುವ ಇರಾನ್, ಅಮೆರಿಕದ ಮಿತ್ರ ರಾಷ್ಟ್ರಗಳಾಗಿರುವ ನೆರೆಯ ಸುನ್ನಿ ದೇಶಗಳ ಮೇಲೆ ದಾಳಿಯನ್ನು ತೀವ್ರಗೊಳಿಸಿದೆ.

ದುಬೈ ಮೇಲೆ ದಾಳಿ: ಪ್ರವಾಸಿಗರ ಸ್ವರ್ಗ ದುಬೈ ವಿಮಾನ ನಿಲ್ದಾಣದ ಮೇಲೆ ಮಿಸೈಲ್ ದಾಳಿಯಾಗಿದ್ದು, ವಿಮಾನ ಸಂಚಾರ ಅಸ್ತವ್ಯಸ್ತಗೊಂಡಿದೆ.



ಬುರ್ಜ್ ಅಲ್ ಅರಬ್ ಹೋಟೆಲ್ ಮತ್ತು ಜಬಲ್ ಅಲಿ ಪೋರ್ಟ್ ಕೂಡ ಸ್ಫೋಟಕ್ಕೆ ತುತ್ತಾಗಿವೆ.

ಇತರ ದೇಶಗಳು: ಸೌದಿ ಅರೇಬಿಯಾ, ಜೋರ್ಡಾನ್, ಬಹ್ರೇನ್ ಮತ್ತು ಕತಾರ್‌ಗಳ ಮೇಲೆಯೂ ಇರಾನ್ ನಿರಂತರ ದಾಳಿ ಮಾಡುತ್ತಿದೆ.

ಅಮೆರಿಕದ ನೆಲೆಗಳು: ಮಧ್ಯಪ್ರಾಚ್ಯದಲ್ಲಿರುವ ಅಮೆರಿಕದ 20 ಪ್ರಮುಖ ಏರ್ ಬೇಸ್‌ಗಳು ಮತ್ತು ನೌಕಾ ನೆಲೆಗಳು ಇರಾನ್‌ನ 2000 ಕಿ.ಮೀ ರೇಂಜ್‌ನ ಮಿಸೈಲ್‌ಗಳ ವ್ಯಾಪ್ತಿಯಲ್ಲಿವೆ. ಕತಾರ್‌ನ ಅಲ್ ಉದಯದ್ ಬೇಸ್‌ನಲ್ಲಿರುವ 10 ಸಾವಿರ ಅಮೆರಿಕನ್ ಸೈನಿಕರು ಈಗ ಇರಾನ್‌ನ ನೇರ ಗುರಿಯಲ್ಲಿದ್ದಾರೆ.

ಭಾರತದಲ್ಲಿನ ಶೋಕ ಮತ್ತು ಸಾಮಾಜಿಕ ಗಂಭೀರತೆ

ಖಮೇನಿ ಸಾವಿನ ಸುದ್ದಿಯು ಭಾರತದ ಮೇಲೆಯೂ ಗಂಭೀರವಾದ ಭಾವನಾತ್ಮಕ ಪರಿಣಾಮ ಬೀರಿದೆ. ಶಿಯಾ ಸಮುದಾಯದ ಪ್ರಭಾವವಿರುವ ಶ್ರೀನಗರ, ಬಡಗಾಂ ಸೇರಿದಂತೆ ಕರ್ನಾಟಕದ ಚಿಕ್ಕಬಳ್ಳಾಪುರ ಜಿಲ್ಲೆಯ ಆಲಿಪುರದಲ್ಲಿ ಸಾವಿರಾರು ಜನರು ಮೆರವಣಿಗೆ ನಡೆಸಿ ಶೋಕ ವ್ಯಕ್ತಪಡಿಸಿದ್ದಾರೆ. ಆಲಿಪುರದಲ್ಲಿ ಮೂರು ದಿನಗಳ ಶೋಕಾಚರಣೆಗೆ ಕರೆ ನೀಡಲಾಗಿದೆ. ವಿದೇಶಿ ನಾಯಕನೊಬ್ಬನ ಸಾವಿಗೆ ಭಾರತದ ನಾಗರಿಕರು ಈ ಮಟ್ಟದ ಭಾವನಾತ್ಮಕ ಸ್ಪಂದನೆ ನೀಡುತ್ತಿರುವುದು ಮತ್ತು ಕಣ್ಣೀರು ಹಾಕುತ್ತಿರುವುದು ಅತ್ಯಂತ ಗಂಭೀರವಾದ ಸಂಗತಿಯಾಗಿದೆ. ಇದು ಜಾಗತಿಕ ಸಂಘರ್ಷಗಳು ಹೇಗೆ ಭಾರತದ ಆಂತರಿಕ ಭಾವನೆಗಳ ಮೇಲೆ ಪ್ರಭಾವ ಬೀರುತ್ತವೆ ಎಂಬುದಕ್ಕೆ ಸಾಕ್ಷಿಯಾಗಿದೆ.

ರಷ್ಯಾ-ಚೀನಾ ಮೈತ್ರಿಕೂಟ ಮತ್ತು ಪಾಕಿಸ್ತಾನದ ಅಸಹಾಯಕತೆ

ರಷ್ಯಾ ಇಕ್ಕಟ್ಟು: ಉಕ್ರೇನ್ ಯುದ್ಧದಲ್ಲಿ ಇರಾನ್‌ನ ತಂತ್ರಜ್ಞಾನವನ್ನು ನೆಚ್ಚಿಕೊಂಡಿದ್ದ ರಷ್ಯಾಕ್ಕೆ ಈಗ ಮಿಲಿಟರಿ ಪೂರೈಕೆ ಸರಪಳಿ ಕಡಿತಗೊಳ್ಳುವ ಆಘಾತವಾಗಿದೆ.

ಚೀನಾದ ಹಿತಾಸಕ್ತಿ: ಇರಾನ್‌ನಿಂದ ಅತಿ ಹೆಚ್ಚು ತೈಲ ಆಮದು ಮಾಡಿಕೊಳ್ಳುವ ಚೀನಾಕ್ಕೆ ತನ್ನ 'ಬೆಲ್ಟ್ ಅಂಡ್ ರೋಡ್' ಯೋಜನೆಗೆ ಅಡ್ಡಿಯಾಗಬಹುದು ಎಂಬ ಭೀತಿ ಇದೆ.

ಪಾಕಿಸ್ತಾನದ ಸ್ಥಿತಿ: ಕರಾಚಿಯಲ್ಲಿ ಪ್ರತಿಭಟನಾಕಾರರು ಅಮೆರಿಕ ರಾಯಭಾರ ಕಚೇರಿ ಮೇಲೆ ದಾಳಿ ಮಾಡಿದಾಗ ಅಮೆರಿಕದ ಪಡೆಗಳು ನಡೆಸಿದ ಪ್ರತಿದಾಳಿಯಲ್ಲಿ 15 ಮಂದಿ ಸಾವನ್ನಪ್ಪಿದ್ದಾರೆ. ತನ್ನ ಜನರ ಮೇಲೆ ವಿದೇಶಿ ಪಡೆಗಳು ಗುಂಡು ಹಾರಿಸಿದರೂ ಪಾಕ್ ಸರ್ಕಾರ ಮೌನವಾಗಿರುವುದು ಆ ದೇಶದ ಆರ್ಥಿಕ ದಿವಾಳಿತನಕ್ಕೆ ಸಾಕ್ಷಿ.

ಭಾರತದ ಮುಂದಿರುವ ಆರ್ಥಿಕ ಮತ್ತು ರಾಜತಾಂತ್ರಿಕ ಸವಾಲು

ಭಾರತಕ್ಕೆ ಈ ಬಿಕ್ಕಟ್ಟು ಎರಡು ಪಾರ್ಶ್ವಗಳ ಕತ್ತಿಯಂತೆ ಪರಿಣಮಿಸಿದೆ.

ಚಬಹಾರ್ ಬಂದರು: ಅಫ್ಘಾನಿಸ್ತಾನ ಮತ್ತು ರಷ್ಯಾಕ್ಕೆ ಸಂಪರ್ಕ ನೀಡುವ ಈ ಬಂದರಿನಲ್ಲಿ ಭಾರತದ ಕೋಟ್ಯಂತರ ರೂಪಾಯಿ ಹೂಡಿಕೆ ಅಪಾಯದಲ್ಲಿದೆ.

ತೈಲ ಬೆಲೆ ಮತ್ತು ಹಣದುಬ್ಬರ: ಕಚ್ಚಾ ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 100 ದಾಟುವ ಮುನ್ಸೂಚನೆ ಇರುವುದರಿಂದ ಆಹಾರ ಪದಾರ್ಥಗಳ ಬೆಲೆ ಶೇ. 10-15 ರಷ್ಟು ಏರಿಕೆಯಾಗುವ ಭೀತಿ ಇದೆ.

ಮಧ್ಯಸ್ಥಿಕೆಯ ಸವಾಲು: ಉಕ್ರೇನ್ ಮತ್ತು ರಷ್ಯಾದ ಯುದ್ಧದಂತೆ ಇಲ್ಲಿ ಭಾರತ ಮಧ್ಯಸ್ಥಿಕೆ ವಹಿಸುವುದು ಸುಲಭವಲ್ಲ. ಇಲ್ಲಿ ಕೇವಲ ಗಡಿ ಸಂಘರ್ಷವಿಲ್ಲ, ಬದಲಾಗಿ ಧಾರ್ಮಿಕ ಪಂಥೀಯ ಆಳವಾದ ದ್ವೇಷ ಮತ್ತು ಇಸ್ರೇಲ್‌ನ ಅಸ್ತಿತ್ವದ ಪ್ರಶ್ನೆಗಳಿವೆ.

ಭವಿಷ್ಯದ ಮುನ್ಸೂಚನೆ

ಇರಾನ್‌ನ ಒಳಗೂ ಮಹಿಳೆಯರ ಮೇಲಿನ ನಿರ್ಬಂಧಗಳ ವಿರುದ್ಧ ಅಲ್ಲಿನ ಜನರೇ ದಂಗೆ ಏಳುತ್ತಿದ್ದಾರೆ. ಈ ಆಂತರಿಕ ಅತೃಪ್ತಿ ಮತ್ತು ಹೊರಗಿನ ದಾಳಿಗಳು ಇರಾನ್‌ನ ಪ್ರಸ್ತುತ ವ್ಯವಸ್ಥೆಯ ಪತನಕ್ಕೆ ದಾರಿ ಮಾಡಿಕೊಡಬಹುದು. ಏತನ್ಮಧ್ಯೆ, ಅರಬ್ ದೇಶಗಳಲ್ಲಿರುವ ಭಾರತೀಯರು ಮತ್ತು ಕನ್ನಡಿಗರು ತಮ್ಮ ಸುರಕ್ಷತೆಯ ಬಗ್ಗೆ ಹೆಚ್ಚಿನ ಗಮನ ಹರಿಸಬೇಕಾದ ಅನಿವಾರ್ಯತೆ ಇದೆ. ರಂಜಾನ್ ಮಾಸದಂತಹ ಪವಿತ್ರ ದಿನಗಳಲ್ಲಿ ರಕ್ತಪಾತವಾಗುತ್ತಿರುವುದು ನಾಗರಿಕ ಸಮಾಜಕ್ಕೆ ದೊಡ್ಡ ಹಿನ್ನಡೆಯಾಗಿದ್ದು, ರಾಜತಾಂತ್ರಿಕ ಮಾತುಕತೆಯೇ ಈ ಬಿಕ್ಕಟ್ಟಿಗೆ ಏಕೈಕ ಮದ್ದು.

ಟ್ರಂಪ್ ಸಾರಿದ ಯುದ್ಧದ ಮೂಲೋದ್ದೇಶವೇನು?

ಅರವಿಂದ

ತಿಂಗಳ ಹಿಂದಷ್ಟೆ ವೆನೆಜುವೆಲಾದ ಅಧ್ಯಕ್ಷನನ್ನೆ ಅಪಹರಿಸಿ ತಂದಿದ್ದ ಅಮೆರಿಕವು ಇದೀಗ ಇರಾನಿನ ಸರ್ವೋಚ್ಚ ನಾಯಕ ಖಮೇನಿಯನ್ನು ಬಾಂಬ್ ದಾಳಿ ನಡೆಸಿ ಹತ್ಯೆ ಮಾಡಿದೆ. ತನಗೆ ಒಲ್ಲದ ಯಾವುದೇ ದೇಶದ ಮುಖಂಡನನ್ನು ತನಗಿಷ್ಟ ಬಂದಂತೆ ನಿವಾರಿಸಬಲ್ಲೆ ಎಂಬುದು ಅಧ್ಯಕ್ಷ ಟ್ರಂಪ್ ನೇತೃತ್ವದ ಅಮೆರಿಕದ ಹೊಸ ವರಸೆಯಾಗಿದೆ

ಅರಬ್ ಕೊಲ್ಲಿಯೀಗ ಅಶಾಂತಿಗೆ ಸಿಲುಕಿದೆ. ಇರಾನ್ ಮಾತ್ರವಲ್ಲದೆ ಅದರ ಸುತ್ತುಮುತ್ತಲಿನ ಇನ್ನೂ ಹಲವಾರು ದೇಶಗಳು ಯುದ್ಧದ ಸುಳಿಯಲ್ಲಿ ಸಿಲುಕಿವೆ. ಅಮೆರಿಕದ ಸ್ನೇಹಿತರೆಂಬಂತೆ ಕಾಣುವ ಇತರ ಅರಬ್ ರಾಷ್ಟ್ರಗಳ ಮೇಲೂ ಇರಾನ್ ಪ್ರತಿದಾಳಿ ನಡೆಸುತ್ತಿದೆ. ಇದರಿಂದಾಗಿ ಜಗತ್ತಿಗೀಗ ತೈಲಪೂರೈಕೆಯ ಕೊರತೆ ಎದುರಾಗುವ ಭೀತಿ ತಲೆದೋರಿದೆ. ಲಕ್ಷಾಂತರ ಭಾರತೀಯರು ಕೊಲ್ಲಿ ರಾಷ್ಟ್ರಗಳಲ್ಲಿ ಅಪಾಯಕ್ಕೆ ಸಿಲುಕಿದ್ದಾರೆ.

ಇರಾನ್‌ನೊಂದಿಗೆ ಪರಮಾಣು ಒಪ್ಪಂದವೊಂದನ್ನು ರೂಪಿಸುವುದು ಟ್ರಂಪ್‌ರ ನಿಜವಾದ ಉದ್ದೇಶ ಆಗಿರಲಿಲ್ಲವೆನ್ನುವುದು, ಇರಾನಿನಲ್ಲಿ ಆಡಳಿತ ಬದಲಾವಣೆಯೇ ಅವರ ಪ್ರಮುಖ ಉದ್ದೇಶವಾಗಿತ್ತು ಈಗ ಸ್ಪಷ್ಟವಾಗುತ್ತಿದೆ. ಈ ಪರಿಸ್ಥಿತಿಯಲ್ಲಿ ಇರಾನ್‌ನಲ್ಲಿ ಆಂತರಿಕ ಕ್ಷೋಭೆ ಕೂಡಾ ಉಲ್ಬಣಿಸಿ ಆಡಳಿತದ ಪತನಕ್ಕೆ ಕಾರಣವಾಗಬಹುದು ಎಂಬ ನಿರೀಕ್ಷೆ ಅಮೆರಿಕದ್ದು. ರಾಜಕೀಯ ಅಂತಃಕಲಹ ಏರ್ಪಟ್ಟು ಖಮೇನಿ ಪರವಾದ ಆಡಳಿತ ಕುಸಿಯಬಹುದು, ಆ ಬಳಿಕ ತನ್ನದೇ ಕೈಗೊಂಬೆ ಸರಕಾರ ಕೂರಿಸಬಹುದು ಎಂದೂ ಅಮೆರಿಕ ಲೆಕ್ಕ ಹಾಕುತ್ತಿದೆ.

ಅಮೆರಿಕದ ಈ ನಿರೀಕ್ಷೆ ಸಫಲವಾಗಲೂಬಹುದು. ಆದರೆ ಅಪಾಯಕಾರಿಯಾಗಿ ಕಂಡು ಬರುತ್ತಿರುವುದು ಬಳಿಕ ಮುಂದೇನು ಎಂಬ ಪ್ರಶ್ನೆ. ಇರಾನಿಗೆ ಸಂಬಂಧಿಸಿ ಅಮೆರಿಕದ ಕೈಯಲ್ಲಿ ಸ್ಪಷ್ಟವಾದ ಯೋಜನೆ ಇದೆಯೆ? ಇರಾನನ್ನು ಅಮೆರಿಕ ವಶಪಡಿಸಿಕೊಳ್ಳುವುದೆ? ಅದನ್ನು ವಿಭಜಿಸುವುದೆ? ತನ್ನದೇ ಒಂದು ಸರಕಾರವನ್ನು ಸ್ಥಾಪಿಸುವುದೆ? ಹಾಗೆ ಸ್ಥಾಪಿಸಲ್ಪಡುವ ಸರಕಾರ ಎಷ್ಟು ಕಾಲ ಉಳಿದೀತು? ಇರಾನ್‌ನಿಂದ ಪದಚ್ಯುತವಾಗಿರುವ ಪಹ್ಲವಿ ಷಾ ಸಾಮ್ರಾಜ್ಯವನ್ನು ಮರುಸ್ಥಾಪಿಸಲಾಗುವುದೆ? ಇವೆಲ್ಲ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರವಿಲ್ಲ. ಅಫಘಾನಿಸ್ತಾನ, ಇರಾಕ್, ಲಿಬಿಯಾ ಮುಂತಾದ ದೇಶಗಳಲ್ಲಿ ಆಡಳಿತ ಬದಲಾವಣೆಯ ಬಳಿಕ ಉಂಟಾದ ಪರಿಸ್ಥಿತಿಯನ್ನು ನಿಭಾಯಿಸಲು ಅಮೆರಿಕ ವಿಫಲಗೊಂಡಿರುವುದು ಕಣ್ಣಮುಂದಿದೆ. ಇರಾನಿಗೆ ಸಂಬಂಧಿಸಿಯೂ ಅಂತಹುದೇ ಹೆಜ್ಜೆ ಇಡುತ್ತಿರುವುದು ಆಶ್ಚರ್ಯಕರ. ಎಲ್ಲಕ್ಕಿಂತ ಮುಖ್ಯ ಪ್ರಶ್ನೆ, ಟ್ರಂಪ್ ಯುದ್ಧವನ್ನೆ ಏಕೆ ಆಯ್ಕೆ ಮಾಡಿಕೊಂಡರು? ಇರಾನ್‌ನೊಂದಿಗೆ ಸಂಧಾನ ಪ್ರಕ್ರಿಯೆ ಉತ್ತಮ ಪ್ರಗತಿಯಲ್ಲಿದೆಯೆಂದು ಒಮಾನ್‌ನ ಮಧ್ಯವರ್ತಿಗಳು ಹೇಳಿಕೊಂಡ ಬೆನ್ನಿಗೇ ಅಮೆರಿಕ ಇರಾನ್‌ನ ಮೇಲೆ ದಾಳಿ ಮಾಡಿತೇಕೆ? ಪ್ರತಿಯೊಂದು ಯುದ್ಧಕ್ಕೂ ಒಂದು ಪ್ರಮುಖ ಉದ್ದೇಶವಿರುತ್ತದೆ. ಯಾರಾದರೊಬ್ಬ ಮುಖಂಡನ ಇಚ್ಛೆಗೆ ತಕ್ಕಂತೆ ಯುದ್ಧಗಳನ್ನು ಸಾರಲಾಗುವುದಿಲ್ಲ. ಇರಾನ್‌ನ ಪರಮಾಣು ಕಾರ್ಯಕ್ರಮ ನಿಲ್ಲಿಸುವುದೇ ಅಮೆರಿಕದ ಉದ್ದೇಶವಾಗಿದ್ದರೆ ಸಂಧಾನದ ಮೂಲಕ ಅಂತಹ ಉದ್ದೇಶದ ತೀರಾ ಸಮೀಪ ಬಂದಾಗಿತ್ತು. ಆದರೆ ಅಮೆರಿಕದ ಉದ್ದೇಶ ಅದಾಗಿರಲೇ ಇಲ್ಲ. ಕೆಲ ಸಮಯದಿಂದಲೇ ಅದು ಇರಾನ್‌ನಲ್ಲಿ ಆಡಳಿತ ಬದಲಾವಣೆ ಕುರಿತಂತೆ ಮಾತನಾಡುತ್ತಲೇ ಬಂದಿದೆ. ತನಗಾಗದ ಆಡಳಿತವನ್ನು ಉರುಳಿಸುವುದೇ ಟ್ರಂಪ್‌ರ ಮುಖ್ಯ ಉದ್ದೇಶವೆಂಬುದು ನಿಚ್ಚಳವಾಗುತ್ತಿದೆ.



ಟ್ರಂಪ್ ಜಗತ್ತನ್ನು ಈಗ ಏಕಧ್ರುವೀಯಗೊಳಿಸಲೆತ್ನಿಸುತ್ತಿದ್ದಾರೆ. ಇರಾನ್ ಮೇಲೆ ಸಮರ ಸಾರುವ ಮೊದಲು ವಿಶ್ವಸಂಸ್ಥೆಗಾಗಲಿ ತನ್ನ ಮಿತ್ರ ರಾಷ್ಟ್ರಗಳಿಗಾಗಲಿ ಅವರು ಸುಳಿವನ್ನೇ ನೀಡಿರಲಿಲ್ಲ. ತಾನು ಆಡಿದ್ದೇ ಆಟ ಎಂಬುದು ಅದರ ಧೋರಣೆ.

ವೈರುಧ್ಯ ನೋಡಿ. ಜಗತ್ತಿನ ಎಲ್ಲಾ ಯುದ್ಧಗಳನ್ನು ನಿಲ್ಲಿಸುವ ವಾಗ್ದಾನ ನೀಡಿ ಅಧಿಕಾರಕ್ಕೆ ಬಂದ ಟ್ರಂಪ್ ಈಗ ತಾವೇ ಅತ್ಯಂತ ದೊಡ್ಡ ಯುದ್ಧವೊಂದಕ್ಕೆ ಕಾರಣರಾಗಿದ್ದಾರೆ. ಹಲವಾರು ಯುದ್ಧಗಳನ್ನು ನಿಲ್ಲಿಸಿದ್ದಾಗಿ ಹೇಳಿ ಅದಕ್ಕೆ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಬಯಸಿದ ಅವರು ತಾವೇ ಹೊಸದೊಂದು ಯುದ್ಧಕ್ಕೆ ಕಾರಣರಾಗಿದ್ದಾರೆ.

ಟ್ರಂಪ್ ಯುದ್ಧಸಾರುವಾಗ ಜಾಗತಿಕ ವ್ಯವಸ್ಥೆಗೂ ಯಾವುದೇ ಬೆಲೆ ಕೊಡುತ್ತಿಲ್ಲ. ತಮ್ಮ ಮನಸೋಇಚ್ಛೆ ವರ್ತನೆಯಿಂದ ಇಡೀ ಜಗತ್ತಿನ ಶಾಂತಿಯನ್ನೇ ಕದಡುತ್ತಿದ್ದಾರೆ.

ಆರ್ಥಿಕ ಸರ್ವಾಧಿಕಾರ ಸ್ಥಾಪಿಸುವುದೂ ಅಮೆರಿಕದ ಗುರಿಯಾಗಿದೆ. ಜಾಗತಿಕ ತೈಲ ವ್ಯವಸ್ಥೆಗೆ ಕೊಲ್ಲಿ ರಾಷ್ಟ್ರಗಳೇ ಕೇಂದ್ರ. ಇಲ್ಲಿನ ತೈಲ ವ್ಯವಹಾರದಲ್ಲಿ ಡಾಲರ್ ಕರೆನ್ಸಿಯಾಗಿ ಬಳಸಲ್ಪಡುತ್ತದೆ. ಡಾಲರ್‌ನಿಂದ ಹೊರತಾದ ಯಾವುದೇ ಬಗೆಯ ಜಾಗತಿಕ ವ್ಯವಹಾರವು ತನಗೆ ಅಸಮ್ಮತ ಎಂಬುದಾಗಿ ಅಮೆರಿಕ ಭಾವಿಸುತ್ತಿದೆ. ಈ ನಿಟ್ಟಿನಲ್ಲಿ ನೋಡಿದರೆ ಈ ಯುದ್ಧವು ಕೇವಲ ಇರಾನ್ ವಿರುದ್ಧವಲ್ಲ, ಇಡೀ ಕೊಲ್ಲಿಯಲ್ಲಿ ತನ್ನ ಮೇಲುಗೈ ಸಾಧಿಸುವುದು ಹಾಗೂ ಆರ್ಥಿಕ ಆಧಿಪತ್ಯ ಸಾಧಿಸುವುದು ಅಮೆರಿಕದ ಉದ್ದೇಶವಾಗಿದೆ.

ಭಾರತಕ್ಕೆ ಮತ್ತು ಇಡೀ ಏಷ್ಯಾ ಆರ್ಥಿಕತೆಗೆ ಸಂಬಂಧಿಸಿ ಹೇಳುವುದಾದರೆ, ಈ ಯುದ್ಧವು ದೊಡ್ಡ ಪರಿಣಾಮ ಬೀರುವುದು ನಿಶ್ಚಿತವಾಗಿದೆ. ತೈಲ ಪೂರೈಕೆ ಹಾಗೂ ಆ ಮೂಲಕ ಆರ್ಥಿಕ ಸುಸ್ಥಿರತೆಗೆ ಮಧ್ಯಪ್ರಾಚ್ಯವು ಅತ್ಯಂತ ಪ್ರಮುಖ ಕೇಂದ್ರವಾಗಿದೆ. ಅಲ್ಲಿ ಉಂಟಾಗುವ ಯಾವುದೇ ಅಸ್ಥಿರತೆ ಭಾರತ ಮತ್ತು ಏಷ್ಯಾದ ಮೇಲೆ ಪರಿಣಾಮ ಬೀರಬಹುದಾಗಿದೆ.

ಇತ್ತೀಚಿನ ದಶಕಗಳಲ್ಲಿ ಜಾಗತಿಕ ಪರಿಸ್ಥಿತಿ ಬದಲಾಗುತ್ತಾ ಬಂದಿತ್ತು. ಯಾವುದೋ ಒಂದು ದೇಶ ಇಡೀ ಜಗತ್ತಿನ ಮೇಲೆ ನಿಯಂತ್ರಣ ಸಾಧಿಸುವಂತೆ ವರ್ತಿಸುವುದು, ಜಾಗತಿಕ ಬದಲಾವಣೆಗೆ ಕಾರಣವಾಗುವುದು ಕೊನೆಗೊಂಡಿದೆ ಎಂದು ಭಾವಿಸಲಾಗಿತ್ತು. ಭಾರತ, ಚೀನಾ ಮುಂತಾದ ದೇಶಗಳು ಬಹುಧ್ರುವೀಯ ಜಾಗತಿಕ ವ್ಯವಸ್ಥೆಗೆ ನಾಂದಿ ಹಾಕುತ್ತಿವೆ ಎಂದು ಭಾವಿಸಲಾಗಿತ್ತು. ಆದರೆ ಈಗ ಮತ್ತೆ ಇದೆಲ್ಲ ಬುಡಮೇಲಾಗಿದೆ. ಅಮೆರಿಕ ಹಿಂದಿನಂತೆ ಇಡೀ ಜಗತ್ತನ್ನು ನಿಯಂತ್ರಿಸುವ ರೀತಿಯಲ್ಲಿ ಸರ್ವಾಧಿಕಾರಿ ಧೋರಣೆ ಪ್ರದರ್ಶಿಸತೊಡಗಿದೆ. ಜಗತ್ತು ಯಾವ ಕಡೆಗೆ ಸಾಗುವುದೆಂದು ಊಹಿಸಲಾಗದಂತಹ ಪರಿಸ್ಥಿತಿ ಈಗ ತಲೆದೋರಿದೆ.



ವಿಶ್ವದ ಅತಿದೊಡ್ಡ ತೈಲ ಸಂಸ್ಕರಣಾ ಕೇಂದ್ರ ಸ್ಥಗಿತ

ರಿಯಾದ್: ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವ ಬೆನ್ನಲ್ಲೇ, ಸೌದಿ ಅರೇಬಿಯಾದ ಅತಿದೊಡ್ಡ ತೈಲ ಸಂಸ್ಕರಣಾ ಕೇಂದ್ರ, ರಾಸ್ ತನುರಾ ಮೇಲೆ ಸೋಮವಾರ ಇರಾನ್ ಡ್ರೋನ್ ದಾಳಿ ನಡೆಸಿದೆ. ದಾಳಿಯ ನಂತರ ಸಂಕೀರ್ಣದಲ್ಲಿ ಬೆಂಕಿ ಕಾಣಿಸಿಕೊಂಡಿದ್ದರಿಂದ ಕಾರ್ಯಾಚರಣೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಸೌದಿ ಅರಾಮ್ಕೊ ನಿರ್ವಹಿಸುವ ಸಂಸ್ಕರಣಾಗಾರ ದಿನಕ್ಕೆ 550,000 ಬ್ಯಾರೆಲ್‌ಗಳಿಗಿಂತ ಹೆಚ್ಚು ಕಚ್ಚಾ ತೈಲವನ್ನು ಉತ್ಪಾದಿಸುತ್ತದೆ ಮತ್ತು ರಾಜ್ಯದ ತೈಲ ರಫ್ತಿಗೆ ನಿರ್ಣಾಯಕ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತದೆ. ರಾಸ್ ತನುರಾ ಸಂಕೀರ್ಣದ ಬಳಿ ಎರಡು ಡ್ರೋನ್‌ಗಳನ್ನು ಸೌದಿ ವಾಯು ರಕ್ಷಣಾ ಪಡೆಗಳು ತಡೆ ಹಿಡಿದಿವೆ. ಆದರೆ, ಪತನಗೊಂಡ ಡ್ರೋನ್‌ನ ಅವಶೇಷಗಳಿಂದಾಗಿ ಬೆಂಕಿ ಕಾಣಿಸಿಕೊಂಡಿದ್ದು, ಕೂಡಲೇ ಅದನ್ನು ಹತೋಟಿಗೆ ತರಲಾಗಿದೆ.

> ಸೌದಿಯ ತೈಲ ಮೂಲ ಸೌಕರ್ಯ ಗುರಿಯಾಗಿಸಿ ಇರಾನ್ ಡ್ರೋನ್ ದಾಳಿ

ಮುನ್ನೆಚ್ಚರಿಕಾ ಕ್ರಮವಾಗಿ ಸಂಸ್ಕರಣಾ ಕೇಂದ್ರದ ಪ್ರಮುಖ ಘಟಕಗಳನ್ನು ಮುಚ್ಚಲಾಗಿದ್ದು, ಸೌದಿ ಅರಾಮ್ಕೊ ಕಂಪನಿ ತೈಲ ಉತ್ಪಾದನೆ ಮತ್ತು ರಫ್ತು ಚಟುವಟಿಕೆಗಳನ್ನು ಸ್ಥಗಿತಗೊಳಿಸಿದೆ. ಸೌದಿ ಅಧಿಕಾರಿಗಳ ಪ್ರಕಾರ ಘಟನೆಯಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಮತ್ತು ಪರಿಸ್ಥಿತಿ ಹತೋಟಿಯಲ್ಲಿದೆ. ಆದರೆ, ಈ ಘಟನೆಯು ಇಂಧನ ಮೂಲಸೌಕರ್ಯಗಳ ಮೇಲಿನ ಯುದ್ಧದ ತೀವ್ರತೆಯನ್ನು ಹೆಚ್ಚಿಸಬಹುದು ಎಂದು ವಿಶ್ಲೇಷಕರು ಎಚ್ಚರಿಸಿದ್ದಾರೆ. ಇರಾನ್ ಭೂಪ್ರದೇಶದ ಮೇಲೆ ಅಮೆರಿಕ ಮತ್ತು ಇಸ್ರೇಲ್ ನಡೆಸಿದ ದಾಳಿಗೆ ಪ್ರತಿಕ್ರಿಯೆಯಾಗಿ, ಇರಾನ್ ಈಗ ಗಲ್ಫ್ ರಾಷ್ಟ್ರಗಳ ಇಂಧನ ಮತ್ತು ಮಿಲಿಟರಿ ನೆಲೆಗಳನ್ನು ಗುರಿಯಾಗಿಸಿಕೊಂಡು ಸರಣಿ ದಾಳಿಗಳನ್ನು ನಡೆಸುತ್ತಿದೆ. ರಾಸ್ ತನುರಾ ಘಟಕ ಜಾಗತಿಕ ತೈಲ ಪೂರೈಕೆಗೆ ಸೌದಿ ಅರೇಬಿಯಾದ ಇಂಧನ ಪ್ರಾಬಲ್ಯದ ಸಂಕೇತವೂ ಆಗಿದೆ.

300 ವಿಮಾನಗಳ ಹಾರಾಟ ಬಂದ್

ಮಧ್ಯಪ್ರಾಚ್ಯ ಸಂಘರ್ಷದಿಂದ ಉಂಟಾದ ಕಾರ್ಯಾಚರಣೆಯ ಅಡೆತಡೆಗಳು ಮೂರನೇ ದಿನವೂ ಮುಂದುವರಿದ ಕಾರಣ ಭಾರತೀಯ ವಿಮಾನಯಾನ ಸಂಸ್ಥೆಗಳು ಸೋಮವಾರ 300ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ವಿಮಾನಗಳನ್ನು ರದ್ದುಗೊಳಿಸಿದವು. ಸಂಘರ್ಷದಿಂದ ಕೊಲ್ಲಿ ವಲಯದ ನಾಗರಿಕ ವಿಮಾನಯಾನ ಸೇವೆ ಅಸ್ತವ್ಯಸ್ತಗೊಂಡಿದೆ. ಪರಸ್ಪರ ದಾಳಿ ಮುಂದುವರಿದಿರುವ ಕಾರಣ ಹಲವು ವಿಮಾನಯಾನ ಸಂಸ್ಥೆಗಳು ವಿಮಾನಗಳ ಹಾರಾಟವನ್ನು ಅಮಾನತುಗೊಳಿಸಿವೆ ಅಥವಾ ಮೊಟಕುಗೊಳಿಸಿವೆ. ವಲಯದಲ್ಲಿ ಉದ್ವಿಗ್ನತೆ ನಿರಂತರ ಜಾಸ್ತಿಯಾಗುತ್ತಿರುವ ಹಿನ್ನೆಲೆ ದುಬೈ, ಬಹ್ರೈನ್ ಹಾಗೂ ಕುವೈತ್ ವಿಮಾನ ನಿಲ್ದಾಣಗಳು ಮುಷ್ಕರ ಹೂಡಿವೆ ಅಥವಾ ಈ ನಿಲ್ದಾಣಗಳಲ್ಲಿ ವಿಮಾನ ಹಾರಾಟ ಸೇವೆಗಳು ಅಸ್ತವ್ಯಸ್ತಗೊಂಡಿವೆ. ದೇಶದ ನಾಲ್ಕು ಪ್ರಮುಖ ವಿಮಾನ ನಿಲ್ದಾಣಗಳಾದ ದಿಲ್ಲಿ, ಮುಂಬೈ, ಬೆಂಗಳೂರು ಮತ್ತು ಚೆನ್ನೈನಲ್ಲಿ ಸೋಮವಾರ ಆಗಮನ ಮತ್ತು ನಿರ್ಗಮನ ಸೇರಿದಂತೆ 300ಕ್ಕೂ ಹೆಚ್ಚು ವಿಮಾನಗಳನ್ನು ರದ್ದುಪಡಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸೋಮವಾರ, ಇಂಡಿಗೊ 163ಕ್ಕೂ ಹೆಚ್ಚು ವಿಮಾನಗಳನ್ನು ರದ್ದುಗೊಳಿಸಿದರೆ, ಏರ್ ಇಂಡಿಯಾ ಗ್ರೂಪ್-ಏರ್ ಇಂಡಿಯಾ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್-110ಕ್ಕೂ ಹೆಚ್ಚು ಸೇವೆಗಳನ್ನು ರದ್ದುಗೊಳಿಸಿವೆ.



ಖಮೇನಿ ಹತ್ಯೆ ಖಂಡಿಸಿ ಭಾರತದಲ್ಲಿ ಪ್ರತಿಭಟನೆ

ಇಸ್ರೇಲ್-ಅಮೆರಿಕ ದಾಳಿಯಲ್ಲಿ ಇರಾನಿನ ಸರ್ವೋಚ್ಚ ನಾಯಕ ಅಯತೊಲ್ಲಾ ಖಮೇನಿಯ ಹತ್ಯೆ ಖಂಡಿಸಿ ಜಮ್ಮು-ಕಾಶ್ಮೀರ ಮತ್ತು ಉತ್ತರಪ್ರದೇಶ ಸೇರಿ ಭಾರತದ ಕೆಲವೆಡೆ ಪ್ರತಿಭಟನೆಗಳು ನಡೆದಿವೆ. ಭದ್ರತಾ ಪಡೆಗಳು ಶ್ರೀನಗರದ ಲಾಲ್ ಚೌಕ್ ಬಳಿ ಬ್ಯಾರಿಕೇಡ್ ಹಾಕಿ ಪ್ರತಿಭಟನಾಕಾರರನ್ನು ನಿಯಂತ್ರಿಸಿದವು. ಸೋಮವಾರ ಕಣಿವೆಯಾದ್ಯಂತ ಮೊಬೈಲ್ ಇಂಟರ್ನೆಟ್ ವೇಗ ಕಡಿಮೆ ಮಾಡಲಾಯಿತು. ಅದೇ ರೀತಿ ಉತ್ತರ ಪ್ರದೇಶದ ಲಖನೌ, ಪ್ರಯಾಗ್‌ರಾಜ್‌ನಲ್ಲೂ ಶಿಯಾ ಪಂಗಡದವರು ಪ್ರತಿಭಟನೆ ನಡೆಸಿದ್ದಾರೆ.

ಭಾರತೀಯ ಕ್ರೂ ಸದಸ್ಯ ಬಲಿ

ಇರಾನ್ ಮೇಲೆ ಅಮೆರಿಕ- ಇಸ್ರೇಲ್ ರಾಷ್ಟ್ರಗಳು ನಡೆಸಿದ ದಾಳಿಯಿಂದಾಗಿ ಇದೇ ಮೊದಲ ಬಾರಿಗೆ ಭಾರತೀಯ ಪ್ರಜೆಯೊಬ್ಬರು ಮೃತಪಟ್ಟಿದ್ದಾರೆ. ಗಲ್ಫ್ ಆಫ್ ಒಮನ್‌ನಲ್ಲಿ ಸಂಚರಿಸುತ್ತಿದ್ದ ಎಂಕೆಡಿ ವ್ಯೋಮ್ ತೈಲ ಟ್ಯಾಂಕರ್ ಹಡಗಿಗೆ ಬಾಂಬ್ ಸಹಿತ ಡ್ರೋನ್ ದೋಣಿವೊಂದು ಬಡಿದಿದ್ದರಿಂದ ಇಂಜಿನ್ ಕೊಠಡಿಯಲ್ಲಿದ್ದ ಭಾರತೀಯ ಕ್ರೂ ಸದಸ್ಯ ಮೃತಪಟ್ಟಿದ್ದಾರೆ. ಟ್ಯಾಂಕರ್ ಹಡಗಿನಲ್ಲಿನ 20 ಕ್ರೂ ಸದಸ್ಯರಿದ್ದರು, ಹೆಚ್ಚಿನವರೂ ಭಾರತೀಯರೇ ಆಗಿದ್ದರು. ಗಲ್ಫ್ ಆಫ್ ಒಮನ್ ಸಮುದ್ರದಲ್ಲಿ ಎಂಕೆಡಿ ವ್ಯೋಮ್ 59,463 ಟನ್‌ಗಳಷ್ಟು ಕಾರ್ಗೋ ಹೊತ್ತೊಯ್ಯುತ್ತಿತ್ತು. ಇದೇ ವೇಳೆಯಲ್ಲಿ ಮಾನವರಹಿತ ದೋಣಿಯಿಂದ ಹಡಗಿಗೆ ಢಿಕ್ಕಿ ಹೊಡೆದಿದೆ. ಇದರಿಂದಾಗಿ ಮುಖ್ಯ ಇಂಜಿನ್ ಕೊಠಡಿಯಲ್ಲಿ ಸ್ಫೋಟ ಮತ್ತು ಬೆಂಕಿ ಕಾಣಿಸಿಕೊಂಡಿದೆ.

ತೈಲ ಮಾರುಕಟ್ಟೆ ಮೇಲೆ ಪರಿಣಾಮ

ದಿನಕ್ಕೆ 5.5 ಲಕ್ಷ ಬ್ಯಾರೆಲ್‌ಗಳಿಗಿಂತ ಹೆಚ್ಚು ತೈಲ ಸಂಸ್ಕರಣಾ ಸಾಮರ್ಥ್ಯ ಹೊಂದಿರುವ ರಾಸ್ ತನುರಾ, ಏಷ್ಯಾ ಮತ್ತು ಯುರೋಪ್‌ಗೆ ಕಚ್ಚಾ ತೈಲ ಪೂರೈಸುವ ಪ್ರಮುಖ ಕೇಂದ್ರ. ಈ ದಾಳಿಯಿಂದ ಜಾಗತಿಕ ತೈಲ ಪೂರೈಕೆಗೆ ಧಕ್ಕೆಯಾಗುವ ಆತಂಕ ಎದುರಾಗಿದ್ದು, ಮಾರುಕಟ್ಟೆಯಲ್ಲಿ ತೈಲ ಬೆಲೆಗಳು ತೀವ್ರವಾಗಿ ಏರಿಕೆ ಕಂಡಿವೆ ಎಂದು ವರದಿಯಾಗಿದೆ.

ಅಮೆರಿಕ-ಇಸ್ರೇಲ್ ಜಂಟಿ ದಾಳಿಯಲ್ಲಿ ಸಾಂಪ್ರದಾಯಿಕ ಯುದ್ಧ ತಂತ್ರಗಳ ಜತೆ ಕಡಿಮೆ ವೆಚ್ಚದ ಶಸ್ತ್ರಾಸ್ತ್ರ, ಕ್ಲೌಡ್ ಎಐ ಬಳಕೆ

ಅಗ್ಗದ ತಂತ್ರಜ್ಞಾನದ ಹೊಸ ಪ್ರಯೋಗ

ವಾಷಿಂಗ್ಟನ್: ಇರಾನ್ ವಿರುದ್ಧ ಅಮೆರಿಕ ಮತ್ತು ಇಸ್ರೇಲ್ ನಡೆಸುತ್ತಿರುವ ಮಿಲಿಟರಿ ಕಾರ್ಯಾಚರಣೆ ಹೊಸ ಹಂತಕ್ಕೆ ತಲುಪಿದೆ. ಈ ಬಾರಿ ಅತ್ಯಂತ ದುಬಾರಿ ಯುದ್ಧ ವಿಮಾನಗಳು ಮತ್ತು ಕ್ಷಿಪಣಿಗಳ ಜತೆಗೆ ಕಡಿಮೆ ವೆಚ್ಚದ ಡ್ರೋನ್‌ಗಳು, ಸೈಬರ್ ದಾಳಿ ಮತ್ತು ಕೃತಕ ಬುದ್ಧಿಮತ್ತೆಯನ್ನು(ಎಐ) ಸಮರ್ಥವಾಗಿ ಬಳಸಿಕೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶನಿವಾರ ಆರಂಭವಾದ ಜಂಟಿ ವಾಯುದಾಳಿಯಲ್ಲಿ ಸುಮಾರು 2,500 ಕೋಟಿ ರೂ. ಮೌಲ್ಯದ ಎಫ್-22 ರಾಪ್ಟರ್ ಮತ್ತು 700 ಕೋಟಿ ರೂ.ಗೂ ಅಧಿಕ ಬೆಲೆಯ ಎಫ್-35 ಯುದ್ಧ ವಿಮಾನಗಳು ಮುಂಚೂಣಿಯಲ್ಲಿದ್ದವು. ಇವುಗಳೊಂದಿಗೆ ತಲಾ 16 ಕೋಟಿ ರೂ. ಮೌಲ್ಯದ ಡಜನ್‌ಗಟ್ಟಲೆ ಟೊಮಾಹಾಕ್ ಕ್ಷಿಪಣಿಗಳನ್ನು ಉಡಾಯಿಸಲಾಗಿದ್ದು, ಒಟ್ಟಾರೆ ಕಾರ್ಯಾಚರಣೆಯ ವೆಚ್ಚ ಈಗಾಗಲೇ ಬಿಲಿಯನ್ ಡಾಲರ್‌ಗಳನ್ನು ದಾಟಿದೆ.

ಇರಾನ್ ಮೇಲೆ 150 ಕ್ಷಿಪಣಿ, 2500 ಬಾಂಬ್‌ಗಳಿಂದ ದಾಳಿ

ಟೆಹ್ರಾನ್: ಇರಾನ್ ಮೇಲೆ ಶನಿವಾರ ಬೆಳಗ್ಗಿನಿಂದ ಇಲ್ಲಿಯವರೆಗೆ ಒಟ್ಟು 2,500 ಬಾಂಬ್‌ಗಳಿಂದ ದಾಳಿ ನಡೆಸಿದ್ದಾಗಿ ಇಸ್ರೇಲ್ ಸೇನೆ (ಐಡಿಎಫ್) ಸೋಮವಾರ ಮಧ್ಯಾಹ್ನ ಹೇಳಿದೆ. ಶನಿವಾರ ಬೆಳಗ್ಗಿನಿಂದ ಆರಂಭವಾದ ಸಂಘರ್ಷದಲ್ಲಿ ಈವರೆಗೆ ಇರಾನ್‌ನ 600 ಸ್ಥಳಗಳನ್ನು ಗುರಿಯಾಗಿಸಿ 150 ಖಂಡಾಂತರ ಕ್ಷಿಪಣಿಗಳು ಸೇರಿ ಒಟ್ಟು 2500 ಬಾಂಬ್‌ಗಳನ್ನು ಹಾಕಿದ್ದೇವೆ ಎಂದು ಐಡಿಎಫ್ ಹೇಳಿಕೊಂಡಿದೆ. ಇವುಗಳಲ್ಲಿ 12 ಕ್ಷಿಪಣಿ ಉಡಾವಣಾ ವಾಹನಗಳು, 200 ವಾಯು ರಕ್ಷಣಾ ವ್ಯವಸ್ಥೆಗಳು ಮತ್ತು 20 ಇರಾನಿ ನಾಯಕರ ಮೇಲೆ ಗುರಿಯಾಗಿಸಿದ್ದೆವು. ಅಲ್ಲದೆ, 1,10,000 ಯೋಧರು ಸಕ್ರಿಯವಾಗಿ ಕರ್ತವ್ಯದಲ್ಲಿದ್ದಾರೆಂದೂ ಐಡಿಎಫ್ ಹೇಳಿದೆ.



ಅಗ್ಗದ ಸಾಮೂಹಿಕ ಆಯುಧಗಳ ತಂತ್ರ

ಸಾಂಪ್ರದಾಯಿಕ ಯುದ್ಧ ತಂತ್ರಗಳ ಜತೆಗೆ, ಈ ಬಾರಿ ಅಫೋರ್ಡಬಲ್ ಮಾಸ್(ಕಡಿಮೆ ವೆಚ್ಚದ ಸಾಮೂಹಿಕ ದಾಳಿ) ಎಂಬ ಹೊಸ ನೀತಿಯನ್ನು ಅಳವಡಿಸಿಕೊಳ್ಳಲಾಗಿದೆ. ಅಮೆರಿಕದ ಸೆಂಟ್ರಲ್ ಕಮಾಂಡ್ ಮಾಹಿತಿ ನೀಡಿರುವಂತೆ, ಇರಾನ್‌ನ ಶಹೀದ್ ಮಾದರಿಯಲ್ಲೇ ಇರುವ ಅಗ್ಗದ ಲೂಕಾಸ್ ಡ್ರೋನ್‌ಗಳನ್ನು ದಾಳಿಗೆ ಬಳಸಲಾಗಿದೆ. ಕೇವಲ 30 ಲಕ್ಷ ರೂ. ಬೆಲೆಯ ಈ ಒಂದು ಡ್ರೋನ್, ಶತ್ರುಗಳ ಪ್ರದೇಶದ ಮೇಲೆ ಹಾರಾಡುತ್ತಾ ಗುರಿಯನ್ನು ಗುರುತಿಸಿ ಬಾಂಬ್‌ನಂತೆ ಅಪ್ಪಳಿಸುವ ಸಾಮರ್ಥ್ಯ ಹೊಂದಿದೆ. ಒಂದು ಟೊಮಾಹಾಕ್ ಕ್ಷಿಪಣಿಯ ವೆಚ್ಚದಲ್ಲಿ ಇಂತಹ 50ಕ್ಕೂ ಹೆಚ್ಚು ಡ್ರೋನ್‌ಗಳನ್ನು ಕಾರ್ಯಾಚರಣೆಗೆ ಇಳಿಸಬಹುದು. ಇದಕ್ಕಾಗಿಯೇ ಅಮೆರಿಕ, ಟಾಸ್ಕ್ ಫೋರ್ಸ್ ಸ್ಕಾರ್ಪಿಯನ್ ಸ್ಟ್ರೈಕ್ ಎಂಬ ವಿಶೇಷ ಡ್ರೋನ್ ಪಡೆ ಸಿದ್ಧಪಡಿಸಿದೆ.

ಸೈಬರ್ ಮತ್ತು ಎಐ ಮೇಲುಗೈ

ಕ್ಷಿಪಣಿ ದಾಳಿಗಳ ಬೆನ್ನಲ್ಲೇ ಇರಾನ್‌ನಲ್ಲಿ ಇಂಟರ್ನೆಟ್ ಸಂಪರ್ಕ ಕಡಿತಗೊಳಿಸುವ ಮೂಲಕ ಸೈಬರ್ ಕಾರ್ಯಾಚರಣೆ ನಡೆಸಲಾಗಿದೆ. ಇರಾನ್‌ನ ಸರ್ಕಾರಿ ಸೇವೆಗಳನ್ನು ಗುರಿಯಾಗಿಸುವುದರ ಜತೆಗೆ, ಅಲ್ಲಿನ ಜನಪ್ರಿಯ ಬಾದೆಸಬಾ ಧಾರ್ಮಿಕ ಆಪ್ ಅನ್ನು ಹ್ಯಾಕ್ ಮಾಡಿ ಲಕ್ಷಾಂತರ ಬಳಕೆದಾರರಿಗೆ ಎಚ್ಚರಿಕೆ ಸಂದೇಶಗಳನ್ನು ರವಾನಿಸಲಾಗಿದೆ.

ಎಐ ಚಾಲಿತ ಗುಪ್ತಚರ ಮಾಹಿತಿ

ಈ ಸಂಘರ್ಷದಲ್ಲಿ ಆಂಥ್ರೋಪಿಕ್ ಸಂಸ್ಥೆಯ ಕ್ಲೌಡ್ ಎಐ ಅನ್ನು ಯುದ್ಧಭೂಮಿಯ ವಿಶ್ಲೇಷಣೆ ಮತ್ತು ಗುರಿಗಳನ್ನು ಗುರುತಿಸಲು ಬಳಸಲಾಗುತ್ತಿದೆ, ಎಂದು ವರದಿಯಾಗಿದೆ. ಇಸ್ರೇಲ್ ಬಳಸುವ 'ಹಬ್ಸೋರಾ ಎಐ' ಮಾದರಿಯಲ್ಲೇ, ಈ ಎಲ್‌ಎಲ್‌ಎಂ ತಂತ್ರಜ್ಞಾನ ಮಿಲಿಟರಿ ಹಾರ್ಡ್‌ವೇರ್‌ನೊಂದಿಗೆ ನೇರವಾಗಿ ಸಂಯೋಜನೆಗೊಂಡಿವೆ. ಇದು ಅತ್ಯಂತ ವೇಗವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಮತ್ತು ನಿಖರವಾಗಿ ದಾಳಿ ನಡೆಸಲು ನೆರವಾಗುತ್ತಿದೆ.

ವ್ಯೂಹಾತ್ಮಕ ಬದಲಾವಣೆ

ಈ ಸಂಘಟಿತ ಯುದ್ಧತಂತ್ರ, ಆಧುನಿಕ ಯುದ್ಧಗಳ ಸ್ವರೂಪವನ್ನೇ ಬದಲಿಸುತ್ತಿದೆ. ಎಐ ಚಾಲಿತ ಅಗ್ಗದ ಡ್ರೋನ್‌ಗಳು ಶತ್ರುಗಳ ರಕ್ಷಣಾ ವ್ಯವಸ್ಥೆಯನ್ನು ಹೈರಾಣಾಗಿಸಿದರೆ, ಸೈಬರ್ ದಾಳಿಗಳು ಗೊಂದಲ ಸೃಷ್ಟಿಸುತ್ತವೆ. ಇದು ದುಬಾರಿ ಆಯುಧಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದಲ್ಲದೆ, ಯುದ್ಧದ ಆರ್ಥಿಕತೆಯನ್ನೇ ಮರುರೂಪಿಸುತ್ತಿವೆ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಇರಾನ್ ಪರಮಾಣು ಕೇಂದ್ರಕ್ಕೆ ಹಾನಿ

ವಿಯೆನ್ನಾ: ಇತ್ತೀಚೆಗೆ ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಮಿಲಿಟರಿ ಕಾರ್ಯಾಚರಣೆಯ ವೇಳೆ ಇರಾನ್‌ನ ಬೃಹತ್ ನಟಾಂಜ್ ಪರಮಾಣು ಕೇಂದ್ರದ ಮೇಲೆ ದಾಳಿ ನಡೆದಿದೆ ಎಂದು ವರದಿಯಾಗಿದೆ. ಈ ದಾಳಿಯಿಂದ ಹಾನಿಗೊಳಗಾಗಿರುವ ಕೇಂದ್ರವನ್ನು ಪುನರ್ ನಿರ್ಮಿಸುವುದಾಗಿ ಟೆಹ್ರಾನ್ ಸೋಮವಾರ ಪ್ರತಿಜ್ಞೆ ಮಾಡಿದೆ.

ಅಂತಾರಾಷ್ಟ್ರೀಯ ಪರಮಾಣು ಇಂಧನ ಸಂಸ್ಥೆಗೆ(ಐಎಇಎ) ಇರಾನ್ ರಾಯಭಾರಿ, ನಟಾಂಜ್ ಮೇಲೆ ದಾಳಿ ನಡೆದಿರುವ ಬಗ್ಗೆ ಮಾಹಿತಿ ನೀಡಿದ್ದು, ದಾಳಿಯನ್ನು ಖಂಡಿಸಿದ್ದಾರೆ. ನಾಶವಾಗಿರುವ ಮೂಲಸೌಕರ್ಯಗಳನ್ನು ಇನ್ನಷ್ಟು ಹೆಚ್ಚಿನ ಶಕ್ತಿಯೊಂದಿಗೆ ಪುನರ್ ನಿರ್ಮಿಸಲಾಗುವುದು ಎಂದು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಹೇಳಿದ್ದಾರೆ. ಅಲ್ಲದೆ, ತಮ್ಮ ಪರಮಾಣು ಯೋಜನೆ ಕೇವಲ ನಾಗರಿಕರ ಅಗತ್ಯಗಳಿಗಾಗಿ ಇದೆ ಎಂದು ಇರಾನ್ ಅಧಿಕಾರಿಗಳು ಪ್ರತಿಪಾದಿಸಿದ್ದಾರೆ.

ಸುರಕ್ಷತೆಯ ಬಗ್ಗೆ ಐಎಇಎ ಆತಂಕ: ವಿಯೆನ್ನಾದಲ್ಲಿ ನಡೆದ ಐಎಇಎ ಸಭೆಯಲ್ಲಿ, ದಾಳಿಗೊಳಗಾದ ಸ್ಥಳದಿಂದ ವಿಕಿರಣ ಸೂಸುವಿಕೆ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ ಮತ್ತು ಇದು ಬಹಳ ಕಳವಳಕಾರಿ ಬೆಳವಣಿಗೆ ಎಂದು ತಿಳಿಸಲಾಗಿದೆ. ಪ್ರಾದೇಶಿಕ ಉದ್ವಿಗ್ನತೆ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಪರಮಾಣು ಕೇಂದ್ರಗಳು ಅಪಾಯದಲ್ಲಿವೆ ಎಂದು ಸಂಸ್ಥೆಯ ಅಧಿಕಾರಿಗಳು ಎಚ್ಚರಿಸಿದ್ದು, ಸಂಯಮ ಕಾಯ್ದುಕೊಳ್ಳುವಂತೆ ಒತ್ತಾಯಿಸಿದ್ದಾರೆ.

ಆದಾಗ್ಯೂ, ಇರಾನ್ ದಾಳಿಯ ಬಗ್ಗೆ ಸ್ಪಷ್ಟವಾಗಿ ಹೇಳುತ್ತಿದ್ದರೂ, ಪರಮಾಣು ಸ್ಥಾವರಗಳಿಗೆ ನೇರ ಹಾನಿಯಾದ ಬಗ್ಗೆ ಇದುವರೆಗೆ ಯಾವುದೇ ಅಧಿಕೃತ ಪುರಾವೆಗಳು ಲಭ್ಯವಾಗಿಲ್ಲ ಎಂದು ಐಎಇಎ ತಿಳಿಸಿದೆ. ಪ್ರಸ್ತುತ ಸಂಸ್ಥೆ ಮತ್ತು ಇರಾನ್ ಅಧಿಕಾರಿಗಳ ನಡುವಿನ ಸಂವಹನ ಸೀಮಿತವಾಗಿದೆ ಎಂದು ವರದಿಯಾಗಿದೆ.



ಜಾಗತಿಕ ನಾಯಕರ ಬಳಿ ಮೋದಿ ಕಳವಳ

ಹೊಸದಿಲ್ಲಿ: ಪ್ರಸ್ತುತ ಜಗತ್ತಿನಲ್ಲಿ ನಡೆಯುತ್ತಿರುವ ಯುದ್ಧ ಸನ್ನಿವೇಶಗಳ ಬಗ್ಗೆ ಪ್ರಧಾನಿ ಮೋದಿ ತಮ್ಮ ಇಸ್ರೇಲ್ ಸಹವರ್ತಿ ಬೆಂಜಮಿನ್ ನೆತನ್ಯಾಹು, ಸೌದಿ ಅರೇಬಿಯಾದ ಯುವರಾಜ ಮೊಹಮ್ಮದ್ ಬಿನ್ ಸಲ್ಮಾನ್ ಅಲ್ ಸೌದ್ ಮತ್ತು ಬಹ್ರೇನ್‌ನ ದೊರೆ ಹಮದ್ ಬಿನ್ ಇಸಾ ಅಲ್ ಖಲೀಫಾ ಅವರೊಂದಿಗೆ ದೂರವಾಣಿ ಮಾತುಕತೆ ನಡೆಸಿ, ಕಳವಳ ವ್ಯಕ್ತಪಡಿಸಿದ್ದಾರೆ. ಯುದ್ಧದಿಂದಾಗಿ ಅಪಾಯದಲ್ಲಿ ಸಿಲುಕಿರುವ ನಾಗರಿಕರ ರಕ್ಷಿಸುವ ಕುರಿತು ಚರ್ಚಿಸಿರುವುದಾಗಿ ಮೋದಿ ಹೇಳಿದ್ದಾರೆ. ಸದ್ಯದ ಮಿಲಿಟರಿ ಸಂಘರ್ಷದ ನಡುವೆ ಎದುರಾಗುತ್ತಿರುವ ಸಮಸ್ಯೆಗಳ ಬಗ್ಗೆ ಜಾಗತಿಕ ನಾಯಕರು ಮಾತನಾಡಿದ್ದಾರೆ. ಇದೇ ವೇಳೆ ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ನಡೆಯುತ್ತಿರುವ ಪರಿಸ್ಥಿತಿಯ ಬಗ್ಗೆ ಪ್ರಧಾನಿ ಮೋದಿಯವರೊಂದಿಗೆ ಸುದೀರ್ಘವಾಗಿ ಮಾತನಾಡಿದ್ದೇನೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಸೋಮವಾರ ಹೇಳಿದ್ದಾರೆ.

ಖಮೇನಿ ಹತ್ಯೆ ಖಂಡಿಸಿದ ಕೇರಳ ಸಿಎಂ ಪಿಣರಾಯಿ

ತಿರುವನಂತಪುರ: ಇರಾನ್ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆ ಖಂಡಿಸಿರುವ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಅಮೆರಿಕ ಮತ್ತು ಇಸ್ರೇಲ್‌ಗಳು ಅಮಾನುಷ ರಾಷ್ಟ್ರಗಳು ಎಂದು ಟೀಕಿಸಿದ್ದಾರೆ. ತಮ್ಮನ್ನು ಒಪ್ಪದ ರಾಷ್ಟ್ರಗಳು ಹಾಗೂ ರಾಷ್ಟ್ರ ನಾಯಕರನ್ನು ನಾಶಮಾಡುವ ಸಾಮ್ರಾಜ್ಯಶಾಹಿ ಚಿಂತನೆಯ ಭಾಗವಾಗಿ, ಎರಡೂ ಅಮಾನುಷ ರಾಷ್ಟ್ರಗಳು ಇರಾನ್ ಮೇಲೆ ದಾಳಿ ನಡೆಸಿವೆ ಎಂದು ಅಮೆರಿಕ, ಇಸ್ರೇಲ್‌ಗಳನ್ನು ಸಿಎಂ ಪಿಣರಾಯಿ ಕಟುವಾಗಿ ತರಾಟೆಗೆತ್ತಿಕೊಂಡಿದ್ದಾರೆ.



ಜನರು ತಮ್ಮದೇ ಆದ ಕೆಲವು ಪ್ರಾಥಮಿಕ ನಡವಳಿಕೆ, ಗಾಂಭೀರ್ಯಗಳ ಪರಸ್ಪರ ಮೆರೆಯುತ್ತಾರೆ. ಅದೇ ತೆರ ರಾಷ್ಟ್ರಗಳು ಕೂಡ ಪರಸ್ಪರ ಗಾಂಭೀರ್ಯ ಮೆರೆಯೋದು ಮುಖ್ಯ. ತಾವು ಪಾಲಿಸುವ ನೀತಿ-ಅಭಿಮತಗಳ ಇತರ ರಾಷ್ಟ್ರಗಳೂ ಪಾಲಿಸಬೇಕೆಂದು ಯಾವ ರಾಷ್ಟ್ರ ಕೂಡ ನಿರೀಕ್ಷಿಸಕೂಡದು. ಅಮೆರಿಕದ ವಸಾಹತುಶಾಹಿ, ಸಾಮ್ರಾಜ್ಯಶಾಹಿ ಚಿಂತನೆಗಳ ಬೆಂಬಲಿಸುವ, ಸದಾ ನಿರಂತರ ಶಸ್ತ್ರಾಸ್ತ್ರ ಪೂರೈಕೆ, ಹಣಕಾಸು ಪೂರೈಕೆಯಲ್ಲಿ ಮುಳುಗಿರುವ ಸಮರದಾಹಿ ಅಮಾನುಷ ರಾಷ್ಟ್ರಗಳು ಮಾತ್ರ ಈ ರೀತಿ ಚಿಂತನೆ ಹೊಂದಿರುತ್ತವೆ. ಈ ರೀತಿ ಮನೋಭಾವದ ವ್ಯಕ್ತಿಗಳು ರಾಷ್ಟ್ರವನ್ನು ಆಳಲು ಸಮರ್ಥರೇ ಎಂಬ ಆತಂಕವೀಗ ಮೂಡಿದೆ ಎಂದು ಪಿಣರಾಯಿ ಮೂದಲಿಸಿದ್ದಾರೆ.

ಪ್ರಧಾನಿ ಮೋದಿಗೆ ಪತ್ರ: ಪ್ರಸಕ್ತ ಸಂಘರ್ಷಪೀಡಿತ ಪ.ಏಷ್ಯಾ ರಾಷ್ಟ್ರಗಳಲ್ಲಿ ಕೇರಳದ ಲಕ್ಷಾಂತರ ಜನರು ದುಡಿಯುತ್ತಿದ್ದು, ಇವರ ಸುರಕ್ಷೆಗಾಗಿ ತುರ್ತು ಮಧ್ಯಪ್ರವೇಶಿಸುವಂತೆ ಆಗ್ರಹಿಸಿ, ಪ್ರಧಾನಿ ನರೇಂದ್ರ ಮೋದಿ ಅವರಿಗೆ ತಾನು ಪತ್ರ ಬರೆದಿರುವುದಾಗಿ ಪಿಣರಾಯಿ ಹೇಳಿದರು.

ಕಮಿಕಾಜಿ ಡ್ರೋನ್ ಬಳಸಿ ಪಾಕಿಸ್ತಾನ ಸೇನಾನೆಲೆಗಳ ಮೇಲೆ ದಾಳಿ

ಪಾಕ್‌ಗೆ ಅಫ್ಘಾನ್ ಡ್ರೋನ್ ಆಘಾತ

ಇಸ್ಲಾಮಾಬಾದ್: ಅಫ್ಘಾನಿಸ್ತಾನದ ವಾಯುಪಡೆ ಸೋಮವಾರ ಪಾಕಿಸ್ತಾನದ ಪ್ರಮುಖ ಮಿಲಿಟರಿ ನೆಲೆಗಳ ಮೇಲೆ ಸಂಘಟಿತ ವೈಮಾನಿಕ ದಾಳಿ ನಡೆಸಿದ್ದು, ಪ್ರಾದೇಶಿಕ ಸಂಘರ್ಷ ಮತ್ತಷ್ಟು ಉಲ್ಬಣಗೊಂಡಿದೆ. ಕಮಿಕಾಜಿ ಡ್ರೋನ್‌ಗಳನ್ನು ಬಳಸಿ ನಡೆಸಲಾದ ಈ ಕಾರ್ಯಾಚರಣೆಯಲ್ಲಿ ರಾವಲ್ಪಿಂಡಿಯ ನೂರ್ ಖಾನ್ ವಾಯು ನೆಲೆ ಮತ್ತು ಕ್ವೆಟ್ಟಾದಲ್ಲಿರುವ 12ನೇ ಕಾರ್ಪ್ಸ್ ಕೇಂದ್ರ ಕಚೇರಿಯನ್ನು ಗುರಿಯಾಗಿಸಿಕೊಳ್ಳಲಾಗಿದೆ ಎಂದು ತಿಳಿದುಬಂದಿದೆ.

ಪ್ರಮುಖ ನೆಲೆಗಳ ಮೇಲೆ ದಾಳಿ: ಅಫ್ಘಾನಿಸ್ತಾನದ ರಕ್ಷಣಾ ಸಚಿವಾಲಯ ಈ ದಾಳಿಯನ್ನು ದೃಢಪಡಿಸಿದ್ದು, ಮೊಹಮ್ಮದ್ ಏಜೆನ್ಸಿಯ ಖೋವಿಜೂ ಕ್ಯಾಂಪ್ ಮತ್ತು ಇತರ ಕಮಾಂಡ್ ಕೇಂದ್ರಗಳ ಮೇಲೆ ನಿಖರ ದಾಳಿ ನಡೆದಿದೆ ಎಂದು ತಿಳಿಸಿದೆ. ಪ್ರಾಥಮಿಕ ವರದಿಗಳ ಪ್ರಕಾರ, ಈ ದಾಳಿಯಿಂದ ನಿಗದಿಪಡಿಸಿದ ಗುರಿಗಳಿಗೆ ಭಾರಿ ಹಾನಿಯಾಗಿದೆ. ಕಾಬೂಲ್ ಮತ್ತು ಬಾಗ್ರಾಮ್ ಸೇರಿದಂತೆ ಅಫ್ಘಾನ್ ಪ್ರದೇಶಗಳ ಮೇಲೆ ಪಾಕಿಸ್ತಾನ ಇತ್ತೀಚೆಗೆ ನಡೆಸಿದ ವೈಮಾನಿಕ ದಾಳಿಗೆ ಪ್ರತಿಕ್ರಿಯೆಯಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಕಾಬೂಲ್ ವಿವರಿಸಿದೆ.



ಗಡಿ ಸಂಘರ್ಷ ಇನ್ನಷ್ಟು ತೀವ್ರ

2,611 ಕಿಲೋಮೀಟರ್ ಉದ್ದದ ಡುರಾಂಡ್ ಲೈನ್ ಈಗ ಸಂಘರ್ಷದ ಕೇಂದ್ರ ಬಿಂದುವಾಗಿದ್ದು, ಉಭಯ ದೇಶಗಳ ನಡುವೆ ನೇರ ಯುದ್ಧ ಆರಂಭವಾಗಿದೆ. ಈ ಹಿಂದಿನ ದಾಳಿಗಳಲ್ಲಿ 270ಕ್ಕೂ ಹೆಚ್ಚು ತಾಲಿಬಾನ್ ಹೋರಾಟಗಾರರನ್ನು ಹೊಡೆದುರುಳಿಸಿರುವುದಾಗಿ ಪಾಕ್ ಹೇಳಿಕೊಂಡಿದ್ದರೆ, 55 ಪಾಕ್ ಸೈನಿಕರು ಸಾವನ್ನಪ್ಪಿದ್ದಾರೆ ಎಂದು ಅಫ್ಘಾನ್ ಅಧಿಕಾರಿಗಳು ವರದಿ ಮಾಡಿದ್ದಾರೆ. ರಾಜತಾಂತ್ರಿಕ ಪ್ರಯತ್ನಗಳು ವಿಫಲವಾಗಿವೆ. ನೆರೆಹೊರೆಯ ರಾಷ್ಟ್ರಗಳ ನಡುವೆ ಉದ್ವಿಗ್ನತೆ ಹೆಚ್ಚಿರುವುದರಿಂದ, ಎಲ್ಲಾ ಮಿಲಿಟರಿ ಘಟಕಗಳನ್ನು ಕಟ್ಟೆಚ್ಚರದಲ್ಲಿ ಇರಿಸಲಾಗಿದೆ.

ಇಪಿಎಫ್ ಬಡ್ಡಿದರ ಬದಲಾವಣೆಯಿಲ್ಲ

ಹೊಸದಿಲ್ಲಿ: ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆ (ಇಪಿಎಫ್‌ಒ), 2025-26ನೇ ವಿತ್ತೀಯ ವರ್ಷಕ್ಕೆ ತನ್ನ ಠೇವಣಿಗಳ ಮೇಲಿನ ಬಡ್ಡಿದರವನ್ನು ಶೇ.8.25ರಷ್ಟು ನಿಗದಿಪಡಿಸಿದೆ. ಸೋಮವಾರ ಪ್ರಕಟಿಸಲಾದ ಈ ನಿರ್ಧಾರದಿಂದ, ನಿವೃತ್ತಿ ನಿಧಿ ಸಂಸ್ಥೆ ಸತತ ಮೂರನೇ ವರ್ಷವೂ ಅದೇ ಬಡ್ಡಿದರ ಮುಂದುವರಿಸಿದಂತಾಗಿದೆ.

> 2025-26ನೇ ಸಾಲಿಗೆ ಬಡ್ಡಿದರ ಶೇ.8.25 ನಿಗದಿ

ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ವಿಶ್ವಸ್ತ ಮಂಡಳಿ(ಸಿಬಿಟಿ) ಸಭೆಯಲ್ಲಿ ಈ ಶಿಫಾರಸು ಮಾಡಲಾಗಿದೆ. ಜಾಗತಿಕ ಆರ್ಥಿಕ ಅನಿಶ್ಚಿತತೆಯ ನಡುವೆ 6 ಕೋಟಿಗೂ ಅಧಿಕ ಚಂದಾದಾರರಿಗೆ ಸ್ಥಿರ ಆದಾಯ ಒದಗಿಸುವುದು ಈ ಕ್ರಮದ ಉದ್ದೇಶವಾಗಿದೆ.

ಇದರೊಂದಿಗೆ ಮಂಡಳಿ, ಒಂದು ಬಾರಿಯ ಕ್ಷಮಾದಾನ ಯೋಜನೆಗೂ (ಆಮ್ನೆಸ್ಟಿ ಸ್ಕೀಮ್) ಅನುಮೋದನೆ ನೀಡಿದೆ. ಈ ಆರು ತಿಂಗಳ ಅವಧಿ, ಕಾರ್ಮಿಕರ ಹಿತಾಸಕ್ತಿಯನ್ನು ರಕ್ಷಿಸುವುದರ ಜೊತೆಗೆ, ಕಂಪನಿಗಳು ನಿಯಮ ಪಾಲನೆಗೆ ಇರುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅವಕಾಶ ನೀಡುತ್ತದೆ. ಡಿಜಿಟಲ್ ಆಧುನೀಕರಣ ಮತ್ತು ಹಕ್ಕುಗಳ ಇತ್ಯರ್ಥವನ್ನು ಸುಲಭಗೊಳಿಸಲು ಹೊಸ ಕ್ರಮಗಳನ್ನು ಇಪಿಎಫ್‌ಒ ಪರಿಚಯಿಸಿದೆ.

ಇರಾನ್ ವಿರುದ್ಧ ಇನ್ನೊಂದು ವಾರ ಸಮರ

ಇರಾನ್ ವಿರುದ್ಧ ಕಾರ್ಯಾಚರಣೆ ಮುಗಿಯಲು ವಾರಕ್ಕಿಂತ ಹೆಚ್ಚಿನವಧಿ ಹಿಡಿಯಲಿದೆ ಎಂದು ಇಸ್ರೇಲ್‌ನ ಮಿಲಿಟರಿ ಪಡೆ ಹೇಳಿದೆ. ಇರಾನ್‌ನ ಆಡಳಿತ ವ್ಯವಸ್ಥೆಗೊಂದು ಭಾರೀ ಹೊಡೆತ ನೀಡುವುದು ನಮ್ಮ ಗುರಿ ಮತ್ತು ಇದರ ಸಾಕಾರಕ್ಕೆ ಕೆಲವು ದಿನಗಳ ಮೀರಿ ದೀರ್ಘ ಸಮಯ ಬೇಕಾಗುವುದು ಎಂದು ಹೇಳಿದೆ. ದ ಟೈಮ್ಸ್ ಆಫ್ ಇಸ್ರೇಲ್ ಈ ಮಾಹಿತಿ ನೀಡಿದೆ. ಈಚಿನ ದಾಳಿಗಳನ್ನು ಇರಾನ್ ನಾಯಕತ್ವಕ್ಕೆ ಸಂಬಂಧಿತ ನಿವೇಶನಗಳು, ಖಂಡಾಂತರ ಕ್ಷಿಪಣಿ ಉಡಾವಕಗಳು, ವಾಯು ರಕ್ಷಣಾ ವ್ಯವಸ್ಥೆಗಳ ಗುರಿಯಾಗಿಟ್ಟು ನಡೆಸಿದ್ದೇವೆ. ಅಣ್ವಸ್ತ್ರ ಸೌಲಭ್ಯಗಳ ಮೇಲೆ ದಾಳಿ ನಡೆಸಿಲ್ಲ, ಆದರೂ ಇಸ್ರೇಲ್ ಮತ್ತು ಅಮೆರಿಕಗಳು ಹಂಚಿಕೊಂಡಿರುವ ಗುರಿಗಳಲ್ಲಿ ಇದು ಕೂಡ ಒಳಗೊಂಡಿದೆ ಎಂದು ಇಸ್ರೇಲ್ ಮಿಲಿಟರಿ ಹೇಳಿದೆ.

4 ವಾರ ನಡೆಯಲಿದೆ: ಕಾರ್ಯಾಚರಣೆ ನಾಲ್ಕು ವಾರಗಳ ಕಾಲ ಮುಂದುವರಿಯುವುದು ಖಂಡಿತ ಎಂದು ಅಮೆರಿಕ ಅಧ್ಯಕ್ಷ ಟ್ರಂಪ್ ಡೈಲಿ ಮೈಲ್‌ಗೆ ತಿಳಿಸಿದ್ದಾರೆ. ಸಂಘರ್ಷ ಶುರುವಾದ ನಂತರ ನಾಲ್ವರು ಅಮೆರಿಕನ್ ಸೇವಾ ಸದಸ್ಯರು ಸಾವಿಗೀಡಾಗಿದ್ದಾರೆ. ಇರಾನ್‌ನ ಆರಂಭಿಕ ದಾಳಿಗಳಿಂದ ಗಾಯಗೊಂಡಿದ್ದ ಓರ್ವ ಯೋಧ ನಂತರ ಅಸುನೀಗಿದರೆಂದು ಅಮೆರಿಕದ ಸೆಂಟ್ರಲ್ ಕಮಾಂಡ್ ತಿಳಿಸಿದೆ.

ನಾವು ಸಮರ ಗೆಲ್ಲಬೇಕು ಅಷ್ಟೇ...: ವಾಷಿಂಗ್ಟನ್‌ನ ಗುರಿ ಸಂಪೂರ್ಣ ಮಿಲಿಟರಿ. ಇಲ್ಲಿ ಇರಾನ್‌ನ ರಾಜಕೀಯ ವ್ಯವಸ್ಥೆಯ ಪುನಾರಚನೆ, ರಾಷ್ಟ್ರ ನಿರ್ಮಾಣ ಆಶಯವಾಗಲಿ, ಪ್ರಜಾಸತ್ತೆ ನಿರ್ಮಾಣ ಪ್ರಕ್ರಿಯೆಯ ಗುರಿ ನಮಗಿಲ್ಲ, ರಾಜಕೀಯವಾಗಿ ಸೂಕ್ತವಾದ ಸಮರ ನಡೆಸಬೇಕೆಂಬ ಲೆಕ್ಕಾಚಾರ ಕೂಡ ನಮ್ಮದಲ್ಲ, ಸಮರದಲ್ಲಿ ವಿಜಯಿಗಳಾಗಬೇಕು ಎಂಬುದೊಂದೇ ನಮ್ಮ ಗುರಿ.

ಶ್ರೀ ರಾಮಲಲಾ ದರ್ಶನದ ಸಮಯ ಬದಲಾವಣೆ

ಅಯೋಧ್ಯೆ: ಪೂರ್ಣ ಪ್ರಮಾಣದ ಚಂದ್ರಗ್ರಹಣದ ಕಾರಣದಿಂದಾಗಿ ಅಯೋಧ್ಯೆಯ ಶ್ರೀ ರಾಮ ಜನ್ಮಭೂಮಿ ಮಂದಿರ ಮಂಗಳವಾರ ಬೆಳಗ್ಗೆ 9:00 ಗಂಟೆಯಿಂದ ರಾತ್ರಿ 8:30ರವರೆಗೂ ಭಕ್ತರಿಗೆ ರಾಮಲಲಾ ದರ್ಶನಕ್ಕೆ ಅವಕಾಶವಿರುವುದಿಲ್ಲ. ಪ್ರತಿ ದಿನದಂತೆ ಬೆಳಗ್ಗೆಯ ಮಂಗಳಾರತಿ ಹಾಗೂ ಶೃಂಗಾರ ಆರತಿಯ ನಂತರ ಸಾರ್ವಜನಿಕ ದರ್ಶನ ಪ್ರಾರಂಭವಾಗಲಿದ್ದು ಬೆಳಗ್ಗೆ 8:15ಕ್ಕೆ ಭಗವಂತನಿಗೆ



ನೈವೇದ್ಯ ಅರ್ಪಿಸಿದ ನಂತರ 9:00 ಗಂಟೆಯಿಂದ ರಾತ್ರಿ 8:30ರವರೆಗೂ ಭಕ್ತರಿಗೆ ದರ್ಶನಕ್ಕೆ ಅವಕಾಶವಿರುವುದಿಲ್ಲ. ರಾತ್ರಿ 8:30ಕ್ಕೆ ಸಂಧ್ಯಾ ಆರತಿ ಮತ್ತು 9:30ಕ್ಕೆ ನೈವೇದ್ಯ ಹಾಗೂ ಆರತಿಯ ನಂತರ ಭಕ್ತರಿಗೆ ರಾತ್ರಿ 11:00 ಗಂಟೆಯವರಿಗೂ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದು ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಟ್ರಸ್ಟಿ ಅನಿಲ್ ಮಿಶ್ರಾ ತಿಳಿಸಿದ್ದಾರೆ.

ಕಿರುಸುದ್ದಿ

ಬೈಕ್ ಸವಾರ ಸಾವು

◆ **ಹುಬ್ಬಳ್ಳಿ:** ಬೈಕ್‌ನಲ್ಲಿ ಹೋಗುವಾಗ ಯುವಕ ನಿಯಂತ್ರಣ ತಪ್ಪಿ ರಸ್ತೆ ಬಿದ್ದು, ಮೃತಪಟ್ಟಿರುವ ಘಟನೆ ತಾಲೂಕಿನ ಕುಸುಗಲ್ ರಸ್ತೆಯಲ್ಲಿ ಭಾನುವಾರ ತಡರಾತ್ರಿ ನಡೆದಿದೆ. ಹಳೆಹುಬ್ಬಳ್ಳಿಯ ಜಂಗ್ಲಿಪೇಟೆ ನಿವಾಸಿ ನಾಗರಾಜ ಯಲ್ಲಪ್ಪ ಯಂಟ್ರಾವಿ(25) ಮೃತಪಟ್ಟವರು. ನವಲಗುಂದ ರಾಮಲಿಂಗೇಶ್ವರ ಕಾಮಣ್ಣನ ಆಶೀರ್ವಾದ ಪಡೆಯಲು ಹೊರಟಿದ್ದ ಯುವಕ ಬೈಕ್ ಅಪಘಾತವಾಗಿದೆ. ಬೈಕ್ ನಿಯಂತ್ರಣ ತಪ್ಪಿ ರಸ್ತೆ ಬದಿಯ ಮೈಲಿಗಲ್ಲುಗೆ ಡಿಕ್ಕಿ ಹೊಡೆದಿದ್ದಾರೆ. ಈ ಕುರಿತು ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	3825	3825
ಕಡಲೆಬೇಳೆ	6550	10000
ಕಡಲೆಕಾಳು	4950	5800
ಉದ್ದಿನಬೇಳೆ	9901	13600
ಉದ್ದಿನಕಾಳು	3869	6621
ಧನಿಯಾ	10892	10892
ಒಣ ಮೆಣಸಿನಕಾಯಿ	4600	46670
ಬಟಾಣಿ	5701	5750
ಹೆಸರುಕಾಳು	1219	6866
ನೆಲಗಡಲೆ (ಶೇಂಗಾ)	4260	8501
ಕಡಲೆಕಾಯಿ ಬೀಜ	9000	9000
ಬೆಲ್ಲ	3900	5350
ಜೋಳ	1510	4016
ಮೆಕ್ಕೆಜೋಳ	1426	1775
ಮಡಿಕೆ (ಮಟಕಿ)	11001	13535
ಸಾಸುವೆ	4000	4000
ಈರುಳ್ಳಿ	500	2100
ಆಲೂಗಡ್ಡೆ	1100	1800
ಅಕ್ಕಿ	5450	5450
ಕುಸುಬೆ	5111	5325
ಸೋಯಾಬಿನ್	3619	5359
ತೊಗರಿ	3001	5025
ಗೋಧಿ	2152	2510

ರತಿ ಮನ್ಮಥರಿಗೆ ಪೂಜೆ ಸಲ್ಲಿಸಿದ ಭಕ್ತರು

◆**ಹಗರಿಬೊಮ್ಮನಹಳ್ಳಿ:** ಹೋಳಿ ಹಬ್ಬದ ಅಂಗವಾಗಿ ಬಳಿ ಪಟ್ಟಣದ ರಾಮನಗರ ತೇರು ಬೀದಿ ಬಳಿ ರತಿ ಮನ್ಮಥರನ್ನು ಪ್ರತಿಷ್ಠಾಪನೆ ಮಾಡಲಾಗಿತ್ತು. ಹೋಳಿ ಹಬ್ಬದ ಅಂಗವಾಗಿ ರತಿ ಮನ್ಮಥರಿಗೆ ಪೂಜೆ ಭಕ್ತರು ಸಲ್ಲಿಸಿದರು.

ಈ ವೇಳೆ ಧರ್ಮಕರ್ತರಾದ ನಾಣ್ಯಪುರದ ಕೃಷ್ಣಮೂರ್ತಿ ಶೆಟ್ರು ಮಾತನಾಡಿ, ಹೋಳಿ ಇದೊಂದು ಐತಿಹಾಸಿಕ ಪೌರಾಣಿಕ ವಿವಿಧ ಹಿಂದೂ ಸಂಪ್ರದಾಯ ಪ್ರಕಾರ ಹೋಳಿ ಹಬ್ಬ ವಿಶೇಷ ಸಾಂಸ್ಕೃತಿಕ ಹಿನ್ನೆಲೆ ಹೊಂದಿದೆ. ಒಮ್ಮೆ ಸಾಕ್ಷಾತ್ ಶಿವನ ತಪಸ್ಸು ಭಂಗ ಗೊಳಿಸಲು ಮನ್ಮಥ ಬಾಣ ಬಿಟ್ಟಾಗ ಶಿವನ ಮೂರನೇ ಕಣ್ಣು ತೆರೆದು ಸ್ಥಳದಲ್ಲಿಯೇ ಮನ್ಮಥ ಸುಟ್ಟು ಬೂದಿಯಾಗುತ್ತಾನೆ. ಇದನ್ನು ನೋಡಿ ರತಿಯು ರೋಧಿಸುತ್ತಾ ಮನ್ಮಥನನ್ನು ಬದುಕಿಸುವಂತೆ ನಾರಾಯಣನ ಮೊರೆ ಹೋಗುತ್ತಾಳೆ.

ನಾರಾಯಣ ಕೃಪೆಯಿಂದ ಮನ್ಮಥನು ಹೋಳಿ ಹಬ್ಬದ ಸಮಯದಲ್ಲಿ ವರ್ಷದಲ್ಲಿ ಮೂರು ದಿನ ಮರು ಜೀವ ಪಡೆದು ಹುಟ್ಟಿ ಬರುತ್ತಾನೆ.ಮನ್ಮಥ ಹುಟ್ಟಿ ಬಂದ ದಿನವನ್ನು ಹೋಳಿ ಹಬ್ಬವನ್ನಾಗಿ ಆಚರಿಸಲಾಗುತಿದೆ.



ನಮ್ಮಲ್ಲಿರುವ ಕಾಮ ಕ್ರೋಧ ಅಜ್ಞಾನ ಅಂಧಕಾರ ಮದ ಮತ್ಸರ್ಯ ಘರ್ಷಣೆಯನ್ನು ದೋಷಗಳನ್ನು ದುರ್ಗುಣಗಳನ್ನು ಕೊನೆಗಾಣಿಸಲು ಕಾಮನನ್ನು ಸುಡುವ ಮೂಲಕ ದಹಿಸುವುದು ಮರುದಿನ ಬಣ್ಣದೋಕುಳಿ ಎರಚುವುದು ಹಬ್ಬದ ವಿಶೇಷವಾಗಿದೆ. ಈ ಸ್ಥಳದಲ್ಲಿ ಸತತ 70 ವರ್ಷಗಳಿಂದ ಹೋಳಿ ಹಬ್ಬವನ್ನು ಆಚರಿಸುತ್ತಾ ಬರಲಾಗಿದೆ. ಹಿಂದೂ ಸಮಾಜದ ಎಲ್ಲಾ ಬಾಂಧವರು ಹೋಳಿ ಹಬ್ಬವನ್ನು ಸಂಭ್ರಮದೊಂದಿಗೆ ಶಾಂತ ರೀತಿಯಿಂದ ಆಚರಿಸಿ ಎಲ್ಲಾರಿಗೂ ಶುಭವಾಗಲಿ ಎಂದರು.

ಜೆಡಿಎಸ್ ತಾಲೂಕ ಅಧ್ಯಕ್ಷ ವೈ.ಮಲ್ಲಿಕಾರ್ಜುನ, ಇಂಜಿನಿಯರ್ ನಾಗೇಂದ್ರ ಕುಮಾರ್ ಮುಖಂಡರಾದ ಡಿಶ್ ಮಂಜುನಾಥ ಸರೆಗಾರ ಹುಚ್ಚಪ್ಪ, ಡ್ರೈವರ್ ವಿಶ್ವನಾಥ ಸೇರಿದಂತೆ ಇತರರು ಇದ್ದರು.

ವರ್ಧಂತಿ ಉತ್ಸವ: ರಕ್ತದಾನ ಶಿಬಿರ

◆**ಹುಬ್ಬಳ್ಳಿ:** ಶ್ರೀ ರಾಘವೇಂದ್ರ ಸ್ವಾಮಿಗಳ 431ನೇ ವರ್ಧಂತಿ ಉತ್ಸವ ನಿಮಿತ್ತ ರವಿವಾರ ಇಲ್ಲಿನ ಭವಾನಿ ನಗರದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ರಕ್ತದಾನ ಶಿಬಿರ ನಡೆಯಿತು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಾಗೂ ರಾಷ್ಟ್ರೋತ್ಥಾನ ರಕ್ತ ಭಂಡಾರ ಮತ್ತು ಸೃಷ್ಟಿ ರಾಷ್ಟ್ರೋತ್ಥಾನ ಲ್ಯಾಬೋರೋಟರಿ ಆಶ್ರಯದಲ್ಲಿ 7ನೇ ರಕ್ತದಾನ ಶಿಬಿರ ನಡೆಸಲಾಯಿತು. 211 ಯುನಿಟ್ ರಕ್ತ ಸಂಗ್ರಹವಾಯಿತು. ರಾಷ್ಟ್ರೋತ್ಥಾನ ರಕ್ತಕೇಂದ್ರದ ಆಡಳಿತಾಧಿಕಾರಿ ದತ್ತಮೂರ್ತಿ ಕುಲಕರ್ಣಿ 90ನೇ ಬಾರಿ ರಕ್ತದಾನ ಮಾಡಿದರು.

ಕೇಶ್ವಾಪುರ ನಾಗಶೆಟ್ಟಿಕೊಪ್ಪದ ನಿವಾಸಿಗಳು ಸಾಕಿದ ಟಗರಿನ ಜನ್ಮದಿನ ನಿಮಿತ್ತ ಪ್ರತಿವರ್ಷ 60ಕ್ಕೂ ಹೆಚ್ಚು ಜನ ರಕ್ತದಾನ ಮಾಡುತ್ತಾರೆ. ಆದರೆ ಈ ವರ್ಷ ಟಗರಿನ ಆರೋಗ್ಯದಲ್ಲಿ ಸರಿ ಇಲ್ಲದ ಕಾರಣ ಇಲ್ಲಿಯೇ ಕೆಲವೊಂದಿಷ್ಟು ಜನರು ಆಗಮಿಸಿ ರಕ್ತದಾನ ಮಾಡುವ ಭರವಸೆ ದತ್ತಮೂರ್ತಿ ಕುಲಕರ್ಣಿ ತಿಳಿಸಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಉತ್ತರ ಪ್ರಾಂತ ಕಾರ್ಯಕಾರಿಣಿ ಸದಸ್ಯ ಶ್ರೀಧರ ನಾಡಿಗೇರ, ಉದ್ಯಮಿಗಳಾದ ಗೋವಿಂದ ಜೋಶಿ, ವಿ.ಎಸ್.ವಿ. ಪ್ರಸಾದ, ಪವನ ಜೋಶಿ, ಕೆ.ಡಿ. ಕುಲಕರ್ಣಿ, ಲಕ್ಷ್ಮಣ ಕುಲಕರ್ಣಿ, ಡಾ.ಬಿ.ಬಿ. ಪಾಟೀಲ, ಜಯತೀರ್ಥ ಕಟ್ಟಿ, ಸಂದೀಪ ಕುಲಕರ್ಣಿ, ಗೋಪಾಲ ಕುಲಕರ್ಣಿ ಇದ್ದರು.



ಇಬ್ಬರ ಬಂಧನ

◆ **ಹುಬ್ಬಳ್ಳಿ:** ತಾಲೂಕಿನ ರೇವಡಿಹಾಳ ಗ್ರಾಮದ ಹತ್ತಿರ ಕಾರಿನಲ್ಲಿದ್ದವರಿಗೆ ಚಾಕು ತೋರಿಸಿ 5.60 ಲಕ್ಷ ಮೌಲ್ಯದ ಆಭರಣ ಹಣ ದೋಚಿ ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಹುಬ್ಬಳ್ಳಿ ಗ್ರಾಮೀಣ ಠಾಣೆ ಪೊಲೀಸರು ಬಂಧಿಸಿದ್ದಾರೆ. ಹುಬ್ಬಳ್ಳಿಯವರಾದ ಆಕಾಶ ಸಿಂಗನಳ್ಳಿ ಹಾಗೂ ರಾಜಶೇಖರ ಪಾವಟೆ ಎಂಬುವರನ್ನು ಬಂಧಿಸಿದ್ದಾರೆ. ಅವರಿಂದ 5.80 ಲಕ್ಷ ಮೌಲ್ಯದ ಬಂಗಾರದ ಚೈನ್ ಮತ್ತು ಬೈಕ್ ವಶಪಡಿಸಿಕೊಳ್ಳಲಾಗಿದೆ. ಹುಬ್ಬಳ್ಳಿ ಗ್ರಾಮೀಣ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ, ಫೆ.23ರಂದು ದೇವರಗುಡಿಹಾಳದಿಂದ ರೇವಡಿಹಾಳಕ್ಕೆ ಹೋಗುವ ರಸ್ತೆ ರೇವಡಿಹಾಳ ಗ್ರಾಮದ ವ್ಯಾಪ್ತಿಯ ಹೊಸದಾಗಿ ನಿರ್ಮಾಣ ಮಾಡುತ್ತಿರುವ ಖಾಲಿ ಜಾಗೆಯಲ್ಲಿ ಕಾರಿನಲ್ಲಿ ದಂಪತಿ ಮಾತನಾಡುತ್ತಿರುವಾಗ ಬೈಕ್‌ನಲ್ಲಿ ಬಂದ ಇಬ್ಬರು ಆರೋಪಿತರು, ಚಾಕು ತೋರಿಸಿ ಹೆದರಿಸಿ ಬಂಗಾರ ಚೈನ್ 35 ಗ್ರಾಂ ಹಾಗೂ 4500 -ರೂ.ಗಳನ್ನು ಕಿತ್ತುಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ಹುಬ್ಬಳ್ಳಿ ಗ್ರಾಮೀಣ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣ ಬೆನ್ನಟ್ಟಿದ್ದ ಪೊಲೀಸರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕಳ್ಳನ ಬಂಧನ: ತಾರಿಹಾಳ ಗ್ರಾಮದಲ್ಲಿ ಕಳವು ಪ್ರಕರಣದಲ್ಲಿ ಆರೋಪಿ ಗಣಪತಿ ವಿಲಾಸ ಕುಡತಲಕರ ಎಂಬಾತನನ್ನು ಬಂಧಿಸಿ, 8 ಗ್ರಾಂ ಬಂಗಾರದ ಆಭರಣ, 75 ಗ್ರಾಂ ಬೆಳ್ಳಿ ಆಭರಣ ವಶಪಡಿಸಿಕೊಳ್ಳಲಾಗಿದೆ. ಈ ಕುರಿತು ಹುಬ್ಬಳ್ಳಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಶಯಾಸ್ಪದವಾಗಿ ಮಹಿಳೆ ಸಾವು: ತನಿಖೆಗೆ ಆಗ್ರಹ

◆**ನಿಡಗುಂದಿ:** ತಾಲೂಕಿನ ಗೊಳಸಂಗಿಯ ಗೃಹಿಣಿಯೋರ್ವಳು ಕಾಲುವೆಗೆ ಬಿದ್ದು ಸಂಶಯಾಸ್ಪದವಾಗಿ ಮೃತಪಟ್ಟಿರುವ ಬಗ್ಗೆ ವರದಿಯಾಗಿದೆ. ಘಟನೆಯು ಪಟ್ಟಣದ ರಾಷ್ಟ್ರೀಯ ಹೆದ್ದಾರಿ ಬಳಿಯ ಆಲಮಟ್ಟಿ ಎಡದಂಡೆ ಕಾಲುವೆಯಲ್ಲಿ ಸೋಮವಾರ ಜರುಗಿದೆ. ಮೃತಳು ಸವಿತಾ ಉರ್ಫ ಸಂಗವ್ವ ಶಿವಾನಂದ ಮನಗೂಳಿ(35)ಎಂದು ತಿಳಿದುಬಂದಿದೆ. ಪ್ರಕರಣವನ್ನು ಮೃತಳ ತಾಯಿ ಚೆನ್ನಮ್ಮ ಬಾಗಲತ್ತಿ ಪಟ್ಟಣದ ಪೊಲೀಸ್ ಠಾಣೆಯಲ್ಲಿ ದಾಖಲಿಸಿದ್ದು, ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತಾಂತ್ರಿಕ ಲೋಕಕ್ಕೆ ನಾವು ಅಣಿಯಾಗಬೇಕಿದೆ: ಜೋಶಿ

◆**ಹುಬ್ಬಳ್ಳಿ:** ವಿಶ್ವವೂ ವೇಗವಾಗಿ ಬದಲಾಗುತ್ತಿದ್ದು, ಮಾಹಿತಿ ತಂತ್ರಜ್ಞಾನ ಹಾಗೂ ಕೃತಕ್ ಬುದ್ಧಿ ಮತ್ತೆ(ಎಐ)ಗೆ ನಂತಹ ತಾಂತ್ರಿಕ ಲೋಕಕ್ಕೆ ನಾವು ಅಣಿಯಾಗಬೇಕಿದೆ. ಕಾಲಕ್ಕೆ ತಕ್ಕಂತೆ ಬದಲಾಗಬೇಕಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ತಿಳಿಸಿದರು. ಇಲ್ಲಿಯ ಉಣಕಲ್‌ನ ಮಹಾನಗರ ಪಾಲಿಕೆ 36 ನೇ ವಾರ್ಡ್‌ನ ಅಂಬಿಕಾನಗರದ 100 ಅಡಿ ಮುಖ್ಯ ರಸ್ತೆ ಹಾಗೂ ಏಕತಾನಗರ ಮುಖ್ಯ ರಸ್ತೆಗಳನ್ನು ಲೋಕಾರ್ಪಣೆ ಮಾಡಿ ಮಾತನಾಡಿದರು. ಪ್ರಧಾನಿ ಮೋದಿ ಅವರು ದೇಶದ ಆಧುನಿಕತೆಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ. ಇಂತಹ ಪ್ರಪಂಚದಲ್ಲಿ ನಾವು ಅವರ ಜೊತೆ ಮುಂದುವರಿಯಬೇಕಿದೆ. ನಮಗಿರುವ ಮೂಲಭೂತ ಸೌಲಭ್ಯ ಸೌಕರ್ಯಗಳನ್ನು ಬಳಸಿಕೊಳ್ಳಬೇಕಾಗಿದೆ ಎಂದರು. ನಗರ ಸೌಂದರ್ಯಕರಣಕ್ಕೆ ಮೆರುಗು ಕೊಡುವ ಹುಬ್ಬಳ್ಳಿಯ ಉಣಕಲ್ ನ ಅಂಬಿಕಾನಗರದ ನೂರು ಅಡಿ ರಸ್ತೆ ಸುಮಾರು ಒಂದು ಕಿ ಮೀ ಉದ್ದವಾಗಿರುವಂತದ್ದು ಸಿಸಿ ರಸ್ತೆಯಾಗಿ ಮಧ್ಯದಲ್ಲಿ ಅತ್ಯಾಧುನಿಕ ವಿದ್ಯುತ ದೀಪ ಅಳವಡಿಸಲಾಗಿದೆ. ಮುಂದೆಯೂ ಇಂತಹ ಅಭಿವೃದ್ಧಿ ಕಾರ್ಯಗಳ ಮಾಡುವುದಾಗಿ ಭರವಸೆ ನೀಡಿದರು. ಶಾಸಕ ಮಹೇಶ ಟೆಂಗಿನಕಾಯಿ ಹಾಗೂ ಪಾಲಿಕೆ ಸದಸ್ಯ ರಾಜಣ್ಣ ಕೊರವಿ ಅವರು ಮಾತನಾಡಿದರು. ರಸ್ತೆಯ ನಿರ್ಮಾಣದ ಗುತ್ತಿಗೆದಾರಾದ ರಘು ಶೆಟ್ಟಿ ಪಾಂಡುರಂಗ ನಾಯ್ಕ, ನಾಗರಾಜ ಕುಂಬಾರ ಅವರನ್ನು ಸನ್ಮಾನಿಸಲಾಯಿತು. ಎನ್.ಬಿ. ರಾಮಪುರ, ಡಾ.ಟಿ.ಜಿ. ಪಾಟೀಲ, ಸಿ.ಎನ್. ಹರ್ಲಾಪುರ, ನಿತ್ಯಾನಂದ ಮುತ್ತರಮಠ, ಪರಶುರಾಮ ಹೊಂಬಳ, ಶಿವಯೋಗಿ ಬೆಂಕಿಶೆಟ್ಟರ, ಎಸ್.ಬಿ. ಬಳಿಗಾರ, ವಿಶ್ವನಾಥ ಕೊರವಿ ಇದ್ದರು.

ಹೊಂಡದಲ್ಲಿ ಜಾರಿ ಬಿದ್ದು ಬಾಲಕ ಸಾವು

◆**ಮುದ್ದೇಬಿಹಾಳ:** ಕುರಿ ಕಾಯಲು ಹೋಗಿದ್ದ ನಗರದ ಆಶ್ರಯ ಕಾಲೋನಿ ನಿವಾಸಿ ಸಾಬಣ್ಣ ಗಂಗನಹಳ್ಳಿ ಅವರ ಮಗ ಸುದೀಪ್ ಗಂಗನಹಳ್ಳಿ (14) ಹೊಂಡದಲ್ಲಿ ನೀರು ಕುಡಿಯಲು ಹೋಗಿ ಕಾಲು ಜಾರಿ ಬಿದ್ದ ಘಟನೆ ಸಮೀಪದ ಕುಂಟೋಜಿ ಗ್ರಾಮದ ಸರಹದ್ದಿನಲ್ಲಿ ಬರುವ ಜಮೀನಿನಲ್ಲಿ ಸೋಮವಾರ ನಡೆದಿದೆ. ಮೃತ ಬಾಲಕ ಕುಂಟೋಜಿ ಸೀಮೆಯಲ್ಲಿ ಕುರಿಗಳನ್ನು ಮೇಯಿಸಲು ಹೋದಾಗ ಆಕಸ್ಮಿಕವಾಗಿ ಕಾಲುಜಾರಿ ಬಿದ್ದು ಮೃತಪಟ್ಟಿದ್ದಾನೆ ಎಂದು ಮೃತನ ತಂದೆ ಸಾಬಣ್ಣ ಗಂಗನಹಳ್ಳಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದು, ಪಿಎಸ್‌ಐ ಸಂಜಯ್ ತಿಪ್ಪಾರೆಡ್ಡಿ ಸ್ಥಳ ಪರಿಶೀಲನೆ ನಡೆಸಿ, ದೂರು ದಾಖಲಿಸಿಕೊಂಡಿದ್ದಾರೆ.

ಕರಡಿ ದಾಳಿಯಿಂದ ಗಾಯಗೊಂಡಿದ್ದ ರೈತನ ಆರೋಗ್ಯ ವಿಚಾರಣೆ



◆**ಮುಂಡಗೋಡ:** ಕರಡಿ ದಾಳಿಯಿಂದ ಗಾಯಗೊಂಡಿದ್ದ ರೈತನನ್ನು ಇಲ್ಲಿನ ಎಸಿಎಫ್ ಮತ್ತು ಆರ್‌ಎಫ್‌ಒ ಅವರು ಸೋಮವಾರ ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಗೆ ತೆರಳಿ ಭೇಟಿ ನೀಡಿ ಗಾಯಗೊಂಡಿರುವ ರೈತನ ಆರೋಗ್ಯ ವಿಚಾರಿಸಿದ್ದಾರೆ.

ತಾಲೂಕಿನ ಗಣೇಶಪುರದ ರಹೀಮಖಾನ್ ಪಾಳಾ(60) ಎಂಬುವವನು ಮೇಲೆ ಭಾನುವಾರ ಸಂಜೆ ಪಾಳಾ ಸಮೀಪದ ತನ್ನ ಗದ್ದೆಗೆ ತೆರಳುತ್ತಿದ್ದಾಗ ಕರಡಿ ದಾಳಿ ಮಾಡಿತ್ತು. ಗಂಭೀರವಾಗಿ ಗಾಯಗೊಂಡವನನ್ನು ಮುಂಡಗೋಡ ತಾಲೂಕಾಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಲಾಗಿತ್ತು. ಹೆಚ್ಚಿನ ಚಿಕಿತ್ಸೆಗ ಹುಬ್ಬಳ್ಳಿಯ ಕಿಮ್ಸ್‌ಗೆ ಕರೆದೊಯ್ಯಲಾಗಿತ್ತು.

ವಿಷಯ ತಿಳಿದು ಸೋಮವಾರ ಇಲ್ಲಿನ ಎಸಿಎಫ್ ರವಿ ಹುಲಿಕೋಟಿ ಮತ್ತು ಆರ್‌ಎಫ್‌ಒ ಅಪ್ಪಾರಾವ್ ಕಲಶೆಟ್ಟಿ ಅವರು ಹುಬ್ಬಳ್ಳಿ ಕಿಮ್ಸ್‌ನಲ್ಲಿ ಗಾಯಾಳುವನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿದ್ದಲ್ಲದೇ, ಇಲಾಖೆಯಿಂದ ದೊರಕುವ ಪರಿಹಾರವನ್ನು ಕೊಡಿಸುವ ಪ್ರಯತ್ನ ಮಾಡುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದಾರೆ.

ಶಾಂತಿ, ಸೌಹಾರ್ದತೆಯಿಂದ ಹೋಳಿಹಬ್ಬ ಆಚರಿಸಿ

◆**ಯಲಬುರ್ಗಾ:** ಹೋಳಿ ಹಬ್ಬ ಹಾಗೂ ರಂಜಾನ ಹಬ್ಬ ಎಲ್ಲರೂ ಜೊತೆಗೂಡಿ ಶಾಂತಿ, ಸೌಹಾರ್ದತೆಯಿಂದ ಕಾನೂನು ಸುವ್ಯವಸ್ಥೆಗೆ ದಕ್ಕೆ ಬರದಂತೆ ಆಚರಣೆಗೆ ಮುಂದಾಗಬೇಕು ಪಿಎಸ್‌ಐ ವಿಜಯಪ್ರತಾಪ ಹೇಳಿದರು.



ಪಟ್ಟಣದ ಪೋಲಿಸ್ ಠಾಣೆ ಸಭಾಂಗಣದಲ್ಲಿ ಭಾನುವಾರ ಸಂಜೆ ಹೋಳಿ ಹಬ್ಬದ ಅಂಗವಾಗಿ ನಡೆದ ಸಾರ್ವಜನಿಕರ ಶಾಂತಿಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಹೋಳಿ ಹಬ್ಬದಲ್ಲಿ ಯಾವುದೇ ರೀತಿ ವಿಷಪೂರಿತ ಮತ್ತು ರಾಸಾಯನಿಕ ಮಿಶ್ರಣ ಬಣ್ಣ ಬಳಸದಂತೆ ಎಲ್ಲ ವರ್ಗದವರು ಶಾಂತಿ ಸೌಹಾರ್ದತೆಯಿಂದ ಹಬ್ಬ ಆಚರಣೆಗೆ ಮುಂದಾಗಬೇಕು ಎಂದರು.

ಹೋಳಿ ಹಬ್ಬದಂದು ಯಾವುದೇ ಬೆಲೆಬಾಳುವಂತಹ ಕಟ್ಟಿಗೆಗಳನ್ನು ಕಳ್ಳತನ ಮಾಡಬಾರದು ಇನ್ನೂ ಅಪರಿಚಿತರಿಗೆ ಒತ್ತಾಯ ಪೂರ್ವಕ ಬಣ್ಣ ಹಚ್ಚುವುದಾಗಲಿ ಹಣ ಪಿಡಿಸುವುದಾಗಲಿ. ತಂಟೆ, ತಕರಾರು, ಜಗಳ ಮಾಡದಂತೆ ಪ್ರೀತಿ,ವಿಶ್ವಾಸದಿಂದ ಸಾರ್ವಜನಿಕರು ಹಬ್ಬ ಆಚರಣೆ ಮಾಡಬೇಕು.ಜತೆಗೆ ರಂಜಾನ ಹಬ್ಬ ಇರುವುದರಿಂದ ಉಪವಾಸ ಆಚರಣೆ ಮಾಡುವ ಮುಸ್ಲಿಂ ಯುವಕರಿಗೆ ಯಾವುದೇ ತರಹದ ಬಣ್ಣ ಬಳಿಯದಂತೆ ಸಹಕಾರ ನೀಡಬೇಕು ಎಂದು ಹೇಳಿದರು.

ಪಪಂ ಮುಖ್ಯಾಧಿಕಾರಿ ನಾಗೇಶ ಮಾತನಾಡಿ ಪಟ್ಟಣದ ನಾಗರಿಕರು ಹೋಳಿ ಹಬ್ಬವನ್ನು ಶಾಂತಿಯುತವಾಗಿ ಹಾಗೂ ಸೌಹಾರ್ದತೆಯಿಂದ ಆಚರಿಸಬೇಕು ಎಂದರು.

ವಿಎಸ್‌ಎಸ್ ಸಂಘದ ಅಧ್ಯಕ್ಷ ದೊಡ್ಡಯ್ಯ ಗುರುವಿನ್ ಹಾಗೂ ಅಮರೇಶ ಹುಬ್ಬಳ್ಳಿ, ಷಣ್ಮುಖಪ್ಪ ರಾಂಪೂರ,ಎಂ.ಎಫ್.ನದಾಫ್ ಮಾತನಾಡಿದರು.

ಎನ್.ಕೆ.ಚಕ್ರಸಾಲಿ, ಲೋಕಪ್ಪ ನಾಯಕ, ಕಲ್ಲೇಶ ಕರಮುಡಿ, ಯಲ್ಲಪ್ಪ ಲಮಾಣಿ, ಕಳಕಪ್ಪ ತಳವಾರ,ಬಾಬುಸಾಬ ಕುಂದಗೋಳ, ಮಹಿಬೂಬಸಾಬ ಮಕಾಂದಾರ, ರಹೆಮಾನಸಾಬ ನಾಯಕ, ಮಲ್ಲಪ್ಪ ಸುರಕೋಡ, ಖಾಜಾವಲಿ ಗಡಾದ, ನಾಗಪ್ಪ ವಾಲ್ಮೀಕಿ, ಸಂಗು ಬಳಿಗಾರ, ಆನಂದ ಹಡಪದ, ಕಳಕಪ್ಪ ಮುಧೋಳ, ಮೈಲಾರಪ್ಪ ವಾಲ್ಮೀಕಿ ಹಾಗೂ ಪೊಲೀಸ್ ಸಿಬ್ಬಂದಿಗಳಾದ ವಿಠ್ಠಲ್ ಗೌಡರ್, ತಮ್ಮನಗೌಡ, ಬಸಯ್ಯ ಮತ್ತಿತರರಿದ್ದರು.

ಆರು ದಿನಗಳ ರಫ್ತು ನಿರ್ವಹಣಾ ತರಬೇತಿಗೆ ಚಾಲನೆ

◆**ಹುಬ್ಬಳ್ಳಿ:** ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ, (ವಿಟಿಪಿಸಿ), ಜಿಲ್ಲಾ ಕೈಗಾರಿಕಾ ಕೇಂದ್ರ, ಹಾಗೂ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಸಹಯೋಗದಲ್ಲಿ ಕೇಂದ್ರ ಸರಕಾರದ ರ್‍ಯಾಂಪ್ ಯೋಜನೆ ನೆರವಿನೊಂದಿಗೆ ಆರು ದಿನಗಳ ರಫ್ತು ನಿರ್ವಹಣಾ ತರಬೇತಿಕ್ಕೆ ಕೆಸಿಸಿಐ ಅಧ್ಯಕ್ಷ ಜಿ.ಕೆ. ಆದಪ್ಪಗೌಡರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಉತ್ತರ ಕರ್ನಾಟಕದಲ್ಲಿ ಜವಳಿ, ಎಂಜಿನೀಯರಿಂಗ್ ಗೂಡ್ಸ್, ಕೃಷಿ ಉತ್ಪನ್ನಗಳು ಹಾಗೂ ಕರಕುಶಲ ಉತ್ಪನ್ನಗಳು ತಯಾರಾಗುತ್ತಿದ್ದು, ಇವುಗಳನ್ನು ಹೊರ ದೇಶಗಳಿಗೆ ರಫ್ತು ಮಾಡಲು ಉತ್ತಮ ಅವಕಾಶವಿರುವುದಾಗಿ ತಿಳಿಸಿದರು.

ರಫ್ತು ಮಾಡಲು ಶಿಬಿರಾರ್ಥಿಗಳು ರಫ್ತಿನ ವಿಧಾನ, ಗುಣಮಟ್ಟ, ಪ್ಯಾಕೇಜಿಂಗ್, ಸಾಗಣೆ, ಅಂತರಾಷ್ಟ್ರೀಯ ಮಾರುಕಟ್ಟೆಯ ಬಗ್ಗೆ ಜ್ಞಾನ ಪಡೆದು ರಫ್ತುದಾರರಾಗಲು ಕರೆ ನೀಡಿದರು. ಕನಾಟಕ ವಾಣಿಜ್ಯೋದ್ಯಮ ಸಂಸ್ಥೆ ಹುಬ್ಬಳ್ಳಿ ತಮಗೆ ರಫ್ತು ಕೈಗೊಳ್ಳಲು ಬೆನ್ನೆಲುಬಾಗಿ ಸಹಕಾರ ನೀಡುವುದಾಗಿ ತಿಳಿಸಿದರು.

ವಿಟಿಪಿಸಿ ಉಪ ನಿರ್ದೇಶಕ ಟಿ.ಎಸ್. ಮಲ್ಲಿಕಾರ್ಜುನ ಮಾತನಾಡಿ, ಕರ್ನಾಟಕ ರಾಜ್ಯವು ಏಪ್ರಿಲ್ 2025 ರಿಂದ ಡಿಸೆಂಬರ್ 2025ರವರೆಗೆ ಸೇವಾ ವಲಯದಲ್ಲಿ 1,27,185 ಮಿಲಿಯನ್ ಯುಎಸ್ ಡಾಲರ್ ರಫ್ತು ಕೈಗೊಂಡಿದ್ದು,ದೇಶದಲ್ಲಿಯೇ ಮೊದಲನೇ ಸ್ಥಾನದಲ್ಲಿದೆ ಎಂದರು.



ಏಪ್ರಿಲ್ 2025ರಿಂದ ಡಿಸೆಂಬರ್ 2025ರವರೆಗೆ ಸರಕು ವಲಯದಲ್ಲಿ 26,065 ಮಿಲಿಯನ್ ಯುಎಸ್ ಡಾಲರ್ ರಫ್ತು ಕೈಗೊಳ್ಳಲಾಗಿದ್ದು ದೇಶದಲ್ಲಿ 4ನೇ ಸ್ಥಾನದಲ್ಲಿ ಇರುವುದಾಗಿ ತಿಳಿಸಿದರು.

ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಉಪಾಧ್ಯಕ್ಷರಾದ ದ್ದೇಶ್ವರ ಜಿ. ಕಮ್ಮಾರ ಮಾತನಾಡಿದರು. ಉಪಾಧ್ಯಕ್ಷ ವೀರಣ್ಣ ಕಲ್ಲೂರ ಹಾಗೂ ವಿಟಿಪಿಸಿಯ ಹಿರಿಯ ರಫ್ತು ಸಲಹೆಗಾರಾದ ಅರವಿಂದ ಭಟ್ ಅವರು ಉಪಸ್ಥಿತರಿದ್ದರು. ಈ ತರಬೇತಿ ಕಾರ್ಯಕ್ರಮದಲ್ಲಿ ವಿವಿಧ ಜಿಲ್ಲೆಗಳಿಂದ 30 ಶಿಬಿರಾರ್ಥಿಗಳು ಪಾಲ್ಗೊಂಡಿರುವರು. ಸಹಾಯಕ ಕಾರ್ಯದರ್ಶಿ ನಂದೀಶ ಅಣ್ಣಿಗೇರಿ ಇವರು ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು.

ಕರ್ನಾಟಕ ಬ್ಯಾಂಕ್ ಲಿ.

ನಿಮ್ಮ ಕುಟುಂಬದ ಬ್ಯಾಂಕ್, ಭಾರತದಾದ್ಯಂತ.

ಚಿನ್ನಾಭರಣಗಳ ಇ-ಹರಾಜು ನೋಟಿಸು

ಪ್ರಾದೇಶಿಕ ಕಛೇರಿ: ಹುಬ್ಬಳ್ಳಿ, ಸಿಟಿಎಸ್ 122 / 108, ಪಿ. ಬಿ. ನಂ. 499.
ಕರ್ನಾಟಕ ಬ್ಯಾಂಕ್ ಬಿಲ್ಡಿಂಗ್, 2ನೇ ಮಹಡಿ, ನ್ಯೂ ಕಾಟನ್ ಮಾರ್ಕೆಟ್, ಹುಬ್ಬಳ್ಳಿ - 580029

ಕೆಳಕಂಡ ವ್ಯಕ್ತಿಗಳು ನಮ್ಮ ಬ್ಯಾಂಕಿನಿಂದ ಚಿನ್ನಾಭರಣಗಳ ಅಡಮಾನದ ಮೇಲೆ ಸಾಲ ಪಡೆದಿದ್ದು, ಬ್ಯಾಂಕಿನಿಂದ ಸಾಲ ಮರುಪಾವತಿಗಾಗಿ ಡಿಮ್ಯಾಂಡ್ ನೋಟೀಸ್ ಅನ್ನು ಸದರಿ ವ್ಯಕ್ತಿಗಳಿಗೆ ಕಳಿಹಿಸಿದ್ದರೂ ಸಾಲವನ್ನು ಮರುಪಾವತಿಸಿರುವುದಿಲ್ಲ. ಆದುದರಿಂದ ಈ ಮೂಲಕ ಸದರಿ ವ್ಯಕ್ತಿಗಳಿಗೆ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು / ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳನ್ನು ದಿನಾಂಕ 16-03-2026 ರ ಒಳಗೆ ಮರುಪಾವತಿಸದಿದ್ದಲ್ಲಿ ಸದರಿಯವರು ಅಡವಿಟ್ಟ ಚಿನ್ನಾಭರಣಗಳನ್ನು ದಿನಾಂಕ : 17-03-2026 ರ ಮಧ್ಯಾಹ್ನ 03.00 ಗಂಟೆಗೆ ಆನ್‌ಲೈನ್‌ನಲ್ಲಿ https://egold.auctiontiger.net ವೆಬ್‌ಸೈಟ್ ಮೂಲಕ 'ಎಲ್ಲಿದೆಯೋ ಹಾಗೇ ಹೇಗಿದೆಯೋ ಹಾಗೆ ಮತ್ತು "ಯಾವುದೇ ಹೊಣೆಗಾರಿಕೆಯಿಲ್ಲದೆ" ಆಧಾರ ಮೇಲೆ ಹರಾಜು ಮಾಡಲಾಗುವುದು ಬ್ಯಾಂಕ್ ಹರಾಜನ್ನು ಯಾವುದೇ ಕಾರಣ ನೀಡದೆ ತಮಗೆ ಉಪಯುಕ್ತವೆನಿಸುವ ದಿನಾಂಕಕ್ಕೆ ಮುಂದೂಡುವ / ರದ್ದುಗೊಳಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ.

ಇ.ಎಂ.ಡಿ ಸಲ್ಲಿಸುವ ದಿನಾಂಕ & ಮೊತ್ತ: 16.03.2026 ಸಂಜೆ 4.00 ರ ಒಳಗೆ & ರೂ. 15,000/-
ಇ.ಎಂ.ಡಿ. ಖಾತೆಯ ವಿವರ : ಇ-ಪ್ರೋಕ್ಯೂರ್‌ಮೆಂಟ್ ಟೆಕ್ನಾಲಜೀಸ್ ಲಿಮಿಟೆಡ್ ಐಸಿಐಸಿಐ ಬ್ಯಾಂಕ್ ಜೆಎಂಸಿ ಹೌಸ್ ಶಾಖೆ, ಅಹಮದಾಬಾದ್ ಐಎಫ್‌ಎಸ್‌ಸಿ : ICIC0000024, ಚಾಲ್ತಿ ಖಾತೆ ಸಂ : 002405019408 ಪರವಾಗಿ ಆರ್‌ಟಿಜಿಎಸ್ /ನೆಫ್ಟ್ ಮೂಲಕ

ಕ್ರ. ಸಂ	ಚಿನ್ನದ ಸಾಲ ಖಾತೆ ಸಂಖ್ಯೆ & ದಿನಾಂಕ	ಸಾಲಗಾರರ ಹೆಸರು	ಬಾಕಿ ಮೊತ್ತ	ಒಟ್ಟು & ನಿವ್ವಳ ತೂಕ
		ಅಥಣಿ ಶಾಖೆ		
1	19702400009201 01-06-2024	ಸುಧೀರ ಜಯದೇವ ಪೋಳ	ರೂ. 66,200/-	12.5 gms & 11 gms
2	19702400044901 29-07-2024	ಮಹಾಂತೇಶ ಅಪ್ಪಾಸಾಬ್ ಅಜೂರ	ರೂ. 48,996/-	12.8 gms & 8.5 gms
		ಚೆಂಡಲ ಜಿ.ಪಿ. ಶಾಖೆ		
1	165702400011901 10-07-2024	ಚನ್ನಯ್ಯ ಎಸ್ ಹಿರೇಮಠ	ರೂ. 16,871/-	7.8 gms & 6 gms
2	165702400011601 10-07-2024	ಸೋಮಸಾಬ್ ಹೆಚ್ ನದಾಫ್	ರೂ. 9090/-	29.1 gms & 19 gms
3	165702400013401 19-07-2024	ನಿಂಗಪ್ಪ ಮಂಟಪ್ಪ ಗಡ್ಡದ್	ರೂ. 26,655/-	14.2 gms & 10 gms
4	165702400017001 06-08-2024	ಸಾವಿತ್ರವ್ವ ಎಸ್ ಪಟ್ಟಣಶೆಟ್ಟಿ	ರೂ. 4,03,941/-	102.8 gms & 84 gms
5	165702400017901 09-08-2024	ನಾಗಪ್ಪ ಮಲತಮ್ಮಪ್ಪ ಸುಂಕದ	ರೂ. 45,424/-	10 gms & 8.5 gms
6	165702400023101 12-11-2024	ಚನ್ನಯ್ಯ ಎಸ್ ಹಿರೇಮಠ	ರೂ. 33,317/-	10.1 gms & 7.5 gms
7	165702500015401 13-05-2025	ಶಿವಕುಮಾರ ವಿನಯಕುಮಾರ ಕಟ್ಟಿ	ರೂ. 3,14,658/-	89 gms & 60 gms
		ಹಾನಗಲ್ ಶಾಖೆ		
1	3027002101603000 26-04-2024	ಮಹ್ಮದ್ ಇಸಾಕ್ ಶಿರಗೋಡ	ರೂ. 3,15,487/-	63.75 gms & 54.18 gms
2	3027002101605900 02-05-2024	ಮಹ್ಮದ್ ಇಸಾಕ್ ಶಿರಗೋಡ	ರೂ. 2,14,161/-	47.95 gms & 40.75 gms
3	302702400061801 08-08-2024	ಮಹ್ಮದ್ ಇಸಾಕ್ ಶಿರಗೋಡ	ರೂ. 1,28,017/-	51.5 gms & 37.4 gms
4	302702400085601 13-09-2024	ಮೊಹಮ್ಮದ್ ಶಾದಾಬ್ ಆರ್ ಖಾಜಿ	ರೂ. 1,81,256/-	36.4 gms & 30.62 gms
5	302702400094001 25-09-2024	ಮೊಹಮ್ಮದ್ ಶಾದಾಬ್ ಆರ್ ಖಾಜಿ	ರೂ. 2,18,272/-	48.81 gms & 38.9 gms
		ಮಾಳಮಾರುತಿ, ಬೆಳಗಾವಿ ಶಾಖೆ		
1	95702400010901 28-08-2024	ಸುನೀಲ ಸಿದ್ರಾಂಜಿ ಮಟ್ಟಿ	ರೂ. 3,34,518/-	110.2 gms & 88.1 gms
2	95702400017801 30-10-2024	ಐಶ್ವರ್ಯ ಸಂಜಯ ಸಂಕಪ್ಪ	ರೂ. 2,18,105/-	51 gms & 42 gms
		ಮುಳಗುಂದ ಶಾಖೆ		
1	483702400008101 04-06-2024	ಕಾಸಿಂಸಾಬ್ ಎಂ ಮುದ್ದೇಬಿಹಾಳ	ರೂ. 1,94,645/-	41.3 gms & 34 gms
2	483702400041701 18-09-2024	ರಾಜು ಯಲ್ಲಪ್ಪ ವಡ್ಡರ	ರೂ. 43,607/-	9.75 gms & 8 gms
3	483702400062201 14-11-2024	ನೂರಅಹ್ಮದ್ ಹೆಚ್ ಶಿಕ್ಕಲದಾರ್	ರೂ. 1,02,143/-	22.75 gms & 15.92 gms
4	483702400064401 25-11-2024	ಶೇಖಪ್ಪ ಫಕೀರಪ್ಪ ಕಾಟಿ	ರೂ. 32,771/-	12.8 gms & 8.9 gms
		ನ್ಯೂ ಕಾಟನ್ ಮಾರ್ಕೆಟ್, ಹುಬ್ಬಳ್ಳಿ ಶಾಖೆ		
1	316702400030501 20-11-2024	ಮುದಾಸರ ಎನ್ ಖಾನ್	ರೂ. 1,15,126/-	23.3 gms & 18 gms
		ನಿಪ್ಪಾಣಿ ಶಾಖೆ		
1	5637002100261200 04-04-2024	ಆಸಿಫ್ ಮುಜಾವರ್	ರೂ. 88,436/-	32.3 gms & 25.9 gms
2	563702400035901 24-10-2024	ಆಸಿಫ್ ಮುಜಾವರ್	ರೂ. 1,30,247/-	39.79 gms & 35.5 gms
		ರಾಣೆಬೆನ್ನೂರು ಶಾಖೆ		
1	656702400026101 07-08-2024	ಶಾರದಮ್ಮ ಓಲೇಕಾರ	ರೂ. 2,44,545/-	59 gms & 50 gms
		ಉದ್ಯಮಬಾಗ್, ಬೆಳಗಾವಿ ಶಾಖೆ		
1	116702400007001 07-06-2024	ವಿಶ್ವನಾಥ ಸೋಮನಾಥ ಹುಡೇದ	ರೂ. 70,514/-	20.1 gms & 16.35 gms
2	116702400029901 01-10-2024	ಅಮಿತ ನಿಂಗಪ್ಪ ದಡ್ಡಣವರ	ರೂ. 49,693/-	12.7 gms & 10.9 gms

ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಇ-ಪ್ರೋಕ್ಯೂರ್‌ಮೆಂಟ್ ಟೆಕ್ನಾಲಜೀಸ್ ಲಿಮಿಟೆಡ್ (ಆಕ್ಷನ್ ಟೈಗರ್) ಅನ್ನು 9099013705, 6351896640 ಅಥವಾ egold@auctiontiger.net ನಲ್ಲಿ ಸಂಪರ್ಕಿಸಿ. ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ https://egold@auctiontiger.net ಗೆ ಭೇಟಿ ನೀಡಿ.

ದಿನಾಂಕ : 02-03-2026, ಸ್ಥಳ : ಹುಬ್ಬಳ್ಳಿ — ಸಹಿ/- ಅಧಿಕೃತ ಸಹಿದಾರರು

ಓ & ಎಸ್ ಸಿ. ಸಂಖ್ಯೆ: 04/2026

ಮಾನ್ಯ 1ನೇ ಹೆಚ್ಚುವರಿ ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : ಶ್ರೀಮತಿ ಸಾವಿತ್ರಿ ಕೋಂ. ಅಶೋಕಕುಮಾರ ಕರ್ನೂಲ, ಸಾ: ಗುಡ್‌ಶೆಡ್ಡ ರೋಡ, ಕುಲಕರ್ಣಿ ಹಕ್ಕಲ, ಹುಬ್ಬಳ್ಳಿ

ವಿರುದ್ಧ

ಎದುರುಗಾರರು : ಭಾರತ ಪೆಟ್ರೋಲಿಯಂ ಕಾರ್ಪೋರೇಶನ ಲಿಮಿಟೆಡ್ ಇದರ ಜನರಲ್ ಮ್ಯಾನೇಜರ, ಸಾ: ಬೇಲೂರ, ತಾ: ಜಿ: ಧಾರವಾಡ ಮತ್ತು ಇನ್ನೊಬ್ಬರು.

ದಿವಾಣಿ ಪ್ರಕ್ರಿಯ ಸಂಹಿತೆ ಆದೇಶ 5 ನಿಯಮ 20(2) ಪ್ರಕಾರ ನೋಟೀಸು

ಇದರಲ್ಲಿ ಯಾವತ್ತು ಸಾರ್ವಜನಿಕರ ಗಮನಕ್ಕೆ ತರುವ ನೋಟೀಸು ಏನೆಂದರೆ,

ಮೇಲ್ಕಾಣಿಸಿದ ಅರ್ಜಿದಾರಳು ತನ್ನ ಗಂಡನಾದ, **ಶ್ರೀ ಅಶೋಕಕುಮಾರ ತಂದೆ ನಾರಾಯಣ ಕರ್ನೂಲ, ಇವರು ತಾ: 17-07-2016** ರಂದು ಮರಣ ಹೊಂದಿದ್ದು ಆದ್ದರಿಂದ ಸದರ ಅರ್ಜಿಯಲ್ಲಿ ಕಾಣಿಸಿದ ಎದುರುಗಾರರಿಂದ ಬರಬೇಕಾದ ತನ್ನ ಗಂಡನ ಎಲ್ಲ ಸೇವಾ ಪ್ರಯೋಜನಗಳು ಭವಿಷ್ಯ ನಿಧಿ, ಕುಟುಂಬ ನಿಧಿ, ಕುಟುಂಬ ವಿಮೆ ಹಾಗೂ ಬಡ್ಡಿಯನ್ನು ಪಡೆಯಲು ತನ್ನ ಗಂಡನ ಉತ್ತರಾಧಿಕಾರಿ ಪ್ರಮಾಣ ಪತ್ರ ಪಡೆಯಲು ಮೇಲ್ಕಂಡ ಅರ್ಜಿಯನ್ನು ದಾಖಲ ಮಾಡಿರುತ್ತಾರೆ. ಈಗ ಸದರ ಕೇಸನ್ನು ದಿ:18-03-2026 ರಂದು ನೇಮಿಸಿರುತ್ತಾರೆ. ಆದ್ದರಿಂದ ಅಂದು ಇದಕ್ಕೆ ಯಾರದಾದರೂ ಯಾವದೇ ರೀತಿಯ ತಕರಾರು ಇದ್ದರೆ ಮೇಲ್ಕಂಡ ತಾರೀಖಿನಂದು ಖುದ್ದಾಗಿ ಆಗಲಿ ಅಥವಾ ವಕೀಲರ ಮುಖಾಂತರ ವಾಗಲಿ ಹಾಜರಾಗಿ ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಮುಂದಿನ ಆದೇಶ ಮಾಡಲಾಗುವದು ತಿಳಿಯಿರಿ.

ಈ ಹೊತ್ತು ದಿ:02-03-2026 ರಂದು ಕೋರ್ಟಿನ ಮೋಹರು ಸಹಿಯೊಂದಿಗೆ ಕೊಡಲ್ಪಟ್ಟಿರುತ್ತದೆ.

ಹುಬ್ಬಳ್ಳಿ
ದಿ:02-03-2026 (ಕೋರ್ಟ ಮೋಹರು) ಕೋರ್ಟಿನ ಆಜ್ಞೆಯ ಮೇರೆಗೆ ಸಹಿ/-ಶಿರಸ್ತೇದಾರರು
ಸುರೇಶ ಎನ್. ಕಿಣಿ
ಅರ್ಜಿದಾರರ ಪರ ವಕೀಲರು, ದೇಶಪಾಂಡೆನಗರ, ಹುಬ್ಬಳ್ಳಿ — ಮಾನ್ಯ 1ನೇ ಹೆಚ್ಚುವರಿ ಹಿರಿಯ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

CHANGE OF NAME

I, **NOORANDAPPA HALAPPANAVAR** (old name) Resident of H No: 1108, Basti Galli, Sadalga - 591239, have changed my name as **APPASAHEB BALASAHEB HALAPPANAVAR** (new name) henceforth I will be called and recognized by new name for all future purposes, dated: 02/03/2026.

CHANGE OF NAME

I, **ANAND JOGUR** (old name) Resident of Plot No 153 Bahety Layout M K B Nagar, Hubballi Pin - 586103, have changed my name as **ANAND RAJASHEKHAR JOGUR** (new name) henceforth I will be called and recognized by new name for all future purposes, dated: 02/03/2026.

CHANGE OF NAME

I, **RITESH PRABHU** (old name) Resident of Ganesh Nilaya, Subhas Nagar, Marathikoppa Sirsi - 581402, have changed my name as **RITESH RAYESHWAR PRABHU** (new name) henceforth I will be called and recognized by new name for all future purposes, dated: 02/03/2026.

CHANGE OF NAME

I, **BEERESH TALLIHALLI** (old name) Resident of 110/Joshi Oni, Savanur Haveri - 581118, have changed my name as **BEERESH MALLAREPPA TALLIHALLI** (new name) henceforth I will be called and recognized by new name for all future purposes, dated: 02/03/2026.

CHANGE OF NAME

I, **BIBIKHUTEJA NALBAND** (old name) Resident of H No: 388, Ibrahimpur 1st Cross Hubballi Pin - 580024, have changed my name as **BIBIKHUTEJA KARNUL** (new name) henceforth I will be called and recognized by new name for all future purposes, dated: 02/03/2026.

CHANGE OF NAME

I, **SHOBHA** (old name) Resident of H No: 3 Belawatagi Uttar Kannada Pin - 581329 (address), have changed my name as **SHOBHA VITTAL RAVAL** (new name) henceforth I will be called and recognized by new name for all future purposes, dated: 02/03/2026.

CHANGE OF NAME

I, **SHASHIKUMAR S** (old name) Resident of Sanyasihalli, Belur, Hasasan - 573115, have changed my name as **SHASHIKUMAR SANYASIHALLI NAGESHA** (new name) henceforth I will be called and recognized by new name for all future purposes, dated: 02/03/2026.

CHANGE OF NAME

I, **DAYANAND PAWAR** (old name) Resident of House No.: 80, Inchar, Sadashivanand Nagar, Near Chanappankere, Hubballi - Dharwad City Pin: 580025, Karnataka, India, have changed my name as **DAYANAND MANOHAR PAWAR** (new name) henceforth I will be called and recognized by new name for all future purposes, dated: 02/03/2026.

ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಹೆಚ್‌ಎಸ್‌ಆರ್ ವಿಭಾಗ, ಹೆಚ್‌ಎಸ್‌ಆರ್ ಲೇಔಟ್, ಬಿಡಿಎ ಕಾಂಪ್ಲೆಕ್ಸ್, ಬೆಂಗಳೂರು-560102

ನಂ.: ಕಾಪಾಅ/ಹೆಚ್‌ಎಸ್‌ಆರ್ ವಿ/ಟೆಂಡ್-01/2025-26/ಕರೆ-2 ದಿನಾಂಕ: 02.03.2026

ಟೆಂಡರ್ ಆಹ್ವಾನ (ಐಎಫ್‌ಟಿ)

ದ್ವಿ ಲಕೋಟೆ ಟೆಂಡರ್
(ಜಿಒಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು ಹೆಚ್‌ಎಸ್‌ಆರ್ ವಿಭಾಗ, ಜಿಬಿಎ, ಹೆಚ್‌ಎಸ್‌ಆರ್ ಲೇಔಟ್, ಬಿಡಿಎ ಕಾಂಪ್ಲೆಕ್ಸ್, ಬೆಂಗಳೂರು-560102 ಇವರು ಬೆಂಗಳೂರು ದಕ್ಷಿಣ ನಗರ ಪಾಲಿಕೆಯಲ್ಲಿ ನೋಂದಾಯಿತ ಅಥವಾ ತತ್ಸಮಾನ ಕೆಪಿಡಬ್ಲ್ಯುಡಿ / ಸಿಪಿಡಬ್ಲ್ಯುಡಿ / ಬಿಡಬ್ಲ್ಯುಎಸ್‌ಎಸ್‌ಬಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗೆ ಸೂಚಿಸಿರುವ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು
1	ಬೊಮ್ಮನಹಳ್ಳಿ ವಲಯ-2ರ ವಿವಿಧ ಸ್ಥಳಗಳಲ್ಲಿ ಹೌಸ್ ಕೀಪಿಂಗ್ ಮತ್ತು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸುವುದು. **ಅಂದಾಜು ಮೊತ್ತ (ಲಕ್ಷಗಳಲ್ಲಿ): 295.00, ಇಎಂಡಿ (ರೂ.ಗಳಲ್ಲಿ): 2,95,000.00.**
2	ಬೊಮ್ಮನಹಳ್ಳಿ ವಲಯ-2ರ ನಿಯಂತ್ರಣ ಕೊಠಡಿಗೆ ಮಾನವ ಸಂಪನ್ಮೂಲವನ್ನು ಒದಗಿಸುವುದು ಹಾಗೂ ಬೊಮ್ಮನಹಳ್ಳಿ ವಲಯ-2ರ ವಿವಿಧ ಸ್ಥಳಗಳಲ್ಲಿ 2 ಪ್ರಹರಿ ವಾಹನವನ್ನು ಸರಬರಾಜು ಮಾಡುವುದು. **ಅಂದಾಜು ಮೊತ್ತ (ಲಕ್ಷಗಳಲ್ಲಿ): 140.00, ಇಎಂಡಿ (ರೂ.ಗಳಲ್ಲಿ): 1,40,000.00.**
3	ಬೊಮ್ಮನಹಳ್ಳಿ ವಲಯ-2, ಬೆಂಗಳೂರು ದಕ್ಷಿಣ ನಗರ ಪಾಲಿಕೆ, ಜಂಟಿ ಆಯುಕ್ತರ ವ್ಯಾಪ್ತಿಯ ಕಛೇರಿಗಳಿಗೆ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಒದಗಿಸುವುದು. **ಅಂದಾಜು ಮೊತ್ತ (ಲಕ್ಷಗಳಲ್ಲಿ): 195.00, ಇಎಂಡಿ (ರೂ.ಗಳಲ್ಲಿ): 1,95,000.00.**

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ **05.03.2026**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **(2)** ಪೂರ್ವಭಾವಿ ಸಭೆಯು ಕಾರ್ಯಪಾಲಕ ಅಭಿಯಂತರರ ಕಛೇರಿ, ಹೆಚ್‌ಎಸ್‌ಆರ್ ವಿಭಾಗ, ಹೆಚ್‌ಎಸ್‌ಆರ್ ಲೇಔಟ್, ಬಿಡಿಎ ಕಾಂಪ್ಲೆಕ್ಸ್, ಬೆಂಗಳೂರು-560102ರಲ್ಲಿ **09.03.2026**ರ ಬೆಳಿಗ್ಗೆ **11:00 ಗಂಟೆಗೆ** ನಡೆಯಲಿದೆ. **(3)** ಟೆಂಡರ್‌ಗಳನ್ನು ಆನ್‌ಲೈನ್ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **13.03.2026ರ ಸಂಜೆ 4:00 ಗಂಟೆಯೊಳಗೆ** ಸಲ್ಲಿಸತಕ್ಕದ್ದು ಹಾಗೂ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮಾರ್ಗದರ್ಶನದಂತೆ ತೆರೆಯಲಾಗುವುದು. **(4)** ಟೆಂಡರನ್ನು ಕಾರ್ಯಪಾಲಕ ಅಭಿಯಂತರರ ಕಛೇರಿ, ಹೆಚ್‌ಎಸ್‌ಆರ್ ವಿಭಾಗದಲ್ಲಿ ವೆಬ್‌ಸೈಟ್ https://kppp.karnataka.gov.in ಮೂಲಕ **16.03.2026ರ ಸಂಜೆ 4:30 ಗಂಟೆಯ** ನಂತರ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ **https://kppp.karnataka.gov.in** ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಹೆಚ್‌ಎಸ್‌ಆರ್ ವಿಭಾಗ, ಬೆಂಗಳೂರು

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರ ಕಛೇರಿ, ಕ.ನೀ.ನಿ.ನಿ., ಮ.ಬ.ದ.ಕಾ.ನಿ. ವಿಭಾಗ ನಂ. 1, ನರಗುಂದ ಜಿಲ್ಲೆ : ಗದಗ
Tel No. 08377-244236 e-mail : knnlestablishment@gmail.com

ಸಂ:ಕನೀನಿನಿ/ಮಬದಕಾನಿವಿ-1/ಹಿಜಿ/ಟೆಂಡರ/2025-26/1697
ದಿನಾಂಕ : 02-03-2026

ಅಲ್ಪಾವಧಿ ಟೆಂಡರ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಈ ವಿಭಾಗದಡಿ ಬರುವ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ 4ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಶೇಕಡಾವಾರು (KW-1) ಟೆಂಡರನ್ನು ಏಕಲಕೋಟೆ ಪದ್ಧತಿಯಲ್ಲಿ ಈ ಕೆಳಗಿನಂತೆ ಆಹ್ವಾನಿಸಲಾಗಿದೆ.

(1) ಒಟ್ಟು ಕಾಮಗಾರಿಗಳ ಸಂಖ್ಯೆ: 12 ಕಾಮಗಾರಿಗಳು (2) ಸಾಮಾನ್ಯ ವರ್ಗದವರ ಕಾಮಗಾರಿಗಳ ಸಂಖ್ಯೆ: 7 ಕಾಮಗಾರಿಗಳು (3) ಕೆಟಗರಿ-2(ಎ) ಕಾಮಗಾರಿಗಳ ಸಂಖ್ಯೆ: 2 ಕಾಮಗಾರಿಗಳು (4) ಪರಿಶಿಷ್ಟ ಜಾತಿಗೆ ಸೇರಿದ ಕಾಮಗಾರಿಗಳ ಸಂಖ್ಯೆ: 3 ಕಾಮಗಾರಿಗಳು (5) ಟೆಂಡರಗಿಟ್ಟ ಪ್ರತಿ ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ (ಜಿ.ಎಸ್.ಟಿ ಸೇರಿಸಿ) ರೂ. **1.12** ಲಕ್ಷಗಳಿಂದ ರೂ. **12.00** ಲಕ್ಷಗಳವರೆಗೆ ಮತ್ತು ಇ.ಎಂ.ಡಿ ಮೊತ್ತ ರೂ. **1200.00** ರಿಂದ ರೂ. **24100.00** ವರೆಗೆ (6) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **07-03-2026** ರಂದು ಸಂಜೆ 4.00 ಗಂಟೆಯವರೆಗೆ. (7) ಟೆಂಡರ ತೆರೆಯುವ ದಿನಾಂಕ : **09-03-2026** ರಂದು ಬೆಳಿಗ್ಗೆ 11.00 ಗಂಟೆ

ಇತರೆ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ ಪೋರ್ಟಲ್ ವೆಬ್‌ಸೈಟ್ ಮುಖೇನ KPPP.karnataka.gov.in ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ : **08377-244236** ನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಕನೀನಿನಿ ಮಬದಕಾನಿ ವಿಭಾಗ ನಂ.1 ನರಗುಂದ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/684/2025-26

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಆಸ್ತಿ ಅಧಿಕಾರಿಗಳ ಕಛೇರಿ, ಗಾಕೃವಿಕೆ

ಟೆಂಡರ್ ಪ್ರಕಟಣೆ ಸಂಖ್ಯೆ. ಆಅ/ಟಿ.ಎನ್/27/2025-26, ದಿನಾಂಕ: 26.02.2026

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಕಾಮಗಾರಿ ಕೆಲಸಗಳನ್ನು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯು-2ರಂತೆ ನೋಂದಣಿ ಪಡೆದ ಕೆಪಿಡಬ್ಲ್ಯುಡಿ/ಪಿಡಬ್ಲ್ಯುಡಿ/ಗುತ್ತಿಗೆದಾರರುಗಳಿಂದ ಕ್ರಮ ಸಂಖ್ಯೆ.1 ಮತ್ತು 2 ರ ಕಾಮಗಾರಿಗಳಿಗೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕಾಮಗಾರಿಯ ವಿವರಗಳು ವೆಬ್‌ಸೈಟ್ https://www.kppp.karnataka.gov.inರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.

ಮೇಲಿನ ಕಾಮಗಾರಿಯು ದ್ವಿಲಕೋಟೆ ಪದ್ಧತಿಯಲ್ಲಿರುತ್ತದೆ. ದ್ವಿಲಕೋಟೆ ಪದ್ಧತಿಯ ಷರತ್ತುಗಳ ವಿವರಗಳನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ರಂತೆ ಅಪ್‌ಲೋಡ್ ಮಾಡಲಾಗಿದೆ.

ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು www.kppp.karnataka.gov.in ಇಂದ ಪಡೆಯಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 07-03-2026ರಂದು ಸಾಯಂಕಾಲ 4.00 ಗಂಟೆಯವರೆಗೆ ಆಗಿರುತ್ತದೆ. ತಾಂತ್ರಿಕ ಬಿಡ್ಡನ್ನು ದಿನಾಂಕ: 09-03-2026ರಂದು ಬೆಳಗ್ಗೆ 10.30 ಕ್ಕೆ ತೆರೆಯಲಾಗುವುದು ಮತ್ತು ಹಣಕಾಸಿನ ಬಿಡ್ಡನ್ನು ದಿನಾಂಕ: 12-03-2026 ರಂದು ಬೆಳಗ್ಗೆ 10.30ಕ್ಕೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ.080-23332765ರಲ್ಲಿ ಸಂಪರ್ಕಿಸುವುದು. ಇ-ಪ್ರೊಕ್ಯೂರ್‌ಮೆಂಟ್‌ನ ಸಹಾಯವಾಣಿ support@eprochelpdesk.com ಅಥವಾ 8046010000 ಮತ್ತು 8068948777

ಡಿಐಪಿಆರ್/ಪಿ.ಪಿ/5924/ಸಿಸಿಎಲ್/2025-26 — ಸಹಿ/- ಆಸ್ತಿ ಅಧಿಕಾರಿಗಳು

ಕರ್ನಾಟಕ ಸರ್ಕಾರ (ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ)

ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ,

ಜಿಲ್ಲಾ ಆಡಳಿತ ಭವನ #24, "ಬಿ" ಬ್ಲಾಕ್ ದೇವಗಿರಿ, ಹಾವೇರಿ, ದೂ.ಸಂ: 08375-249030,
Mail - jdhaveri123@gmail.com

ಸಂಖ್ಯೆ: IC/2025-26/SE0152/418 ದಿನಾಂಕ : 26-02-2026

ಮಾನವ ಸಂಪನ್ಮೂಲ ಹೊರಗುತ್ತಿಗೆ ಟೆಂಡರ್ ಪ್ರಕಟಣೆ

ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಹಾವೇರಿ ಕಾರ್ಯಾಲಯಕ್ಕೆ 2026-27ನೇ ಸಾಲಿಗಾಗಿ ಹೊರಗುತ್ತಿಗೆ ಆಧಾರದ ಮೇಲೆ ಗಣತಿದಾರ-01, ಕಂಪ್ಯೂಟರ್ ಆಪರೇಟರ್-01 ಹಾಗೂ ಗ್ರೂಪ್-ಡಿ-01 ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಮೂಲಕ ಪಡೆಯಲು ಅರ್ಹ ನೊಂದಾಯಿತ ಮಾನವ ಸಂಪನ್ಮೂಲ ಸಂಸ್ಥೆ (Man power Agency) ರವರಿಂದ E-Procurement ಟೆಂಡರ್ ಆಹ್ವಾನಿಸಲಾಗಿದೆ. ಆದ್ದರಿಂದ https://kppp.karnataka.gov.in ವಿಳಾಸಕ್ಕೆ ದಿನಾಂಕ : **13-03-2026** ರಂದು ಸಾಯಂಕಾಲ 5.30 ಗಂಟೆಯೊಳಗೆ ಟೆಂಡರ್ ದಾಖಲಾತಿಗಳನ್ನು ಅಪ್ಲೋಡ್ ಮಾಡಲು ತಿಳಿಸಿದೆ.

ಟೆಂಡರ್ ವಿವರಗಳನ್ನು https://kppp.karnataka.gov.in ಪಡೆದು ಆಸಕ್ತ ಟೆಂಡರ್‌ದಾರರು ಟೆಂಡರ್‌ಗೆ ನಿಗದಿಪಡಿಸಿದ ಷರತ್ತುಗಳನ್ವಯ ಅಗತ್ಯ ದಾಖಲಾತಿಗಳನ್ನು ಇ-ಪ್ರೋಕ್ಯೂರ್‌ಮೆಂಟ್ Kppp Portal ನಲ್ಲಿ ಅಫ್‌ಲೋಡ್ ಮಾಡುವುದು ಹಾಗೂ ನಿಯಮಾನುಸಾರ ಅರ್ಜಿ ಶುಲ್ಕ ರೂ. **500/-** ಗಳನ್ನು ಹಾಗೂ ಇ.ಎಂ.ಡಿ ಮೊತ್ತ ರೂ. **10,500/-** ಗಳನ್ನು ಪಾವತಿಸಿ ಇ-ಸಂಗ್ರಹಣೆಯಲ್ಲಿ ಮಾತ್ರ ಟೆಂಡರ್ ಸಲ್ಲಿಸಬೇಕು. ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿರುವ ಬಿಡ್‌ದಾರರನ್ನು ಮಾತ್ರ ಆರ್ಥಿಕ ಬಿಡ್‌ಗೆ ಪರಿಗಣಿಸಲಾಗುವುದು. ತಾಂತ್ರಿಕ ಬಿಡ್‌ಗಳನ್ನು ದಿನಾಂಕ : **16-03-2026** ರಂದು ಬೆಳಿಗ್ಗೆ 11.00 ಗಂಟೆಗೆ ಮತ್ತು ಆರ್ಥಿಕ ಬಿಡ್‌ನ್ನು ದಿನಾಂಕ : **16-03-2026** ರಂದು ಸಂಜೆ 04.00 ಗಂಟೆಗೆ ತೆರೆಯಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಗೆ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ : **08375-249030.**

ಸಹಿ/- ಜಂಟಿ ನಿರ್ದೇಶಕರು,
ಜಿಲ್ಲಾ ಕೈಗಾರಿಕಾ ಕೇಂದ್ರ, ಹಾವೇರಿ

ವಾಸಾಸಂಇ/ಹಾವೇರಿ/ಕೆ.ಎಸ್.ಎಂ.ಸಿ.ಎ/759/2025-26

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.
ದೂರವಾಣಿ ಸಂ:(0831) 2463850/ಫ್ಯಾಕ್ಸ್ ಸಂ:(0831) 2423008

No.EE /MI&GWDDD/BGM/TND/AE/2025-26/5584 Date:02-03-2026

ಅಲ್ಪಾವಧಿ ಟೆಂಡರ ಪ್ರಕಟಣೆ (ಕೆ.ಡಬ್ಲೂ-1,2,3&4)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅಧಿನಿಯಮ-2000ರ ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಅರ್ಹ ಗುತ್ತಿಗೆದಾರರಿಂದ ಐಟಂ ದರದಂತೆ ಗುತ್ತಿಗೆಯನ್ನು "ಕೆಪಿಪಿಪಿ" ಮುಖಾಂತರ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಬೆಳಗಾವಿ ಇವರಿಂದ ಆವ್ಹಾನಿಸಲಾಗಿದೆ. ಬೆಳಗಾವಿ/ಗೋಕಾಕ/ಅಥಣಿ ಉಪ ವಿಭಾಗಗಳಡಿಯ ಒಟ್ಟು 22 ಕಾಮಗಾರಿಗಳ ಅಂದಾಜು ಮೊತ್ತ ಗರಿಷ್ಠ ರೂ.129.00 ಲಕ್ಷಗಳು ಹಾಗೂ ಕನಿಷ್ಠ ರೂ.3.40 ಲಕ್ಷಗಳು. 1. ಕೆ.ಡಬ್ಲ್ಯೂ-4 ಕಾಮಗಾರಿಗಾಗಿ ಪೂರ್ವ ಟೆಂಡರ ಸಭೆಯು ದಿನಾಂಕ:09-03-2026 ಮುಂ 11.00 ಘಂಟೆಗೆ, 2. ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ:10-03-2026 ಸಾಯಂಕಾಲ 4.00 ಗಂಟೆಯವರೆಗೆ, 3. ಟೆಂಡರ ತೆರೆಯುವ ದಿನಾಂಕ:11-03-2026 ಸಂಜೆ 4.30 ಘಂಟೆಗೆ ಮುಂದುವರೆದು (ಸಾಧ್ಯವಾದಲ್ಲಿ). 4.ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವ ವಿಳಾಸ:ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ & www.kppp.gov.in

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು,
ಸ.ನೀ ಮತ್ತು ಅಂ.ಅ.ಇ ವಿಭಾಗ, ಬೆಳಗಾವಿ.

DIPR/BGM/RC-NO-1978/KSMCA/2025-26

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು

ಟೆಂಡರ್ ಅಧಿಸೂಚನೆ ಸಂಖ್ಯೆ: 31/2025-26, ದಿನಾಂಕ: 23-02-2026

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೈಸೂರು ಜಿಲ್ಲೆಯ ಕಾರ್ಯನಿವಾಹಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಮೈಸೂರು/ನಂಜನಗೂಡು/ಪಿರಿಯಾಪಟ್ಟಣ/ಹುಣಸೂರು/ಚಾಮರಾಜನಗರ/ ಗುಂಡ್ಲುಪೇಟೆ ತಾಲ್ಲೂಕುಗಳ ಈ ಕೆಳಕಂಡ ಸರ್ಕಾರಿ ಸಣ್ಣ ನೀರಾವರಿ ಇಲಾಖೆಯ ಕೆರೆಗಳ ಮೀನುಪಾಶುವಾರು ಹಕ್ಕನ್ನು 2026-27 ರಿಂದ 2030-31ನೇ ಮೀನುಗಾರಿಕೆ ಫಸಲಿ ವರ್ಷದವರೆಗೆ (ಅಂದರೆ 01.04.2026ರಿಂದ 31.3.2031ರ ವರೆಗೆ) ಒಟ್ಟು 05 (ಐದು) ವರ್ಷಗಳ ಅವಧಿಗೆ ಇ-ಟೆಂಡರ್ ಮೂಲಕ ಈ ಕೆಳಗೆ ನಮೂದಿಸಿರುವ ಕೆ.ಡಬ್ಲ್ಯು-1ರ ಪ್ರಕಾರ "ಕೆ.ಪಿ.ಪಿ.ಪಿ" ಪೋರ್ಟಲ್‌ನಲ್ಲಿ ಟೆಂಡರ್ ಪ್ರಕ್ರಿಯೆಯ ದಿನಾಂಕಗಳನ್ನು ಈ ಕೆಳಕಂಡಂತೆ ನಮೂದಿಸಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಯನ್ನು ಈ ಕೆಳಗೆ ನಮೂದಿಸಿರುವ ವೇಳಾ ಪಟ್ಟಿಯನ್ವಯ ಸರ್ಕಾರದ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟಂತೆ ವಿಲೇವಾರಿ ಮಾಡಲು ಕರ್ನಾಟಕ ಸರ್ಕಾರದ ಈ ಸಂಗ್ರಹಣಾ ಪೋರ್ಟಲ್ (https://kppp.karnataka.gov.in) ಮೂಲಕ ಟೆಂಡರ್ ಅಹ್ವಾನಿಸಲಾಗಿದೆ.

Last Date And Time For Submit The Queries: 02.03.2026, 5-30 PM. Date And Time To Confirm Participation Of Interest In Auction: 07.03.2026, 5-30 PM. End Date And Time For Bidding: 23.03.2026, 5-30 PM Delta Time For Bidding: 5 Minutes

ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ "https://kppp.karnataka.gov.in " ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ವಿ.ಸೂ: ಸದರಿ ಕಾಮಗಾರಿಯ ಟೆಂಡರ್ ಅನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಯಾವುದೇ ಬಿಡ್ಡನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಕೆಪಿಪಿ-ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್

DIPR/DDMYS/1762/KSMCA/995/2025-26

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು

ಜಿಲ್ಲಾ ನಗರಾಭಿವೃದ್ಧಿ ಕೋಶ,ಚಿಕ್ಕಮಗಳೂರು
E.mail:ka.chikkamagaluru.dudc@gmail.com Ph:08262-239010

ಸಂ/ಡಿಯುಡಿಸಿ(1)ಸಿಆರ್/46/2023-24 ದಿನಾಂಕ:24-02-2026

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಜಿಲ್ಲಾ ನಗರಾಭಿವೃದ್ಧಿ ಕೋಶದ ಕಛೇರಿಯಲ್ಲಿ ಈ ಕೆಳಕಂಡಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಷರತ್ತುಗಳಿಗೊಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ.

ಕ್ರಸಂ	ಕಾಮಗಾರಿಗಳ ವಿವರ
1	ಚಿಕ್ಕಮಗಳೂರು ಜಿಲ್ಲೆಯ 07 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇಂದಿರಾ ಕ್ಯಾಂಟೀನ್‌ಗೆ ನಿಗದಿಪಡಿಸಲಾದ ಆಹಾರ ಸರಬರಾಜು ಮಾಡುವುದು. **(INDENT NO.DMA/2025-26/IND5552/CALL-2**
2	ಚಿಕ್ಕಮಗಳೂರು ಜಿಲ್ಲೆಯ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ಕಾಮಗಾರಿಗಳನ್ನು ಪರಿವೀಕ್ಷಣೆ ನಡೆಸಲು 3ನೇ ವ್ಯಕ್ತಿ ತಪಾಸಣೆ ಏಜೆನ್ಸಿಯನ್ನು ನೇಮಕ ಮಾಡುವುದು. **(INDENT NO.DMA/2025-26/SE6399/CALL-2**

ಇ-ಪ್ರೊಕ್ಯೂರ್‌ಮೆಂಟ್‌ಮೂಲಕಟೆಂಡರ್‌ಸಲ್ಲಿಸಲುಕೊನೆಯದಿನಾಂಕ:12-03-2026 ಸಮಯ 17.00ಗಂಟೆವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:13-03-2026ರ ಸಮಯ 17.10 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ:16-03-2026ರ 11.30 ಗಂಟೆಗೆ,ಕ್ರಮ ಸಂಖ್ಯೆ,1ನೇ ಕಾಮಗಾರಿಗೆ ಪೂರ್ವ ಭಾವಿ ಸಭೆ ದಿನಾಂಕ:03-03-2026ರ 11.30 ಗಂಟೆಗೆ. ಇ.ಎಂ.ಡಿ ಮೊತ್ತ, ಇ-ಪೋರ್ಟಲ್‌ನಂತೆ ಟೆಂಡರ್ ಸಂಬಂಧಿತ ಯಾವುದೇ ಬದಲಾವಣೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾತ್ರ ಪ್ರಚುರಪಡಿಸಲಾಗುವುದು. ಹೆಚ್ಚಿನ ಮಾಹಿತಿಯನ್ನು ಕಛೇರಿಯ ವೇಳೆಯಲ್ಲಿ ಹಾಗೂ **htpps.kppp.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/- ಜಿಲ್ಲಾಧಿಕಾರಿ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು

ಕರ್ನಾಟಕ ಸರಕಾರ

ಕಾರ್ಯಲಯ ಸಾರ್ವಜನಿಕ ಆಸ್ಪತ್ರೆ ಕುಷ್ಟಗಿ

ghkustagi1@gmail.com Tel No.08536-267250

ಪ.ಸ/ಸಿ/ಸಾ.ಆ,ಕು/ಸಿ.ಟಿ.ಸ್ಕ್ಯಾ/428/2025-26 ದಿನಾಂಕ: 02/03/2026

ಮ್ಯಾನ್ವಲ್ ಟೆಂಡರ್ ಅಧಿಸೂಚನೆ

ವಿಷಯ: ಸಾರ್ವಜನಿಕ ಆಸ್ಪತ್ರೆ ಕುಷ್ಟಗಿಯಲ್ಲಿ ಸಿ.ಟಿ.ಸ್ಕ್ಯಾನಿಂಗ್ ಪರಿಶೀಲಿಸಿ ವರದಿ ನೀಡುವ ಸೇವೆ ಪಡೆಯಲು, ಮ್ಯಾನ್ವಲ್ ಟೆಂಡರ್ ಕರೆದಿರುವ ಬಗ್ಗೆ

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಆಸ್ಪತ್ರೆ ಕುಷ್ಟಗಿ ಕೊಪ್ಪಳ ಜಿಲ್ಲೆಯಲ್ಲಿ ಸಿ.ಟಿ.ಸ್ಕ್ಯಾನಿಂಗ್ ಪರಿಶೀಲಿಸಿ ವರದಿ ನೀಡುವ ಸೇವೆ ಪಡೆಯಲು ಅಂದಾಜು ಮೊತ್ತ **ರೂ.498840=00** ಗಳ ಮ್ಯಾನ್ವಲ್ ಟೆಂಡರ್ ಕರೆಯಲಾಗಿದೆ ಟೆಂಡರ್ ಮಾಹಿತಿ ಈ ಕೆಳಗಿನಂತಿರುತ್ತದೆ.

ಟೆಂಡರ್ ಅರ್ಜಿ ನೀಡುವ ಪ್ರಾರಂಭದ ದಿನಾಂಕ: ದಿನಾಂಕ: **03/03/2026**
ಟೆಂಡರ್ ಅರ್ಜಿ ನೀಡುವ ಕೊನೆಯ ದಿನಾಂಕ: ದಿನಾಂಕ: **23/03/2026** ರಂದು ಸಂಜೆ 4:30 ಗಂಟೆಗೆ ಟೆಂಡರ್ ಅರ್ಜಿ ಸಲ್ಲಿಸುವ ದಿನಾಂಕ ಸಮಯ: ದಿನಾಂಕ: **25/03/2026** ರಂದು ಬೆಳಿಗ್ಗೆ 9:30 ರಿಂದ ಮಧ್ಯಾಹ್ನ 12:45 ತಾಂತ್ರಿಕ ಬಿಡ್ ಪರಿಶೀಲನೆ ದಿನಾಂಕ: ದಿನಾಂಕ: **25/03/2026** ರಂದು ಮಧ್ಯಾಹ್ನ 3:00ಕ್ಕೆ.

ಹೆಚ್ಚಿನ ವಿವರಗಳನ್ನು ಕಛೇರಿಯಲ್ಲಿ ರಜಾ ದಿನಗಳನ್ನು ಹೊರತುಪಡಿಸಿ ಪಡೆಯಬಹುದು.

ಡಿಐಪಿಆರ್/ಕೊಪ್ಪಳ/719/ಕೆಎಸ್‌ಎಂಸಿಎ/2025-26

ಸಹಿ/- ಮುಖ್ಯ ವೈದ್ಯಾಧಿಕಾರಿಗಳು,
ಸಾರ್ವಜನಿಕ ಆಸ್ಪತ್ರೆ ಕುಷ್ಟಗಿ.

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ

ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.

ನಂ: ಇಇ/ಎಂಐಡಿ/ಬೀದರ/ತಾ.ಶಾ-1,2&3/ಟೆಂಡರ್/2025-26/427 ದಿನಾಂಕ: 27-02-2026

ಕೆಪಿಪಿ-ಪ್ರೋಕ್ಯೂರಮೆಂಟ, ಟೆಂಡರ್ ಪ್ರಕಟಣೆ

1) ಕಾಮಗಾರಿಗಳ ವಿವರ. : KPP -Portalನಲ್ಲಿ ನಮೂದಿಸಿದಂತೆ. 2) ಕಾಮಗಾರಿಗಳ ಅಂದಾಜು ಮೊತ್ತ.KPP -Portal ನಲ್ಲಿ ನಮೂದಿಸಿದಂತೆ. 3) ಗುತ್ತಿಗೆದಾರರ ಅರ್ಹತೆ ವಿವರ. KPP -Portalನಲ್ಲಿ ನಮೂದಿಸಿದಂತೆ 4) ಕಾಮಗಾರಿಗಳ ಟೆಂಡರ ಮೊತ್ತದ ವಿವರ. KPP -Portalನಲ್ಲಿ ನಮೂದಿಸಿದಂತೆ, 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ. KPP -Portalನಲ್ಲಿ ನಮೂದಿಸಿದಂತೆ. 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: ಕೆ.ಡಬ್ಲೂ -1, ಕೆ.ಡಬ್ಲೂ -2, ಕೆ.ಡಬ್ಲೂ -3 & ಕೆ.ಡಬ್ಲೂ -4 ಮಾತ್ರ : **11-03-2026 ರಂದು 17.00 ಗಂಟೆವರೆಗೆ,** 7) ಪ್ರೀಬಿಡ್ಡ್ ಮಿಟಿಂಗ ಸ್ಥಳ ದಿನಾಂಕ ಮತ್ತು ಸಮಯ. ಕೆ.ಡಬ್ಲೂ - 4 ಮಾತ್ರ ಕಾರ್ಯನಿರ್ವಾಹಕ ಇಂಜನೀಯರರು,, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ, ಪ್ರತಾಪನಗರ ನೌಬಾದ, ಬೀದರ. **09-03-2026 ರಂದು 11.00 ಗಂಟೆಗೆ.** 8) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಕೆ.ಡಬ್ಲೂ -1, ಕೆ.ಡಬ್ಲೂ -2, ಕೆ.ಡಬ್ಲೂ -3 & ಕೆ.ಡಬ್ಲೂ -4 ಮಾತ್ರ : **13-03-2026 ರಂದು 16.00 ಗಂಟೆ ವರೆಗೆ** 9) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ -1, ಕೆ.ಡಬ್ಲೂ -2, ಕೆ.ಡಬ್ಲೂ -3 & ಕೆ.ಡಬ್ಲೂ -4 ಮಾತ್ರ : **16-03-2026 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ,** 10) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ -1, ಕೆ.ಡಬ್ಲೂ -2, ಕೆ.ಡಬ್ಲೂ -3 & ಕೆ.ಡಬ್ಲೂ -4 ಮಾತ್ರ **18-03-2026 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ. : ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ.ವಿಭಾಗ, ಬೀದರ. ದೂರವಾಣಿ ಸಂ: 08482 232080,12) ಅಂತರ್ಜಾಲ ತಾಣದ ವಿಳಾಸ. KPP portal https://kppp.karnataka.gov.in

ಸಹಿ/- ಕಾರ್ಯ ನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.

ವಾ.ಸಾ.ಸಂ.ಇ/ಬೀದರ/353/ಕೆ.ಎಸ್.ಎಂ.ಸಿ.&ಎ/2025-26

ಉಡುಪಿ ನಿರ್ಮಿತಿ ಕೇಂದ್ರ

ಎ. ಎಲ್. ಎನ್. ಲೇಔಟ್, 4ನೇ ಅಡ್ಡರಸ್ತೆ, , ಮಣಿಪಾಲ, ಉಡುಪಿ ಜಿಲ್ಲೆ - 576104.
ದೂ : 0820-2574900, udupinirmithikendra@gmail.com

ಸಂ:- ಉನಿಕೇ/ದರಪಟ್ಟಿ/1236/2025-26 ದಿನಾಂಕ: 02-03-2026

ದರ ಪಟ್ಟಿ ಆಹ್ವಾನ ಪ್ರಕಟನೆ

ಉಡುಪಿ ಜಿಲ್ಲೆಯ ಹಾಗೂ ತಾಲೂಕಿನ ಉಡುಪಿ ನಗರಸಭಾ ವ್ಯಾಪ್ತಿಯ ಮಲ್ಪೆ ಮೀನುಗಾರಿಕಾ ಬಂದರಿನಲ್ಲಿರುವ ನಿವೇಶನದಲ್ಲಿ ಡೀಸೆಲ್ ಬಂಕ್ ನಿರ್ಮಾಣ ಕಾಮಗಾರಿಯ ಈ ಕೆಳಗಿನ ಅಂಶಕ್ಕೆ ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ದರಪಟ್ಟಿಯನ್ನು ದಿನಾಂಕ: 12-03-2026 ಅಪರಾಹ್ನ 4.00 ಗಂಟೆಯೊಳಗೆ **ಯೋಜನಾ ನಿರ್ದೇಶಕರು, ಉಡುಪಿ ನಿರ್ಮಿತಿ ಕೇಂದ್ರ, ಎ.ಎಲ್.ಎನ್. ಲೇಔಟ್, 4ನೇ ಅಡ್ಡರಸ್ತೆ, ಅನಂತನಗರ, ಮಣಿಪಾಲ - 576104** ಇಲ್ಲಿಗೆ ಅಥವಾ **udupinirmithikendra@gmail.com** ಮೂಲಕ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ: 0820-2574900 ಇದಕ್ಕೆ ಸಂಪರ್ಕಿಸುವುದು.

Sl. No	Particulars	Qty. No	Units
01	Fabrication & supply of 40KL capacity Horizontal, cylindrical type belowground installation diesel storage MS Tank with stiffeners. 600mm dia manhole cover, Nozzle holding down brackets as per IS10987 & approved drawing. MOC: IS2062, Thickness: 6mm shell plate & 10mm end plate. Size of Tank 2750mm dia x 7500mm long	1	No.
02	Fabrication & supply of 60KL capacity Horizontal, cylindrical type belowground installation diesel storage MS Tank with stiffeners. 600mm dia manhole cover, Nozzle holding down brackets as per 1510987 & approved drawing. MOC: IS2062, Thickness: 6mm shell plate & 10mm end plate. Size of Tank 2750mm dia x 9000mm long	1	No.
03	Painting: Applying one coat of metal primer, two coat of tank mastic paint & 1.5mm thick Tar sheet wrapping entire tank external surface	2	No.s
04	Transportation charges including loading & unloading	2	No.s
05	Erection of above tank at your spot with mounting to the civil chamber	2	No.s
06	2 Nozzle fuel dispenser	2	No.s
07	Yard fencing as per PESO approved Drawing	1	No.
08	Erection panel, connection, earthing connection	1	No.
09	Dewatering system & Pipeline work	1	No.

ಸಹಿ/- ಅರುಣ್ ಕುಮಾರ್,
ಯೋಜನಾ ನಿರ್ದೇಶಕರು, ಉಡುಪಿ ನಿರ್ಮಿತಿ ಕೇಂದ್ರ

ಕಿರುಸುದ್ದಿ

ಚೆಸ್: ಗುಕೇಶ್‌ಗೆ ಗೆಲುವು ಮರೀಚಿಕೆ

ಹೊಸದಿಲ್ಲಿ: ವಿಶ್ವ ಚಾಂಪಿಯನ್ ಗುಕೇಶ್‌ಗೆ ಪ್ರೇಗ್ ಇಂಟರ್‌ನ್ಯಾಷನಲ್ ಚೆಸ್ ಉತ್ಸವದಲ್ಲಿ ಗೆಲುವು ಇನ್ನೂ ಮರೀಚಿಕೆಯಾಗಿದೆ. ಪಂದ್ಯಾವಳಿ ಶುರುವಾದ 5ನೇ ದಿನ ಅವರು ನೋಡಿರ್ಬೆಕ್ ಅಬ್ದುಸತ್ತಾರೋವ್ ವಿರುದ್ಧ ಸೋಲು ಕಂಡರು. ಈವರೆಗೆ ಒಂದೂ ಗೆಲುವು ದಾಖಲಿಸದ ಗುಕೇಶ್ ಅಂಕಪಟ್ಟಿಯಲ್ಲಿ ತಳಮಟ್ಟದಲ್ಲಿದ್ದಾರೆ. ಅಬ್ದುಸತ್ತಾರೋವ್ ವಿರುದ್ಧ ಗುಕೇಶ್ ಆರಂಭಿಕ ಮೇಲುಗೈ ಹೊಂದಿದ್ದರಾದರೂ ಬಳಿಕ ಅದನ್ನು ಕೈಚೆಲ್ಲಿದರು.



ಪಂದ್ಯ ಅಂತಿಮ ಘಟ್ಟದಲ್ಲಿ ತೀವ್ರ ಒತ್ತಡಕ್ಕೆ ಸಿಲುಕಿದ ಗುಕೇಶ್ ಸೋಲನ್ನು ಒಪ್ಪಿಕೊಂಡರು. ಅಬ್ದುಸತ್ತಾರೋವ್ ಕೇವಲ ಒಂದೇ ತಿಂಗಳ ಅಂತರದಲ್ಲಿ ಎರಡು ಬಾರಿ ಗುಕೇಶ್‌ರನ್ನು ಸೋಲಿಸಿದಂತಾಗಿದೆ. ಇದೇವೇಳೆ, ಡಚ್ ಆಟಗಾರ ಜೋರ್ಡನ್ ವಾನ್ ಫೊರೀಸ್ಟ್ ತಮ್ಮ ನಾಲ್ಕನೇ ಗೆಲುವು ದಾಖಲಿಸಿದರು. ಅವರೀಗ ಅಂಕಪಟ್ಟಿಯಲ್ಲಿ ಅಗ್ರಸ್ಥಾನಿಯಾಗಿದ್ದಾರೆ.

ಜೂನ್‌ನಲ್ಲಿ ಅಫ್ಘಾನಿಸ್ತಾನ ವಿರುದ್ಧ ದ್ವಿಪಕ್ಷೀಯ ಸ್ಪರ್ಧೆ



ಹೊಸದಿಲ್ಲಿ: ಜೂನ್ ತಿಂಗಳಲ್ಲಿ ಅಫ್ಘಾನಿಸ್ತಾನವು ಭಾರತಕ್ಕೆ ಪ್ರವಾಸ ಬರಲಿದ್ದು, ಒಂದು ಟೆಸ್ಟ್ ಪಂದ್ಯ ಮತ್ತು ಮೂರು ಏಕದಿನ ಪಂದ್ಯಗಳನ್ನು ಆಡಲಿದೆ. ಇದು ಉಭಯದೇಶಗಳ ನಡುವಿನ ಮೊದಲ ದ್ವಿಪಕ್ಷೀಯ ಸರಣಿಯಾಗಲಿದೆ. ಜೂ.6ರಿಂದ ಆರಂಭಗೊಳ್ಳಲಿರುವ ಏಕೈಕ ಟೆಸ್ಟ್ ಚಂಡೀಗಢದಲ್ಲಿ ನಡೆಯಲಿದೆ. ಮೂರು ಏಕದಿನ ಪಂದ್ಯಗಳು ಜೂ.14, 17 ಮತ್ತು 20ರಂದು ಕ್ರಮವಾಗಿ ಧರ್ಮಶಾಲಾ, ಲಕ್ನೋ ಮತ್ತು ಚೆನ್ನೈಗಳಲ್ಲಿ ನಡೆಯಲಿವೆ. ಇದು ಭಾರತ ಮತ್ತು ಅಫಘಾನಿಸ್ತಾನ ಮಧ್ಯೆ ನಡೆಯುವ ಎರಡನೇ ಟೆಸ್ಟ್ ಪಂದ್ಯವಾಗಲಿದೆ. 2018ರಲ್ಲಿ ಉಭಯದೇಶಗಳು ಮೊದಲ ಟೆಸ್ಟ್ ಆಡಿದ್ದನ್ನು ಭಾರತ ಗೆದ್ದಿತ್ತು. ಜೂ.6ರ ಟೆಸ್ಟ್ ಪ್ರಸ್ತುತ ನಡೆಯುತ್ತಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನ ಭಾಗವಾಗಿರುವುದಿಲ್ಲ. ಐಪಿಎಲ್ ಮುಗಿದ ಆರು ದಿನಗಳ ಬಳಿಕ ಅಫ್ಘಾನಿಸ್ತಾನದ ವಿರುದ್ಧದ ಸರಣಿ ಆರಂಭವಾಗಲಿದೆ.

ಸೂರ್ಯಕುಮಾರ್‌ಗೆ ಅಣಕ

ಕೋಲ್ಕತ: ವೆಸ್ಟ್ ಇಂಡೀಸ್ ವಿರುದ್ಧ ಜಯ ಸಾಧಿಸಿ ಭಾರತವು ಸೆಮಿಫೈನಲಿಗೆ ತೇರ್ಗಡೆ ಪಡೆಯುವಲ್ಲಿ ಪ್ರಧಾನ ಪಾತ್ರ ವಹಿಸಿದ ಸಂಜು ಸ್ಯಾಮ್ಸನ್‌ನ ನಿರ್ವಹಣೆಯನ್ನು ನಾಯಕ ಸೂರ್ಯಕುಮಾರ್ ಯಾದವ್ ಶ್ಲಾಘಿಸಿದ್ದಾರೆ. ತಾಳ್ಮೆಯಿಂದ ಕಾಯುವವರಿಗೆ ಯಾವತ್ತೂ ಒಳ್ಳೆಯದಾಗುತ್ತದೆ ಎಂದು ಅವರು ಪ್ರತಿಕ್ರಿಯಿಸಿದ್ದಾರೆ. ಗೆಲುವಿನ ಹೊಡೆತ ಬಾರಿಸಿ ಪೆವಿಲಿಯನ್ ಕಡೆ ಬರುತ್ತಿದ್ದ ಸ್ಯಾಮ್ಸನ್‌ಗೆ ನಾಯಕ ಸೂರ್ಯಕುಮಾರ್ ತಮ್ಮ ಕ್ಯಾಪ್ ಎತ್ತಿ ಗೌರವ ಸೂಚಿಸಿದರು. ಆದರೆ ಇದೇ ಸೂರ್ಯ ಕೆಲವು ದಿನಗಳ ಹಿಂದೆ ಸ್ಯಾಮ್ಸನ್‌ರನ್ನು ವ್ಯಂಗ್ಯವಾಡುವ ರೀತಿಯಲ್ಲಿ ವರ್ತಿಸಿದ್ದರು. ನೆಟ್ಟಿಗರು ಅದನ್ನು ಮೇಲೆತ್ತಿ ಸೂರ್ಯಕುಮಾರ್‌ರನ್ನು ಅಣಕವಾಡಿದ್ದಾರೆ. ದ.ಆಫ್ರಿಕಾ ಪಂದ್ಯದ ಮುನ್ನಾದಿನ ಪತ್ರಕರ್ತರೊಬ್ಬರು ಸ್ಯಾಮ್ಸನ್‌ರನ್ನು ಆರಂಭಿಕನಾಗಿ ಆಡಿಸಲಾಗುವುದೆ ಎಂದು ಸೂರ್ಯಕುಮಾರ್‌ಲ್ಲಿ ಪ್ರಶ್ನಿಸಿದಾಗ ಅವರನ್ನು ಅಭಿಷೇಕ್ ಜಾಗದಲ್ಲಿ ತರಬೇಕೆಂದು ಹೇಳುತ್ತಿದ್ದೀರಾ? ಎಂದು ವ್ಯಂಗ್ಯವಾಗಿ ಪ್ರಶ್ನಿಸಿದ್ದರು. ಮೂರನೇ ಕ್ರಮಾಂಕದಲ್ಲಿ ಆಡಿಸುವಿರಾ ಎಂದು ಅದೇ ಪತ್ರಕರ್ತ ಮತ್ತೆ ಕೇಳಿದಾಗ, ಹಾಗಿದ್ದರೆ ತಿಲಕ್ ವರ್ಮಾ ಜಾಗದಲ್ಲಿ ಆಡಿಸಬೇಕಾ ಎಂದು ನಗೆಯಾಡಿದ್ದರು. ಇದನ್ನು ನೆನಪಿಸಿರುವ ನೆಟ್ಟಿಗರು ಸೂರ್ಯಕುಮಾರ್ ಕಾಲೆಳೆದಿದ್ದಾರೆ.

ಭಾರತವನ್ನು ಸೆಮಿಫೈನಲ್‌ಗೇರಿಸಿದ ಸಂಜು | ಕಡೆಗಣಿಸಲ್ಪಟ್ಟ ಆಟಗಾರನಿಂದ ಅವಿಸ್ಮರಣೀಯ ಇನ್ನಿಂಗ್ಸ್

ಸ್ಯಾಮ್ಸನ್ ಆಪದ್ಬಾಂಧವ ಬ್ಯಾಟ್ಸ್‌ಮ್ಯಾನ್

ಕೋಲ್ಕತ: ಇತ್ತೀಚಿನ ವರ್ಷಗಳಲ್ಲಿ ಯಾವುದಾದರೂ ಪಂದ್ಯದಲ್ಲಿ ಭಾರತದ ಪಾಲಿಗೆ ಯಾರಾದರೊಬ್ಬರು ಆಪದ್ಬಾಂಧವರಾಗಿ ಒದಗಿ ಬರುವುದು ಹೆಚ್ಚುತ್ತಿದೆ. ಪಾಕಿಸ್ತಾನದ ವಿರುದ್ಧ ಪಂದ್ಯದಲ್ಲಿ ಇಶಾನ್ ಕಿಶನ್ ಅಂತಹ ಪಾತ್ರ ನಿರ್ವಹಿಸಿದ್ದರು. ಈಗ ಸಂಜು ಸ್ಯಾಮ್ಸನ್ ಅದೇ ಪಾತ್ರ ನಿರ್ವಹಿಸಿದ್ದಾರೆ. ವಿಪರ್ಯಾಸವೆಂದರೆ ಭಾರತೀಯ ತಂಡದಲ್ಲಿ ಅತೀ ಹೆಚ್ಚು ಕಡೆಗಣಿಸಲ್ಪಟ್ಟ ಆಟಗಾರನೆಂದರೆ ಸ್ಯಾಮ್ಸನ್. ಕಳೆದ 5 ತಿಂಗಳಲ್ಲಿ ಅವರು ಎರಡು ಬಾರಿ ತಮ್ಮ ಆರಂಭಿಕ ಸ್ಥಾನವನ್ನು ಇತರರಿಗೆ ಬಿಟ್ಟುಕೊಡಬೇಕಾಗಿತ್ತು. ಮೊದಲಿಗೆ ಗಿಲ್‌ಗೆ ಮತ್ತು ನಂತರ ಇಶಾನ್ ಕಿಶನ್‌ಗೆ. ಈ ವಿಶ್ವಕಪ್‌ನಲ್ಲಿ ಕೂಡಾ ಈಡನ್ ಗಾರ್ಡನ್ ಪಂದ್ಯಕ್ಕಿಂತ ಮುನ್ನ ಭಾರತವಾಡಿದ 5 ಪಂದ್ಯಗಳಲ್ಲಿ ಸ್ಯಾಮ್ಸನ್‌ಗೆ ಆಡಲು ಸಿಕ್ಕಿದ್ದು 2 ಪಂದ್ಯ ಮಾತ್ರ. ರಿಂಕು ಸಿಂಗ್ ತಮ್ಮ ತಂದೆ ನಿಧನರಾದ ಕಾರಣಕ್ಕೆ ಆಡಲು ಅಲಭ್ಯರಾದ ಕಾರಣದಿಂದಾಗಿಯಷ್ಟೆ ಸ್ಯಾಮ್ಸನ್‌ಗೆ ಆಡಲು ಅವಕಾಶ ಸಿಕ್ಕಿತ್ತು. ಸ್ಯಾಮ್ಸನ್ ಕೂಡಾ ಅಷ್ಟೆ, ಕೆಲವು ಬಾರಿ ತಮಗೆ ಅವಕಾಶ ನೀಡಿದಾಗಲೂ ಉತ್ತಮ ಆರಂಭ ತೋರುತ್ತಾರೆ, 20–30 ರನ್‌ಗಳನ್ನು ಬಾರಿಸುತ್ತಾರೆ, ಬಳಿಕ ಔಟಾಗಿ ತೆರಳುತ್ತಾರೆ. ಉತ್ತಮ ಆರಂಭವನ್ನು ದೊಡ್ಡ ಮೊತ್ತವನ್ನಾಗಿ ಪರಿವರ್ತಿಸಲು ಯಾವಾಗಲೂ ಸೋಲುತ್ತಾರೆ.

ಆದರೆ ಭಾನುವಾರ ಮಾತ್ರ ಹಾಗಾಗಲಿಲ್ಲ. ಸೆಮಿಫೈನಲಿಗೇರಲು ಗೆಲ್ಲಲೇ ಬೇಕಾಗಿದ್ದ ಪಂದ್ಯದಲ್ಲಿ ಗೆಲುವಿನ ಹಂತದ ತನಕ ಕ್ರೀಸಿನಲ್ಲಿದ್ದುಕೊಂಡೇ ತಮ್ಮ ಪಾತ್ರ ನಿಭಾಯಿಸಿದರು. ಕೊನೆಯ ಓವರಿನಲ್ಲಿ ಕೂಡಾ 6 ಎಸೆತಗಳಲ್ಲಿ 9 ರನ್ ಬೇಕಾಗಿದ್ದಾಗ ಮೊದಲ ಎಸೆತವನ್ನೆ ಸಿಕ್ಸರ್‌ಗೆತ್ತಿ ಒತ್ತಡವನ್ನು ಕ್ಷಣಾರ್ಧದಲ್ಲಿ ತಗ್ಗಿಸಿದರು. ಈ ಇನ್ನಿಂಗ್ಸನ್ನು ಬಹುಶಃ ಸ್ಯಾಮ್ಸನ್ ಎಂದಿಗೂ ಮರೆಯಲಾರರು. ಇದು ಅವರ ಅವಿಸ್ಮರಣೀಯ ಇನ್ನಿಂಗ್ಸ್. ಭಾರತೀಯರೆಲ್ಲರೂ ಎಂದೂ ಮರೆಯದ ಆಟವನ್ನು ಅವರು ಪ್ರದರ್ಶಿಸಿದರು.



ನನ್ನ ಬದುಕಿನ ಶ್ರೇಷ್ಠ ದಿನ: ಸ್ಯಾಮ್ಸನ್

ಭಾರತವನ್ನು ಸೆಮಿಫೈನಲಿಗೆ ಏರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಸಂಜು ಸ್ಯಾಮ್ಸನ್, ತನ್ನ ಬದುಕಿನ ಅತ್ಯಂತ ಶ್ರೇಷ್ಠ ದಿನವೆಂದು ಭಾನುವಾರದ ಪಂದ್ಯದ ಬಳಿಕ ಬಣ್ಣಿಸಿದರು. ಈ ರೀತಿ ವಿಶೇಷ ಆಟವನ್ನು ಪ್ರದರ್ಶಿಸುವೆನೆಂದು ನಾನು ಎಂದಿಗೂ ಭಾವಿಸಿರಲಿಲ್ಲ. ನಾನು ನಿರ್ವಹಿಸಬೇಕಾದ ಪಾತ್ರದ ಬಗ್ಗೆಯಷ್ಟೆ ನನ್ನ ಗಮನವಿತ್ತು ಎಂದು ಅವರು ಹೇಳಿದರು. ಪಂದ್ಯದಲ್ಲಿ ಸ್ಯಾಮ್ಸನ್ ಆರಂಭಿಕನಾಗಿ ಬಂದು ಕೊನೆಯವರೆಗೂ ಔಟಾಗದೆ ಉಳಿದುದು ಇದೇ ಮೊದಲು. ನಾನು ಆಡಿದ್ದು 50–60 ಪಂದ್ಯಗಳಾದರೂ ನೂರಾರು ಪಂದ್ಯಗಳನ್ನು ನೋಡಿದ್ದೇನೆ. ಹಲವರು ಶ್ರೇಷ್ಠ ಆಟ ಪ್ರದರ್ಶಿಸಿ ತಂಡಕ್ಕೆ ಗೆಲುವು ತಂದುದನ್ನು ಕಂಡಿದ್ದೇನೆ. ಚೆನ್ನೈಯಲ್ಲಿ ಜಿಂಬಾಬ್ವೆ ವಿರುದ್ಧ ಮೊದಲು ಬ್ಯಾಟ್ ಮಾಡಿದ್ದರಿಂದ ದೊಡ್ಡ ಮೊತ್ತ ಪೇರಿಸುವುದು ಗುರಿಯಾಗಿತ್ತು. ಹಾಗಾಗಿ ಆರಂಭದಿಂದಲೇ ಹೊಡೆತಕ್ಕೆ ಕೈ ಹಾಕಿ ವಿಕೆಟ್ ಕಳಕೊಳ್ಳುವುದು ಸಹಜ. ಆದರೆ ಇಲ್ಲಿ ಪರಿಸ್ಥಿತಿ ಬೇರೆಯಾಗಿತ್ತು. ನಮ್ಮ ಮುಂದೆ ದೊಡ್ಡ ಗುರಿಯಿತ್ತು. ಹಾಗಾಗಿ ಹೆಚ್ಚಿನ ಎಚ್ಚರಿಕೆಯಿಂದ ಆಡಿದೆ. ದೊಡ್ಡ ದೊಡ್ಡ ಜತೆಗಾರಿಕೆಗಳನ್ನು ಕಟ್ಟಲು ಆದ್ಯತೆ ನೀಡಿದೆ ಎಂದು ಅವರು ಬಣ್ಣಿಸಿದರು.



ಸ್ಯಾಮ್ಸನ್ ಆರಂಭಿಕನಾಗಿ ಬಂದು ಕೊನೆಯವರೆಗೂ ಔಟಾಗದೆ ಉಳಿದುದು ಇದೇ ಮೊದಲು.

ಟಿ20 ವಿಶ್ವಕಪ್

ಮೊದಲ ಸೆಮಿಫೈನಲ್
ಮಾರ್ಚ್ 4
ದ.ಆಫ್ರಿಕಾ- ನ್ಯೂಜಿಲೆಂಡ್
(ಈಡನ್ ಗಾರ್ಡನ್ಸ್, ಕೋಲ್ಕತ)

ಎರಡನೇ ಸೆಮಿಫೈನಲ್
ಮಾರ್ಚ್ 5
ಭಾರತ- ಇಂಗ್ಲೆಂಡ್
(ವಾಂಖೇಡೆ ಸ್ಟೇಡಿಯಂ, ಮುಂಬೈ)



ಸಹಜವಾಗಿ ರನ್ ಗತಿ ಏರಿಸುವ ಪ್ರತಿಭೆ: ಗೌತಿ

ಸಂಜು ವಿಶ್ವದರ್ಜೆಯ ಆಟಗಾರ. ಆತ ಎಷ್ಟು ಉತ್ತಮ ಆಟಗಾರ ಎಂಬುದು ನಮಗೆ ಗೊತ್ತು. ತಂಡಕ್ಕೆ ಹೆಚ್ಚಿನ ಅಗತ್ಯವಿರುವಾಗ ಆತ ತನ್ನ ಕೊಡುಗೆ ನೀಡುತ್ತಾನೆ. ಇಂದು ಅಂತಹುದೊಂದು ದಿನ ಎಂದು ಪಂದ್ಯದ ಬಳಿಕ ನುಡಿದ ಕೋಚ್ ಗಂಭೀರ್, ಮುಂದಿನ ಎರಡು ಪಂದ್ಯಗಳಲ್ಲೂ ಅವರಿಂದ ಇಂತಹುದೇ ಆಟ ಬರಲಿ ಎಂದು ಆಶಿಸಿದರು. ಆತ ಅತ್ಯಂತ ವೇಗವಾಗಿ ರನ್ ಗಳಿಸಿದ ಎಂದು ಕಾಣುವುದೇ ಇಲ್ಲ. ಆತನದು ಹೊಡಿಬಡಿ ಆಟವಲ್ಲ, ಸಹಜ ಆಟದಿಂದಲೇ ರನ್ ಗತಿ ಏರಿಸುತ್ತಾ ಹೋಗುತ್ತಾನೆ. ಚೆಂಡನ್ನು ಸಿಕ್ಕಾಬಟ್ಟೆ ಬಾರಿಸುವುದೂ ಕಾಣುವುದಿಲ್ಲ, ಅದು ಆತನ ಪ್ರತಿಭೆ. ಸಂಜು ಪಂದ್ಯದ ಮೇಲೆ ನಿಯಂತ್ರಣ ಹೊಂದಿರುವಷ್ಟು ಸಮಯ ನಾವು ನಿರಾಳವಾಗಿರಬಹುದು ಎಂದು ಗಂಭೀರ್ ನುಡಿದರು. ಸದ್ಯಕ್ಕೆ ಭಾರತದ ಪಾಲಿಗೆ ಸಂಜು ಸ್ಯಾಮ್ಸನ್ ಮತ್ತು ಇಶಾನ್ ಕಿಶನ್ ಉತ್ತಮ ಕೊಡುಗೆಯಾಗಿದ್ದಾರೆ. ಇಬ್ಬರೂ ವಿಕೆಟ್ ಕೀಪರ್‌ಗಳೂ ಆಗಿರುವುದರಿಂದ ತಂಡಕ್ಕೆ ಲಾಭವಾಗಿದೆ ಎಂದು ಗಂಭೀರ್ ಹೇಳಿದರು.

ಐಟಿಎಫ್ ಮಹಿಳಾ ಓಪನ್ | ಮುಖ್ಯ ಡ್ರಾಗೆ 5 ಭಾರತೀಯ ವನಿತೆಯರು

ಹರ್ಯಾಣ ಆಟಗಾರ್ತಿಗೆ ಭರ್ಜರಿ ಜಯ

ರಾಚಪ್ಪಾ ಜಂಬಗಿ

ಕಲಬುರಗಿ: ತೊಗರಿ ಕಣಜವಾದ ಕಲಬುರಗಿ ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಅಂತಾರಾಷ್ಟ್ರೀಯ ಐಟಿಎಫ್ ಮಹಿಳಾ ಓಪನ್ ಟೆನಿಸ್ ಟೂರ್ನಿಯ ಅರ್ಹತಾ ಪಂದ್ಯಗಳ ಎರಡನೇ ದಿನವಾದ ಸೋಮವಾರದಂದು ಕರ್ನಾಟಕದ ಸ್ನಿಗ್ಧಾ ಕಾಂತಾ ವಿರುದ್ಧ ಹರಿಯಾಣಾದ ಸಂಧೀಪ್ತಿ ಸಿಂಗ್ ರಾವ್ 6–4,6–3ರ ರೋಚಕ ಗೆಲುವು ಪಡೆಯುವ ಮೂಲಕ ಮುಂದಿನ ಹಂತಕ್ಕೆ ಲಗ್ಗೆಯಿಟ್ಟಿದ್ದಾರೆ.

ಪಂದ್ಯದ ಪ್ರಾರಂಭದಿಂದಲೇ ಆಟದ ಮೇಲೆ ಹಿಡಿದ ಸಾಧಿಸಿದ ಸಂಧೀಪ್ತಿ ಸಿಂಗ್ ರಾವ್ ಅಮೋಘನೀಯ ಆಟದ ಪ್ರದರ್ಶನ ನೀಡುವ ಮೂಲಕ ಗೆಲವನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು.

ಕರ್ನಾಟಕದ ಸ್ನಿಗ್ಧಾ ಕಾಂತಾ ಅವರ ಮೊದಲ ದಿನ ಭಾನುವಾರದ ಅರ್ಹತಾ ಪಂದ್ಯದಲ್ಲಿ ತೋರಿಸಿದ ಗೆಲುವು ಸೋಮವಾರ ಕಾಣಲು



ಸಿಗದ ಹಿನ್ನಲೆಯಲ್ಲಿ ಅಭಿಮಾನಿಗಳಿಗೆ ಕೊಂಚ ನಿರಾಸೆಯುಂಟಾಗಿದ್ದು, ಮುಂಬರುವ ಡಬಲ್ಸ್ ಪಂದ್ಯಗಳಲ್ಲಿನ ಅವರ ಆಟಕ್ಕೆ ಅಭಿಮಾನಿಗಳು ಕಾತುರದ ಎದುರು ನೋಡುತ್ತಿದ್ದಾರೆ. ಇದಕ್ಕೂ ಮೊದಲು ನಡೆದ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಎಂಟು ಮುಖ್ಯ ಡ್ರಾ ಸ್ಥಾನಗಳಿಗಾಗಿ ಕಠಿಣ ಪೈಪೋಟಿ ಕಂಡು ಬಂದಿದ್ದು, ಅರುಣಕುಮಾರ್ ಲಕ್ಷ್ಮಿ ಪ್ರಭಾ 6–2, 3–6, 10–6 ಅಂತರದಲ್ಲಿ ಮಾರಿಯಾ ಮಿಖೈಲೋವಾ ವಿರುದ್ಧ ರೋಚಕ ಟೈಬ್ರೇಕ್ ಜಯ ಸಾಧಿಸಿದರು. ಸಿಂಗಾಪುರದ ಇವಾ ಮೇರಿ ಡೆಸ್ವಿಗ್ನ್ಸ್ ಅಹಾನ್ ಅಹಾನ್ ವಿರುದ್ಧ 6–0, 6–1 ಅಂತರದಲ್ಲಿ ಗೆದ್ದರು. ವಾಲೆರಿಯಾ ಸಾವಿನಿಖ್ ಸೌಮ್ಯ ರೊಂಡೆ ವಿರುದ್ಧ 6–4, 6–1 ಗೆಲುವು ಪಡೆದರು. ಕಾಶಿಶ್ ಭಾಟಿಯಾ ಮಹಿಕಾ ಖನ್ನಾ ವಿರುದ್ಧ 7–6(4), 6–0 ಅಂತರದ ಗೆಲುವು ದಾಖಲಿಸಿದರು.

ಐಶ್ವರ್ಯ ಜಾಧವ್ ಶ್ರೀಮನ್ಯಾ ರೆಡ್ಡಿ ಅನುಗೊಂಡ ವಿರುದ್ಧ 6–3, 6–3 ಜಯಿಸಿದರು. ಲಕ್ಷ್ಮಿಸಿರಿ ದಂಡು ಬೆಲಾ ತಂಹಂಕರ ವಿರುದ್ಧ 7–5, 3–6, 14–12 ಅಂತರದಲ್ಲಿ ಹೋರಾಟದ ಜಯ ಸಾಧಿಸಿದರು. ಅನ್ನಾ ಸೆಡಿಶೇವಾ ಯಶಸ್ವಿನಿ ಪನ್ವಾರ್ ವಿರುದ್ಧ 6–4, 6–2 ಅಂತರದಲ್ಲಿ ಗೆಲುವು ದಾಖಲಿಸಿದರು.

ಮುಖ್ಯ ಡ್ರಾ ಪಂದ್ಯಗಳಿಗೆ ಕಲಬುರಗಿ ಸಜ್ಜು

ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಐಟಿಎಫ್ ಡಬ್ಲ್ಯು 35 ಟೆನಿಸ್ ಟೂರ್ನಿಯ ಮುಖ್ಯ ಡ್ರಾ ಪಂದ್ಯಗಳು ಭರ್ಜರಿಯಾಗಿ ಆರಂಭಗೊಳ್ಳಲು ಸಿದ್ಧತೆಯಾಗಿದ್ದು, ಸಿಂಗಲ್ಸ್ ವಿಭಾಗದ ಮುಖ್ಯ ಡ್ರಾದಲ್ಲಿ ಹಲವು ಕುತೂಹಲಕಾರಿ ಮೊದಲ ಸುತ್ತಿನ ಪಂದ್ಯಗಳು ಎದುರಾಗಿವೆ. ಮೂರನೇ ಸೀಡ್ ವೈಷ್ಣವಿ ಆಡ್ಕರ್ ಚೆವಿಕಾ ರೆಡ್ಡಿ ಸಾಮಾ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ. ಐದನೇ ಸೀಡ್ ಜೀಲ್ ದೇಸಾಯಿ ಅರ್ಹತಾ ಆಟಗಾರ್ತಿಯೊಬ್ಬರ ವಿರುದ್ಧ ಕಣಕ್ಕಿಳಿಯಲಿದ್ದಾರೆ. ಎಂಟನೇ ಸೀಡ್ ಅಂಕಿತಾ ರೈನಾ ಸೋನಲ್ ಪಾಟೀಲ ವಿರುದ್ಧ ಆಲ್-ಇಂಡಿಯನ್ ಮುಖಾಮುಖಿಯಲ್ಲಿ ಸೆಣಸಲಿದ್ದಾರೆ. ನಾಲ್ಕನೇ ಸೀಡ್ ಶ್ರೀವಳ್ಳಿ ರಶ್ಮಿಕಾ ಭಮಿಡಿಪಾಟಿ ಎವ್ಗೆನಿಯಾ ಬರ್ಡಿನಾ ಅವರನ್ನು ಎದುರಿಸಲಿದ್ದು, ಎರಡನೇ ಸೀಡ್ ಅಂಚಿಸಾ ಚಾಂತಾ ಬ್ರಿಟನ್‌ನ ಅಲೆಗ್ರಾ ಕೋರಪಾನೆಕ್ ಡೇವಿಸ್ ವಿರುದ್ಧ ಆಡಲಿದ್ದಾರೆ. ಭಾರತೀಯ ಸೀಡ್ ಆಟಗಾರ್ತಿಯರೊಂದಿಗೆ ಅನುಭವಸಂಪನ್ನ ಅಂತಾರಾಷ್ಟ್ರೀಯ ಆಟಗಾರ್ತಿಯರ ಹಾಜರಾತಿ ಈ ವಾರ ತೀವ್ರ ಪೈಪೋಟಿಗೆ ವೇದಿಕೆ ಸಿದ್ಧಪಡಿಸಿದೆ. ಡಬಲ್ಸ್ ವಿಭಾಗದಲ್ಲಿ ಶ್ರೀವಳ್ಳಿ ರಶ್ಮಿಕಾ ಭಮಿಡಿಪಾಟಿ ಮತ್ತು ಜಾಸ್ಮಿನ್ ಗಿಂಬ್ರೆರೇ ಅಗ್ರ ಸೀಡ್ ಜೋಡಿಯಾಗಿ ತಾಯ್ಲೆಂಡ್‌ನ ಅಂಚಿಸಾ ಚಾಂತಾ ಹಾಗೂ ತಸಾಪೋರ್ನ್ ನಕ್ಲೋ ವಿರುದ್ಧ ಕಣಕ್ಕಿಳಿಯಲಿದ್ದಾರೆ. ಭಾರತೀಯ ಜೋಡಿಗಳಾದ ಸ್ನಿಗ್ಧಾ ಕಾಂತಾ ಹರ್ಷಿಣಿ ಎನ್ ನಾಗರಾಜ್, ಕಾಶಿಶ್ ಭಾಟಿಯಾ ವಂಶಿತಾ ಪಠಾನಿಯಾ ಹಾಗೂ ಶ್ರೀಮಾನ್ಯಾ ರೆಡ್ಡಿ ಅನುಗೊಂಡ ಸಾಯಿ ಸಂಹಿತಾ ಚಮರ್ಥಿ ಅವರಿಗೆ ವೈಲ್ಡ್‌ಕಾರ್ಡ್ ಅವಕಾಶ ನೀಡಲಾಗಿದೆ.

ಹೆಚ್ಚು ಕ್ಯಾಚ್ ಕೈಚೆಲ್ಲಿದ ಭಾರತ!



ಮುಂಬೈ: ಭಾರತವು ವೆಸ್ಟ್ ಇಂಡೀಸ್ ವಿರುದ್ಧ ಜಯ ಸಾಧಿಸಿ ಟಿ20 ವಿಶ್ವಕಪ್‌ನ ಸೆಮಿಫೈನಲಿಗೆ ತೇರ್ಗಡೆ ಪಡೆದಿದೆ. ಅಷ್ಟು ದೊಡ್ಡ ಮೊತ್ತವನ್ನು ಬೆನ್ನತ್ತುವಾಗ ಭಾರತವು ಎಲ್ಲಿಯೂ ಒತ್ತಡಕ್ಕೆ ಒಳಗಾಗಲಿಲ್ಲ. ಪ್ರಸಕ್ತ ಭಾರತೀಯ ತಂಡವು ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ಬಲಿಷ್ಠವಾಗಿರುವುದನ್ನು ಇದು ಸೂಚಿಸುತ್ತದೆ. ಆದರೆ, ಒಂದು ಕ್ಷೇತ್ರದಲ್ಲಿ ಮಾತ್ರ ಭಾರತದ ನಿರ್ವಹಣೆ ತೃಪ್ತಿಕರವಾಗಿಲ್ಲ, ಅದು ಫೀಲ್ಡಿಂಗ್ ಕ್ಷೇತ್ರ.

ಭಾರತೀಯ ಆಟಗಾರರ ಕ್ಷೇತ್ರರಕ್ಷಣೆಯಲ್ಲಿ ಸುಧಾರಣೆ ಅಗತ್ಯ

ವರುಷಗಳ ಹಿಂದೆ ಫೀಲ್ಡಿಂಗ್‌ನಲ್ಲಿ ಕೂಡಾ ಭಾರತವು ಶ್ರೇಷ್ಠ ತಂಡವಾಗಿತ್ತು. ರವೀಂದ್ರ ಜಡೇಜಾ, ವಿರಾಟ್ ಕೊಹ್ಲಿ, ಸುರೇಶ್ ರೈನಾ, ಉಮೇಶ್ ಯಾದವ್ ಮೊದಲಾದವರು ಮೈದಾನದಲ್ಲಿ ಮಿಂಚಿನ ಸಂಚಾರ ಮಾಡುತ್ತಿದ್ದರು. ಕ್ಯಾಚ್ ಹಿಡಿಯುವುದರಲ್ಲಿ, ರನೌಟ್ ಮಾಡುವುದರಲ್ಲಿ ವಿಫಲರಾಗುತ್ತಿದ್ದುದು ಕಡಿಮೆ. ಆದರೆ ಪ್ರಸಕ್ತ ತಂಡವು ಫೀಲ್ಡಿಂಗ್‌ನಲ್ಲಿ ಅದೇ ಚುರುಕುತನ ಹೊಂದಿಲ್ಲ. ಕೆಲವು ಯುವ ಆಟಗಾರರು ಕ್ಯಾಚ್ ಬಿಡುವುದು, ರನೌಟ್ ಅವಕಾಶ ಕೈಚೆಲ್ಲುವುದು ಹೆಚ್ಚುತ್ತಿದೆ. ಈವರೆಗಿನ 7 ಪಂದ್ಯಗಳಲ್ಲಿ ಭಾರತೀಯರು ಸುಮಾರು 13 ಕ್ಯಾಚ್‌ಗಳನ್ನು ಕೈಚೆಲ್ಲಿದ್ದಾರೆ. ಭಾನುವಾರದ ವಿಂಡೀಸ್ ವಿರುದ್ಧದ ಮಹತ್ವದ ಪಂದ್ಯದಲ್ಲೇ ಮೂರು ಕ್ಯಾಚ್‌ಗಳನ್ನು ಬಿಡಲಾಯಿತು. ಅಭಿಷೇಕ್ ಎರಡು ಸುಲಭ ಕ್ಯಾಚ್‌ಗಳನ್ನು ಕೈಬಿಟ್ಟರೆ, ತಿಲಕ್ ವರ್ಮಾ ಒಂದು ಕ್ಯಾಚ್ ಕೈಚೆಲ್ಲಿದರು. ಫೀಲ್ಡಿಂಗ್‌ನಲ್ಲೂ ಅಷ್ಟೆ, ವರುಣ್ ಚಕ್ರವರ್ತಿಯವರು ರೋಸ್ಟನ್ ಚೇಸ್‌ರ ಸುಲಭ ರನೌಟ್ ಅವಕಾಶವೊಂದನ್ನು ಕೈಚೆಲ್ಲಿದರು. ರನ್ ನಿಯಂತ್ರಿಸುವಲ್ಲೂ ನಮ್ಮ ಆಟಗಾರರು ಹೆಚ್ಚು ಚುರುಕಾಗಿಲ್ಲ. ಒಂದು ರನ್ ನೀಡಬೇಕಾದಲ್ಲಿ ಎರಡು ರನ್ ನೀಡುವುದು, ಕಳಪೆ ಫೀಲ್ಡಿಂಗ್‌ನಿಂದ ಬೌಂಡರಿ ನೀಡುವುದು ಹೆಚ್ಚುತ್ತಿದೆ. ವರುಣ್ ಚಕ್ರವರ್ತಿ, ಶಿವಂ ದುಬೆ, ಬೂಮ್ರಾ ಮೊದಲಾದವರೆಲ್ಲ ಮಿಂಚಿನ ಚಲನೆ ಹೊಂದಿಲ್ಲ.


ಈ ಬಾರಿಯ ವಿಶ್ವಕಪ್‌ನಲ್ಲಿ ಉಳಿದೆಲ್ಲಾ ತಂಡಗಳಿಗಿಂತ ಹೆಚ್ಚು ಕ್ಯಾಚ್‌ಗಳನ್ನು ಕೈಚೆಲ್ಲಿರುವುದು ಭಾರತ ಎಂಬುದೇ ಅತ್ಯಂತ ಆಶ್ಚರ್ಯಕರ ಸಂಗತಿ. ಕಳೆದ ಸೆಪ್ಟೆಂಬರ್‌ನಲ್ಲಿ ನಡೆದ ಏಷ್ಯಾ ಕಪ್‌ನಲ್ಲಿ ಕೂಡಾ ಭಾರತ ತಂಡವು ಹಲವಾರು ಕ್ಯಾಚ್‌ಗಳನ್ನು ಬಿಟ್ಟಿತು. ಫೀಲ್ಡಿಂಗ್ ಕೋಚ್ ಟಿ. ದಿಲೀಪ್ ಈ ಬಗ್ಗೆ ಹೆಚ್ಚಿನ ಗಮನ ಕೊಡಬೇಕಾದ ಅಗತ್ಯವಿದೆ. ಇಲ್ಲವಾದಲ್ಲಿ ಅವರನ್ನೆ ಹೊಣೆಗಾರರನ್ನಾಗಿ ಮಾಡಬೇಕಾಗುತ್ತದೆ ಎನ್ನುವುದು ಕ್ರಿಕೆಟ್ ಪಂಡಿತರ ಅಭಿಪ್ರಾಯ.

ಹರಿಣರೇ ವಿಶ್ವಕಪ್ ಗೆಲ್ಲುವ ಫೇವರಿಟ್: ಕೋಚ್

ಮುಂಬೈ: ದಕ್ಷಿಣ ಆಫ್ರಿಕಾ ಟಿ20 ವಿಶ್ವಕಪ್ ಗೆಲ್ಲುವ ಫೇವರಿಟ್ ತಂಡ ಎಂಬುದಾಗಿ ಕೋಚ್ ಶುಕ್ರಿ ಕೊನ್ರಾಡ್ ಅಭಿಪ್ರಾಯಪಟ್ಟಿದ್ದಾರೆ. ಸೆಮಿಫೈನಲ್‌ಗೇರಿರುವ ತಂಡಗಳಲ್ಲಿ ಭಾರತವನ್ನು ಮತ್ತು ನ್ಯೂಜಿಲೆಂಡ್‌ನ್ನು ಈಗಾಗಲೆ ಒಂದು ಬಾರಿ ಸೋಲಿಸಿರುವುದರಿಂದ ತಾವೇ ಈಗ ಫೇವರಿಟ್ ಪಟ್ಟಿಯ ಅಗ್ರಸ್ಥಾನಿಗಳು ಎಂದು ಅವರು ಹೇಳಿಕೊಂಡಿದ್ದಾರೆ.



ದ.ಆಫ್ರಿಕಾ ಟೂರ್ನಿಯಲ್ಲಿ ಸದ್ಯಕ್ಕೆ ಅಪರಾಜಿತ ತಂಡವೂ ಹೌದು. ಆಡಿದ ಏಳೂ ಪಂದ್ಯಗಳನ್ನು ಅದು ಗೆದ್ದಿರುವುದೂ ಅದರ ಫೇವಿರಟ್ ಸ್ಥಾನಮಾನವನ್ನು ಹೆಚ್ಚಿಸಿದೆ. ನಾವೀಗ ಫೇವರಿಟ್ ತಂಡವಾಗಿರುವುದು ನಿಜ. ಇದು ಸಂತೋಷದ ವಿಚಾರ. ಅಂಡರ್‌ಡಾಗ್ ಆಗಿರುವುದರಿಂದ ಒತ್ತಡ ಇರುವುದಿಲ್ಲ ಹೌದು. ಫೇವರಿಟ್‌ಗಳ ಮೇಲೆ ನಿರೀಕ್ಷೆ ಹೆಚ್ಚು, ಆದರೆ ಈ ನಿರೀಕ್ಷೆ ಈಡೇರಿಸುವ ಗುರಿ ನಮ್ಮದಾಗಿದೆ ಎಂದು ಕೊನ್ರಾಡ್ ತಿಳಿಸಿದ್ದಾರೆ. ನಾವು ಈಗಿನ ನಿರ್ವಹಣೆಯನ್ನೇ ಮುಂದುವರಿಸಿದರೆ ಮತ್ತು ಅದೃಷ್ಟವೂ ಒಂದಿಷ್ಟು ಜತೆಗಿದ್ದರೆ ಬುಧವಾರದ ಪಂದ್ಯ ಗೆಲ್ಲಬಲ್ಲೆವು. ಅಲ್ಲಿಂದ ಬಳಿಕ ನಮ್ಮ ಪಾಲಿನ ತವರು ನೆಲವಾದ ಅಹಮದಾಬಾದ್‌ಗೆ ಫೈನಲಿಗೆ ತೆರಳುವೆವು ಎಂದು ಅವರು ನುಡಿದಿದ್ದಾರೆ. ಸೆಮಿಫೈನಲ್ ಎಂದಾಗ ಒತ್ತಡ ಇರುವುದು ಸಹಜವೆ. ಆದರೆ ಇಂತಹ ಒತ್ತಡವನ್ನು ನಿಭಾಯಿಸಿಯೂ ತಮಗೆ ಗೊತ್ತು ಎಂದು ಅವರು ನುಡಿದಿದ್ದಾರೆ. ಕೊನ್ರಾಡ್ ನೇತೃತ್ವದಲ್ಲೇ ದ.ಆಫ್ರಿಕಾ ಮೊತ್ತಮೊದಲ ವಿಶ್ವಕಪ್ ಒಂದನ್ನು ಗೆಲ್ಲುವಂತಾಗಿತ್ತು. ಈವರೆಗೆ ಮರೀಚಿಕೆಯಾಗಿದ್ದ ವಿಶ್ವಕಪ್ ಅವರಿಗೆ ಕಳೆದ ವರ್ಷ ಜೂನ್‌ನಲ್ಲಿ ವಿಶ್ವ ಟೆಸ್ಟ್ ಚಾಂಪ್ಯನ್‌ಶಿಪ್ ರೂಪದಲ್ಲಿ ಒಲಿದಿತ್ತು. ಟೂರ್ನಿಯುದ್ದಕ್ಕೂ ದ.ಆಫ್ರಿಕಾ ಪ್ರಾಬಲ್ಯ ಸಾಧಿಸಿ ಗೆಲ್ಲುತ್ತಾ ಬಂದಿದೆ. ಗ್ರೂಪ್ ಹಂತದಲ್ಲಿ ಅಫಘಾನಿಸ್ತಾನ ವಿರುದ್ಧ ಮಾತ್ರ ಅದು ಭಾರೀ ಒತ್ತಡ ಅನುಭವಿಸಿತ್ತು. ಎರಡು ಬಾರಿ ಸೂಪರ್ ಓವರ್ ಎದುರಿಸಬೇಕಾಗಿ ಬಂದಿತ್ತು. ಆದರೆ ಅಲ್ಲಿಂದ ಬಳಿಕ ದ.ಆಫ್ರಿಕಾ ತನ್ನ ನಿರ್ವಹಣೆಯನ್ನು ಉತ್ತಮಪಡಿಸುತ್ತಾ ಬಂದಿದೆ. ದಕ್ಷಿಣ ಆಫ್ರಿಕಾ ತಾನಾಡಿದ ಏಳು ಪಂದ್ಯಗಳಲ್ಲಿ ಐದನ್ನು ಅಹಮದಾಬಾದ್‌ನಲ್ಲಿ ಆಡಿದ್ದು, ಈ ಮೈದಾನವು ಅದರ ಪಾಲಿಗೆ ತವರು ನೆಲದಂತಾಗಿದೆ. ಆದರೆ ನ್ಯೂಜಿಲೆಂಡ್ ವಿರುದ್ಧದ ಸೆಮಿಫೈನಲನ್ನು ಕೋಲ್ಕತಾದಲ್ಲಿ ಆಡಬೇಕಾಗಿದೆ.



ಕಲಬುರಗಿ ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಐಟಿಎಫ್ ಡಬ್ಲ್ಯು 35 ಮಹಿಳಾ ಟೆನಿಸ್ ಟೂರ್ನಿ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಅರುಣಕುಮಾರ್ ಲಕ್ಷ್ಮಿ ಪ್ರಭಾ 6–2, 3–6, 10–6 ಅಂತರದಲ್ಲಿ ಮಾರಿಯಾ ಮಿಖೈಲೋವಾ ವಿರುದ್ಧ ರೋಚಕ ಟೈಬ್ರೇಕ್ ಜಯ ಸಾಧಿಸಿದರು.

ಸೆಮಿಫೈನಲ್ ಪ್ರವೇಶಿಸದ ಕಾರಣ ತಲಾ 16 ಲಕ್ಷ ರೂ. ದಂಡ


ಪಾಕ್ ಆಟಗಾರರಿಗೆ ಪಿಸಿಬಿ ಭಾರೀ ದಂಡ

ಇಸ್ಲಾಮಾಬಾದ್: ಟಿ20 ವಿಶ್ವಕಪ್‌ನ ಸೆಮಿಫೈನಲಿಗೇರಲು ವಿಫಲವಾದ ಪಾಕಿಸ್ತಾನ ತಂಡದ ಆಟಗಾರರ ಮೇಲೆ ಪಿಸಿಬಿ ದಂಡ ಹೇರಲು ನಿರ್ಧರಿಸಿದೆ ಎಂಬ ಸುದ್ದಿ ಬಂದಿದೆ. ಪ್ರತಿಯೊಬ್ಬ ಆಟಗಾರ 50 ಲಕ್ಷ ಪಾಕಿಸ್ತಾನಿ ರೂ.ಗಳನ್ನು (16.28 ಲಕ್ಷ ಭಾರತೀಯ ರೂಪಾಯಿ) ದಂಡವಾಗಿ ಪಾವತಿಸಬೇಕೆಂದು ಪಿಸಿಬಿ ಆದೇಶಿಸಿದೆ ಎಂಬುದಾಗಿ ಪಾಕ್ ಮಾಧ್ಯಮವೊಂದು ವರದಿ ಮಾಡಿದೆ. ಪಾಕ್ ಗೆದ್ದುದಾದಲ್ಲಿ ಬಂಪರ್ ಕೊಡುಗೆ ನೀಡುವುದಾಗಿ ಘೋಷಿಸಲಾಗಿತ್ತು. ಆದರೆ ಅವರು ಸೆಮಿಫೈನಲಿಗೇರಲು ವಿಫಲರಾಗಿರುವುದರಿಂದ ಅವರೇ ದಂಡ ನೀಡಬೇಕು ಎಂಬುದು ಪಿಸಿಬಿ ನಿಲುವಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಮೊದಲ ಸುತ್ತಿನಲ್ಲಿ ಭಾರತದ ವಿರುದ್ಧ ಸೋತಾಗಲೇ ಆಟಗಾರರ ಮೇಲೆ ಆರ್ಥಿಕ ದಂಡ ಹೇರಲು ನಿರ್ಧರಿಸಲಾಗಿತ್ತು ಎಂದೂ ಹೇಳಲಾಗಿದೆ. ಪಾಕ್ ಆಟಗಾರರಷ್ಟೇ ಅಲ್ಲದೆ ಕೋಚ್ ಮೈಕ್ ಹಸನ್ ಹುದ್ದೆಯ ಮೇಲೂ ಈಗ ತೂಗುಗತ್ತಿ ನೇತಾಡುತ್ತಿದೆ. ಇದೇ ವೇಳೆ, ಬಾಬರ್ ಅಜಮ್, ಉಸ್ಮಾನ್ ಖಾನ್, ಸಲ್ಮಾನ್ ಆಘಾ ಮುಂತಾದ ಆಟಗಾರರ ಟಿ20 ಅಂತಾರಾಷ್ಟ್ರೀಯ ಕೆರಿಯರ್ ಮೇಲೂ ಪರದೆ ಬೀಳುವ ನಿರೀಕ್ಷೆಯಿದೆ. ಇನ್ನು ಮುಂದೆ ಅವರನ್ನು ಟಿ20 ತಂಡಕ್ಕೆ ಪರಿಗಣಿಸದಿರುವ ಸಾಧ್ಯತೆಗಳಿವೆ. ಪಾಕಿಸ್ತಾನದ ಮಾಜಿ ಆಟಗಾರರೂ ಪ್ರಸಕ್ತ ತಂಡದ ನಿರ್ವಹಣೆಯನ್ನು ಟೀಕಿಸಿದ್ದಾರೆ. ಪಾಕ್ ತಂಡವು ದುರ್ಬಲ ತಂಡಗಳೆದುರು ಜಯಿಸುವುದಾದರೂ ಪ್ರಮುಖ ತಂಡಗಳ ವಿರುದ್ಧ ನಿರಂತರವಾಗಿ ಸೋಲುತ್ತಿದೆ ಎಂದು ಅವರು ಟೀಕಿಸಿದ್ದಾರೆ. ಕೆಲವು ಹಿರಿಯ ಆಟಗಾರರಿಗೆ ಅಗತ್ಯಕ್ಕಿಂತ ಹೆಚ್ಚು ಅವಕಾಶಗಳನ್ನು ನೀಡಲಾಗಿದೆ. ಅಸಮರ್ಥ ಆಟಗಾರರನ್ನು ತಂಡದಿಂದ ತೆಗೆಯಬೇಕು ಎಂಬುದು ಅವರ ಆಗ್ರಹವಾಗಿದೆ.



ಪದಬಂಧ

ರಾಜಾ ಸಂಗಮೇಶ ಹಿರೇಮಠ



5912

ಎಡದಿಂದ ಬಲಕ್ಕೆ
1.ಸೀಮೆಯನ್ನು ದಾಟಿಬಂದ ಚತುರವ್ಯಕ್ತಿ (3)
3.ಕರಣಿಕನ ಮೇಲಾದರೂ ಮೂಡಲಿ ಮರುಕ (4)
5.ಪಣದ ನಡುವೆ ಪಶ್ಚಿಮ ದಿಕ್ಕಿದೆ (4)
6.ಮರಕೋತಿ ಆಟದ ಇನ್ನೊಂದು ಹೆಸರು (4)
8.ಕುಬೇರನ ಸಂಪತ್ತಿಗಿರುವ ಹೆಸರು (4)
11.ಕಠಿಣ ವ್ಯಾಯಾಮವಿಲ್ಲಿ ತಿರುಗಿದೆ (4)
14.ಗಾನ ನಡುವೆ ತಿರುಗಿ ಪಶುಪಾಲಕನಾದ (4)
15.ಪಾತದೆಡೆಗೆ ಜಾರಿ ಬಿದ್ದ ಹೂವು (4)
16.ಮುಗಿದು ಹೋದ ಸಮಯ (4)
17.ವಸ್ತು–ವ್ಯಕ್ತಿಯ ಪಕ್ಕದ ಭಾಗ (3)

ಮೇಲಿನಿಂದ ಕೆಳಕ್ಕೆ
1.ದನಿ ಒಳಗೊಂಡ ದೃಷ್ಟಾಂತ (4)
2.ಹೋಲಿಕೆಗೆ ಮೀರಿದ್ದು ತಲೆಕೆಳಗಾಗಿದೆ(4)
3.ಕಲೆಯ ನಡುವೆ ಅರಳಿದ ಹೂವು(4)
4.ಕಾಲಿನ ಗೆಜ್ಜೆ ತಲೆಕೆಳಗಾಗಿದೆ(3)
7.ಮೆಲುವಾಗಿ ಬೀರಿದ ನಗೆ(4)
9.ವನದ ನಡುವೆ ಮಾರನಿಗೆ ಸಿಕ್ಕ ವೇತನ(4)
10.ಭೂಮಿಯನ್ನು ರಕ್ಷಿಸುವವನು–ರಾಜ(4)
12.ಓಟು ಹಾಕುವವನ ತಲೆಕೆಳಗಾಗಿದ್ದಾನೆ(4)
13. ಕಳವು ಮಾಡಿದ ಸರಕು(4)
14.ಬ್ರಿಟಿಷ್ ಆಳ್ವಿಕೆಯಲ್ಲಿ ಪೋಲಿಸು ಅಧಿಕಾರಿ(3)

5911 ಉತ್ತರ

ಎಡದಿಂದ ಬಲಕ್ಕೆ:
1.ಸಹವಾಸ
3.ಜಂಘಾಬಲ
5.ಸಾವಿರ 6.ನಗೆಗಾರ
8.ನುಡಿಗಾರ 10.ಕವಾಡಿಗ
12.ಪತಿವ್ರತೆ 14.ಸಮಿತಿ
15.ಕರಿಕೋಟು
16.ತಳಭಾಗ

ಮೇಲಿನಿಂದ ಕೆಳಕ್ಕೆ:
1.ಸಹಜಮನ 2.ಸಮರ ವೀರ 3.ಜಂಗೀಸಾಮಾನು
4.ಲಕ್ಷ್ಮೀಶ್ವರ 7.ಗಾರುಡಿ
9.ತಿಕಡಿ 10.ಕನಕ
11.ಗಸಟು 12.ಪತಿತ
13.ತೆತ್ತಿಗ

ಕಿರುಸುದ್ದಿ

ಇಂದು ರಂಗಕಲಾವಿದ ದಿ.ಬಿ.ಬಾಬು ನೆನಪು ಕಾರ್ಯಕ್ರಮ

ಮುಂಡರಗಿ: ಗೆಳೆಯರ ಬಳಗದ ವತಿಯಿಂದ ಮಾ.3ರಂದು ಬೆಳಗ್ಗೆ 11 ಕ್ಕೆ ಅಂಜುಮನ್ ಶಾದಿ ಮಹಲ್‌ನಲ್ಲಿ ರಂಗಕಲಾವಿದ ದಿ.ಬಿ.ಬಾಬು ನೆನಪು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಡಾ.ಸಿದ್ದನಗೌಡ ಪಾಟೀಲ ನೆರವೇರಿಸುವರು. ಅಧ್ಯಕ್ಷತೆಯನ್ನು ನಿವೃತ್ತ ಪ್ರಾಚಾರ್ಯ ಎ.ಬಿ.ಹಿರೇಮಠ ವಹಿಸುವರು. ಮುಖ್ಯ ಅತಿಥಿಗಳಾಗಿ ರಹಮತ್ ತರಿಕೇರೆ, ಡಾ.ವಿನಯಾ ವಕ್ಕುಂದ, ವೈ.ಎನ್.ಗೌಡರ, ರಾಮಕೃಷ್ಣ ದೊಡ್ಡಮನಿ, ಅಲ್ಲಮಪ್ರಭು ಬೆಟ್ಟದೂರ, ಡಾ.ಆರ್.ಎನ್.ರಾಜಾನಾಯಕ, ಈ ಬಸವರಾಜು, ಬಿ.ಎ.ಕೆಂಚರಡ್ಡಿ, ಬಸವರಾಜ ಸೂಳಿಬಾವಿ, ಪಿ.ಪೀರಸಾಬ, ಡಾ.ಎಂ.ಡಿ.ವಕ್ಕುಂದ, ಶಂಕರ ಹಲಗತ್ತಿ, ಬಿ.ಎಸ್.ಸೊಪ್ಪಿನ, ಡಾ.ಅರ್ಜುನ ಗೊಳಸಂಗಿ, ಸಿ.ಜಿ.ಹಿರೇಮಠ, ಶಂಕರಗೌಡ ಸಾತ್ಮಾರ, ಬಸವರಾಜ ಬೆಂಗೇರಿ, ಸಲೀಮ್ ಬಳಬಟ್ಟಿ,ಶಾಂತಕುಮಾರ ಪೂಜಾರ, ಮುತ್ತು ಹಾಳಕೇರಿ ಮುಂತಾದವರು ಆಗಮಿಸುವರು.

ಇಂದು 1843ನೇ ಶಿವಾನುಭವ

ಮುಂಡರಗಿ: ಇಲ್ಲಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದಲ್ಲಿ ಮಾ. 3ರಂದು ಸಂಜೆ 7.30ಕ್ಕೆ 1843 ನೇ ಮಾಸಿಕ ಶಿವಾನುಭವ ಕಾರ್ಯಕ್ರಮವು ಜಗದ್ಗುರು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳವರ ಸಾನಿಧ್ಯದಲ್ಲಿ ನಡೆಯುವುದು. ಶ್ರೀಮಠದ ಉತ್ತರಾಧಿಕಾರಿಗಳಾದ ಡಾ.ಮಲ್ಲಿಕಾರ್ಜುನ ಸ್ವಾಮೀಜಿ ಮತ್ತು ಡಾ.ವೀರಭದ್ರ ಶಿವಾಚಾರ್ಯ ಸ್ವಾಮಿಗಳು ನೇತೃತ್ವವನ್ನು ವಹಿಸುವರು. ಉಪನ್ಯಾಸಕರಾಗಿ ಪ್ರಾಧ್ಯಾಪಕ ಡಾ.ಜೆ. ಕುಮಾರ ಅವರು ಶಿವಾನುಭವ ಕುರಿತು ಉಪನ್ಯಾಸವನ್ನು ನೀಡುವರು. ಭಕ್ತಿ ಸೇವೆಯನ್ನು ಕದಾಂಪುರದ ಸಿದ್ದಲಿಂಗಮ್ಮ ಶಾಂತವೀರಯ್ಯಸ್ವಾಮಿ ಹಿರೇಮಠ ಕುಟುಂಬದವರು ವಹಿಸಿಕೊಂಡಿದ್ದಾರೆ.

ದಾನಮ್ಮದೇವಿ ಪುರಾಣ ಪ್ರಾರಂಭೋತ್ಸವ ಇಂದು

ಗದಗ: ತಾಲೂಕಿನ ಕಳಸಾಪುರ ಗ್ರಾಮದಲ್ಲಿ ಈಶ್ವರ ಬಸವಣ್ಣ ದೇವರ 16ನೇ ವರ್ಷದ ಜಾತ್ರಾ ಮಹೋತ್ಸವ ಅಂಗವಾಗಿ ಮಾ.3 ರಂದು ಸಂಜೆ 7ಕ್ಕೆ ಕಳಸಾಪುರ ದೇವಸ್ಥಾನ ಆವರಣದಲ್ಲಿ ಶಿವಶರಣೆ ಗುಡ್ಡಾಪುರದ ದಾನಮ್ಮ ದೇವಿ ಪುರಾಣ ಪ್ರಾರಂಭೋತ್ಸವ ಜರುಗುವುದು.
ಮಲ್ಲಸಮುದ್ರದ ಓಂಕಾರೇಶ್ವರ ಹಿರೇಮಠದ ಫಕ್ಕೀರೇಶ್ವರ ಶಿವಾಚಾರ್ಯ ಸ್ವಾಮೀಜಿ, ಹರ್ಲಾಪುರ ಕೊಟ್ಟೂರೇಶ್ವರ ಮಠದ ಅಭಿನವ ಕೊಟ್ಟೂರೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಕಳಸಾಪುರ ಗ್ರಾಮದ ಶರದರಾವ ಹುಯಿಲಗೋಳ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಯೂತ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಕೃಷ್ಣೇಗೌಡ ಪಾಟೀಲ ಕಾರ್ಯಕ್ರಮ ಉದ್ಘಾಟಿಸುವವರು. ಉದ್ಯಮಿ ಸದಾಶಿವಯ್ಯ ಮದರಿಮಠ, ತಾಲೂಕ ಪಂಚಾಯತ್ ಮಾಜಿ ಅಧ್ಯಕ್ಷ ಬಿ.ಆರ್ .ದೇವರೆಡ್ಡಿ, ಉದ್ಯಮಿ ಕಿರಣ ಬಾಂಡಗೆ ಆಗಮಿಸುವರು. ಪ್ರವಚನಕಾರರಾಗಿ ಶಿವಲಿಂಗಯ್ಯ ಶಾಸ್ತ್ರಿಗಳು ಹಿರೇಮಠ ಸಿದ್ದಾಪುರ ಹಾಗೂ ಸಂಗಡಿಗರಿಂದ ಪ್ರವಚನ ಕಾರ್ಯಕ್ರಮ ಜರುಗಲಿದೆ. ಈ ಪ್ರವಚನ ಕಾರ್ಯಕ್ರಮವು ಮಾ. 3 ರಿಂದ ಮಾ.15ರವರೆಗೆ ಪ್ರತಿದಿನ 7ಕ್ಕೆ ಜರುಗುವುದು ಎಂದು ಈಶ್ವರ ಬಸವಣ್ಣ ದೇವರ ಜಾತ್ರಾ ಕಮಿಟಿ ಪ್ರಕಟಣೆಯಲ್ಲಿ ತಿಳಿಸಿದೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಶೇಂಗಾ	4511-7011
ಅಜವಾನ	8012-10151
ಅಲಸಂದಿಕಾಳು	5809-6159
ಕಡಲೆ	1829-5402
ಹತ್ತಿ	7010-7010
ಬಿಟಿ ಹತ್ತಿ	7010-7010
ಹವೀಜ	1850-1850
ಹೆಸರು	1159-5369
ಹುರಳಿ	2039-4237
ಜೋಳ	1112-4637
ಗೋವಿನಜೋಳ	1459-1800
ಸಾಸವಿ	4169-5129
ಮಡಕಿ	10490-10490
ಜಿರಗಿ	6632-12269
ಸೊಯಾಬಿನ್	2044-2044
ಕುಸಬಿ	4369-5369
ಸೂರ್ಯಕಾಂತಿ	6352-6752
ತೊಗರಿ	3737-5429
ಗೋಧಿ	1407-5339



ಗಜೇಂದ್ರಗಡ: ನಗರದ ಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಗಜೇಂದ್ರಗಡ ತಾಲೂಕು ಸಮಿತಿಯ ಪದಾಧಿಕಾರಿಗಳಿಗೆ ಗುರುತಿನ ಚೀಟಿ ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಂಘಟನೆ ಗೌರವಾಧ್ಯಕ್ಷ ಮಹಾದೇವ ವೆರ್ಣೇಕರ, ತಾಲೂಕಧ್ಯಕ್ಷ ಅನಿಲ ಕರ್ಣೇ,ವೀರೇಶ ಮಳೋತ್ತರ,ಅಂದಪ್ಪ ಅಂಗಡಿ, ನಾಗರಾಜ ಕಲಾಲ, ರೇಣುಕರಾಜ ಹರಪನಹಳ್ಳಿ, ಮಾರುತಿ ಕುಕನೂರ , ಹುಸೇನಸಾಬ ಬಡಗೇರ, ರಮೇಶ ವದೇಗೋಳ, ಮಂಜುನಾಥ ಹೊಸಮನಿ ಮುತ್ತಣ್ಣ ಮಾದರ, ಖಾಜಾಸಾಬ ಗೋಡೆಕಾರ ಇದ್ದರು.

ನಾಡು ನುಡಿ ರಕ್ಷಣೆಗೆ ಪ್ರತಿ ಕನ್ನಡಿಗನು ಧ್ವನಿಯಾಗಲಿ

ಗಜೇಂದ್ರಗಡ: ನಾಡು ನುಡಿ ಸಂರಕ್ಷಣೆ ಪರವಾಗಿ ಹೋರಾಟದ ಸಂಕಲ್ಪ ತೊಟ್ಟು 20ಕ್ಕೂ ಹೆಚ್ಚು ಕಾರ್ಯಕರ್ತರು ಸೋಮವಾರ ಕರ್ನಾಟಕ ರಕ್ಷಣಾ ವೇದಿಕೆ ಸಂಘಟನೆಯನ್ನು ಸೇರಿದರು.

ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಕರವೇ ಜಿಲ್ಲಾಧ್ಯಕ್ಷ ತಿಮ್ಮಣ್ಣ ದೋಣಿ, ನಮ್ಮ ನಾಡು,ನುಡಿ, ಜಲ, ಭಾಷೆ ಮತ್ತು ಕನ್ನಡದ ಅಸ್ಮಿತೆಗೆ ಧಕ್ಕೆಯಾದಾಗ ಧ್ವನಿ ಎತ್ತುವುದು ಪ್ರತಿ ಕನ್ನಡಿಗನ ಕರ್ತವ್ಯ. ಈ ಕೆಲಸವನ್ನು ತನ್ನ ಹೋರಾಟದ ಮೂಲಕ ಕನ್ನಡಿಗರ ಶಕ್ತಿಯನ್ನು ಕರವೇ ಸಂಘಟನೆ ಪ್ರಸ್ತುತ ಪಡಿಸುತ್ತ ಬಂದಿದೆ. ನಮ್ಮ ಸಂಘಟನೆ ಹೋರಾಟಗಳನ್ನು ಮೆಚ್ಚಿ ಇಂದು ಅನೇಕ ಕಾರ್ಯಕರ್ತರು ನಮ್ಮ ಸಂಘಟನೆಗೆ ಸೇರಿದ್ದಾರೆ ಇದರಿಂದ ಕರವೇ ಸಂಘಟನೆಗೆ ಬಲ ಬಂದತ್ತಾಗಿದೆ ಎಂದರು. ನಂತರ ಅವರಿಗೆ ತಾಲೂಕು ಘಟಕದ ವತಿಯಿಂದ ಸನ್ಮಾನ ಮಾಡಲಾಯಿತು.

ಈ ಸಂದರ್ಭದಲ್ಲಿ ರಾಜ್ಯ ಸಮಿತಿಯ ಸದಸ್ಯರಾದ ದಾವಲಸಾಬ ಮುಳಗುಂದ,ಗದಗ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ ವೆಂಕಟೇಶ ಬೇಲೂರ, ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ಭಂಡಾರಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾದ ಮಹೇಶ ಕಲಘಟಗಿ, ಜಿಲ್ಲಾ ಸಂಘಟನೆ ಕಾರ್ಯದರ್ಶಿಯಾದ ಸಹದೇವ ಕೋಟೆ ಗಜೇಂದ್ರಗಡ ತಾಲೂಕ ಅಧ್ಯಕ್ಷ ಬಸವರಾಜ ಹೂಗಾರ, ಲಕ್ಷ್ಮೇಶ್ವರ ತಾಲೂಕು ಅಧ್ಯಕ್ಷ ಶಿವು ಕರಡಿ, ಗದಗ ತಾಲೂಕು ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಮರ್ದಾನಸಾಬ ಬಳ್ಳಾರಿ,ಗಜೇಂದ್ರಗಡ ತಾಲೂಕು ಉಪಾಧ್ಯಕ್ಷ ಕಳಕಪ್ಪ ಚಿಲಜೇರಿ ಇದ್ದರು.



ಗಜೇಂದ್ರಗಡ: ನಾಡು ನುಡಿ ಸಂರಕ್ಷಣೆ ಪರವಾಗಿ ಹೋರಾಟದ ಸಂಕಲ್ಪ ತೊಟ್ಟು 20ಕ್ಕೂ ಹೆಚ್ಚು ಕಾರ್ಯಕರ್ತರು ಸೋಮವಾರ ಕರ್ನಾಟಕ ರಕ್ಷಣಾ ವೇದಿಕೆ ಸಂಘಟನೆಯನ್ನು ಸೇರಿದರು. ಕರವೇ ಜಿಲ್ಲಾಧ್ಯಕ್ಷ ತಿಮ್ಮಣ್ಣ ದೋಣಿ,ರಾಜ್ಯ ಸಮಿತಿಯ ಸದಸ್ಯರಾದ ದಾವಲಸಾಬ ಮುಳಗುಂದ,ಗದಗ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ ವೆಂಕಟೇಶ ಬೇಲೂರ, ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ಭಂಡಾರಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾದ ಮಹೇಶ ಕಲಘಟಗಿ ಮತ್ತಿತರರು ಇದ್ದರು.

ಬಾಯಾರಿಕೆ ನೀಗಿಸಲು ಅರವಟಿಗೆ, ಎಳನೀರು, ಜ್ಯೂಸ್ ಅಂಗಡಿಗಳ ಮೊರೆ

ಬಿಸಿಲ ಝಳಕ್ಕೆ ಜಿಲ್ಲೆಯ ಜನತೆ ಹೈರಾಣ

ರುದ್ರಗೌಡ ಪಾಟೀಲ

ಗದಗ: ಬಿಸಿಲ ಝಳಕ್ಕೆ ಜಿಲ್ಲೆಯ ಜನತೆ ಅಕ್ಷರಶಃ ತತ್ತರಿಸಿದ್ದಾರೆ. ತಾಪಮಾನ ಏರಿಕೆಯಿಂದ ಹಲವರ ಆರೋಗ್ಯದಲ್ಲಿ ಏರುಪೇರಾಗುವುದೂ ಕಂಡುಬರುತ್ತಿದೆ. ನೆತ್ತಿ ಸುಡುವ ಬಿಸಿಲಿನಿಂದ ಬಸವಳಿದ ಜನರು ಬಾಯಾರಿಕೆ ನೀಗಿಸಿಕೊಳ್ಳಲು ಅರವಟಿಗೆ, ಎಳನೀರು, ಜ್ಯೂಸ್ ಅಂಗಡಿಗಳ ಮುಂದೆ ಸಾಲುಗಟ್ಟುತ್ತಿದ್ದಾರೆ.

ಬಹುತೇಕ ಭಾಗ ಚಳಿ ಮತ್ತು ಆಹ್ಲಾದಕರ ವಾತಾವರಣ ಹೊಂದಿರುತ್ತದೆ. ಈ ಬಾರಿ ಬಿಸಿಲಿನ ಪ್ರಖರತೆ ಹೆಚ್ಚಾಗಿದೆ. ಮಧ್ಯಾಹ್ನದ ಹೊತ್ತಿಗಂತೂ ನೆತ್ತಿಯ ಮೇಲೆ ಕೆಂಡ ಸುರಿದಂತಹ ಅನುಭವ, ರಸ್ತೆಗಳು ಕಾದ ಹಂಚಿನಂತಾಗುತ್ತಿವೆ. ಪಾದಚಾರಿಗಳು, ದ್ವಿಚಕ್ರ ವಾಹನ ಸವಾರರು ಬಸವಳಿಯುವಂತಾಗಿದೆ. ಬಿಸಿಲಿನ ತಾಪಕ್ಕೆ ಬಳಲುವ ಜನ ಚೇತರಿಕೆಗಾಗಿ ತಂಪು ಪಾನೀಯಗಳ ಮೊರೆ ಹೋಗುತ್ತಿದ್ದಾರೆ. ಎಳನೀರು, ಲಿಂಬು ಶರಬತ್ ಮೊದಲಾಗಿ ತಂಪು ಪಾನೀಯಗಳ ಬೇಡಿಕೆ ಹೆಚ್ಚಾಗಿದೆ. ಮಾರುಕಟ್ಟೆಗೆ ಕಲ್ಲಂಗಡಿ, ಕರ್ಬೂಜ ಹಣ್ಣುಗಳು ಧಾವಿಸಿವೆ. ವಿವಿಧ ಕಡೆ ಕಲ್ಲಂಗಡಿ ಹಣ್ಣಿನ ವ್ಯಾಪಾರ ಭರ್ಜರಿಯಾಗಿದೆ.

ಸರಕಾರಿ ಕಚೇರಿ, ಅಂಗಡಿ-ಮುಂಗಟ್ಟುಗಳಿಗೆ ಆಗಮಿಸುವ ಜನರು ಬೆವರಿಳಿದು ಮೆತ್ತಗಾಗುತ್ತಿದ್ದಾರೆ. ಕಳೆದ ಒಂದು ವಾರದಿಂದ ತಾಪಮಾನದಿಂದ ಏರಿಕೆಯಾಗುತ್ತಿದೆ. ಮನೆಯಿಂದ ಹೊರ ಬರುವ ಜನರು ಬಿಸಿಲಿನ ಝಳಕ್ಕೆ ತತ್ತರಿಸಿದ್ದಾರೆ. ಬಿಸಿಲಿನ ಹೊಡೆತ ತಾಳದೆ ಮನೆ, ಕಚೇರಿ ಬಿಟ್ಟು ಹೊರ ಬರಲು ಹಿಂಜರಿಕೆಯಾದರೂ ಕೆಲಸ-ಕಾರ್ಯಗಳ ನಿಮಿತ್ತ ಓಡಾಟ ಅನಿವಾರ್ಯ ಎನಿಸಿದೆ.



ಆರೋಗ್ಯದ ಬಗ್ಗೆ ಕಾಳಜಿ ವಹಿಸಿ

ತಾಪಮಾನ ಹೆಚ್ಚಳದಿಂದ ದೇಹದಲ್ಲಿ ಬೆವರು ಹೆಚ್ಚುತ್ತದೆ. ಇದರಿಂದ ನಿರ್ಜಲೀಕರಣ (ಡಿಹೈಡ್ರೈಶನ್) ಉಂಟಾಗುತ್ತದೆ. ಸೆಕೆಯ ಬಳಲಿಕೆಯಿಂದ ಚೇತರಿಸಿಕೊಳ್ಳಲು ಶುದ್ಧ ನೀರನ್ನು ಹೆಚ್ಚಾಗಿ ಕುಡಿಯುತ್ತಿರಬೇಕು. ಅಲ್ಲದೇ ದೇಹದಲ್ಲಿರುವ ಲವಣದ ಪ್ರಮಾಣ ಕಾಪಾಡಿಕೊಳ್ಳಲು ಒಆರ್‌ಎಸ್ ಮೊದಲಾದ ದ್ರಾವಣ ಸೇವಿಸಬೇಕು. ಬಿಸಿಲಿನಲ್ಲಿ ಓಡಾಡುವ ಅನಿವಾರ್ಯತೆ ಇದ್ದರೆ ತಲೆಗೆ ಟೋಪಿ, ಛತ್ರಿ ಹಾಕಬೇಕು ಎಂದು ಆರೋಗ್ಯ ಇಲಾಖೆ ಅಧಿಕಾರಿ ಸಲಹೆ ನೀಡಿದ್ದಾರೆ.

ತಂಪು ಪಾನೀಯಕ್ಕೆ ಬೇಡಿಕೆ

ನಗರದ ವಿವಿಧ ಭಾಗಗಳಲ್ಲಿ ಕಲ್ಲಂಗಡಿ, ಸೇಬು, ಅಂಜೂರ ಸೇರಿ ಬಗೆ-ಬಗೆಯ ಜ್ಯೂಸ್‌ಗಳಿದ್ದು, ಬಿಸಿಲಿನ ತಾಪ ನಿವಾರಿಸಿಕೊಳ್ಳಲು ಜ್ಯೂಸ್ ಕುಡಿದು ದಣಿವಾರಿಸಿಕೊಳ್ಳುತ್ತಿದ್ದಾರೆ. ಇನ್ನು ಕಲ್ಲಂಗಡಿ, ಎಳನೀರಿಗೂ ಸಾಕಷ್ಟು ಬೇಡಿಕೆ ಇದೆ. ಎಳನೀರು ಬೆಲೆ 30-40ರೂ., ಕಲ್ಲಂಗಡಿಗೂ ಹೆಚ್ಚಿನ ಬೇಡಿಕೆ ಉಂಟಾಗಿದೆ. ತಂಪಾದ ಪಾನೀಯ ಜತೆಗೆ ಬಿಸಿಲ ಧಗೆಗೆ ಉಂಟಾಗುವ ಬಾಯಾರಿಕೆ ನೀಗಿಸಿಕೊಳ್ಳಲು ನೀರಿಗೂ ಬೇಡಿಕೆ ಉಂಟಾಗಿದೆ.

> ಅವಳಿ ನಗರಕ್ಕೆ ಕಳೆದ ಹೈದಿನೈದು ದಿನಗಳಿಂದ ಮಾರುಕಟ್ಟೆಗೆ ಸಾಕಷ್ಟು ಪ್ರಮಾಣದಲ್ಲಿ ಕಲ್ಲಂಗಡಿ ಹಣ್ಣು ಬರುತ್ತಿದೆ. ದಿನದಿಂದ ದಿನಕ್ಕೆ ಬೇಡಿಕೆ ಇದೆ. ಬೇಸಿಗೆ ಆರಂಭವಾದರೆ ಹೆಚ್ಚಿನ ಪ್ರಮಾಣದಲ್ಲಿ ಬೇಡಿಕೆ ಬರುವ ನಿರೀಕ್ಷೆ ಇದೆ.
> ■ ರಾಜು, ಕಲ್ಲಂಗಡಿ ಹಣ್ಣಿ ವ್ಯಾಪಾರಿ

ಬಿಸಿಲಿನಿಂದ ಧಣಿವಾರಿಸಿಕೊಳ್ಳಲು ನೀರು, ನೆರಳು ಅರಸಿ ಸಾಗುತ್ತಿದ್ದು, ನಗರದಲ್ಲಿನ ಅರವಟಿಗೆ, ಜ್ಯೂಸ್ ಅಂಗಡಿ, ಎಳನೀರು, ಕಲ್ಲಂಗಡಿ ಇರುವ ಕಡೆ ಜಮಾಯಿಸುತ್ತಿದ್ದಾರೆ.

ಕಲ್ಲಂಗಡಿ ಹಣ್ಣುಗಳ ಸ್ಥಳಗಳು: ನಗರದ ಮುಳಗುಂದ ನಾಕಾ, ಹಳೆ ಜಿಲ್ಲಾಸ್ಪತ್ರೆ, ವೀರೇಶ್ವರ ಗ್ರಂಥಾಲಯದ ಬಳಿ, ಹಳೆಯ ಬಸ್ ನಿಲ್ದಾಣದ ಹಿಂದೆ, ಪಂಚರಹೊಂಡ ಬೆಟಗೇರಿಯ ಬಸ್ ನಿಲ್ದಾಣ ಹತ್ತಿರ ಸೇರಿದಂತೆ ವಿವಿಧೆಡೆ ಕಲ್ಲಂಗಡಿ ಹಣ್ಣಿನ ಮಾರಾಟ ನಡೆಯುತ್ತಿದೆ. ವರ್ತಕರು ದೊಡ್ಡ ಪ್ರಮಾಣದಲ್ಲಿ ಹಣ್ಣುಗಳನ್ನು ತಂದು ರಾಶಿ ಹಾಕಿದ್ದಾರೆ.

ಹಣ್ಣಿನ ಉಪಯೋಗ: ಕಲ್ಲಂಗಡಿ ಹಣ್ಣಿನಲ್ಲಿ ಶೇ.90 ರಷ್ಟು ನೀರಿನಾಂಶ ಇರುವುದರಿಂದ ದೇಹಕ್ಕೆ ಉತ್ತಮ ಪೌಷ್ಟಿಕಾಂಶ ಲಭಿಸುತ್ತದೆ. ದೇಹದ ತೂಕ ಇಳಿಕೆಯಾಗಲು ಪೂರಕವಾಗುತ್ತದೆ. ರಕ್ತ ಶುದ್ಧಿಯಾಗುವುದರೊಂದಿಗೆ ಅಸಿಡಿಟಿ ಕಡಿಮೆ ಆಗುತ್ತದೆ. ಜತೆಗೆ ಕೆಂಪು ರಕ್ತಕಣಗಳು ವೃದ್ಧಿಯಾಗುತ್ತವೆ. ಉರಿ ಮೂತ್ರ ಕಡಿಮೆಯಾಗುತ್ತದೆ.

ಕಡಲೆಕಾಳು ಖರೀದಿ ಕೇಂದ್ರ, ಉದ್ಘಾಟನೆ

ನರಗುಂದ: ಸರ್ಕಾರದ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಕ್ವಿಂಟಲ್‌ಗೆ 5,875ರೂ.ನಂತೆ ಕೇಂದ್ರ ಸರ್ಕಾರವು 1,01,340 ಮೆಟ್ರಿಕ್ ಟನ್ ಎಫ್.ಎ.ಕ್ಯೂ. ಗುಣಮಟ್ಟದ ಕಡಲೆಕಾಳು ಖರೀದಿಸಲು ರಾಜ್ಯ ಸರ್ಕಾರಕ್ಕೆ ಅನುಮತಿ ನೀಡಿದೆ. ಖರೀದಿ ಅವಧಿಯು ಜ.29ರಿಂದ 90 ದಿನಗಳವರೆಗೆ ಇದೆ. ಇದರ ಲಾಭವನ್ನು ರೈತರು ಪಡೆದುಕೊಳ್ಳಬೇಕೆಂದು ಶಾಸಕ ಸಿ.ಸಿ. ಪಾಟೀಲ ಹೇಳಿದರು.

ಸೋಮವಾರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಛೇರಿಯಲ್ಲಿ ಸೋಮವಾರ 2025-26ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಎಫ್.ಎ.ಕ್ಯೂ ಗುಣಮಟ್ಟದ ಕಡಲೆಕಾಳು ಖರೀದಿ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದರು.

ರೈತರ ಆಧಾರ್ ಸಂಖ್ಯೆ ಜೋಡಣೆಗೊಂಡ ಬ್ಯಾಂಕ್ ಖಾತೆಗೆ ಮಾತ್ರ ಉತ್ಪನ್ನದ ಮೌಲ್ಯವು ಡಿಬಿಟಿ ಮೂಲಕ ಜಮಾ ಆಗುತ್ತದೆ. ಜಿಲ್ಲೆಯಲ್ಲಿ ತೆರೆಯಲಾದ 70 ಖರೀದಿ ಕೇಂದ್ರಗಳಲ್ಲಿ ತಾಲೂಕಿನ ಚಿಕ್ಕನರಗುಂದ, ಸುರಕೋಡ, ಸಂಕದಾಳ, ಶಿರೋಳ, ಕೊಣ್ಣೂರ, ಹಿರೇಕೊಪ್ಪ, ಜಗಾಪೂರ, ಖಾನಾಪೂರ-ಗಂಗಾಪೂರ ಗ್ರಾಮಗಳಲ್ಲಿ ತಲಾ ಒಂದು, ನರಗುಂದ-02 ಸೇರಿ ಒಟ್ಟು 10 ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ ಎಂದರು.

ಕಡಲೆಕಾಳನ್ನು ಖರೀದಿಸಲು ನಾಫೆಡ್ ಸಂಸ್ಥೆ ಮತ್ತು ಎನ್.ಸಿ.ಸಿ.ಎಫ್. ಸಂಸ್ಥೆಗಳನ್ನು ಕೇಂದ್ರ ಸರ್ಕಾರದ ಖರೀದಿ ಸಂಸ್ಥೆಯನ್ನಾಗಿ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಮತ್ತು ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ಸಂಸ್ಥೆಗಳನ್ನು ರಾಜ್ಯದ ವತಿಯಿಂದ ಖರೀದಿ ಸಂಸ್ಥೆಯನ್ನಾಗಿ ಗುರುತಿಸಲಾಗಿದೆ ಎಂದು ಶಾಸಕ ಸಿ ಸಿ ಪಾಟೀಲ ಹೇಳಿದರು.

ಈ ಸಂದರ್ಭದಲ್ಲಿ ಅಜ್ಜಪ್ಪ ಹುಡೇದ, ಯಲ್ಲಪ್ಪಗೌಡ ಶಂಕ್ರಗೌಡ್ರ, ಶಂಕ್ರಪ್ಪ ಶಿ ಹೂಗಾರ, ಬಾಪುಗೌಡ ತಿಮ್ಮನಗೌಡ್ರ, ಶಿವಾನಂದ ಮುತ್ತವಾಡ, ಪವಾಡೆಪ್ಪ ವಡ್ಡಿಗೇರಿ, ಚಂದ್ರು ದಂಡಿನ, ಮಲ್ಲಪ್ಪ ಮೇಟಿ, ಜಯಪ್ರಕಾಶ ಕಂಠಿ, ಸಂಗಪ್ಪ ಪೂಜಾರ, ಮಂಜುನಾಥ ಆನೇಗುಂದಿ, ಗುರುನಾಥ ಆದೆಪ್ಪನವರ, ಕಾರ್ಯದರ್ಶಿ ರಾಘವೇಂದ್ರ ಸಜ್ಜನ, ಇತರರಿದ್ದರು.




ಮಾ.4ರಂದು ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗೆ ಕಾರ್ಯಾಗಾರ, ಶೈಕ್ಷಣಿಕ ಸಮಾವೇಶ

ಗದಗ: ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಮಾ.4ರಂದು ಬೆಳಗ್ಗೆ 11ಕ್ಕೆ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘ, ರಾಜ್ಯ ಘಟಕ, ಜಿಲ್ಲಾ ಘಟಕ ಹಾಗೂ ಉಪ ನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100%ರಷ್ಟು ಫಲಿತಾಂಶ ಪಡೆದ ಶಾಲಾ ಮುಖ್ಯಸ್ಥರಿಗೆ ಗೌರವ ಹಾಗೂ ಜಿಲ್ಲಾ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆ ಕುರಿತು ಕಾರ್ಯಾಗಾರ ಹಾಗೂ ಶೈಕ್ಷಣಿಕ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಎಂ.ಕೆ. ಲಮಾಣಿ ಮಾಹಿತಿ ನೀಡಿದರು.

ನಗರದ ಪತ್ರಿಕಾ ಭವನದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿ ಅವರು ಮಾತನಾಡಿ, ಸಮಾವೇಶದ ಸಾನ್ನಿಧ್ಯ ಜ.ಡಾ.ತೋಂಟದಾರ್ಯ ಸಿದ್ಧರಾಮ ಸ್ವಾಮೀಜಿ ವಹಿಸುವರು. ಅಧ್ಯಕ್ಷತೆ ಸಭಾಪತಿ ಬಸವರಾಜ ಹೊರಟ್ಟಿ, ಮಾಜಿ ಶಾಸಕ ಡಿ.ಆರ್.ಪಾಟೀಲ ವಹಿಸುವರು. ಕಾರ್ಯಕ್ರಮದ ಉದ್ಘಾಟನೆ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಮಾಡುವರು. ಸಂಸದ ಬಸವರಾಜ ಬೊಮ್ಮಾಯಿ, ಶಾಸಕ ಸಲೀಂ ಅಹ್ಮದ್, ಶಾಸಕ ಜಿ.ಎಸ್.ಪಾಟೀಲ, ಶಾಸಕ ಸಿ.ಸಿ.ಪಾಟೀಲ, ಸಂಸದ ಪಿ.ಸಿ.ಗದ್ದಿಗೌಡ್ರ, ಶಾಸಕ ಎಸ್.ವಿ.ಸಂಕನೂರ, ಶಾಸಕ ಡಾ. ಚಂದ್ರು ಲಮಾಣಿ ಆಗಮಿಸಲಿದ್ದಾರೆ ಎಂದರು.

ಬಸವರಾಜ ಹೊರಟ್ಟಿ ಅವರು ಸಭಾಪತಿಗಳಾಗಿ 45 ವರ್ಷ ಪೂರೈಸಿದ ಹಿನ್ನಲೆಯಲ್ಲಿ ಜಿಲ್ಲಾ ಘಟಕದಿಂದ ವಿಶೇಷ ಸನ್ಮಾನ ಆಯೋಜಿಸಲಾಗಿದೆ. ಜಿಲ್ಲೆಯಲ್ಲಿರುವ ಎಲ್ಲ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಉತ್ತೀರ್ಣರಾಗಬೇಕು ಎನ್ನುವುದು ನಮ್ಮ ಮೂಲ ಉದ್ದೇಶವಾಗಿದೆ. ಆ ನಿಟ್ಟಿನಲ್ಲಿ ಶೇ.100% ಫಲಿತಾಂಶ ಪಡೆದ ಶಾಲಾ ಮುಖ್ಯಸ್ಥರಿಗೆ ಗೌರವಿಸುವ ಮೂಲಕ ಪ್ರೋತ್ಸಾಹ ನೀಡಲಾಗುವುದು. ಪ್ರಸಕ್ತ ವರ್ಷ ಫಲಿತಾಂಶ ಸುಧಾರಣೆಗೆ ಎಲ್ಲ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಶಾಲಾ ಆರಂಭಕ್ಕೂ ಮುನ್ನ ಒಂದು ತಾಸು ಮುಂಚಿತವಾಗಿ ಮಕ್ಕಳಿಗೆ ಪಾಠ ಮಾಡಲಾಗುತ್ತಿದೆ. ನಂತರ ಶಾಲಾ ಅವಧಿ ಮುಗಿದ ನಂತರವೂ ಶಾಲಾ ಮಕ್ಕಳ ವಿದ್ಯಾಭ್ಯಾಸದ ಕಡೆ ಗಮನ ಹರಿಸಲಾಗಿದೆ ಎಂದರು.

ಕ.ರಾ.ಮಾಧ್ಯಮಿಕ ಶಾಲಾ ನೌಕರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಎ.ಎಸ್. ಪಾಟೀಲ, ಉಮೇಶ ಹಿರೇಮಠ, ಬಿ.ಡಿ. ಯರಗೊಪ್ಪ, ಬಿ.ಕೆ. ನಿಂಬನಗೌಡ್ರ, ಎಲ್. ಎಸ್.ಅರಳಿಹಳ್ಳಿ, ಬೂದಪ್ಪ ಅಂಗಡಿ, ಗಿರೀಶ್ ನರಗುಂದ ಇದ್ದರು.



ಹೆಸ್ಕಾಂ ಉಪವಿಭಾಗ ಕಚೇರಿ ಪ್ರಾರಂಭಿಸಿ



ಶಿರಹಟ್ಟಿ: ಓಬಿರಾಯನ ಕಾಲದಿಂದಲೂ ಶಿರಹಟ್ಟಿ ಪಟ್ಟಣ ಶೈಕ್ಷಣಿಕ, ವಾಣಿಜ್ಯೋದ್ಯಮ, ಧಾರ್ಮಿಕ ಮತ್ತು ರಾಜಕೀಯ ಕೇಂದ್ರ ಬಿಂದುವಾಗಿ ಗುರುತಿಸಿಕೊಂಡಿದೆ. ಹತ್ತಾರು ಗ್ರಾಮದ ಜನರು ರೈತರು ತಮ್ಮ ವ್ಯಾಪಾರ ವಹಿವಾಟು ಮಾಡಲು ನಿತ್ಯವೂ ತಾಲೂಕು ಕೇಂದ್ರಕ್ಕೆ ಆಗಮಿಸುತ್ತಾರೆ. ಇಂತಹ ಸ್ಥಳದಲ್ಲಿ ಹೆಸ್ಕಾಂ ಉಪ ವಿಭಾಗ ಕಚೇರಿ ಪ್ರಾರಂಭಿಸಿ ಈ ಭಾಗದ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಪಟ್ಟಣದ ಸಮಸ್ತ ಮುಖಂಡರು ಪಕ್ಷಾತೀತವಾಗಿ ಸ್ಥಳೀಯ ಶಿಕ್ಷಕರ ಸಭಾಭವನದಲ್ಲಿ ಸಭೆ ನಡೆಸಿದರು.

ಈ ವೇಳೆ ಮುಖಂಡ ಎನ್.ಆರ್. ಕುಲಕರ್ಣಿ ಮಾತನಾಡಿ, ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ತಾಲೂಕುಗಳಾಗಿ ಬೇರ್ಪಟ್ಟಿದ್ದರಿಂದ ತಾಲೂಕು ಕೇಂದ್ರ ಶಿರಹಟ್ಟಿಗೆ ಕೆಲವೊಂದು ಅಗತ್ಯ ಸೌಲಭ್ಯಗಳನ್ನು ಹೋರಾಟದ ಮೂಲಕ ಸರ್ಕಾರದ ಕಣ್ತೆರೆದು ಪಡೆಯುವ ಅನಿವಾರ್ಯತೆ ಎದುರಾಗಿದೆ. ಈಗಾಗಲೇ ಬಸ್ ಡಿಪೋ, ಕೆಲವೊಂದು ಸೌಲಭ್ಯ ಪಕ್ಷಾತೀತ ಹಾಗೂ ತಾಲೂಕಿನ ಜನರ ಬೆಂಬಲದೊಂದಿಗೆ ಪಡೆಯಲಾಗಿದ್ದು ಪ್ರಸ್ತುತ ಈ ಭಾಗದ ಹಳ್ಳಿಗಳ ಸಾರ್ವಜನಿಕರು, ರೈತರು ಹಾಗೂ ಗುತ್ತಿಗೆದಾರರಿಗೆ ಅನುಕೂಲವಾಗಲು ಶಿರಹಟ್ಟಿಯಲ್ಲಿ ಹೆಸ್ಕಾಂ ಉಪ ವಿಭಾಗ ಕಚೇರಿಯ ಅಗತ್ಯವಿದ್ದು, ಈ ಬಗ್ಗೆ ಈಗಾಗಲೇ ಹುಬ್ಬಳ್ಳಿ ಹೆಸ್ಕಾಂ ಕಚೇರಿ ಎಂಡಿ. ವೈಶಾಲಿ ಅವರಿಗೆ ಮನವಿ ಸಲ್ಲಿಸಿ ಗಮನ ಸೆಳೆಯಲಾಗಿದ್ದು ಅವರಿಂದ ಸಕಾರಾತ್ಮಕ ಪ್ರತಿಕ್ರಿಯೆ ದೊರೆತಿದೆ ಎಂದರು.

ನಂತರ ಪಪಂ.ಮಾಜಿ ಅಧ್ಯಕ್ಷ ಎಚ್.ಡಿ. ಮಾಗಡಿ ಮಾತನಾಡಿ, ಶಿರಹಟ್ಟಿ ತಾಲೂಕು ಕೇಂದ್ರ ಸ್ಥಳಕ್ಕೆ ಹೆಸ್ಕಾಂ ಉಪವಿಭಾಗ ಕಚೇರಿ ಹಾಗೂ ಅಗತ್ಯ ಸಿಬ್ಬಂದಿ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಬೇಡಿಕೆ ಈಡೇರಿಕೆಗಾಗಿ ತಾಲೂಕಿನ ರೈತರು, ವಿವಿಧ ಸಂಘಟನೆ ಸಹಕಾರದೊಂದಿಗೆ ಪಕ್ಷಾತೀತವಾಗಿ ಹೋರಾಟ ಆರಂಭಿಸಲಾಗುವುದು ಎಂದರು.

ಮುಖಂಡ ವಿಶ್ವನಾಥ ಕಪ್ಪತ್ತನವರ, ಚಂದ್ರಕಾಂತ ನೂರಶೆಟ್ಟರ, ಅಕ್ಬರ್ ಯಾದಗಿರಿ, ಎಂ.ಕೆ.ಲಮಾಣಿ, ಬಸವರಾಜ ತುಳಿ, ಸಂದೀಪಕ ಕಪ್ಪತ್ತನವರ, ಚನ್ನವೀರಪ್ಪ ಕಲ್ಯಾಣಿ, ಗುತ್ತಿಗೆದಾರ ವೀರಪ್ಪ ಹೂಗಾರ, ಅಜ್ಜು ಪಾಟೀಲ, ಪರಮೇಶ ಪರಬ, ರಾಜು ಶಿರಹಟ್ಟಿ, ಸಂತೋಷ ಕುಬೇರ, ಜಾಕೀರ ಕೋಳಿವಾಡ, ಶ್ರೀನಿವಾಸ ಬಾರಬರ, ಮುನ್ನಾ ಢಾಲಾಯತ, ಗಫಾರ ಕುದರಿ ಇತರರಿದ್ದರು.

ಸಂಭ್ರಮದ ಖಾಲಿ ಗಾಡಾ ಓಡಿಸುವ ಸ್ಪರ್ಧೆ

ಲಕ್ಷ್ಮೇಶ್ವರ: ರೈತರು ಪ್ರತಿವರ್ಷ ಸುಗ್ಗಿಹಬ್ಬವನ್ನಾಗಿ ಸಂಭ್ರಮದಿಂದ ಆಚರಿಸುತ್ತಾರೆ. ಈ ಸಂದರ್ಭದಲ್ಲಿ ರೈತರ ಒಡನಾಡಿ ಎತ್ತುಗಳನ್ನು ಪೂಜಿಸುವ ಸಂಪ್ರದಾಯ ಮೊದಲಿನಿಂದಲೂ ನಡೆದುಕೊಂಡು ಬಂದಿದ್ದು, ವರ್ಷವಿಡಿ ರೈತರು ತಮ್ಮ ಎತ್ತುಗಳನ್ನು ಕಾಳಜಿಪೂರ್ವಕವಾಗಿ ಚೆನ್ನಾಗಿ ನೋಡಿಕೊಳ್ಳುತ್ತಾರೆ. ಅಂತಹ ಎತ್ತುಗಳ ಸಾಮರ್ಥ್ಯಕ್ಕೆ ತಕ್ಕಂತೆ ಖಾಲಿ ಗಾಡಾ ಓಡಿಸುವ ಸ್ಪರ್ಧೆಯನ್ನು ಏರ್ಪಡಿಸುವ ಕಾರ್ಯಗಳು ನಡೆಯುತ್ತಿರುವುದನ್ನು ನೋಡಬಹುದಾಗಿದೆ ಎಂದು ಕುಂದಗೋಳ ಕಲ್ಯಾಣಪುರಮಠದ ಶ್ರೀಬಸವಣ್ಣಜ್ಜನವರು ತಿಳಿಸಿದರು.

ಪಟ್ಟಣದಲ್ಲಿ ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅಭಿಮಾನಿ ಬಳಗದ ವತಿಯಿಂದ ರಾಜ್ಯ ಮಟ್ಟದ ಖಾಲಿ ಗಾಡಾ ಓಡಿಸುವ ಸ್ಪರ್ಧೆಯ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಜನಪದ ಕಲೆಗಳ ಹಾಗೂ ಸ್ಪರ್ಧೆಗಳ ಆಯೋಜನೆ ಬೇಕು ಆದರೆ, ಸ್ಪರ್ಧೆಗಳು ಇತರರಿಗೂ ಮಾದರಿಯಾಗಿರುವಂತಿರಬೇಕು ಸಂಗೊಳ್ಳಿ ರಾಯಣ್ಣ ವೇದಿಕೆಯವರು ರಾಜ್ಯ ಮಟ್ಟದ ಇಂತಹ ಸ್ಪರ್ಧೆಗಳನ್ನು ಸಂಘಟಿಸಿರುವದು ಉತ್ತಮ ವಿಚಾರವಾಗಿದ್ದು ಯಶಸ್ವಿಯಾಗಿ ಸಾಗಲಿ ಎಂದು ಹಾರೈಸಿದರು.

ಯುವ ಮುಖಂಡ ಆನಂದ ಗಡ್ಡದೇವರಮಠ, ಯುವ ಮುಖಂಡ ವಿನೋದ ಆಸೂಟಿ ಮಾತನಾಡಿದರು. ಗುರುನಾಥ್ ದಾನಪ್ಪನವರ, ಮುಲಾಲಿ ಮುಲ್ಲಾ, ಶಬ್ಬೀರಲಿ ಶೇಕ್ ಸಮೇದ ಗೋಗಿ, ನೀಲಪ್ಪ ಹುರಕನವರ, ಲೆಂಕಪ್ಪ ಶರಸೂರಿ, ಬಸವರಾಜ ಹಿರೇಮನಿ, ಸುರೇಶ್ ಹಟ್ಟಿ, ಬರಮಣ್ಣ ಸರಸೂರಿ, ಮಂಜುನಾಥ್ ಮುಳಗುಂದ, ಮಾಂತೇಶ್ ಗುದನಾಳ, ಮೈಲಾರಿ ಹೆಗ್ಗಣ್ಣವರ, ಮಾಂತೇಶ್ ಶರಸೂರಿ, ಹಾಗೂ ಸಂಘದ ಪದಾಧಿಕಾರಿಗಳು, ಸದಸ್ಯರು ಹಾಜರಿದ್ದರು.

ವಿಜೇತ ತಂಡಗಳಿಗೆ ನಗದು ಬಹುಮಾನ, ಆಕರ್ಷಕ ಟ್ರೋಫಿಯ ಬಹುಮಾನಗಳನ್ನು ವಿತರಿಸಲಾಯಿತು. ಬೆಳಗಾವಿ, ಮಹಾರಾಷ್ಟ್ರ, ಬಾಗಲಕೋಟೆ, ಜಮಖಂಡಿ, ಹಾವೇರಿ, ಹರಿಹರ ಮತ್ತು ಸುತ್ತಮುತ್ತಲಿನ ಗಾಡಾ ಹೋರಿಗಳು ಭಾಗವಹಿಸಿದ್ದವು. ಕಾರ್ಯಕ್ರಮವನ್ನು ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅಭಿಮಾನಿ ಬಳಗದವರು ಅಚ್ಚುಕಟ್ಟಾಗಿ ಸಂಘಟಿಸಿ ಯಾವುದೇ ತೊಂದರೆಯಾಗದಂತೆ ನಿರ್ವಹಿಸಿದರು.



ಹಿಂದೂ ರಾಷ್ಟ್ರ ನಿರ್ಮಾಣ ಮಾಡಲು ಹಿಂದುತ್ವ ಉಳಿಯಲಿ: ಕೆರೆಹಳ್ಳಿ

ಲಕ್ಷ್ಮೇಶ್ವರ: ಇಂದು ಹಿಂದೂಗಳ ಮೇಲೆ ನಡೆಯುತ್ತಿರುವ ದಬ್ಬಾಳಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಪ್ರತಿಯೊಬ್ಬ ಹಿಂದೂ ಭಾರತದ ಸಂಸ್ಕೃತಿಯ ವಾರಸುದಾರನಾಗಬೇಕು, ಹಿಂದೂ ರಾಷ್ಟ್ರ ನಿರ್ಮಾಣ ಮಾಡಲು ಹಿಂದುತ್ವ ಉಳಿಯಬೇಕು ಎಂದು ರಾಷ್ಟ್ರ ರಕ್ಷಣಾ ಪಡೆ ಸಂಸ್ಥಾಪಕ ಅಧ್ಯಕ್ಷ ಪುನೀತ ಕೆರೆಹಳ್ಳಿ ಪ್ರತಿಪಾದಿಸಿದರು.

ಅವರು ಭಾನುವಾರ ಪಟ್ಟಣದ ಪರ್ವತಮಲ್ಲಯ್ಯ ದೇವಸ್ಥಾನದ ಹತ್ತಿರ ಅಖಂಡ ಭಾರತ ಯುವಸೇನೆ ವತಿಯಿಂದ ಛತ್ರಿಪತಿ ಶಿವಾಜಿ ಮಹಾರಾಜರ ಜಯಂತ್ಯುತ್ಸವ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿ ಮಾತನಾಡಿದರು. ಇಂದಿನ ದಿನಮಾನಗಳಲ್ಲಿ ಮೊಬೈಲನ ಸಂಪೂರ್ಣ ಜ್ಞಾನವನ್ನು ಹಿಂದೂಗಳು ತಿಳಿದುಕೊಂಡಿದ್ದೇವೆ. ಆದರೆ, ಧರ್ಮದ ಆಚರಣೆಗಳನ್ನು ಸರಿಯಾಗಿ ತಿಳಿದುಕೊಂಡಿಲ್ಲ, ರಾಜ್ಯ ಕಾಂಗ್ರೆಸ್ ಸರ್ಕಾರ ಶಿವಾಜಿ ಮೆರವಣಿಗೆಗೆ ಅಂಕುಶ ಹಾಕುತ್ತಿದ್ದಾರೆ, ಹಿಂದೂ ಧರ್ಮದ ಹಬ್ಬಗಳನ್ನು ಮಾಡಬೇಕಾದರೆ ಭಯದ ವಾತಾವರಣ ಸೃಷ್ಟಿ ಮಾಡಿದ್ದಾರೆ, ಈ ಬಗ್ಗೆ ಅವಲೋಕನ ಮಾಡಬೇಕಾಗಿದೆ, ದೀಪಾವಳಿಯಲ್ಲಿ ಪಟಾಕಿ, ಗಣೇಶ ಹಬ್ಬಕ್ಕೆ ಡಿಜೆ ಹಚ್ಚಬೇಡಿ ಅಂತಾ ಹೇಳ್ತಾರೆ ಇದು ಯಾವ ನ್ಯಾಯ ಎಂದು ಪ್ರಶ್ನಿಸಿದರು. ಶಾಲೆಯಲ್ಲಿ ಭಗವದ್ಗೀತೆ, ರಾಮಾಯಣ ಯಾಕೆ ಕಲಿಸುತ್ತಿಲ್ಲ ಎಂದು ಪ್ರಶ್ನಿಸಿದ ಅವರು ದೇವಸ್ಥಾನ ಘಂಟೆ ಶಬ್ದ ಕೇಳಿದರೆ ಕೇಸ್ ದಾಖಲಿಸುವ ದೇವರ ಮೂರ್ತಿ ಮೇಲೆ ಕಲ್ಲು ಎಸೆಯುವ ಸಮುದಾಯವನ್ನು ಖಂಡಿಸುವ ಕೆಲಸ ಆಗಬೇಕು, ಗೋ ರಕ್ಷಣೆ ಮಾಡುವ ಕಾರ್ಯಕರ್ತರ ಮೇಲೆ ಕೇಸ್ ಹಾಕುತ್ತಿದ್ದಾರೆ, ಗೋ ಹತ್ಯೆ ತಡೆಯಲು ಸರಕಾರದಿಂದ ಸಾಧ್ಯವಾಗುತ್ತಿಲ್ಲ, ಬೆಂಗಳೂರಿನಲ್ಲಿ ಅಕ್ರಮ ಬಾಂಗ್ಲಾದೇಶಿಯರು ಐಷಾರಾಮಿ ಜೀವನ ನಡೆಸುತ್ತಿದ್ದಾರೆ ಅದೆ ಉತ್ತರ ಕರ್ನಾಟಕದವರು ಕಷ್ಟ ಪಟ್ಟು ಕೆಲಸ ಮಾಡ್ತಾ ಇದ್ದಾರೆ, ಅಕ್ರಮ ಬಾಂಗ್ಲಾ ದೇಶದವರ ಬಗ್ಗೆ ಯಾರೋಬ್ಬ ಪ್ರಶ್ನೆ ಮಾಡಲ್ಲ, 2000 ರೂ ಕೊಟ್ಟು ಆಧಾರ ಮಾಡಿಸಿಕೊಂಡ ಬಾಂಗ್ಲಾಗಳು ಅದೆ ಆಧಾರ್ ಕಾರ್ಡ್‌ನಿಂದ ಸರಕಾರದ ಉಪಯೋಗಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದ ಅವರು ಹಿಂದೂ ವಿರೋಧಿ ಚಟುವಟಿಕೆಗಳು, ಗೋಹತ್ಯೆ ಎಲ್ಲಿಯೇ ನಡೆಯಲಿ ಅದನ್ನು ತಡೆಗಟ್ಟುವ ಕಾರ್ಯ ಮಾಡಿ ಅದಕ್ಕೆ ನಾನು ಸದಾ ಬೆಂಬಲ ನೀಡುತ್ತೇನೆ ಎಂದು ಹೇಳಿದರು.



ದಿವ್ಯ ಸಾನಿದ್ಯ ವಹಿಸಿ ಬೆಳ್ಳಟ್ಟಿಯ ರಾಮಲಿಂಗೇಶ್ವರ ದಾಸೋಹ ಮಠದ ಬಸವರಾಜ ಮಹಾಸ್ವಾಮಿಗಳು ಮಾತನಾಡಿ, ಶಿವಾಜಿ ಮಹಾರಾಜರು ಹಿಂದೂಗಳ ಆರಾಧ್ಯ ವ್ಯಕ್ತಿಯಾಗಿ ಹಿಂದೂಗಳ ಶಕ್ತಿಯಾಗಿ ಬೆಳೆದು ನಿಂತರು, ಕರ್ನಾಟಕಕ್ಕೂ ಶಿವಾಜಿ ಮಹಾರಾಜರು ಸಂಪರ್ಕವಿತ್ತು, ಅನೇಕ ವೇಳೆಯಲ್ಲಿ ಇಲ್ಲಿ ಬೇಟಿ ನೀಡಿದ್ದರು ಎಂದು ನುಡಿದರು. ಈ ಸಂದರ್ಭದಲ್ಲಿ ಬಿಜೆಪಿ ಶಿರಹಟ್ಟಿ ಮಂಡಲ ಅಧ್ಯಕ್ಷ ಸುನೀಲ. ಮಹಾಂತಶೆಟ್ಟರ, ಶರಣು ಅಂಗಡಿ, ಬೋವಿ ಸಮಾಜದ ರಾಜ್ಯ ಮುಖಂಡ ಮಂಜುನಾಥ ಹೊಸಮನಿ ಉಪಸ್ಥಿತರಿದ್ದರು. ಅಮರೀಶ ಗಾಂಜಿ, ಶ್ರೇಯಾಂಕ್ ಹಿರೇಮಠ, ಪ್ರತಾಪ ಅಂಕಲಿ, ಶಕ್ತಿ ಕತ್ತಿ, ಈಶ್ವರ ಗದಗ, ಕೊಟ್ರೇಶ ಕತ್ತಿ, ಶರಣಬಸಪ್ಪ ಗಾಂಜಿ, ಪ್ರವೀಣ ದಶಮನಿ, ಚಂದ್ರು ಬಾರ್ಕಿ, ನವೀನ ಗಾಯಕವಾಡ, ಪ್ರಕಾಶ ಗುತ್ತಲ,ನವೀನ ಗುರಿಕಾರ, ಶಿವು ಆರೇರ, ಖಂಡಪ್ಪ ಅಣ್ಣಿಗೇರಿ, ಮಂಜುನಾಥ ಗಾಂಜಿ, ಆಕಾಶ ಸೌದತ್ತಿ, ಖಂಡೋಬಾ ನವಲೆ, ಹೊಳಲಪ್ಪಗೌಡ ಮುಂತಾದವರಿದ್ದರು.

ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ: ಶಾಸಕ ಸಿ.ಸಿ. ಪಾಟೀಲ

ನರಗುಂದ: ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಜೀವನದ ಮುಖ್ಯ ಹಂತವಾಗಿದೆ. ಪರೀಕ್ಷೆಯನ್ನು ಹಬ್ಬದಂತೆ ಸಂಭ್ರಮಿಸಬೇಕು. ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ ಎಂದು ಲಯನ್ಸ್ ಶಿಕ್ಷಣ ಸಂಸ್ಥೆ ಚೇರಮನ್, ಶಾಸಕ ಸಿ.ಸಿ. ಪಾಟೀಲ ಹೇಳಿದರು.

ಪಟ್ಟಣದ ಲಯನ್ಸ್ ಶಿಕ್ಷಣ ಸಂಸ್ಥೆಯ ಲಯನ್ಸ್ ಇಂಗ್ಲಿಷ್ ಮಾಧ್ಯಮ ಶಾಲೆ ಹಾಗೂ ಲಯನ್ಸ್ ಕನ್ನಡ ಮಾಧ್ಯಮ ಪ್ರೌಢ ಶಾಲೆಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಹಾಗೂ ಮಹಾಸರಸ್ವತಿ ಪೂಜಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಆತಂಕದಿಂದ ಪರೀಕ್ಷೆ ಬರೆಯದೇ ಖುಷಿಯಿಂದ ಪರೀಕ್ಷೆ ಬರೆಯಬೇಕು. ಸರಳ ಪ್ರಶ್ನೆಗಳನ್ನು ಮೊದಲು ಬರೆದು ನಂತರ ಕಠಿಣ ಪ್ರಶ್ನೆಗಳನ್ನು ಬರೆದಾಗ ಹೆಚ್ಚಿನ ಅಂಕ ಪಡೆದು ಅಂದುಕೊಂಡ ಫಲಿತಾಂಶ ಸಾಧಿಸಲು ಸಾಧ್ಯ. ಪಠ್ಯದ ಸಾರವನ್ನು ಸಂಪೂರ್ಣ ಅರಿತರೆ ಎಂಥಹ ಪ್ರಶ್ನೆಗಳಿಗಾದರೂ ಉತ್ತರಿಸಬಹುದು.100ಕ್ಕೆ 100 ಅಂಕಗಳನ್ನು ಪಡೆಯಲು ಸಾಧ್ಯ. ಲಯನ್ಸ್ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳು ಉನ್ನತ ಗುರಿ ಸಾಧಿಸಿದ್ದಾರೆ. ಅದೇ ನಿಟ್ಟಿನಲ್ಲಿ ತಾವು ಮುಂದೆ ಉನ್ನತ ಗುರಿ ಸಾಧಿಸಿ ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ರೂಪುಗೊಳ್ಳಬೇಕು. ಉತ್ತಮ ನಾಗರಿಕರಾಗಿ ಕಲಿತ ಸಂಸ್ಥೆಗೆ, ಹೆತ್ತ ತಂದೆತಾಯಿಗಳಿಗೆ ಹಾಗೂ ಬೋಧಿಸಿದ ಗುರುಗಳಿಗೆ ಕೀರ್ತಿ ತರಬೇಕು. ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಪ್ರಥಮ ರ್ಯಾಂಕ ಪಡೆದ ವಿದ್ಯಾರ್ಥಿಗಳಿಗೆ 10 ಸಾವಿರ ರೂ. ನಗದು ಬಹುಮಾನ ನೀಡುವುದಾಗಿ ಸಿ.ಸಿ.ಪಾಟೀಲ ಹೇಳಿದರು.



ಕಾರ್ಯದರ್ಶಿ ಡಾ.ಪ್ರಭು ನಂದಿ ಮಾತನಾಡಿ, ಈ ಹಂತದಲ್ಲಿ ವಿದ್ಯಾರ್ಥಿಗಳು ಉತ್ತಮ ಗುಣಗಳನ್ನು ಬೆಳೆಸಿಕೊಳ್ಳಬೇಕು. ಜೀವನದಲ್ಲಿ ಮೂರು ನಿಯಮ ಪಾಲಿಸಬೇಕು. ಶಿಸ್ತು, ತಾಳ್ಮೆ ಹೊಂದಿ ಸಮಯದ ಸದುಪಯೋಗ ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳು ನಿರಂತರ ಶ್ರಮ ವಹಿಸಿ ಉತ್ತಮ ಅಂಕ ಪಡೆದ ಸಂಸ್ಥೆಯ ಕೀರ್ತಿ ಹೆಚ್ಚಿಸಬೇಕೆಂದರು.

ಈ ಸಂದರ್ಭದಲ್ಲಿ ಮಹಾಸರಸ್ವತಿ ಪೂಜೆಗೆ ಶಾಸಕ ಸಿ.ಸಿ.ಪಾಟೀಲ ಚಾಲನೆ ನೀಡಿದರು. ಎರಡು ಶಾಲೆಯ ವಿದ್ಯಾರ್ಥಿಗಳಿಗೆ ಸಂಸ್ಥೆಯಿಂದ ನೆನಪಿನ ಕಾಣಿಕೆ ವಿತರಿಸಲಾಯಿತು.

ಭಾನುಪ್ರಿಯ ಪುರೋಹಿತ, ಪ್ರಿತಂ ಪಟ್ಟಣಶೆಟ್ಟಿ, ಕವನಾ ಪಿಡ್ಡನಾಯ್ಕರ, ಸಹನಾ ಗೊಂಬಿ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ಜಂಟಿ ಕಾರ್ಯದರ್ಶಿ ವಿಜಯಕುಮಾರ ಬೇಲೇರಿ, ಹಿರಿಯ ನಿರ್ದೇಶಕರಾದ ಜಿ.ಟಿ.ಗುಡಿಸಾಗರ, ಜಿ.ಬಿ. ಕುಲಕರ್ಣಿ, ಡಾ.ಬಿ.ಎಂ. ಜಾಬಣ್ಣವರ, ಸಿ.ಎಸ್.ಸಾಲೂಟಗಿಮಠ ಇದ್ದರು.

ಮುಖ್ಯೋಪಾಧ್ಯಾಯ ಜಿ.ಬಿ. ಹಿರೇಮಠ ಸ್ವಾಗತಿಸಿದರು. ಡಾ.ಬಸವರಾಜ ಹಲಕುರ್ಕಿ, ವಿಭಾ ರಾಮದುರ್ಗ ನಿರೂಪಿಸಿದರು, ಮುಖ್ಯೋಪಾಧ್ಯಾಯ ಎಸ್.ಜಿ.ಜಕ್ಕಲಿ ವಂದಿಸಿದರು.

ಕಿರುಸುದ್ದಿ

ಮಧ್ಯಾಹ್ನದವರೆಗೆ ವಿರೂಪಾಕ್ಷನ ದರ್ಶನ



ವಿಜಯನಗರ: ರಕ್ತ ಚಂದ್ರ ಗ್ರಹಣ ಹಿನ್ನೆಲೆಯಲ್ಲಿ ಮಂಗಳವಾರ ವಿಶ್ವವಿಖ್ಯಾತ ಹಂಪಿಯ ಶ್ರೀ ವಿರೂಪಾಕ್ಷೇಶ್ವರ ದೇಗುಲ ಮಧ್ಯಾಹ್ನದ ವರೆಗೆ ದೇವರ ದರ್ಶನಕ್ಕೆ ಅವಕಾಶ. ಎಂದಿನಂತೆ ಬೆಳಗ್ಗೆ ಜಲ ಅಭಿಷೇಕ ಹಾಗೂ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಮಧ್ಯಾಹ್ನ ಮಹಾ ಪ್ರಸಾದ ಅರ್ಪಣೆ ಬಳಿಕ ದೇಗುಲದ ಬಾಗಿಲು ಮುಚ್ಚಲಿದೆ. ಸಂಜೆ ಗ್ರಹಣ ಮುಕ್ತಿಗೊಂಡ ಬಳಿಕ ದೇವಸ್ಥಾನದ ಶುದ್ಧೀಕರಣ ಹಾಗೂ ಪೂಜೆನಡೆಯಲಿದೆ. ಗ್ರಹಣದ ಹಿನ್ನೆಲೆಯಲ್ಲಿ ಭಕ್ತಾಧಿಗಳಿಗೆ ಮಧ್ಯಾಹ್ನದವರೆಗೆ ದೇವರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತದೆ ಎಂದು ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಹನುಮಂತಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಡಾನೆ ದಾಳಿ: ದನದ ಕೊಟ್ಟಿಗೆ ಧ್ವಂಸ



ದಾಂಡೇಲಿ: ಕಾಡಾನೆಯೊಂದು ದನದ ಕೊಟ್ಟಿಗೆಗೆ ನುಗ್ಗಿ ಕೊಟ್ಟಿಗೆ ಧ್ವಂಸ ಮಾಡಿ, ಎಮ್ಮೆಗೆ ಮತ್ತು ಕರುವಿಗೆ ಗಾಯಗೊಳಿಸಿದ್ದಲ್ಲದೇ ಕಬ್ಬಿನ ಗದ್ದೆಗೂ ದಾಳಿ ಮಾಡಿದ ಘಟನೆ ಸೋಮವಾರ ನಸುಕಿನ ವೇಳೆ ದಾಂಡೇಲಿ ತಾಲೂಕಿನ ಆಲೂರಿನಲ್ಲಿ ನಡೆದಿದೆ. ಆಲೂರಿನಲ್ಲಿ ಪುಂಡಲೀಕ ಜಾಧವ ಎಂಬವರ ಹೊಲದಲ್ಲಿರುವ ದನದ ಕೊಟ್ಟಿಗೆಯನ್ನು ಕಾಡಾನೆ ಧ್ವಂಸಗೊಳಿಸಿದೆ. ಪರಿಣಾಮವಾಗಿ ಕೊಟ್ಟಿಗೆಯಲ್ಲಿದ್ದ ಎಮ್ಮೆ ಮತ್ತು ಎಮ್ಮೆಯ ಕರುವಿಗೆ ಗಾಯವಾಗಿದೆ. ಮಾಹಿತಿಯ ಪ್ರಕಾರ ಈ ಹೊಲವನ್ನು ರೈತ ವಿಷ್ಣು ದಾನಪ್ಪ ವಾಟ್ಲೇಕರ್ ಎಂಬವರು ನಡೆಸುತ್ತಿದ್ದರು ಎನ್ನಲಾಗಿದೆ.

ರಸ್ತೆ ಅಪಘಾತದಲ್ಲಿ ನವ ಜೋಡಿ ದುರ್ಮರಣ



ಹಾವೇರಿ: ಇಲ್ಲಿನ ರಾಷ್ಟ್ರೀಯ ಹೆದ್ದಾರಿ-48ರಲ್ಲಿ ನಸುಕಿನ ಜಾವ ಭೀಕರ ರಸ್ತೆ ಅಪಘಾತ ಸಂಭವಿಸಿ ಕೇವಲ 15ದಿನಗಳ ಹಿಂದಷ್ಟೇ ನವ ದಾಂಪತ್ಯಕ್ಕೆ ಕಾಲಿಟ್ಟಿದ್ದ ಜೋಡಿಗಳು ಮೃತಪಟ್ಟಿರುವ ಘಟನೆ ಶಿಗ್ಗಾವಿ ತಾಲೂಕು ಕಡಹಳ್ಳಿ ಬಳಿ ಸಂಭವಿಸಿದೆ. ಹಾವೇರಿಯ ಕಾರ್ತಿಕ್ ಹೂಗಾರ್ (33), ಪತ್ನಿ ಐಶ್ವರ್ಯ ಹೂಗಾರ್ (26) ಸ್ಥಳದಲ್ಲೇ ಮೃತಪಟ್ಟವರು. ಹುಬ್ಬಳ್ಳಿ ಕಡೆಯಿಂದ ಶಿಗ್ಗಾವಿ ಕಡೆಗೆ ಬರುತ್ತಿದ್ದ ವ್ಯಾಗನಾರ್ ಕಾರು ರಸ್ತೆ ಬದಿ ನಿಲ್ಲಿಸಿದ್ದ ಲಾರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಭೀಕರ ರಸ್ತೆ ಅಪಘಾತ ಸಂಭವಿಸಿದೆ. ಕಾರಿನ ಹಿಂಬದಿಯಲ್ಲಿ ಕುಳಿತಿದ್ದ ಇನ್ನಿಬ್ಬರಿಗೆ ಗಂಭೀರ ಗಾಯಗಳಾಗಿವೆ. ಫೆ.13ರಂದು ಮದುವೆಯಾಗಿದ್ದ ನವಜೋಡಿ ನವಲಗುಂದ ಕಾಮಣ್ಣನಿಗೆ ಪೂಜೆ ಸಲ್ಲಿಸಿ ಮರಳಿ ಹಾವೇರಿಗೆ ಬರುವಾಗ ದುರ್ಘಟನೆ ನಡೆದಿದೆ. ತಡಸ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಲವು ಬೇಡಿಕೆ ಈಡೇರಿಸಲು ಸರ್ಕಾರಕ್ಕೆ ಪ್ರಸ್ತಾವನೆ

ರಾಜ್ಯ ಬಜೆಟ್‌ನಲ್ಲಿ ಅನುದಾನ ಸಿಗುವ ನಿರೀಕ್ಷೆ

ವಿಜಯಕುಮಾರ ಬೆಳ್ಳೇರಿಮಠ

ದಿಗಂತ ವಿಶೇಷ



ಹುಬ್ಬಳ್ಳಿ: ಉತ್ತರ ಕರ್ನಾಟಕ ಭಾಗದ ಸಂಜೀವಿನಿ ಎಂದು ಕರೆಯಲ್ಪಡುವ ಹುಬ್ಬಳ್ಳಿ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನ ಸಂಸ್ಥೆಗೆ ಬರುವ (ಕೆಎಂಸಿಆರ್‌ಐ) ರೋಗಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಹಲವು ಕಾಯಿಲೆಗಳಿಗೆ ಚಿಕಿತ್ಸೆ ಪಡೆಯಲು ಆಗಮಿಸುವ ರೋಗಿಗಳಿಗೆ ಸೂಕ್ತ ಆರೋಗ್ಯ ಸೌಲಭ್ಯ ಒದಗಿಸುವುದು ಸವಾಲಾಗಿದೆ. ಕೆಎಂಸಿಆರ್‌ಐ ಆಸ್ಪತ್ರೆ ರಾಜ್ಯ ಸರ್ಕಾರದತ್ತ ಮುಖಮಾಡಿದ್ದು, ಪ್ರಸ್ತುತ ಬಜೆಟ್‌ನಲ್ಲಿ ಅನುದಾನ ಸಿಗಲಿದೆ ಎಂಬ ನಿರೀಕ್ಷೆಯಲ್ಲಿದೆ.

ಕೆಎಂಸಿಆರ್‌ಐ ಆಸ್ಪತ್ರೆಗೆ ಕ್ಯಾನ್ಸರ್ ರೋಗಿಗಳ ಬರುವವರ ಸಂಖ್ಯೆ ದಿನದಿಂದ ದಿನಕ್ಕೆ ಅಧಿಕವಾಗುತ್ತಿದೆ. ನಿತ್ಯ ನೂರಾರು ಜನರು ಕ್ಯಾನ್ಸರ್ ರೋಗಿಗಳು ಬರುತ್ತಿದ್ದು, ಸೌಲಭ್ಯಗಳ ಕೊರತೆಯಿಂದ ಸೂಕ್ತ ಚಿಕಿತ್ಸೆ ದೊರೆಯುತ್ತಿಲ್ಲ. ಸದ್ಯ ಇಲ್ಲಿರುವ ಕ್ಯಾನ್ಸರ್ ವಿಭಾಗವನ್ನು ಪ್ರಾದೇಶಿಕ ಕ್ಯಾನ್ಸರ್ ಚಿಕಿತ್ಸಾ ಕೇಂದ್ರ ಮಾಡಿದರೆ ಬರುವ ಸ್ತನ, ಗಂಟಲು, ಬಾಯಿ ಸೇರಿದಂತೆ ಹಲವು ಕ್ಯಾನ್ಸರ್ ರೋಗಿಗಳಿಗೆ ಒಂದೇ ಸೂರಿನಡಿ ಗುಣಮಟ್ಟದ ಚಿಕಿತ್ಸೆ ನೀಡಲು ಅನುಕೂಲವಾಗಲಿದೆ.

ಪ್ರಾದೇಶಿಕ ಕ್ಯಾನ್ಸರ್ ಚಿಕಿತ್ಸಾ ಕೇಂದ್ರ ಸ್ಥಾಪಿಸಲು ಕಳೆದ ವರ್ಷವೂ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಪ್ರತಿದಿನ 250-300 ಜನ ಕ್ಯಾನ್ಸರ್ ರೋಗಿಗಳು ಆಸ್ಪತ್ರೆಗೆ ಆಗಮಿಸುತ್ತಾರೆ. 80-90 ಜನರಿಗೆ ನಿತ್ಯ ರೇಡಿಯೋ ಥೆರಪಿ ಚಿಕಿತ್ಸೆ ನೀಡಲಾಗುತ್ತಿದೆ. ಪ್ರಾದೇಶಿಕ ಕ್ಯಾನ್ಸರ್ ಚಿಕಿತ್ಸಾ ಕೇಂದ್ರ ಸ್ಥಾಪನೆಯಾದರೆ ಕ್ಯಾನ್ಸರ್ ಚಿಕಿತ್ಸೆಗೆ ಬೇಕಾದ ಮೂಲಸೌಕರ್ಯ ಹೆಚ್ಚಿಸಿಕೊಂಡು ಒಂದೇ ಸೂರಿನಡಿ ಚಿಕಿತ್ಸೆ ನೀಡಲು ಅನುಕೂಲವಾಗಲಿದೆ. 250 ಕೋಟಿ ವೆಚ್ಚತಗುಲಲಿದೆ ಎಂದು ಕೆಎಂಸಿಆರ್‌ಐ ಆಸ್ಪತ್ರೆ ನಿರ್ದೇಶಕ ಡಾ.ಈಶ್ವರ ಹೊಸಮನಿ ಹೊಸದಿಗಂತಕ್ಕೆ ತಿಳಿಸಿದರು.

ಪಿಇಟಿ (ಪಾಸಿಟ್ರಾನ್ ಎಮಿಷನ್ ಟೊಮೊಗ್ರಫಿ) 25ಕೋಟಿ ಮೌಲ್ಯ ತಂತ್ರಜ್ಞಾನ ಕೆಎಂಸಿಆರ್‌ಐಗೆ ಅವಶ್ಯಕತೆ ಇದೆ. ರೇಡಿಯೋ ಟ್ರೇಸರ್ ಬಳಸಿ ಕ್ಯಾನ್ಸರ್‌ನ ಹರಡುವಿಕೆ ನಿಖರವಾಗಿ ಪತ್ತೆ ಹಚ್ಚುಲು ಸಹಾಯವಾಗಲಿದೆ. ಇದರಿಂದ ಕ್ಯಾನ್ಸರ್ ಅನ್ನು ಸುಲಭವಾಗಿ ಪತ್ತೆ ಹಚ್ಚಬಹುದು. ಉತ್ತರ ಕರ್ನಾಟಕ ಭಾಗದ ಯಾವ ಸರ್ಕಾರಿ ಆಸ್ಪತ್ರೆಯಲ್ಲಿ ಈ ಸೌಲಭ್ಯವಿಲ್ಲ. ಆದ್ದರಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ಕೆಎಂಸಿಆರ್ ಐನಲ್ಲಿ ಸಿಟಿ ಸ್ಕ್ಯಾನಿಂಗ್ ಮಿಷನ್ ಒಂದೇ ಇದೆ. ರೋಗಿಗಳಿಗೆ ಸ್ಕ್ಯಾನ್ ಮಾಡಿದ ವರದಿ ನೀಡುವುದು ವಿಳಂಬ ಹಾಗೂ ಒತ್ತಡ ಹೆಚ್ಚಾಗಿದ್ದು, ಇನ್ನೊಂದು ಸಿಟಿ ಸ್ಕ್ಯಾನಿಂಗ್ ಮಿಷನ್ ಅವಶ್ಯಕತೆ ಇದೆ. ಎಂಆರ್‌ಐ ಸ್ಕ್ಯಾನಿಂಗ್ ಮಿಷನ್ ಅವಶ್ಯಕತೆ ಇದೆ ಎಂದು ತಿಳಿಸಿದರು.

ಕೆಎಂಸಿಆರ್‌ಐನಲ್ಲಿ ಸೌಲಭ್ಯ ಕೊರತೆ

ಪ್ರಸಕ್ತ ವರ್ಷ ಬಿಎಸ್‌ಸಿ ನರ್ಸಿಂಗ್ ವಿದ್ಯಾರ್ಥಿಗಳ ಸಂಖ್ಯೆ 100ರಿಂದ 200ಕ್ಕೆ ಹೆಚ್ಚಿಸಲಾಗಿದ್ದು, ಮತ್ತೊಂದು ವಿದ್ಯಾರ್ಥಿನಿಯರ ವಸತಿ ನಿಲಯದಲ್ಲಿ ಅವಶ್ಯಕತೆ ಇದೆ. 20 ಕೋಟಿ ವೆಚ್ಚದಲ್ಲಿ ವಸತಿ ನಿಲಯದ ಕಟ್ಟಡ ಯೋಜನೆಯ ವಿಸ್ತೃತ ವರದಿ ಸಿದ್ಧ ಪಡಿಸಿ ರಾಜ್ಯ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ.

ಡಾ. ಈಶ್ವರ ಹೊಸಮನಿ, ನಿರ್ದೇಶಕ ಕೆಎಂಸಿಆರ್‌ಐ

ಲಿನ್ಯಾಕ್ಸ್ ಮಿಷನ್ ಖರೀದಿಗೆ ಪ್ರಸ್ತಾವನೆ

ಕ್ಯಾನ್ಸರ್ ಕೋಶಗಳ ನಾಶಮಾಡಲು ಹೆಚ್ಚಿನ ಶಕ್ತಿಯ ವಿಕಿರಣವನ್ನು ಬಳಸುವ ಅತ್ಯಾಧುನಿಕ ಸಾಧನವಾದ ಕ್ಯಾನ್ಸರ್ ಸೆಂಟರ್‌ನಲ್ಲಿ ರೇಡಿಯೋಥೆರಪಿ ಯಂತ್ರದ (ಲಿನ್ಯಾಕ್ಸ್ ಮಿಷನ್) ಬಳಕೆ ಅವಧಿ ಮುಂದಿನ ವರ್ಷ ಮುಗಿಯಲಿದ್ದು, ಈ ಹಿನ್ನೆಲೆ ಹೊಸ ಮಿಷನ್ ಖರೀದಿಗೆ 25 ಕೋಟಿ ನೀಡಲು ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಕೆಎಂಸಿಆರ್‌ಐ ನಿರ್ದೇಶಕ ಡಾ. ಈಶ್ವರ ಹೊಸಮನಿ ತಿಳಿಸಿದರು.

ಸರ್ಕಾರಿ ಆಸ್ಪತ್ರೆಯಲ್ಲಿ ಔಷಧಿ ಕೊರತೆ ಆಡಳಿತ ವ್ಯವಸ್ಥೆಗೆ ಅಸಮಾಧಾನ

ಕೆಡಿಪಿ ಸಭೆಯಿಂದ ಹೊರನಡೆದ ಸೈಲ್



ಕಾರವಾರ: ಇಲ್ಲಿನ ಜಿಲ್ಲಾ ಪಂಚಾಯತ್ ಸಭಾಭವನದಲ್ಲಿ ನಡೆದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಸಂದರ್ಭದಲ್ಲಿ ಜಿಲ್ಲೆಯ ಆಸ್ಪತ್ರೆಗಳಲ್ಲಿ ಔಷಧಿ ಕೊರತೆ ಕುರಿತಂತೆ ಪ್ರಸ್ತಾಪಿಸಿದ ಕಾರವಾರ ಅಂಕೋಲಾ ಶಾಸಕ ಸತೀಶ ಸೈಲ್ ಅವರು ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಜಿಲ್ಲಾ ವೈದ್ಯಾಧಿಕಾರಿಗಳ ಉತ್ತರದಿಂದ ಅಸಮಾಧಾನಗೊಂಡು ಸಭೆಯಿಂದ ಹೊರ ನಡೆದ ಘಟನೆ ನಡೆಯಿತು.

ಆಸ್ಪತ್ರೆಗಳಲ್ಲಿ ಔಷಧಿ ಕೊರತೆ ಕುರಿತು ಮಾಧ್ಯಮಗಳಲ್ಲಿ ಸುದ್ದಿ ಪ್ರಕಟವಾಗಿದ್ದನ್ನು ಶಾಸಕ ಸತೀಶ ಸೈಲ್ ಅವರು ಸಭೆಯಲ್ಲಿ ಪ್ರಸ್ತಾಪಿಸಿದ್ದು, ಇದಕ್ಕೆ ಉತ್ತರಿಸಿದ ಜಿಲ್ಲಾ ವೈದ್ಯಾಧಿಕಾರಿ ಶಂಕರ್ ರಾವ್ ಅವರು ಜಿಲ್ಲೆಯ ಆಸ್ಪತ್ರೆಗಳಲ್ಲಿ ಔಷಧಿ ಕೊರತೆಯಿಲ್ಲ ಎಂದು ಸ್ಪಷ್ಟನೆ ನೀಡಿದರು. ಉಸ್ತುವಾರಿ ಸಚಿವರು ಸಹ ಜಿಲ್ಲೆಯ ಆಸ್ಪತ್ರೆಗಳಲ್ಲಿ ಔಷಧಿ ಕೊರತೆ ಇಲ್ಲ ಎಂದು ತಿಳಿಸಿದ್ದು, ಇದರಿಂದ ಅಸಮಾಧಾನಗೊಂಡ ಶಾಸಕ ಸತೀಶ ಸೈಲ್ ಔಷಧಿ ಕೊರತೆ ಇದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಸಚಿವ ಮಂಕಾಳ ವೈದ್ಯ ಅವರು ತಾಲೂಕುಗಳ ವಿಷಯ ಜಿಲ್ಲಾ ಸಭೆಯಲ್ಲಿ ಬೇಡ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇದ್ದರೆ ನೀವು ತರಿಸಿಕೊಳ್ಳಿ ಎಂದು ಹೇಳಿದ್ದು, ಶಾಸಕ ಸೈಲ್ ಆಕ್ರೋಶಕ್ಕೆ ಕಾರಣವಾಯಿತು. ಇದರಿಂದ ಸಚಿವ ವೈದ್ಯ ಮತ್ತು ಶಾಸಕ ಸೈಲ್ ನಡುವೆ ಕೆಲ ಕಾಲ ಮಾತಿನ ಜಟಾಪಟಿ ನಡೆಯಿತು.

ಸಿಟ್ಟಿಗೆದ್ದ ಸತೀಶ ಸೈಲ್ ವಾಸ್ತವ ಸ್ಥಿತಿಯ ಅರಿವು ಇರುವುದರಿಂದಲೇ ನಾನು ಮಾತನಾಡುತ್ತೇನೆ. ಹೇಳಿದ್ದನ್ನೆಲ್ಲ ಸುಮ್ಮನೆ ಕೇಳಿಕೊಂಡು ಹೋಗಲು ನಾನೇನು ಅನಕ್ಷರಸ್ಥ ಅಂಗೂಟಾ ಛಾಪ್ (ಹೆಬ್ಬೆಟ್ಟು ಗುರುತಿನವ) ಅಲ್ಲ ಎಂದು ಸಭೆಯಿಂದ ಹೊರ ನಡೆದರು.

ಸಭೆಯಿಂದ ಹೊರ ಬಂದು ಮಾಧ್ಯಮದವರ ಜೊತೆ ಮಾತನಾಡಿದ ಅವರು, ಕಾರವಾರ ಅಂಕೋಲಾ ಕ್ಷೇತ್ರದಲ್ಲಿ ಹಲವಾರು ಸಮಸ್ಯೆಗಳಿವೆ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆಯಿದೆ. ಔಷಧಿ ಸಿಗುತ್ತಿಲ್ಲ ಅಧಿಕಾರಿಗಳಿಂದ ಯಾವ ಕೆಲಸವೂ ಆಗುತ್ತಿಲ್ಲ ಸಭೆಯಲ್ಲಿ ಅಧಿಕಾರಿಗಳು ಏನನ್ನೂ ಮಾತನಾಡದೇ ಮೌನವಾಗಿ ಕುಳಿತುಕೊಳ್ಳುವಂತಾಗಿದೆ ಎಂದರು.

ಸಮಸ್ಯೆಗಳು ಇದ್ದರೆ ಜನರು ನಮ್ಮನ್ನು ಕೇಳುತ್ತಾರೆ. ಕ್ಷೇತ್ರದ ಸಮಸ್ಯೆಗಳ ವಿಷಯದಲ್ಲಿ ಎಂದಿಗೂ ರಾಜಿ ಆಗುವುದಿಲ್ಲ ಎಂದ ಅವರು, ಪ್ರಗತಿ ಪರಿಶೀಲನೆ ಸಭೆಯ ಪೂರ್ವ ತಾವು ಎಲ್ಲಾ ವಿಷಯಗಳನ್ನು ಅಧ್ಯಯನ ಮಾಡಿಯೇ ಬರುತ್ತಿದ್ದು ತಪ್ಪು ಮಾಹಿತಿ ನೀಡಿದರೆ ನಡೆಯುವುದಿಲ್ಲ ಎಂದು ಹೇಳಿದರು.

ಶಿರಸಿ ಮಾರಿಕಾಂಬಾ ಜಾತ್ರೆಗೆ ನಿರೀಕ್ಷೆಗೂ ಮೀರಿ ಜನದಟ್ಟಣೆ



ಶಿರಸಿ: ಶಿರಸಿ ಶ್ರೀ ಮಾರಿಕಾಂಬಾ ಜಾತ್ರೆಯು ಏಳನೇ ದಿನ ಪೂರೈಸಿದ್ದು ಸೋಮವಾರ ನಿರೀಕ್ಷೆಗಿಂತಲೂ ಹೆಚ್ಚಿನ ಜನದಟ್ಟಣೆಗೆ ಸಾಕ್ಷಿಯಾಯಿತು.


ವಾರಾಂತ್ಯದ ರಜಾದಿನಗಳಷ್ಟೇ ಭಕ್ತರು ಹರಿದುಬಂದಿದ್ದು, ಮುಂಜಾನೆ 5 ಗಂಟೆಯಿಂದಲೇ ಹಣ್ಣು-ಕಾಯಿ ಹಾಗೂ ಉಡಿ ಅರ್ಪಿಸುವ ಸೇವಾ ಕಾರ್ಯಗಳು ನೂಕುನುಗ್ಗಲಿನಲ್ಲಿ ನಡೆದವು. ಮಂಗಳವಾರ ಚಂದ್ರಗ್ರಹಣ ಇರುವ ಕಾರಣ, ಭಕ್ತರು ಸೋಮವಾರವೇ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವಿಯ ದರ್ಶನ ಪಡೆದರು.

ವಿಶೇಷ ಪಾಸ್ ಪಡೆದವರೂ ಸಹ ದರ್ಶನಕ್ಕಾಗಿ ಎರಡು-ಮೂರು ಗಂಟೆಗಳ ಕಾಲ ಸರತಿ ಸಾಲಿನಲ್ಲಿ ಕಾಯುವ ಪರಿಸ್ಥಿತಿ ಇತ್ತು. ರಾತ್ರಿಯ ವೇಳೆಯೂ ಭಕ್ತರ ಸಂಖ್ಯೆ ಗಣನೀಯವಾಗಿದ್ದು, ಕೋಟೆಕೆರೆ ಆವರಣದಲ್ಲಿರುವ ಅಮ್ಯೂಸ್‌ಮೆಂಟ್ ಪಾರ್ಕ್ ಹಾಗೂ ವಿವಿಧ ಮನರಂಜನಾ ಮಳಿಗೆಗಳತ್ತ ಜನ ಮುಗಿಬಿದ್ದರು. ಸೋಮವಾರ ತಡರಾತ್ರಿ 3 ಗಂಟೆಯವರೆಗೂ ಜಾತ್ರಾ ಮೈದಾನದಲ್ಲಿ ಜನಸಂದಣಿ ಕಂಡುಬಂದಿತು.

ಸೇವೆಯಲ್ಲಿ ವ್ಯತ್ಯಾಸ: ಮಂಗಳವಾರ ಚಂದ್ರಗ್ರಹಣದ ಹಿನ್ನೆಲೆಯಲ್ಲಿ ದೇವಿಯ ಸೇವಾ ಕಾರ್ಯಗಳಲ್ಲಿ ಬದಲಾವಣೆ ಮಾಡಲಾಗಿದೆ. ಮಧ್ಯಾಹ್ನ 2 ಗಂಟೆಯಿಂದ ರಾತ್ರಿ 7 ಗಂಟೆಯವರೆಗೆ ಕೇವಲ ದರ್ಶನಕ್ಕೆ ಮಾತ್ರ ಅವಕಾಶವಿದ್ದು, ಯಾವುದೇ ವಿಶೇಷ ಸೇವೆಗಳು ಇರುವುದಿಲ್ಲ. ತದನಂತರ ರಾತ್ರಿ 10 ಗಂಟೆಯವರೆಗೆ ಸೇವೆಗಳು ಪುನರಾರಂಭಗೊಳ್ಳಲಿವೆ.

ಬುಧವಾರ ಜಾತ್ರೆಗೆ ತೆರೆ ಬೀಳಲಿದ್ದು, ಅಂದು ಬೆಳಗ್ಗೆ 10 ಗಂಟೆಯವರೆಗೆ ಮಾತ್ರ ಸೇವೆಗೆ ಅವಕಾಶವಿರುತ್ತದೆ. ನಂತರ ಸಂಪ್ರದಾಯದಂತೆ ರಥೋತ್ಸವದ ಮೂಲಕ ದೇವಿ ಗದ್ದುಗೆಯಿಂದ ನಿರ್ಗಮಿಸಲಿದ್ದು, ಯುಗಾದಿಯ ದಿನ ದೇವಾಲಯದಲ್ಲಿ ಮರು ಪ್ರತಿಷ್ಠಾಪನೆಯಾದ ಬಳಿಕವಷ್ಟೇ ಭಕ್ತರಿಗೆ ದರ್ಶನ ಲಭ್ಯವಾಗಲಿದೆ.

ಸೈನಿಕ ಶಾಲೆ ಪರೀಕ್ಷೆ: ಎಕ್ಸಲೆಂಟ್ ವಿದ್ಯಾರ್ಥಿಗಳ ಅಮೋಘ ಸಾಧನೆ



ವಿಜಯಪುರ: ಪ್ರತಿ ವರ್ಷವೂ ವಿಜಯಪುರ ನಗರದಿಂದ ಅತಿ ಹೆಚ್ಚು ವಿದ್ಯಾರ್ಥಿಗಳನ್ನು ಸೈನಿಕ ಶಾಲೆಗಳಿಗೆ ಕಳುಹಿಸುವ ಮೂಲಕ ರಾಜ್ಯದ ಮನೆಮಾತಾಗಿರುವ ಎಕ್ಸಲೆಂಟ್ ಕೋಚಿಂಗ್ ಕ್ಲಾಸಿಸ್ ಈ ಬಾರಿಯೂ ಸಹ ಐತಿಹಾಸಿಕ ಸಾಧನೆ ಫಲಿತಾಂಶ ಮಾಡಿದೆ.

2026- 27ನೇ ಸಾಲಿನ ಅಖಿಲ ಭಾರತ ಸೈನಿಕ ಶಾಲೆಗಳ 6ನೇ ತರಗತಿಗೆ ನಡೆದ ಪ್ರವೇಶ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿದ್ದು, ಎಕ್ಸಲೆಂಟ್ ಕೋಚಿಂಗ್ ಕ್ಲಾಸಿನಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಪಡೆದು ಸಾಧನೆ ಮಾಡಿದ ವಿದ್ಯಾರ್ಥಿಗಳಾದ ಪ್ರೀತಮ್ ಹೊಸಕೋಟಿ (278), ವೇದಾ ದಂಡಣ್ಣವರ (278), ಮೋಹನ್ ಲಮಾಣಿ (277), ಅಕ್ಷೋಭ್ಯ ಕರಿಯಪ್ಪನವರ (275), ಶ್ಲೋಕ್ ಕಟ್ಟಿ (275), ಸಾತ್ವಿಕ್ ನಿಂಬರಗಿ (275), ಸಂಸ್ಕಾರ ವಗ್ಗೋಲಿ (271), ಆದಿತ್ಯ ಕೆರುಟಗಿ (271), ಶ್ರೀರಾಮ್ ಭೋವಿ (270), ಅಭಯ್ ಟಿ. ಎಸ್. (270), ಬಸವೇಶ ಹೆಗ್ಗಣಿ (270), ಮುಹಿಬ್ ವಾಲಿಕಾರ (269), ಸನ್ನಿಸ ಯಚ್ಚರಸ್ವಾಮಿಮಠ (269), ವೇದಾಂತ ಅರವತ್ತು (269), ಅರುಣಕುಮಾರ ಕುಂಟೋಜಿ (268), ಪ್ರತೀಕ್ ವಸ್ತದ (268), ವಿವೇಕ ಬಸರಕೋಡ (268), ಸಮರ್ಥ ಸಜ್ಜನ (268), ಪ್ರಣವ ಚಿಂಚೋಳಿ (267), ಶ್ರಾವಣಿ ಮಸೂತಿ (266), ಕಾರ್ತಿಕ ಸತ್ಯಪ್ಪನವರ್ (266), ನಕುಲ ಪೂಜಾರಿ (265), ರಿಷಿಕ ಹಿರೇಮಠ(265), ಭಾರ್ಗವ ಬಿರಾದಾರ (264), ಆದ್ವಿಕ ಹಿರೇಮಠ (264), ಶ್ರೀಕಾರ ಗಗನಮಾಲಿ (263), ಸಂಜಯ ಗಣಾಚಾರಿ (263), ಸಂಕೇತ ಬಳಿಗಾರ (263), ಚೇತನಗೌಡ ಪಾಟೀಲ (263), ಅಕ್ಷಯ ಹೊಟಗೊಂಡ (262), ಆದ್ಯ ಚೌಗಲೆ (262), ವಿನಾಯಕ ಶಿವಗೊಂಡ (262), ಶ್ರೇಯಸ ಇಂಚೂರ (261), ಮನೀಶ್ ಹಮ್ಮಾ (261), ಅನುಪಕುಮಾರ ಬಲಗೋಡ (261), ಆಶಿಶ್ ಹತ್ತಿಕಾಳ (261), ಸ್ವಯಂ ಸಾತಲಗಾಂವ (261), ಶಿವಕುಮಾರ ಜುಂಜರವಾಡ (260), ಅಮೋಘ ಮರಿಗೌಡರ (260), ರಶೀದ್ ವಾಲಿಕಾರ (260), ಹರ್ಷ ತುಪ್ಪದ (260), ಪ್ರೀತಮ್ ಶಿರಗಾಂವಿ (260), ವೈಭವ ಕಾಮಶೆಟ್ಟಿ (260) ಅಂಕಗಳನ್ನು ಪಡೆದು ದಾಖಲೆಯ ಫಲಿತಾಂಶವನ್ನು ನೀಡಿದ್ದಾರೆ.

83 ವಿದ್ಯಾರ್ಥಿಗಳು 250ಕ್ಕಿಂತ ಹೆಚ್ಚು ಅಂಕ ಪಡೆದರೆ 267 ವಿದ್ಯಾರ್ಥಿಗಳು 200ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದುಕೊಂಡಿದ್ದಾರೆ. ಈ ವರ್ಷ ಸುಮಾರು 350ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ದೇಶದ ವಿವಿಧ ಸೈನಿಕ ಶಾಲೆಗಳಿಗೆ ಪ್ರವೇಶ ಪಡೆಯುವ ಸಾಧ್ಯತೆ ಇದೆ.

ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಬಸವರಾಜ ಕೌಲಗಿ ಮಾತನಾಡಿ, ಎಕ್ಸಲೆಂಟ್ ತರಬೇತಿ ಕೇಂದ್ರವು ಹಲವು ವರ್ಷಗಳಿಂದ ಉತ್ತಮ ಗುಣಮಟ್ಟದ ತರಬೇತಿಯನ್ನು ನೀಡುವ ಮೂಲಕ ಪಾಲಕರ ಕನಸನ್ನು ನನಸು ಮಾಡುತ್ತ ಸಾಗಿದೆ. ಮಕ್ಕಳ ಮಾನಸಿಕ ಸಾಮರ್ಥ್ಯ ಹಾಗೂ ಕಲಿಕಾ ಮಟ್ಟವನ್ನು ಅರ್ಥೈಸಿಕೊಂಡು ಪಾಠ ಮಾಡುವ ಸಿಬ್ಬಂದಿ ವರ್ಗವಿದೆ. ಉತ್ತಮ ಕಲಿಕಾ ವಾತಾವರಣದ ಜೊತೆಗೆ ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವ ಹೆಚ್ಚಿಸುವ ಕಾರ್ಯ ಯಶಸ್ವಿಯಾಗಿ ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಾಧನೆಯನ್ನು ಇಲ್ಲಿನ ಮಕ್ಕಳು ಮಾಡುತ್ತಾರೆ ಎನ್ನುವ ಭರವಸೆ ಇದ್ದು, ಈ ಬಾರಿಸಾಧನೆ ಮಾಡಿದ ವಿದ್ಯಾರ್ಥಿಗಳಿಗೂ ಹಾಗೂ ಅವರನ್ನು ಅಣಿಗೊಳಿಸಿದ ಸಿಬ್ಬಂದಿವರ್ಗಕ್ಕೂ ಅನಂತ ಅಭಿನಂದನೆಗಳನ್ನು ಸಲ್ಲಿಸುವುದಾಗಿ ಹೇಳಿದರು. ವಿದ್ಯಾರ್ಥಿಗಳ ಈ ಸಾಧನೆಗೆ ನಿರ್ದೇಶಕರ ಮಂಡಳಿ, ಆಡಳಿತಾಧಿಕಾರಿಗಳು, ಶೈಕ್ಷಣಿಕ ಸಂಯೋಜಕರು ಹಾಗೂ ಸಕಲ ಸಿಬ್ಬಂದಿ ವರ್ಗ ಅಭಿನಂದನೆ ಸಲ್ಲಿಸಿದ್ದಾರೆ.

ದೇವರ ದರ್ಶನ: ವೇಳೆಯಲ್ಲಿ ಬದಲಾವಣೆ



ಗೋಕರ್ಣ: ಪುರಾಣ ಪ್ರಸಿದ್ಧ ಮಹಾಬಲೇಶ್ವರ ಮಂದಿರದಲ್ಲಿ ಗ್ರಹಣದ ನಿಮಿತ್ತ ಮಂಗಳವಾರ ದೇವರ ದರ್ಶನ ವೇಳೆಯಲ್ಲಿ ಬದಲಾವಣೆ ಮಾಡಲಾಗಿದೆ. ಮುಂಜಾನೆ 6 ಗಂಟೆಯಿಂದ 11.30 ಗಂಟೆಯವರೆಗೆ ಸ್ಪರ್ಶ ದರ್ಶನಕ್ಕೆ ಅವಕಾಶವಿದ್ದು, ನಂತರ ಮಹಾಪೂಜೆ ನೆರವೇರಿದ ಬಳಿಕ ಮಂದಿರ ಬಂದ್ ಆಗಲಿದೆ. ಸಂಜೆ 5 ಗಂಟೆಯಿಂದ ಏಳು ಗಂಟೆಯವರೆಗೆ ಸ್ಪರ್ಶ ದರ್ಶನಕ್ಕೆ ಅವಕಾಶವಿದ್ದು, ಗ್ರಹಣ ಮೋಕ್ಷಗೊಂಡ ಬಳಿಕ ದೇವಾಲಯದ ಶುದ್ಧಿಗೊಳಿಸಿ, ಮಹಾಪೂಜೆ ನೆರವೇರಲಿದೆ. ದೇವಾಲಯದ ಮಧ್ಯಾಹ್ನದ ಪ್ರಸಾದ ಭೋಜನವಿರುವುದಿಲ್ಲ, ಸಂಜೆ 7.30ರಿಂದ 8.30ರವರೆಗೆ ಉಪಹಾರ ವ್ಯವಸ್ಥೆ ಇರುತ್ತದೆ. ಭಕ್ತರು ಇದನ್ನ ಗಮನಿಸಿ ಸಹಕರಿಸುವಂತೆ ಮಂದಿರದ ಪ್ರಕಟಣೆಯಲ್ಲಿ ಕೋರಲಾಗಿದೆ.

ಬ್ಯಾಂಕ್ ಆಫ್ ಬರೋಡ ಶಾಖೆಯಲ್ಲಿ ದರೋಡೆಗೆ ಯತ್ನ ಪ್ರಕರಣ

ಐದು ಜನ ಆರೋಪಿಗಳ ಬಂಧನ



ಅಂಕೋಲಾ: ತಾಲೂಕಿನ ಸುಂಕಸಾಳದಲ್ಲಿರುವ ಬ್ಯಾಂಕ್ ಆಫ್ ಬರೋಡ ಶಾಖೆಯಲ್ಲಿ ದರೋಡೆಗೆ ಯತ್ನ ನಡೆಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಐದು ಜನ ಆರೋಪಿಗಳನ್ನು ಅಂಕೋಲಾ ಪೊಲೀಸರು ಬಂಧಿಸಿದ್ದಾರೆ.

ತಾಲೂಕಿನ ಹಳವಳ್ಳಿ ನಿವಾಸಿ ವಿನಾಯಕ ಕಮಲಾಕರ ಸಿದ್ಧಿ(19) ಮಗ್ಗದ ಮನೆ ನಿವಾಸಿ ರಾಜೇಶ ಲಕ್ಷ್ಮಣ ಸಿದ್ಧಿ(27)ಮಳಲಗಾವ ನಿವಾಸಿ ಪ್ರಶಾಂತ ಅನಂತ ಸಿದ್ಧಿ(19) ಕಲ್ಲೇಶ್ವರದ ನಿಲೇಶ ಗಣಪತಿ ಸಿದ್ಧಿ(38) ಮತ್ತು ನಾಗೇಶ ಸುಬ್ರಾಯ ಸಿದ್ಧಿ(24) ಬಂಧಿತ ಆರೋಪಿಗಳಾಗಿದ್ದು, ಇವರು ಹೆಗ್ಗಾರದ ಕಲ್ಪತರು ವಿವಿದ್ದೋದ್ದೇಶ ಸಹಕಾರಿ ಸಂಘದಲ್ಲಿ ನಡೆದ 8 ಸಾವಿರ ರೂಪಾಯಿ ನಗದು ಹಣ ಕಳ್ಳತನ, ಕನಕನಹಳ್ಳಿಯ ಅನ್ನಪೂರ್ಣ ಮಾರ್ಟ್ ಕಿರಾಣಿ ಅಂಗಡಿಯಲ್ಲಿ 10 ಸಾವಿರ ನಗದು ಮತ್ತು ಕಿರಾಣಿ ಸಾಮಗ್ರಿಗಳ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿರುವುದಾಗಿ ತಿಳಿದು ಬಂದಿದೆ.

ಆರೋಪಿತರಿಂದ ಕಳ್ಳತನಕ್ಕೆ ಬಳಸಿದ್ದ ಹೀರೋ ಕಂಪನಿಯ ಎರಡು ಬೈಕ್, ಬಜಾಜ್ ಕಂಪನಿಯ ಒಂದು ಬೈಕ್ ಸೇರಿದಂತೆ ಒಟ್ಟು ಮೂರು ಬೈಕ್‌ಗಳು, ಏಸರ್ ಕಂಪನಿಯ ಟ್ಯಾಬ್ ಮತ್ತಿತರ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ.

ಜ.9ರ ಸಂಜೆಯಿಂದ ಜ.12ರ ಬೆಳಗಿನ ಜಾವದ ನಡುವಿನ ಅವಧಿಯಲ್ಲಿ ರಾಷ್ಟ್ರೀಯ ಹೆದ್ದಾರಿ 52ರ ಪಕ್ಕದಲ್ಲಿರುವ ಬ್ಯಾಂಕ್ ಆಫ್ ಬರೋಡಾ ಶಾಖೆಯ ಶೌಚಾಲಯದ ಗೋಡೆಗೆ ಕನ್ನ ಕೊರೆದು ಒಳನುಗ್ಗಿ ದರೋಡೆಗೆ ಯತ್ನ ನಡೆಸಲಾಗಿತ್ತು. ಆರೋಪಿತರು ಬ್ಯಾಂಕಿನ ಸ್ಟ್ರಾಂಗ್ ರೂಮ್ ಗೋಡೆಯನ್ನು ಸಹ ಒಡೆಯುವ ಪ್ರಯತ್ನ ನಡೆದಿದ್ದರು.

ರಾಷ್ಟ್ರೀಕೃತ ಬ್ಯಾಂಕಿನ ದರೋಡೆ ಯತ್ನ ನಡೆದಿರುವುದು ಜನರ ಆತಂಕಕ್ಕೆ ಕಾರಣವಾಗಿತ್ತಲ್ಲದೇ ಶಾಖಾ ವ್ಯವಸ್ಥಾಪಕರು ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಪ್ರಕರಣ ಭೇದಿಸಲು ಜಿಲ್ಲಾ ಪೊಲೀಸ್ ವರಿಷ್ಠ ದೀಪನ್ ಎಂ.ಎನ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಕೃಷ್ಣಮೂರ್ತಿ, ಡಿವೈಎಸ್‌ಪಿ ಗಿರೀಶ ಅವರ ಮಾರ್ಗದರ್ಶನದಲ್ಲಿ ಅಂಕೋಲಾ ಪೊಲೀಸ್ ನಿರೀಕ್ಷಕ ಚಂದ್ರಶೇಖರ ಮಠಪತಿ ಅವರ ನೇತೃತ್ವದಲ್ಲಿ ಪಿಎಸ್‌ಐ ವಿಶ್ವನಾಥ ನಿಂಗೊಳ್ಳಿ, ಗುರುನಾಥ ಹಾದಿಮನಿ ಮತ್ತು ಅಂಕೋಲಾ ಠಾಣೆಯ ಸಿಬ್ಬಂದಿಗಳ ತಂಡ ಯಲ್ಲಾಪುರ ಠಾಣೆಯ ಸಿಬ್ಬಂದಿಗಳ ಸಹಕಾರದಲ್ಲಿ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದು ತನಿಖೆ ಮುಂದುವರಿದಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ



ಯಲ್ಲಾಪುರ: ತಾಲೂಕಿನ ಮಂಚೀಕೇರಿಯಲ್ಲಿ ನೂತನ ಪಶು ಆಸ್ಪತ್ರೆಯನ್ನು ಶಾಸಕ ಶಿವರಾಮ ಹೆಬ್ಬಾರ್ ಉದ್ಘಾಟಿಸಿ, ಅರ್ಹ ಫಲಾನುಭವಿಗಳಿಗೆ ಹೈನುಗಾರಿಕೆಯ ಪರಿಕರಗಳನ್ನು ವಿತರಿಸಿದರು.ಪಶು ಆಸ್ಪತ್ರೆಯ ವೈದ್ಯಾಧಿಕಾರಿ ಡಾ ಸುಬ್ರಾಯ ಭಟ್, ಹಾಸಣಗಿ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಆರ್.ಎನ್. ಹೆಗಡೆ ಗೊರ್ಸಗದ್ದೆ, ಮಂಚೀಕೇರಿ ಹಾಲು ಸಹಕಾರಿ ಸಂಘದ ಅಧ್ಯಕ್ಷರಾದ ಭಾಸ್ಕರ್ ಹೆಗಡೆ, ತಾಪಂ ಮಾಜಿ ಉಪಾಧ್ಯಕ್ಷೆ ಸುಜಾತಾ ಉಪಸ್ಥಿತರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಕಾರವಾರ: ಉಪ ವಿಭಾಗದ ವ್ಯಾಪ್ತಿಯಲ್ಲಿ ವಾಹಕ ಬದಲಾವಣೆ ಕಾಮಗಾರಿ ಇರವುದರಿಂದ ಮಾ.3 ರಂದು ಬೆಳಗ್ಗೆ 9.30 ರಿಂದ ಸಂಜೆ 6 ಗಂಟೆಯವರೆಗೆ ಕೆರವಡಿ ಫೀಡರಿನ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಗ್ರಾಹಕರು ಸಹಕರಿಸುವಂತೆ ಕಾರವಾರ ಹೆಸ್ಕಾಂ, ಕಾರ್ಯ ಮತ್ತು ಪಾಲನಾ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್‌ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೋಳಿ ಹಬ್ಬ: ಪಾದಯಾತ್ರೆ ಮುಂದೂಡಿಕೆ

ಹಳಿಯಾಳ: ಗ್ರಾಮೀಣ ಭಾಗಗಳಲ್ಲಿ ಹೋಳಿ ಹಬ್ಬದ ಆಚರಣೆ ಹಿನ್ನೆಲೆ ಕಾಳಿ ನದಿ ಯೋಜನೆಯ ಜಾರಿಯಲ್ಲಿ ಆಗುತ್ತಿರುವ ವಿಳಂಬಕ್ಕಾಗಿ ನಡೆಯುತ್ತಿರುವ ನೀರಿಗಾಗಿ ಹೆಜ್ಜೆ ಹಾಕಿ ಹಳಿಯಾಳ ತಾಲೂಕಿನ ರೈತರ ಪಾದಯಾತ್ರೆಯನ್ನು ತಾತ್ಕಾಲಿಕವಾಗಿ ಮಾ.4 ರವರೆಗೆ ಮುಂದೂಡಲಾಗಿದೆ. ಮಾ.5 ರಿಂದ ಪಾದಯಾತ್ರೆ ಮತ್ತೆ ನಿಗದಿತ ಮಾರ್ಗದಲ್ಲಿ ಪುನರ್ ಆರಂಭವಾಗಲಿದೆ.ಈಗಾಗಲೇ ಅರ್ಧ ದಾರಿ ಕ್ರಮಿಸಿದ್ದಪಾದಯಾತ್ರೆಯು ಜನಜಾಗೃತಿ ಮೂಡಿಸುವಲ್ಲಿ ಸಾಕಷ್ಟು ಯಶಸ್ವಿಯಾಗಿದ್ದು ರೈತರ ಮನದಲ್ಲಿಯ ಹಲವಾರು ಗೊಂದಲಗಳಿಗೆ ಹಾಗೂ ತಪ್ಪು ಮಾಹಿತಿಗೆ ಸರಿಯಾದ ಉತ್ತರ ದೊರೆತಿರುವುದಾಗಿ ಪಾದಯಾತ್ರೆಯ ರೈತ ಮುಖಂಡರು ತಿಳಿಸಿದ್ದಾರೆ.ಗ್ರಾಮಾಂತರ ಪ್ರದೇಶಗಳಲ್ಲಿ ಹೋಳಿ ಹಬ್ಬದ ಸಾಂಪ್ರದಾಯಿಕ ಕಾರ್ಯಕ್ರಮಗಳು ಹಾಗೂ ಸಾರ್ವಜನಿಕ ಸಂಭ್ರಮ ನಡೆಯುತ್ತಿರುವುದರಿಂದ ಮತ್ತು ಪೌರ್ಣಿಮಿಯ ಗ್ರಹಣದ ಹಿನ್ನೆಲೆಯಲ್ಲಿ ಪಾದಯಾತ್ರೆ ವೇಳಾಪಟ್ಟಿಯಲ್ಲಿ ಬದಲಾವಣೆ ಮಾಡಲಾಗಿದೆ. ಹಬ್ಬದ ನಂತರ ನಿಗದಿತ ಮಾರ್ಗದಲ್ಲಿ ಪಾದಯಾತ್ರೆ ಪುನರಾರಂಭವಾಗಲಿದೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	64699	68881
ಬಿಳಿಗೋಟು	31890	43618
ಕೆಂಪುಗೋಟು	26609	38658
ಬೆಟ್ಟೆ	41390	52409
ರಾಶಿ	48769	54499
ಚಾಲಿ	44108	48511
ಬಿ.ಕಾಳುಮೆಣಸು	75005	75005

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	61899	65099
ರಾಶಿ	50119	59299
ಬೆಟ್ಟೆ	39399	51699
ಕೆಂಪುಗೋಟು	18099	42899
ಬಿಳಿಗೋಟು	18611	41969
ಚಾಲಿ ಹೊಸದು	38099	49489
ಚಾಲಿ	40189	49819
ಕೋಕಾ	13900	34969
ಕಾಳುಮೆಣಸು	54499	68009



ಶಿರಸಿ: ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವ ಎಸ್.ಮಧು ಬಂಗಾರಪ್ಪ ರಾಜ್ಯ ಪ್ರಸಿದ್ಧ ಶಿರಸಿಯ ಮಾರಿಕಾಂಬಾ ಜಾತ್ರೆಯಲ್ಲಿ ಪಾಲ್ಗೊಂಡು ವಿಶೇಷ ಪೂಜೆ ಸಲ್ಲಿಸಿದರು. ಸಚಿವರನ್ನು ದೇವಸ್ಥಾನದ ಆಡಳಿತ ಮಂಡಳಿ ವತಿಯಿಂದ ಗೌರವಿಸಲಾಯಿತು. ಶಾಸಕ ಭೀಮಣ್ಣ ನಾಯ್ಕ, ದೇವಸ್ಥಾನದ ಅಧ್ಯಕ್ಷ ಆರ್.ಜಿ.ನಾಯ್ಕ, ಉಪಾಧ್ಯಕ್ಷ ಸುದೇಶ ಜೋಗಳೇಕರ, ಧರ್ಮದರ್ಶಿ ಸುಧೀರ ಹಂದ್ರಾಳ, ಬಾಬುದಾರ ಮುಖ್ಯಸ್ಥ ಜಗದೀಶ ಗೌಡ ಮತ್ತಿತರರಿದ್ದರು.

ಜ್ಞಾನ ವೃದ್ಧಿಗೆ ಮಕ್ಕಳ ಸಂತೆ ಸಹಾಯಕ

ಮುಂಡಗೋಡ: ಮಕ್ಕಳಲ್ಲಿ ಸಾಮಾನ್ಯ ಜ್ಞಾನ ಬರಬೇಕೆಂಬ ಉದ್ದೇಶದಿಂದಲೇ ರಾಜ್ಯ ಸರ್ಕಾರ ಮಕ್ಕಳ ಸಂತೆ ಎಂಬ ಹಮ್ಮಿಕೊಂಡಿದ್ದು ಇದರಿಂದ ಮಕ್ಕಳಲ್ಲಿ ವ್ಯವಹಾರಿಕವಾಗಿ ತಿಳುವಳಿಕೆ ಬರುತ್ತದೆ ಎಂದು ವಿ.ಎಸ್ ಪಾಟೀಲ ಹೇಳಿದರು.ಸೋಮವಾರ ಪಿಎಂಶ್ರೀ ಶಾಸಕ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ಆರ್ಥಿಕ ಸಾಕ್ಷರಾತ ಶಿಕ್ಷಣಯಡಿಯಲ್ಲಿ ಮಕ್ಕಳ ಸಂತೆ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳ ಬಗ್ಗೆ ಪಾಲಕರ ಜವಾಬ್ದಾರಿ ಹೆಚ್ಚಿದೆ. ಮಕ್ಕಳ ಮೇಲೆ ದುಷ್ಪರಿಣಾಮ ಸಾಮಾಗ್ರಿಗಳನ್ನು ತರಲು ಅಂಗಡಿಗಳಿಗೆ ಕಳುಹಿಸಬಾರದು. ಮಕ್ಕಳು ಎಷ್ಟೇ ಜ್ಞಾನವಂತರು ಇದ್ದರು ಸಾಮಾನ್ಯ ಜ್ಞಾನ ಅವಶ್ಯಕತೆ ಮುಖ್ಯ ಎಂದರು.ಬಿಇಒ ಸುಮಾ.ಜಿ ಮಾತನಾಡಿದರು. ಶಾಲೆಯ ಮುಖ್ಯ ಶಿಕ್ಷಕ ವಿನೋದ ನಾಯ್ಕ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.ಸರ್ಕಾರಿ ನೌಕರ ಸಂಘದ ತಾಲೂಕು ಅಧ್ಯಕ್ಷ ಸುಭಾಷ ಡೋರಿ, ಮುಖ್ಯ ಶಿಕ್ಷಕ ಎಸ್.ಡಿ.ಮುಡಣ್ಣನವರ, ಬಿಆರ್‌ಸಿ ಸಿಬ್ಬಂದಿ ಆರ್.ರಾಠೋಡ ಇದ್ದರು. ಈ ಮಕ್ಕಳ ಸಂತೆ ಕುರ್ಲಿ ಸರ್ಕಾರಿ ಶಾಲೆಯಲ್ಲಿ ಅಚ್ಚುಕಟ್ಟಾಗಿ ನಡೆಯಿತು.**ಗಮನ ಸೆಳೆದ ಮಕ್ಕಳ ಸಂತೆ :** ಶಾಲೆಯ ಆವರಣದಲ್ಲಿ ಸಣ್ಣ ಸಣ್ಣ ಸ್ಟಾಲ್ ರೀತಿಯಲ್ಲಿ ತೆರಿದು ಮಕ್ಕಳ ಸ್ವತಃ ಹಣದಿಂದ ವಿವಿಧ ಆಹಾರ ಪದಾರ್ಥಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದರು ಮಕ್ಕಳು ಟೊಮೇಟೊ, ಮೊಲಂಗಿ, ಬದನೆಯಕಾಯಿ. ಬೀನ್ಸ್, ತೆಂಗಿನಕಾಯಿ ವಿವಿಧ ಹಣ್ಣು ಹಂಪಲ, ಪಠ್ಯಪುಸ್ತಕ ಪೆನ್ನುಗಳನ್ನು ಹಾಗೂ ಗೆಡ್ಡೆ ಗೆಣಸು, ವಿವಿಧ ತಿಂಡಿ ತಿನಿಸುಗಳನ್ನು ತಂಪು ಪಾನೀಯ ಮಾರಾಟ ಮಾಡುತ್ತಿರುವ ದೃಶ್ಯ ಕಂಡು ಬಂತು.



ಶಿರಸಿ: ಉತ್ತರಕನ್ನಡ ಲೋಕಸಭಾ ಕ್ಷೇತ್ರದ ಮಾಜಿ ಸಂಸದ ಹಾಗೂ ಕೇಂದ್ರದ ಮಾಜಿ ಸಚಿವ ಅನಂತಕುಮಾರ ಹೆಗಡೆ ಕುಟುಂಬ ಸಮೇತ ಮಾರಿಕಾಂಬಾ ಜಾತ್ರೆಯಲ್ಲಿ ಪಾಲ್ಗೊಂಡು ದೇವಿ ದರ್ಶನ ಪಡೆದರು. ಅನಂತಕುಮಾರ ಹೆಗಡೆ ಪತ್ನಿ ರೂಪಾ ಹೆಗಡೆ, ಧರ್ಮದರ್ಶಿ ಸುಧೀರ ಹಂದ್ರಾಳ, ಪ್ರಮುಖರಾದ ಕೃಷ್ಣ ಎಸಳೆ, ಆನಂದ ಸಾಲೇರ, ಸುರೇಶ ಶೆಟ್ಟಿ ಇದ್ದರು.

ತ್ರೈಮಾಸಿಕ ಕೆಡಿಪಿ ಸಭೆ | ಸಚಿವ ಮಂಕಾಳ ಎಸ್.ವೈದ್ಯ ಸೂಚನೆ

ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆಯಾಗದಿರಲಿ

ಕಾರವಾರ: ಜಿಲ್ಲೆಯ ಯಾವುದೇ ಸರ್ಕಾರಿ ವೈದ್ಯಕೀಯ ಕೇಂದ್ರಗಳಲ್ಲಿ ಸಾರ್ವಜನಿಕರಿಗೆ ನೀಡುವ ಔಷಧಗಳ ವಿತರಣೆಯಲ್ಲಿ ಕೊರತೆಯಾಗದಂತೆ ಎಚ್ಚರವಹಿಸುವಂತೆ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ.ಎಸ್.ವೈದ್ಯ ಸೂಚನೆ ನೀಡಿದರು.

ಅವರು ಸೋಮವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಸಿ ಮಾತನಾಡಿದರು.

ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಆಸ್ಪತ್ರೆಯ ಹೊರಗಿನಿಂದ ಔಷಧಿ ಪಡೆಯುವಂತೆ ಚೀಟಿಗಳನ್ನು ವಿತರಿಸಬಾರದು, ಆಸ್ಪತ್ರೆಯಲ್ಲಿ ಔಷಧಗಳ ಕೊರತೆಯಿದ್ದಲ್ಲಿ ಆರೋಗ್ಯ ರಕ್ಷಾ ಸಮಿತಿಯ ಮೂಲಕ ಅಗತ್ಯವಿರುವಷ್ಟು ಔಷಧಗಳನ್ನು ಖರೀದಿಸಿ, ಉಚಿತವಾಗಿ ವಿತರಣೆ ಮಾಡುವಂತೆ ಸೂಚಿಸಿದ ಅವರು, ಕಾರವಾರದ ಮಲ್ಟಿ ಸ್ಪಷಲಿಟಿ ಆಸ್ಪತ್ರೆಗೆ ತಜ್ಞ ವೈದ್ಯರನ್ನು ನೇಮಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಜಿಲ್ಲೆಯಲ್ಲಿ ಮಕ್ಕಳ ಕೊರತೆಯಿಂದ ಈಗಾಗಲೇ ಮುಚ್ಚಿರುವ ಸರ್ಕಾರಿ ಶಾಲೆಗಳನ್ನು ಸರ್ವೇ ಮಾಡಿಸಿ, ಅವುಗಳನ್ನು ಸ್ಥಳೀಯ ಗ್ರಾಪಂಗಳಿಗೆ ಹಸ್ತಾಂತರಿಸಬೇಕು. ಮುಚ್ಚಿದ ಶಾಲೆಗಳ ಜಾಗ ಅತಿಕ್ರಮಣವಾದಲ್ಲಿ ಸಂಬಂಧಪಟ್ಟ ಪಂಚಾಯತ್‌ನ ಪಿಡಿಓ ಮತ್ತು ತಾಪಂ ಕಾರ್ಯನಿರ್ವಹಣಾಧಿಕಾರಿಗಳನ್ನು ಜವಾಬ್ದಾರನ್ನಾಗಿ ಮಾಡಲಾಗುವುದು.

ಈ ಬಾರಿಯ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಜಿಲ್ಲೆಗೆ ಶೇ.100 ಫಲಿತಾಂಶ ಬರುವ ನಿಟ್ಟಿನಲ್ಲಿ ಅಧಿಕಾರಿಗಳು ಮತ್ತು ಶಿಕ್ಷಕರು ಕಾರ್ಯನಿರ್ವಹಿಸಬೇಕು, ಜಿಲ್ಲೆಯಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಅಗತ್ಯವಿರುವ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಲು ಎಲ್ಲಾ ಶಾಸಕರು ತಮ್ಮ ಅನುದಾನವನ್ನು ನೀಡಲಿದ್ದೇವೆ ಎಂದರು.ಜಿಲ್ಲೆಯಲ್ಲಿ ಸಾರಿಗೆ ಬಸ್‌ಗಳ ವ್ಯವಸ್ಥೆ ಹದಗೆಟ್ಟಿರುವ ಬಗ್ಗೆ ಸಭೆಯಲ್ಲಿ ಗಂಭೀರ ಚರ್ಚೆ ನಡೆಯಿತು, ಜಿಲ್ಲೆಗೆ ಇದುವರೆಗೆ 104 ಹೊಸ ಬಸ್ ಕೊಟ್ಟಿದ್ದೇವೆ. ಪ್ರಸ್ತುತ ಇನ್ನೂ 20 ಹೊಸ ಬಸ್‌ಗಳು ಬರುತ್ತವೆ. ಸಮಸ್ಯೆಯನ್ನು ಸರಿಯಾಗಿ ನಿರ್ವಹಿಸಿ ಎಂದು ಸಾರಿಗೆ ಸಂಸ್ಥೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಜಿಲ್ಲೆಯ ಎಲ್ಲ ಕಡೆ ಗುಜರಿ ಬಸ್‌ಗಳು ಓಡಾಡುತ್ತಿವೆ. ಬಸ್‌ಗಳ ನಿರ್ವಹಣೆ ಸರಿಯಾಗಿ ಆಗುತ್ತಿಲ್ಲ, ಕಾರವಾರ, ಅಂಕೋಲಾ ಬಸ್ ಘಟಕಗಳು ದುರ್ಬಲವಾಗಿವೆ ಎಂದು ಎಂಸಿಎ ಅಧ್ಯಕ್ಷ ಹಾಗೂ ಶಾಸಕ ಸತೀಶ ಸೈಲ್ ಆರೋಪಿಸಿದರು.



ಬಸ್ ಪುನರಾರಂಭಕ್ಕೆ ಸೂಚನೆ

ಪ್ರಸ್ತುತ ನಡೆಯುತ್ತಿರುವ ದ್ವಿತೀಯ ಪಿಯುಸಿ ಪರೀಕ್ಷೆ ಮತ್ತು ಮುಂಬರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಅನಾನುಕೂಲವಾಗದಂತೆ ಸಾರಿಗೆ ಸಂಸ್ಥೆಯ ಬಸ್‌ಗಳ ಸಂಚಾರ ಸಮರ್ಪಕವಾಗಿ ನಡೆಯಬೇಕು. ಜಿಲ್ಲೆಗೆ ಬಂದಿರುವ ಹೊಸ ಬಸ್ ಗಳನ್ನು ಅಗತ್ಯವಿರುವೆಡೆಗಳಲ್ಲಿ ಕಾರ್ಯಚರಣೆಗೆ ನಿಯೋಜಿಸಬೇಕು. ಕಾರವಾರ- ಬೆಂಗಳೂರು ನಡುವೆ ಬಸ್ ಸ್ಥಗಿತಗೊಳಿಸುವ ಬಸ್ ಸಂಚಾರವನ್ನು ಪುನರಾರಂಭಿಸುವಂತೆ ಸೂಚಿಸಿದರು.

- ನೀರಿನ ಸಮಸ್ಯೆಗೆ ಕ್ರಮ
- ಜಲ ಜೀವನ್ ಮಿಷನ್ ಕಾಮಗಾರಿ ಅನುಷ್ಠಾನಕ್ಕೆ ಕ್ರಮ

ಜಿಲ್ಲೆಯಲ್ಲಿ ವ್ಯಾಪಕವಾಗಿ ವಿರೋಧ ವ್ಯಕ್ತವಾಗುತ್ತಿರುವ ಬೇಡ್ತಿ- ವರದಾ, ಅಘನಾಶಿನಿ- ವೇದಾವತಿ ನದಿ ಜೋಡಣೆ ಯೋಜನೆಯನ್ನು ವಿರೋಧಿಸಿ ಸಭೆಯಲ್ಲಿ ನಿರ್ಣಯ ಕೈಗೊಳ್ಳುವಂತೆ ಪ್ರಸ್ತಾಪಿಸಿ ಶಿರಸಿ ಶಾಸಕ ಭೀಮಣ್ಣ ನಾಯ್ಕ ಒತ್ತಾಯಿಸಿದರು. ಉಸ್ತುವಾರಿ ಸಚಿವರೂ ಕೂಡಾ ಈ ಪ್ರಸ್ತಾವನೆಗೆ ತಮ್ಮ ಒಪ್ಪಿಗೆ ಸೂಚಿಸಿ ಅನುಮೋದನೆ ನೀಡಿದರು.

ಸಭೆಯಲ್ಲಿ ಮಳೆ ಮಾಪನ ಯಂತ್ರಗಳ ದುರಸ್ತಿ ಮತ್ತು ಕಾರ್ಯನಿರ್ವಹಣೆ, ಆಟೋಗಳಿಗೆ ಪರ್ಮಿಟ್ ನೀಡುವ ಬಗ್ಗೆ, ಬೆಳೆ ವಿಮೆ ಪಾವತಿ ಬಗ್ಗೆ, ಪ್ರಾಕೃತಿಕ ವಿಕೋಪ ತಡೆ ಕಾಮಗಾರಿಗಳನ್ನು ನಿಗಧಿತ ಅವಧಿಯಲ್ಲಿ ಮುಕ್ತಾಯಗೊಳಿಸುವ ಬಗ್ಗೆ, ಅತಿಕ್ರಮಣ ಜಮೀನುಗಳ ಜಿ.ಪಿ.ಎಸ್ ಸರ್ವೇ ಕಾರ್ಯದ ಬಗ್ಗೆ ವಿಸ್ತೃತ ಚರ್ಚೆ ನಡೆಯಿತು.

ಜಿಲ್ಲಾಧಿಕಾರಿ ಕೆ. ಲಕ್ಷ್ಮೀ ಪ್ರಿಯಾ, ಜಿಪಂ ಸಿಇಒ ಡಾ.ದಿಲೀಷ್ ಶಶಿ, ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಸತೀಶ್ ನಾಯ್ಕ್ ಹಾಗೂ ವಿವಿಧ ಇಲಾಖೆಗಳ ಅನುಷ್ಠಾನಾಧಿಕಾರಿಗಳು ಇದ್ದರು.

ಕುಡಿಯು ನೀರಿಗಾಗಿ ಗ್ರಾಮಸ್ಥರ ಆಗ್ರಹ

ಕುಮಟಾ: ತಾಲೂಕಿನಲ್ಲಿ ಮಾರ್ಚ ತಿಂಗಳ ಆರಂಭದ ವೇಳೆಯಲ್ಲೇ ಕುಡಿಯುವ ನೀರಿನ ಸಮಸ್ಯೆ ತೀವ್ರ ರೂಪ ಪಡೆದುಕೊಂಡಿದ್ದು, ಮಾರ್ಚ್ ಆರಂಭದಲ್ಲೇ ನೀರಿನ ಬರದ ಭೀತಿ ಎದುರಾಗಿದೆ. ಹಳ್ಳಿಗಳಲ್ಲಿನ ಬಾವಿ ಹಾಗೂ ಕೊಳವೆ ಬಾವಿಗಳು ಬತ್ತಿಹೋಗಿ, ವಾರಕ್ಕೆ ಒಮ್ಮೆಯಾದರೂ ನೀರು ದೊರೆಯದ ಸ್ಥಿತಿ ನಿರ್ಮಾಣವಾಗಿದೆ.

ಹೆಗಡೆ ಗ್ರಾಪಂ ವ್ಯಾಪ್ತಿಯ ಚಿಟ್ಟಿಕಂಬಿ, ತಾರಿಮನೆಕೇರಿ, ಕಟ್ಟಿದಿಂಬಿ ಹಾಗೂ ಅಂಬಿಗರಕೇರಿ ಭಾಗಗಳಲ್ಲಿ ವ್ಯಾಪಕವಾಗಿ ನೀರಿನ ಕೊರತೆ ಉಂಟಾಗಿದೆ. ಒಟ್ಟು 195 ಕುಟುಂಬಗಳ 805 ಜನರು ಕುಡಿಯುವ ನೀರಿಗಾಗಿ ಪರದಾಡುವ ಪರಿಸ್ಥಿತಿ ಎದುರಾಗಿದೆ. ಈ ಭಾಗಗಳಿಗೆ ನೀರು ಪೂರೈಸುತ್ತಿದ್ದ ದೇವರಬೋಳೆಯ ಸಮೀಪದ ಕೊಳವೆ ಬಾವಿಯಲ್ಲಿಯೂ ನೀರಿನ ಮಟ್ಟ ಕುಸಿದಿರುವುದರಿಂದ ಸರಬರಾಜು ಸ್ಥಗಿತಗೊಂಡಿದೆ. ಪರಿಣಾಮವಾಗಿ ಗ್ರಾಮಗಳಿಗೆ ನಿಯಮಿತವಾಗಿ ನೀರು ಒದಗಿಸಲು ಸಾಧ್ಯವಾಗುತ್ತಿಲ್ಲ ಎಂದು ಹೆಗಡೆ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು ತಿಳಿಸಿದ್ದಾರೆ. ಈ ಕುರಿತು ಶಾಸಕ ದಿನಕರ ಶೆಟ್ಟಿ, ಕುಮಟಾ ತಹಶೀಲ್ದಾರ್, ತಾಪಂ ಇಒ ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಪತ್ರ ಬರೆದು, ತಕ್ಷಣ ಟ್ಯಾಂಕರ್ ಮೂಲಕ ನೀರು ಪೂರೈಸುವಂತೆ ಮನವಿ ಮಾಡಲಾಗಿದೆ.

ಸ್ಥಳೀಯರಾದ ಮುಕ್ತಾ, ಜಯ, ದೇವಕಿ, ನಾಗೇಶ ಸಾರಿಂಗ ನಾಯ್ಕ, ನಾಗರಾಜ ಮುಕ್ರಿ, ಪರಮೇಶ್ವರ ನಾಯ್ಕ, ಮೋಹನ ನಾಯ್ಕ, ರೇಖಾ ನಾಯ್ಕ, ಸರಸ್ವತಿ ನಾಯ್ಕ ಸೇರಿದಂತೆ ಅನೇಕರು ಹೆಗಡೆ ಗ್ರಾಪಂ ಕಚೇರಿಗೆ ತೆರಳಿ ಪಿಡಿಒ ಅವರಿಗೆ ಮನವಿ ಸಲ್ಲಿಸಿದ್ದಾರೆ.ದೇವರಬೋಳೆಯ ಕೊಳವೆಬಾವಿಯಿಂದ ನೀರು ಪೂರೈಕೆ ಮಾಡಲಾಗುತ್ತಿತ್ತು.ಆದರೆನಾಲ್ಕುದಿನಗಳಿಂದ ನೀರು ಬರುತ್ತಿಲ್ಲ, ಕೊಳವೆ ಬಾವಿಯಲ್ಲಿ ನೀರು ಕಡಿಮೆಯಾಗಿದೆ ಎಂದು ತಿಳಿಸಿದ್ದಾರೆ. ಕುಡಿಯಲು ಹಾಗೂ ಜಾನುವಾರುಗಳಿಗೆ ನೀರಿಲ್ಲದೆ ಜನರು ಸಂಕಷ್ಟ ಅನುಭವಿಸುತ್ತಿದ್ದಾರೆ. ತಕ್ಷಣ ಟ್ಯಾಂಕರ್ ಮೂಲಕ ನೀರು ಪೂರೈಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ.

> ಹೆಗಡೆ ಗ್ರಾಪಂ ವ್ಯಾಪ್ತಿಯಲ್ಲಿ ನೀರಿನ ಕೊರತೆ ಇರುವ ಮಾಹಿತಿ ಗಮನಕ್ಕೆ ಬಂದಿದೆ. ಸಮಸ್ಯೆಯ ಕುರಿತು ವರದಿ ಸಲ್ಲಿಸಲು ಸೂಚಿಸಿದ್ದೇನೆ. ಪರಿಶೀಲನೆ ಬಳಿಕ ಅಗತ್ಯ ಕ್ರಮ ಕೈಗೊಳ್ಳಲಾಗುವುದು
> ■ ಶ್ರೀಕೃಷ್ಣ ಕಾಮಕರ್ ,ಕುಮಟಾ ತಹಶೀಲ್ದಾರ್



ಭಿತ್ತಿಪತ್ರ ಬಿಡುಗಡೆಗೊಳಿಸಿದ ಸಚಿವ ವೈದ್ಯ



ಕಾರವಾರ: ಜಿಲ್ಲಾ ಆಡಳಿತ, ಜಿಪಂ, ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಆಹಾರ ನಾಗರಿಕ ಸರಬರಾಜು ನಿಗಮ ನಿ. ಹಾಗೂ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಉತ್ತರ ಕನ್ನಡ ವತಿಯಿಂದ ಸಿದ್ದಪಡಿಸಿರುವ ಗ್ರಾಹಕರ ಸಹಾಯವಾಣಿ ಸಂಖ್ಯೆಗಳ ಕುರಿತ ಭಿತ್ತಿಪತ್ರವನ್ನು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್ ವೈದ್ಯ ಸೋಮವಾರ ಜಿಪಂನಲ್ಲಿ ಬಿಡುಗಡೆಗೊಳಿಸಿದರು. ಶಿರಸಿ ಶಾಸಕ ಭೀಮಣ್ಣ ನಾಯ್ಕ್, ಜಿಲ್ಲಾಧಿಕಾರಿ ಕೆ. ಲಕ್ಷ್ಮೀ ಪ್ರಿಯಾ, ಜಿಪಂ ಸಿಇಒ ಡಾ.ದಿಲೀಷ್ ಶಶಿ ಇದ್ದರು.

ನಾಳೆ ನಮ್ಮೂರ ಹೋಳಿ ಸಂಭ್ರಮಾಚರಣೆ

ಭಟ್ಕಳ: ಧಾರ್ಮಿಕ ಆಚರಣೆ ಮೂಲಕ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಮುರ್ಡೇಶ್ವರ ಬೀಚ್‌ನಲ್ಲಿ ಮಾ.4ರಂದು ಸಂಜೆ 5 ಗಂಟೆಯಿಂದ ಊರ ಜನರ ಸಹಕಾರದಿಂದ ನಮ್ಮೂರ ಹೋಳಿ ಸಂಭ್ರಮ 2026 ವಿಜ್ರಂಭಣೆಯಿಂದ ನಡೆಸಲು ಉದ್ದೇಶಿಸಲಾಗಿದೆ ಎಂದು ಬೀನಾ ವೈದ್ಯ ಶಿಕ್ಷಣ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ಪುಷ್ಪಲತಾ.ಎಂ. ವೈದ್ಯ ಹೇಳಿದರು.

ಮುರ್ಡೇಶ್ವರದ ಆರೆನ್ನೆಸ್ ಮಿನಿ ಸಭಾಭವನದಲ್ಲಿ ಸೋಮವಾರ ಸಂಜೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುರ್ಡೇಶ್ವರದಲ್ಲಿ ಈ ಸಲದಿಂದ ನಮ್ಮೂರ ಹೋಳಿ ಸಂಭ್ರಮ ವಿಜ್ರಂಭಣೆಯಿಂದ ಆಚರಿಸಲಾಗುತ್ತಿದೆ. ಮಾ. 4ರ ಸಂಜೆ 5 ಗಂಟೆಗೆ ಮುರುಡೇಶ್ವರ ದೇವರಿಗೆ ಪೂಜೆ ಸಲ್ಲಿಸಿ ಹೋಳಿ ಸಂಭ್ರಮಕ್ಕೆ ರಾಜ್ಯದ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಮತ್ತು ಉಕ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಅವರು ಚಾಲನೆ ನೀಡಲಿದ್ದಾರೆ. ಹೋಳಿ ಸಂಭ್ರಮದಲ್ಲಿ ಹೋಳಿ ಕುಣಿತ, ಬಣ್ಣದ ಮಡಿಕೆ ಒಡೆಯುವುದು, ರಂಗೀಲಾ ಹಬ್ಬ (ಬಣ್ಣ ಹಚ್ಚುವುದು) ಕಾಮದಹನ, ಮಳೆ ನೃತ್ಯ, ಲೈವ್ ಡಿಜೆ, ಸಮುದ್ರ ಸ್ನಾನ ಮುಂತಾದ ಕಾರ್ಯಕ್ರಮ ನಡೆಯಲಿದೆ. ಹೋಳಿ ಹಬ್ಬದ ಸಂಭ್ರಮಾಚರಣೆಯಲ್ಲಿ ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ ಹೋಳಿ ಆಡಲು ಅವಕಾಶ ಕಲ್ಪಿಸಲಾಗಿದೆ. ಕಾರ್ಯಕ್ರಮದಲ್ಲಿ ಹೆಚ್ಚಿನ ಜನರು ಪಾಲ್ಗೊಳ್ಳುವುದರ ಮೂಲಕ ಹೋಳಿ ಸಂಭ್ರಮವನ್ನುಯಶಸ್ವಿಗೊಳಿಸಬೇಕು ಎಂದು ಹೇಳಿದರು. ಮುರುಡೇಶ್ವರ ನಾಗರಿಕ ಹಿತರಕ್ಷಣಾ ವೇದಿಕೆಯ ಅಧ್ಯಕ್ಷ ಎಸ್.ಎಸ್. ಕಾಮತ್ ಮಾತನಾಡಿದರು. ಭಟ್ಕಳ ಅರ್ಬನ್ ಬ್ಯಾಂಕ್ ನಿರ್ದೇಶಕಿ ಬೀನಾ ವೈದ್ಯ, ಮಾವಳ್ಳಿ ಗ್ರಾಪಂ ಮಾಜಿ ಅಧ್ಯಕ್ಷೆ ನಯನಾ ನಾಯ್ಕ, ಸತೀಶ ನಾಯ್ಕ, ನಾಗೇಶ ನಾಯ್ಕ ಇದ್ದರು.



ಸುಧನ್ವಾರ್ಜುನ ಯಕ್ಷಗಾನ ಪ್ರದರ್ಶನ

ಸಿದ್ದಾಪುರ: ತಾಲೂಕಿನ ತ್ಯಾಗಲಿಯ ಲಕ್ಷ್ಮೀ ನರಸಿಂಹದೇವರರಥೋತ್ಸವವುವಿವಿಧಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಶನಿವಾರ ನಡೆಯಿತು.



ತ್ಯಾಗಲಿ ರಥಬೀದಿಯ ಸದಾಸನ್ನಯ ವೇದಿಕೆ ಸ್ಥಳೀಯರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಂತರ ಸೇವಾಭಿನಂದನೆ ಹಾಗೂ ಸಾಧನಾಭಿನಂದನೆ ಕಾರ್ಯಕ್ರಮ ಗಣ್ಯರ ಉಪಸ್ಥಿತಿಯಲ್ಲಿ ನಡೆಯಿತು. ನಂತರ ಶಬರ ಸಂಸ್ಥೆ ಸೋಂದಾ ಹಾಗೂ ಸರಸ್ವತಿ ಕಲಾಟ್ರಸ್ಟ್ ಹೊಸಗದ್ದೆ ಇದರ ಬಾಲಕಲಾವಿದರಿಂದ ಸುಧನ್ವಾರ್ಜುನ ಯಕ್ಷಗಾನ ಪ್ರದರ್ಶನಗೊಂಡಿತು. ಹಿಮ್ಮೇಳದಲ್ಲಿ ಶ್ರೀಪಾದ ಹೆಗಡೆ ಬಾಳೆಗದ್ದೆ, ಮಂಜುನಾಥ ಹೆಗಡೆ ಕಂಚಿಮನೆ, ಗಣೇಶ ಗಾಂವ್ಕರ್ ಯಲ್ಲಾಪುರ ಸಹಕರಿಸಿದರು. ಮುಮ್ಮೇಳದಲ್ಲಿ ಅಭಯ ಹೆಗಡೆ ಹೊಸಗದ್ದೆ, ಭೂಮಿಕಾ ಹೆಗಡೆ ಹೊಸಗದ್ದೆ, ಮೌಲ್ಯ ಹೆಗಡೆ ಕಸಕುಣಿ, ಆದಿತ್ಯ ಹೆಗಡೆ ಹೊನ್ನೆಹದ್ದ, ಅಮಿತ್ ಭಟ್ಟ ಮಾಣಿಕ್ಯನಮನೆ, ಜನಾರ್ಧನ ತೊಂಡೆಮಡಕಿ ಇವರು ವಿವಿಧ ಪಾತ್ರನಿರ್ವಹಿಸಿ ಮೆಚ್ಚುಗೆಗಳಿಸಿದರು. ಈ ಸಂದರ್ಭದಲ್ಲಿ ದೇವಸ್ಥಾನ ಆಡಳಿತ ಮಂಡಳಿಯ ಅಧ್ಯಕ್ಷ ವೆಂಕಟರಮಣ ಎಂ.ಹೆಗಡೆ ಶಿಂಗು, ಕಾರ್ಯದರ್ಶಿ ರವಿ ಗೋಪಾಲ ಹೆಗಡೆ ಹಾಗೂ ಪದಾಧಿಕಾರಿಗಳು, ಶಬರ ಸಂಸ್ಥೆಯ ನಾಗರಾಜ ಜೋಶಿ ಸೋಂದಾ, ಸರಸ್ವತಿ ಕಲಾಟ್ರಸ್ಟ್‌ನ ಪಿ.ವಿ.ಹೆಗಡೆ ಹೊಸಗದ್ದೆ, ಪ್ರಸನ್ನ ಹೆಗಡೆ ಮತ್ತು ಸ್ಥಳೀಯ ಪ್ರಮುಖರು ಉಪಸ್ಥಿತರಿದ್ದರು.



ಮುಂಡಗೋಡ: ಕಳೆದ 17ವರ್ಷಗಳಿಂದ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ, ಹುಟ್ಟೂರಿಗೆ ಮರಳಿದ ಯೋಧ ರಮೇಶ ಅಂಬ್ರೇನವರ ಅವರಿಗೆ ತಾಲೂಕಿನ ಜನತೆಯ ಪರವಾಗಿ ಯೋಧನ ಸ್ನೇಹಿತರು, ಬಾಚಣಕಿ ಗ್ರಾಮಸ್ಥರು ಅದ್ದೂರಿಯಾಗಿ ಸ್ವಾಗತಿಸಿದರು.ನಿವೃತ್ತಿಯಾದ ತಾಲೂಕಿನ ಯೋಧರು ಮತ್ತು ಹಾಲಿ ಯೋಧರು ರಮೇಶ ಮತ್ತು ದಂಪತಿಗೆ ಸನ್ಮಾನಿಸಿ ಶುಭ ಕೋರಿದರು.



ಮುಂಡಗೋಡ: ಸೋಮವಾರ ಪಿಎಂಶ್ರೀ ಶಾಸಕ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ಆರ್ಥಿಕ ಸಾಕ್ಷರಾತ ಶಿಕ್ಷಣಯಡಿಯಲ್ಲಿ ಮಕ್ಕಳ ಸಂತೆಯನ್ನು ವಿ.ಎಸ್ ಪಾಟೀಲ ಉದ್ಘಾಟಿಸಿದರು.ಶಾಲೆಯ ಆವರಣದಲ್ಲಿ ಸಣ್ಣ ಸಣ್ಣ ಸ್ಟಾಲ್ ರೀತಿಯಲ್ಲಿ ತೆರಿದು ಮಕ್ಕಳ ಸ್ವತಃ ಹಣದಿಂದ ವಿವಿಧ ಆಹಾರ ಪದಾರ್ಥಗಳನ್ನು ತಯಾರಿಸಿ ಮಾರಾಟ ಮಾಡುತ್ತಿರುವುದು ಆಕರ್ಷಕವಾಗಿತ್ತು.

ಇಂದು ಸುಗ್ಗಿ ಕುಣಿತ, ವಿಡಂಬನಾತ್ಮಕ ಹಗರಣ ಪ್ರದರ್ಶನ

▸ ನಾಗರಾಜ ಶೆಟ್ಟಿ

ಅಂಕೋಲಾ: ಹೋಳಿ ಹುಣ್ಣಿಮೆಯ ದಿನದಂದು ಪಟ್ಟಣದಲ್ಲಿ ಜಾತ್ರೆಯ ವಾತಾವರಣ ಸೃಷ್ಟಿಸುವ ಬೆಳಂಬಾರದ ಹಾಲಕ್ಕಿ ಒಕ್ಕಲಿಗರ ಸುಗ್ಗಿ ಕುಣಿತ ಮತ್ತು ವಿಡಂಬನಾತ್ಮಕ ಹಗರಣ ಪ್ರದರ್ಶನ ಇಂದು(ಮಾರ್ಚ್ 3) ನಡೆಯಲಿದ್ದು, ನೂರಾರು ವರ್ಷಗಳ ಇತಿಹಾಸ ಇರುವ ಬೆಳಂಬಾರದ ಸುಗ್ಗಿ ಕುಣಿತ ಪ್ರತಿ ವರ್ಷ ನಿರಂತರವಾಗಿ ಮುಂದುವರಿದು ಬರುವ ಮೂಲಕ ತನ್ನ ಹಿರಿಮೆಯನ್ನು ತೋರುತ್ತಿದ್ದು, ತಾಲೂಕು ಆಡಳಿತದಿಂದ ಸರ್ಕಾರಿ ಗೌರವ ಪಡೆಯುತ್ತಿದೆ.

ಬ್ರಿಟಿಷ್ ಆಡಳಿತದ ಕಾಲದಲ್ಲಿ ಆಂಗ್ಲ ಅಧಿಕಾರಿಗಳ ಮನ ಗೆಲ್ಲುವಲ್ಲಿ ಯಶಸ್ವಿಯಾಗಿದ್ದ, ಬೆಳಂಬಾರದ ಹಾಲಕ್ಕಿ ಸಮಾಜದ ಸುಗ್ಗಿ ಕುಣಿತ ನೋಡಲೆಂದೇ ಅಂದಿನ ಕಾಲದಲ್ಲಿ ಬ್ರಿಟಿಷ್ ಸರ್ಕಾರದ ವಿವಿಧ ಶ್ರೇಣಿಯ ಹಿರಿಯ ಅಧಿಕಾರಿಗಳು ಬಂದು ಸುಗ್ಗಿ ಕುಣಿತ ನೋಡಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರಂತೆ, ಹೀಗೆ ಸುಗ್ಗಿ ಕುಣಿತಕ್ಕೆ ಮನ್ನಣೆ ನೀಡಿ ಬ್ರಿಟಿಷ್ ಅಧಿಕಾರಿಗಳು ಅಂದು ತಾಮ್ರಪತ್ರದ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿ ಪ್ರತಿ ವರ್ಷ ತಾಲೂಕು ಕಚೇರಿ ಎದುರು ಸುಗ್ಗಿ ಕುಣಿತ ನಡೆಸುವಂತೆ ಆಹ್ವಾನ ನೀಡಿದ್ದರು.



ಸ್ವಾತಂತ್ರ್ಯದ ನಂತರ ಸರ್ಕಾರದ ವತಿಯಿಂದ ಸಹ ಬೆಳಂಬಾರದ ಹಾಲಕ್ಕಿ ಸಮಾಜದ ಸುಗ್ಗಿ ಕುಣಿತ ತಾಲೂಕು ಕಚೇರಿ ಎದುರು ಪ್ರದರ್ಶನ ನೀಡಿ ಗೌರವ ಪಡೆಯುವಂತೆ ಆಹ್ವಾನ ನೀಡಿದ್ದರಿಂದ ಇಂದಿಗೂ ತಾಮ್ರಪತ್ರ ಪ್ರದರ್ಶನ ಮಾಡಿ ತಹಶೀಲ್ದಾರ ಕಚೇರಿ ಎದುರು ಸುಗ್ಗಿ ಕುಣಿತ ಪ್ರದರ್ಶನ ನೀಡಲಾಗುತ್ತಿದ್ದು, ತಾಲೂಕು ಆಡಳಿತದ ವತಿಯಿಂದ ತಾಲೂಕು ದಂಡಾಧಿಕಾರಿಗಳು ಸುಗ್ಗಿ ತಂಡಕ್ಕೆ ಗೌರವ ಸಲ್ಲಿಸುವ ಸಂಪ್ರದಾಯ ಮುಂದುವರಿದು ಬಂದಿದೆ.ಸುಗ್ಗಿ ಕುಣಿತದ ಜೊತೆಗೆ ನಡೆಯುವ ವಿಡಂಬನಾತ್ಮಕ ಆಣಕು ಪ್ರದರ್ಶನದ ಮೂಲಕ ಸಮಾಜದಲ್ಲಿ ನಡೆಯುತ್ತಿರುವ ಶೋಷಣೆ, ದೌರ್ಜನ್ಯ, ಭ್ರಷ್ಟಾಚಾರ, ಅಧಿಕಾರ ಲಾಲಸೆ, ರಾಜಕೀಯ ಘಟನೆ, ಲೋಪದೋಷಗಳನ್ನು ತಮಾಷೆಯ ರೀತಿಯಲ್ಲಿ ಪ್ರದರ್ಶಿಸಲಾಗುತ್ತದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಅಂದು ಬ್ರಿಟಿಷರು ಎಸಗುತ್ತಿರುವ ದೌರ್ಜನ್ಯಗಳನ್ನು ಸಹ ಹಗರಣ ರೂಪದಲ್ಲಿ ವಿಡಂಬನೆ ಮಾಡಿ ಆಡಳಿತ ವ್ಯವಸ್ಥೆಗೆ ಬಿಸಿ ಮುಟ್ಟಿಸಿದ ಹೆಗ್ಗಳಿಕೆ ಬೆಳಂಬಾರದ ಹಾಲಕ್ಕಿ ಒಕ್ಕಲಿಗರ ಹಗರಣಕ್ಕಿದೆ.

ಇತ್ತೀಚಿಗೆ ಹಗರಣಗಳಲ್ಲಿ ವಿಡಂಬನೆಗಳ ಜೊತೆಗೆ ತಾಂತ್ರಿಕ ಕೌಶಲ್ಯಗಳನ್ನು ಹೊಂದಿರುವ ಪೌರಾಣಿಕ, ಐತಿಹಾಸಿಕ ರೂಪಕಗಳು ಕಂಡು ಬರುತ್ತಿವೆ. ಜಾನಪದ ಸೊಗಡಿನ ಜೊತೆಗೆ ಐತಿಹಾಸಿಕ ಮಹತ್ವ ಹೊಂದಿರುವ ಬೆಳಂಬಾರದ ಸುಗ್ಗಿ ತಂಡಕ್ಕೆ ಸರ್ಕಾರದ ವಿಶೇಷ ಸಹಾಯಧನ ಸಿಗುವಂತಾಗಬೇಕು ಎನ್ನುವ ಆಗ್ರಹ ಬಹಳ ವರ್ಷಗಳಿಂದ ಕೇಳಿ ಬರುತ್ತಿದ್ದು ಆ ದಿಶೆಯಲ್ಲಿ ಪ್ರಯತ್ನ ಆಗಬೇಕಿದೆ.

> ಬೆಳಂಬಾರದ ಸುಗ್ಗಿ ತಂಡ ನೂರಾರು ವರ್ಷಗಳಿಂದ ಹೋಳಿ ಹುಣ್ಣಿಮೆಯ ದಿನ ತಾಲೂಕು ಕಚೇರಿ ಎದುರು ಕುಣಿದು ತಹಶೀಲ್ದಾರರಿಂದ ಗೌರವ ಸ್ವೀಕರಿಸುವುದು ಹೆಮ್ಮೆಯ ಸಂಗತಿಯಾಗಿದ್ದು, ನಿರಂತರವಾಗಿ ಸಂಪ್ರದಾಯ ನಡೆದು ಬರುತ್ತಿದೆ.
> ■ ಷಣ್ಮುಖ ಗೌಡ ಊರ ಗೌಡರು, ಬೆಳಂಬಾರ

> ವ್ಯವಸ್ಥೆಯಲ್ಲಿನ ಲೋಪ ದೋಷಗಳನ್ನು ಹೋಳಿ ಹಬ್ಬದ ಸಂದರ್ಭದಲ್ಲಿ ಹಗರಣಗಳ ಮೂಲಕ ವಿಡಂಬನಾತ್ಮಕವಾಗಿ ಪ್ರದರ್ಶಿಸಿ ಗಮನ ಸೆಳೆಯುವುದು ಹಿಂದಿನಿಂದಲೂ ನಡೆದು ಬಂದಿದ್ದು ವಿಡಂಬನೆಗಳು ಸಮಾಜದಲ್ಲಿ ನಡೆಯುತ್ತಿರುವ ಘಟನೆಗಳನ್ನೇ ಒಳಗೊಂಡಿರುತ್ತದೆ.
> ■ ಹನುಮಂತ ಗೌಡ,ಜಾನಪದ ನಾಟಿ ವೈದ್ಯರು ಬೆಳಂಬಾರ

ಮಾ.10ರಂದು ಬೃಹತ್ ಪ್ರತಿಭಟನಾ ಸಮಾವೇಶ

ಹೊನ್ನಾವರ: ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಕೈಬಿಡುವಂತೆ ಸರ್ಕಾರದ ಗಮನ ಸೆಳೆಯಲು ಬೃಹತ್ ಪ್ರತಿಭಟನಾ ಜನ ಸಮಾವೇಶ ಮಾ.10ರಂದು ಪಟ್ಟಣದ ಸೆಂತ್ ಅಂಥೋನಿ ಮೈದಾನದಲ್ಲಿ ಬೆಳಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ ಎಂದು ಹೋರಾಟದ ಸಮಿತಿಯ ಕಾರ್ಯಾಧ್ಯಕ್ಷ ಚಂದ್ರಕಾಂತ ಕೊಚರೇಕರ ತಿಳಿಸಿದರು.

ಪಟ್ಟಣದ ಮೂಡಗಣಪತಿ ಸಭಾಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿ ನಿರಂತರವಾಗಿ ಮೂರು ವರ್ಷದಿಂದ ಈ ಯೋಜನೆಯನ್ನು ಕೈಬಿಡುವಂತೆ ಹೋರಾಟ ನಡೆಯುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಸಮಿತಿ ವತಿಯಿಂದ ಮನವಿ ನೀಡಿ ಹಕ್ಕೋತ್ತಾಯ ಮಾಡಲಾಗಿದೆ. ಜಿಲ್ಲಾಧಿಕಾರಿಗಳ ಸಭೆಯಲ್ಲಿ ವಿಜ್ಞಾನಿಗಳು ಶರಾವತಿ ನದಿಯಲ್ಲಿ ಉದ್ದೇಶಿತ ಯೋಜನೆ ಜಾರಿಯಾದಲ್ಲಿ ಶರಾವತಿ ನದಿ ತೀರದ ಪ್ರದೇಶಗಳು ಪರಿಸರ ಸೂಕ್ಷ್ಮ ವಲಯವಾಗಿದ್ದು, ಜಾರಿ ಮಾಡಿದ್ದರೆ ಹೊನ್ನಾವರ ವಿನಾಶವಾಗುವ ಸಾಧ್ಯತೆಯು ಇದೆ. ಇದನ್ನು ಮನಗಂಡು ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತೀ ಸ್ವಾಮೀಜಿ ನೇತೃತ್ವದಲ್ಲಿ, ಮುಲೆಗದ್ದೆ ಹೊಸನಗರದ ಸದಾನಂದ ಶಿವಯೋಗ ಆಶ್ರಮದ ಅಭಿನವ ಚೆನ್ನಬಸವ ಸ್ವಾಮೀಜಿ, ಬ್ರಹರ್ಶಿ ನಾರಾಯಣಗುರು ಪೀಠ ಬೆಂಗಳೂರಿನ ಡಾ.ಪ್ರಣವಾನಂದ ಸ್ವಾಮೀಜಿ, ಗೇರುಸೊಪ್ಪಾದ ಮಾರುತಿ ಗುರೂಜಿ ಇವರ ದಿವ್ಯ ಉಪಸ್ಥಿತಿಯಲ್ಲಿ ಹೋರಾಟ ನಡೆಯಲಿದೆ.



ಸಮಾವೇಶದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕ ಶಾಸಕ ದಿನಕರ ಶೆಟ್ಟಿ, ಮಾಜಿ ಸಚಿವ ಆರ್.ಎನ್.ನಾಯ್ಕ, ಶಿವಾನಂದ ನಾಯ್ಕ, ಮಾಜಿ ಶಾಸಕ ಜೆ.ಡಿ.ನಾಯ್ಕ ಸುನೀಲ ನಾಯ್ಕ, ಮೂರು ಪಕ್ಷದ ಜಿಲ್ಲಾಧ್ಯಕ್ಷರು, ಬ್ಲಾಕ್ ಅಧ್ಯಕ್ಷರನ್ನು ಆಹ್ವಾನಿಸಲಾಗುತ್ತಿದೆ ಎಂದರು. ಹೋರಾಟ ಸಮಿತಿಯ ಅಧ್ಯಕ್ಷ ಉದ್ಯಮಿ ವೆಂಕ್ರಟಮಣ ಹೆಗಡೆ ಕವಲಕ್ಕಿ ಮಾತನಾಡಿದರು.,ಸಂಘಟನೆಯ ಪ್ರಮುಖರಾದ ಕೇಶವ ನಾಯ್ಕ ಬಳ್ಕೂರು, ಟಿ.ಟಿ.ನಾಯ್ಕ, ಮತ್ತಿತರು ಮಾಹಿತಿ ನೀಡಿದರು. ಮೀನುಗಾರ ಮುಖಂಡ ಶಿವರಾಜ ಮೇಸ್ತ ಮಾತನಾಡಿದರು. ರಾಜೇಶ ಭಂಡಾರಿ, ವಿಶ್ವನಾಥ ನಾಯಕ, ಮಂಗಲದಾಸ ನಾಯ್ಕ, ಮಂಜುನಾಥ ನಾಯ್ಕ, ಎಂ.ಎಸ್.ಹೆಗಡೆ ಕಣ್ಣಿ, ಜಿ.ಪಂ. ಮಾಜಿ ಸದಸ್ಯೆ ಶ್ರೀಕಲಾ ಶಾಸ್ತ್ರಿ, ಯೊಗೀಶ ಮೇಸ್ತ, ವಿಘ್ನೇಶ್ವರ ಹೆಗಡೆ, ಮಹೇಶ ಮೇಸ್ತ, ಟಿ.ಟಿ.ನಾಯ್ಕ, ರಾಜೇಶ ತಾಂಡೇಲ್, ಜಿ.ಎನ್. ಗೌಡ, ಕೇಶವ ನಾಯ್ಕ ಬಳ್ಕೂರು, ಅನಂತ ನಾಯ್ಕ ಹೆಗ್ಗಾರ, ಗಣೇಶ ಹೆಗಡೆ, ಗುರುಪ್ರೀಯ ಶೆಟ್ಟಿ, ದರ್ಶನ ನಾಯ್ಕ, ಕಾರ್ತಿಕ ಗೌಡ ಇತರರು ಉಪಸ್ಥಿತರಿದ್ದರು.

ಕಿರುಸುದ್ದಿ

ವಿದೇಶದಲ್ಲಿ ಸಿಲುಕಿದ ಕನ್ನಡಿಗರ ರಕ್ಷಣೆಗೆ ಸಹಾಯವಾಣಿ

ಹಾವೇರಿ: ಮಧ್ಯಪ್ರಾಚ್ಯ ಹಾಗೂ ಕೊಲ್ಲಿ ದೇಶಗಳಲ್ಲಿ ಯುದ್ಧ ಸಂಭವಿಸಿದ್ದು, ಅಪಾರ ಪ್ರಮಾಣದ ಸಾವು ನೋವು ಸಂಭವಿಸಿದೆ. ಈ ದೇಶಗಳಲ್ಲಿ ಕರ್ನಾಟಕ ರಾಜ್ಯದ ಹಲವರು ಸಿಲುಕಿಕೊಂಡಿರುವ ಮಾಹಿತಿ ಇದೆ. ಹಾವೇರಿ ಜಿಲ್ಲೆಯ ಯಾರಾದರೂ ಈ ಯುದ್ಧ ಪೀಡಿತ ದೇಶಗಳಲ್ಲಿ ಸಿಲುಕಿದ್ದಲ್ಲಿ ಆಯಾ ದೇಶಗಳ ಭಾರತೀಯ ರಾಯಭಾರಿ ಕಚೇರಿಗಳ ಕಂಟ್ರೋಲ್ ರೂಂ ಅಥವಾ ಜಿಲ್ಲಾ ಕಚೇರಿಯ ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರದ ದೂರವಾಣಿಗೆ ಕರೆಮಾಡಿ ಮಾಹಿತಿ ನೀಡಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಸಹಾಯವಾಣಿ ಸಂಖ್ಯೆ: ಇಸ್ರೇಲ್ -972-54-7520711, ಇರಾನ್-989128109115, 989128109109, 99128109102, 989932179359, ಸೌದಿಅರೇಬಿಯಾ: ರಿಯಾದ-00-966-11-4884697, ವಾಟ್ಸಾಪ್ -00-966-542126748, ಟೋಲ್ ಫ್ರೀ-800 247 1234, ಜೆಡ್ಡಾ- ವಾಟ್ಸಾಪ್ 966536209704, ಲ್ಯಾಂಡ್ ಲೈನ್-00966126648660, 00966122614093, ಮೊ.966556122301, ಟೋಲ್ ಫ್ರೀ-8002440003, ಯುಎಇ ಟೋಲ್ ಫ್ರೀ-800-46342, ವಾಟ್ಸಾಪ್ -971543090571, ಕತಾರ್-00974-55647502, ಬಹರೈನ್-00973-39418071, ಜೋರ್ಡಾನ್ -00962-770422276, ಒಮನ್- ಟೋಲ್ ಫ್ರೀ-80071234, ವಾಟ್ಸಾಪ್-96898282270, ಇರಾಕ್-9647716511185(ಇಂಗ್ಲೀಷ್ ಮತ್ತು ಹಿಂದಿ), 9647704444899(ಅರಬಿಕ್) ಕುವೈತ್ -96565501946, ಪ್ಯಾಲೆಸ್ಟೀನ್-970592916418 ಅಥವಾ ಹಾವೇರಿ ಜಿಲ್ಲೆಯ ವಿಪತ್ತು ನಿರ್ವಹಣಾ (24★7) ಕೇಂದ್ರ ದೂರವಾಣಿ ಸಂಖ್ಯೆ 08375-249102 ಸಂಪರ್ಕಿಸ ಬಹುದೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಯು 2ನೇ ಪರೀಕ್ಷೆ ಸುಗಮ


ಹಾವೇರಿ: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಹಿನ್ನೆಲೆ ಎರಡನೇ ದಿನವಾದ ಸೋಮವಾರ ಜಿಲ್ಲೆಯ 25 ಪರೀಕ್ಷಾ ಕೇಂದ್ರಗಳಲ್ಲಿ ಭೂಗೋಳಶಾಸ್ತ್ರ ಹಾಗೂ ಸಂಖ್ಯಾಶಾಸ್ತ್ರ ವಿಷಯದ ಪರೀಕ್ಷೆಗಳು ಸುಗಮ ಮತ್ತು ಶಾಂತಿಯುತವಾಗಿ ನಡೆದವು. ಭೂಗೋಳ ಶಾಸ್ತ್ರ ವಿಷಯದ ಪರೀಕ್ಷೆಗೆ ಒಟ್ಟು 4,165 ವಿದ್ಯಾರ್ಥಿಗಳು ನೊಂದಾಯಿಸಿಕೊಂಡಿದ್ದು, 3,943 ವಿದ್ಯಾರ್ಥಿಗಳು ಹಾಜರಾಗಿ, 222 ವಿದ್ಯಾರ್ಥಿಗಳು ಗೈರಾಗಿದ್ದರು. ಅದೇ ರೀತಿ ಸಂಖ್ಯಾಶಾಸ್ತ್ರ ವಿಷಯದ ಪರೀಕ್ಷೆಗೆ 431 ವಿದ್ಯಾರ್ಥಿಗಳು ನೊಂದಾಯಿಸಿಕೊಂಡಿದ್ದರೆ, 422 ವಿದ್ಯಾರ್ಥಿಗಳು ಹಾಜರಾಗಿದ್ದರು. 9 ವಿದ್ಯಾರ್ಥಿಗಳು ಗೈರಾಗಿದ್ದರು. ಒಟ್ಟಾರೆ ಎರಡು ಪರೀಕ್ಷೆಗಳ ಪೈಕಿ ಶೇ.94.66ರಷ್ಟು ವಿದ್ಯಾರ್ಥಿಗಳು ಹಾಜರಾಗಿದ್ದರು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಕಚೇರಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀಗಂಧ ಬೇಸಾಯ ತರಬೇತಿ

ಹಾವೇರಿ: ಹನುಮನಮಟ್ಟಿ ಐ.ಸಿ.ಎ.ಆರ್-ಕೃಷಿ ವಿಜ್ಞಾನ ಕೇಂದ್ರ, ಹಾವೇರಿ ಹಾಗೂ ಬೆಂಗಳೂರು ಮರ ವಿಜ್ಞಾನ ಮತ್ತು ತಾಂತ್ರಿಕ ಸಂಸ್ಥೆ ಸಹಯೋಗದಲ್ಲಿ ಹಾವೇರಿ ಜಿಲ್ಲೆಯ ರೈತ, ರೈತ ಮಹಿಳೆಯರಿಗೆ ಶ್ರೀಗಂಧ ಬೇಸಾಯದ ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮ ಮಾ.5ರಂದು ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯ ರೈತ, ರೈಮಹಿಳೆಯರು ಬೆಳಗ್ಗೆ 10ಗಂಟೆಗೆ ರಾಣೇಬೆನ್ನೂರು ತಾಲ್ಲೂಕಿನ ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಹಾಜರಾಗಿ ತರಬೇತಿ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗು ಮುಖ್ಯಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಗಣೇಶಪ್ಪ ಅಡ್ಮನಿ



ಹಾವೇರಿ: ಇಲ್ಲಿಯ ಸ್ವಾಮಿ ವಿವೇಕಾನಂದನಗರದ ನಿವಾಸಿ ಗಣೇಶಪ್ಪ ನಿಂಗಪ್ಪ ಅಡ್ಮನಿ (80) ಶನಿವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗದವರನ್ನು ಅಗಲಿದ್ದಾರೆ.

ಎಫ್.ಐ. ಶಿಗ್ಲಿ



ಹಾವೇರಿ: ತಾಲೂಕಿನ ಹೊಸರಿತ್ತಿಯ ಜಿ.ವಿ.ಹಳ್ಳಿಕೇರಿ ಪದವಿಪೂರ್ವ ಕಾಲೇಜಿನ ಪ್ರಾ. ಎಫ್.ಐ. ಶಿಗ್ಲಿ (59) ಭಾನುವಾರ ನಿಧನರಾದರು. ಮೃತರಿಗೆ ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗವಿದೆ. ರಾಷ್ಟ್ರೀಯ ಶಿಕ್ಷಣ ಸಮಿತಿಯ ಆಡಳಿತ ಮಂಡಳಿ ಪದಾಧಿಕಾರಿಗಳು, ಸದಸ್ಯರು, ಉಪನ್ಯಾಸಕರು, ಅಪಾರ ಸಂಖ್ಯೆಯ ವಿದ್ಯಾರ್ಥಿಗಳು ಸಂತಾಪ ಸೂಚಿಸಿದ್ದಾರೆ.



ಬ್ಯಾಡಗಿ: ಕರ್ನಾಟಕ ದಲಿತ ಸಂಘ ಸಮಿತಿ ಪರಿವರ್ತನಾವಾದ ಕಾರ್ಮಿಕ ಘಟಕ ಹಾವೇರಿ ಜಿಲ್ಲಾ ಪ್ರಧಾನ ಸಂಘಟನಾ ಸಂಚಾಲಕರಾಗಿ ಬ್ಯಾಡಗಿಯ ಪಟ್ಟಣದ ಪರಮೇಶ್ ಶೇಖಪ್ಪ ತಳವಾರ್ ಇವರನ್ನು ಮೂರು ವರ್ಷಗಳ ಅವಧಿಗೆ ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಉಪಾಧ್ಯಕ್ಷರಾದ ಪ್ರಕಾಶ ಕೆಮ್ಮಣ್ಣಕೇರಿ ಆದೇಶ ಪತ್ರ ನೀಡಿದರು. ಈ ಸಂದರ್ಭದಲ್ಲಿ ಮಾರುತಿ ಹಂಜಿಗಿ, ಹರೀಶ್ ಸರ್ವಧೆ ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಯೋಜನಾಬದ್ಧ ಜೀವನದ ದಾರಿ ಅನುಸರಿಸಿ

ಹಾನಗಲ್ಲ: ತಪ್ಪಿಗೆ ಶಿಕ್ಷೆ ತಪ್ಪಿದ್ದಲ್ಲ, ಕಾನೂನು ಜ್ಞಾನದ ಕೊರತೆಯಿಂದ ಜೀವನವನ್ನೇ ಹಾಳು ಮಾಡಿಕೊಳ್ಳುವ ದುರಂತಕ್ಕೆ ಸಾಕ್ಷಿಯಾಗಬೇಕಾದೀತು, ಸಣ್ಣ ತಪ್ಪು ದೊಡ್ಡ ಅನಾಹುತಕ್ಕೆ ದಾರಿಯಾಗುವಂತಾಗುವುದು ಬೇಡ ಎಂದು ನ್ಯಾಯವಾದಿ ರವಿಬಾಬು ಪೂಜಾರ ತಿಳಿಸಿದರು. ತಾಲೂಕಿನ ಆಡೂರಿನಲ್ಲಿ ಹಾನಗಲ್ಲಿನ ಕುಮಾರೇಶ್ವರ ಶಿಕ್ಷಣ ಮಹಾವಿದ್ಯಾಲಯ ಆಯೋಜಿಸಿದ ವಾರ್ಷಿಕ ರಾಷ್ಟ್ರೀಯ ಯೋಜನಾ ಶಿಬಿರ ಹಾಗೂ ಹಾನಗಲ್ಲ ನ್ಯಾಯಾಲದ ಉಚಿತ ಕಾನೂನು ನೆರವು ಸಮಿತಿ ಸಹಯೋಗದಲ್ಲಿ ಕಾನೂನು ಅರಿವು ನೆರವು ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಕಾನೂನು ನಿರಪರಾಧಿಯನ್ನು ರಕ್ಷಿಸುತ್ತದೆ. ಅಪರಾಧಿಯನ್ನು ಶಿಕ್ಷಿಸುತ್ತದೆ. ನಾಳೆಯ ನಮ್ಮ ಬದುಕಿಗಾಗಿ ಈಗಲೇ ಒಂದಷ್ಟು ಯೋಜನಾಬದ್ಧ ಜೀವನದ ದಾರಿಯನ್ನು ಅನುಸರಿಸಿ ಎಂದು ಕರೆ ನೀಡಿದರು. ಮುಖ್ಯ ಅತಿಥಿಯಾಗಿ ಮಾತನಾಡಿದ ಸಾಹಿತಿ ಪ್ರೊ. ಮಾರುತಿ ಶಿಡ್ಲಾಪೂರ, ವೇಗದ ಬದಲಾವಣೆಯು ಯುಗದಲ್ಲಿರುವ ನಮಗೆ ಯೋಜನಾ ಬದ್ಧವಾದ ಜೀವನ ವಿಧಾನ ಬೇಕಾಗಿದೆ. ಇಂದು ಇಡೀ ಜಗತ್ತು ಅಂಗೈಯಲ್ಲಿದೆ. ದ್ವೇಷ ಅಸೂಹೆಗಳನ್ನು ಬಿಟ್ಟು ಪ್ರೀತಿ ವಿಶ್ವಾಸದಿಂದ ಬದುಕುವ ಯತ್ನ ನಮ್ಮದಾಗಿರಲಿ ಎಂದರು. ಅಧ್ಯಕ್ಷತೆವಹಿಸಿ ಮಾತನಾಡಿದ ಎನ್‌ಎಸ್‌ಎಸ್ ಯೋಜನಾಧಿಕಾರಿ ಡಾ.ವಿಶ್ವನಾಥ ಬೊಂದಾಡೆ, ಮಾತನಾಡಿದರು. ನ್ಯಾಯಾಲಯದ ಸಿಬ್ಬಂದಿ ಸಂತೋಷ ಮಾಳಗಿ ಅತಿಥಿಗಳಾಗಿದ್ದರು. ವಿದ್ಯಾ ಸಂಗಡಿಗರು ಪ್ರಾರ್ಥಿಸಿದರು. ಜೆ.ಸ್ವಾತಿ ಸ್ವಾಗತಿಸಿದರು. ಕಾವ್ಯಾ ಮಲಗುಂದ ನಿರೂಪಿಸಿದರು.



ಹಾನಗಲ್ಲ: ತಾಲೂಕಿನ ಆಡೂರಿನಲ್ಲಿ ಹಾನಗಲ್ಲಿನ ಕುಮಾರೇಶ್ವರ ಶಿಕ್ಷಣ ಮಹಾವಿದ್ಯಾಲಯ ಆಯೋಜಿಸಿದ ವಾರ್ಷಿಕ ರಾಷ್ಟ್ರೀಯ ಯೋಜನಾ ಶಿಬಿರ ಹಾಗೂ ಹಾನಗಲ್ಲ ನ್ಯಾಯಾಲದ ಉಚಿತ ಕಾನೂನು ನೆರವು ಸಮಿತಿ ಸಹಯೋಗದಲ್ಲಿ ಕಾನೂನು ಅರಿವು ನೆರವು ಕಾರ್ಯಕ್ರಮ ನಡೆಯಿತು.

ಮೂರ್ತಿ ಅನಾವರಣ | ಸಚಿವ ಸತೀಶ ಜಾರಕಿಹೊಳಿ ಅಭಿಮತ

ದಾರ್ಶನಿಕರ ತತ್ವಾದರ್ಶದ ಅರಿವು ಮೂಡಿಸಿ

ರಾಣೇಬೆನ್ನೂರ: ಸಮಾಜದಲ್ಲಿ ಬುದ್ಧ, ಬಸವ ಹಾಗೂ ಅಂಬೇಡ್ಕರ್ ಸೇರಿ ಎಲ್ಲ ದಾರ್ಶನಿಕರ ಮೂರ್ತಿಗಳ ಪ್ರತಿಷ್ಠಾಪನೆ ಮಾಡುವ ಮೂಲಕ ಇಂದಿನ ಮಕ್ಕಳಿಗೆ ಅವರ ತತ್ವಾದರ್ಶಗಳ ಕುರಿತು ಅರಿವು ಮೂಡಿಸಬೇಕು. ಆ ಮೂಲಕ ಮಕ್ಕಳನ್ನು ಸಮಾಜದಲ್ಲಿ ಸಂಸ್ಕಾರವಂತರನ್ನಾಗಿ ಮಾಡಬೇಕು ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ತಾಲೂಕಿನ ವೈ.ಟಿ. ಹೊನ್ನತ್ತಿ ಗ್ರಾಮದ ಮಹರ್ಷಿ ವಾಲ್ಮೀಕಿ ನಾಯಕ ಕ್ಷೇಮಾಭಿವೃದ್ಧಿ ಸಂಘದಿಂದ ಪ್ರತಿಷ್ಠಾಪಿಸಿದ ವೀರಮದಕರಿ ನಾಯಕನ ಮೂರ್ತಿ ಸೋಮವಾರ ಅನಾವರಣಗೊಳಿಸಿ ಅವರು ಮಾತನಾಡಿದರು.

ಯಾವ ಮಕ್ಕಳು ಇತಿಹಾಸ ಓದಿ ತಿಳಿದುಕೊಳ್ಳುತ್ತಾರೋ ಅವರು ಇತಿಹಾಸ ಸೃಷ್ಟಿಸುತ್ತಾರೆ. ವೀರಮದಕರಿ ನಾಯಕ ಸೇರಿ ಎಲ್ಲ ದಾರ್ಶನಿಕರು ನಿಮಗೆಲ್ಲ ದಾರಿದೀಪವಾಗಬೇಕು. ಎಲ್ಲ ಸಮಾಜದ ಜನತೆ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಗ್ರಾಮೀಣ ಭಾಗದಲ್ಲಿ ಶಿಕ್ಷಣ ಮಹತ್ವ ಹೆಚ್ಚಿಸಲು ವಸತಿ ಶಾಲೆಗಳನ್ನು ತೆರೆಯಲಾಗಿದೆ. ಅವುಗಳ ಬಳಕೆ ಮಾಡಿಕೊಳ್ಳಬೇಕು ಎಂದರು.

ಸ್ವಾತಂತ್ರ್ಯ ಪೂರ್ವದಲ್ಲಿ ಇಲ್ಲದ ಶಿಕ್ಷಣವನ್ನು ಸಂವಿಧಾನ ಬಂದ ಮೇಲೆ ಶಿಕ್ಷಣ ಕಲಿಯಲು ಅವಕಾಶ ಎಲ್ಲರಿಗೂ ದೊರೆತಿದೆ. ಮಠಗಳ ಮೂಲಕವೂ ರಾಜ್ಯದಲ್ಲಿ ಶೈಕ್ಷಣಿಕ ಕ್ರಾಂತಿ ನಡೆಯುತ್ತಿದೆ. ವಾಲ್ಮೀಕಿ ಸಮಾಜದಿಂದಲೂ ತಿಂಥಣಿಯಲ್ಲಿ 18 ಎಕರೆ ಜಾಗದಲ್ಲಿ ಮಠ ನಿರ್ಮಿಸಲಾಗುತ್ತಿದ್ದು, ಇದರ ಉದ್ದೇಶ ಮಕ್ಕಳಿಗೆ ಶಿಕ್ಷಣ ಕೊಡುವುದಾಗಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಬಿಜೆಪಿ ಎಸ್ಟಿ ಮೋರ್ಚಾದ ರಾಜ್ಯಾಧ್ಯಕ್ಷ ಬಂಗಾರು ಹನುಮಂತು ಮಾತನಾಡಿ, ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ಶಿಕ್ಷಣದಿಂದ ಎಲ್ಲ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ ಎಂದರು.

ಪುಣ್ಯಕೋಟಿ ಮಠದ ಜಗದೀಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶಾಸಕ ಪ್ರಕಾಶ ಕೋಳಿವಾಡ ಅಧ್ಯಕ್ಷತೆ ವಹಿಸಿದ್ದರು.

ವಿಧಾನಸಭೆ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಂಜೀವಕುಮಾರ ನೀರಲಗಿ, ಮಾಜಿ ಶಾಸಕ ಅರುಣಕುಮಾರ ಪೂಜಾರ, ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಎಸ್.ಆರ್. ಪಾಟೀಲ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜಣ್ಣ ಮೋಟಗಿ, ವಾಲ್ಮೀಕಿ ಸಮಾಜದ ತಾಲೂಕು ಅಧ್ಯಕ್ಷ ಚಂದ್ರಣ್ಣ ಬೇಡರ, ಮಹರ್ಷಿ ವಾಲ್ಮೀಕಿ ನಾಯಕ ಕ್ಷೇಮಾಭಿವೃದ್ಧಿ ಸಂಘ ಅಧ್ಯಕ್ಷ ಚಂದ್ರು ಬನ್ನಿಹಟ್ಟಿ, ಸಂತೋಷಕುಮಾರ ಪಾಟೀಲ, ರವೀಂದ್ರಗೌಡ ಪಾಟೀಲ, ಹನುಮಂತಪ್ಪ ಮೀನಕಟ್ಟಿ, ರವೀಂದ್ರಗೌಡ ಪಾಟೀಲ, ದರ್ಶನ ಲಮಾಣಿ, ಏಳುಕೋಟೆಪ್ಪ ಬ್ಯಾಡಗಿ, ಮಂಜುನಾಥ ಓಲೇಕಾರ, ಬಸವರಾಜ ಚಳಗೇರಿ, ಪುಟ್ಟಪ್ಪ ಮರಿಯಮ್ಮನವರ ಹಾಗೂ ವಾಲ್ಮೀಕಿ ಸಮಾಜದ ಜಿಲ್ಲಾ, ತಾಲೂಕು ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕರ್ತರು ಮತ್ತಿತರರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



> ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದಾಗ ಎಸ್ಟಿಯವರಿಗೆ ಶೇ. 7ರಷ್ಟು ಮೀಸಲಾತಿ ನೀಡಿತ್ತು. ಆದರೀಗ ಉದ್ಯೋಗದಲ್ಲಿ ಕೇವಲ ಶೇ. 3ರಷ್ಟು ಮಾತ್ರ ನೀಡಲಾಗುತ್ತಿದೆ. ಆದ್ದರಿಂದ ಸಚಿವ ಸತೀಶ ಜಾರಕಿಹೊಳಿಯವರು ಉದ್ಯೋಗದಲ್ಲೂ ಶೇ. 7ರಷ್ಟು ಮೀಸಲಾತಿ ಕೊಡಲಿಸಲು ಪ್ರಯತ್ನಿಸಬೇಕು.
> ■ ಬಂಗಾರು ಹನುಮಂತು, ಬಿಜೆಪಿ ಎಸ್ಟಿ ಮೋರ್ಚಾದ ರಾಜ್ಯಾಧ್ಯಕ್ಷ

ಮನೆ ಮನಗಳಲ್ಲಿ ಹಿಂದೂ ಧರ್ಮ ಕಟ್ಟಿ

ಶಿಗ್ಗಾವಿ: ನಮ್ಮನ್ನು ನಾವು ಮೊದಲು ಪ್ರೀತಿಸಬೇಕು, ನಮ್ಮ ದೇಶದ ಪರಂಪರೆ ಕಾಪಾಡಬೇಕು, ಮೊದಲು ಮನೆ ಮನಗಳಲ್ಲಿ ಹಿಂದೂ ಧರ್ಮವನ್ನು ಕಟ್ಟಬೇಕು, ಸನಾತನ ಧರ್ಮದಉಳಿವಿನಿಂದ ಎಲ್ಲವೂ ಉಳಿಯಲು ಸಾಧ್ಯವಿದೆ ಎಂದು ರಾಣೆಬೆನ್ನೂರ ಹಿರೇಮಠದ ಶಿವಯೋಗಿ ಶಿವಾಚಾರ್ಯ ಶ್ರೀಗಳು ಹೇಳಿದರು.

ಪಟ್ಟಣದ ಸಂತೆ ಮೈದಾನದಲ್ಲಿ ಹಿಂದೂ ಸಮ್ಮೇಳನ ಸಮಿತಿಯಿಂದ ಹಮ್ಮಿಕೊಂಡ ಹಿಂದೂ ಸಮ್ಮೇಳನದಲ್ಲಿ ಮಾತನಾಡಿದ ಅವರು, ಹಿಂದೂ ಸಂಘಟನೆ ಮುಂದಿನ ಪೀಳಿಗೆಗಾಗಿ ನಡೆಯುತ್ತಿದೆ, ಇದು ನಮ್ಮ ಧರ್ಮ ಜಾಗೃತಿ ಕಾರ್ಯಕ್ರಮ, ಕತ್ತರಿಯು ಕತ್ತರಿಸುವ ಕಾರ್ಯ ಮಾಡಿದರೆ, ಸೂಜಿಯಂತೆ ಆರ್‌ಆರ್‌ಎಸ್ ಕೂಡಿಸುವಂತ ಕೆಲಸ ಮಾಡುತ್ತಾ ಬರುತ್ತಿದೆ, ಮಾತಿಗಿಂತ ಮನಸ್ಸಿನಲ್ಲಿ ಹಿಂದೂ ಧರ್ಮವಿರಲಿ, ಮನಸ್ಸುಗಳು ಪರಿವರ್ತನೆಯಾಗಬೇಕು, ಎದುರಾಳಿಗೆ ಕುಂಕುಮ ಉತ್ತರ ನೀಡುವಂತೆ ಕುಂಕುಮ ಧಾರಣೆ ಮಾಡಿ, ನಮ್ಮ ಪಾತ್ರವನ್ನು ಸರಿಯಾಗಿ ನಿರ್ವಹಿಸಬೇಕು ಎಂದರು.

ವಿರಕ್ತಮಠದ ಸಂಗನಬಸವ ಶ್ರೀಗಳು ಮಾತನಾಡಿ, ದೇಶವನ್ನೇ ದೋಚಿದವರು ಇಂದು ದೇಶದ ಇತಿಹಾಸ ತಿಳಿಯಬೇಕಿದೆ, ಜಾತಿ ವ್ಯವಸ್ಥೆಯಿಂದ ಮುರ್ಖರಾಗಿದ್ದೇವೆ. ನಮ್ಮ ಧರ್ಮವನ್ನು ಪಾಲಿಸಬೇಕು. ಪರಧರ್ಮವನ್ನು ಗೌರವಿಸಬೇಕು. ಧರ್ಮದ ತತ್ವವನ್ನು ತಿಳಿಯಬೇಕಿದೆ. ವಿದ್ಯೆಯ ಜೊತೆಗೆ ಸಂಸ್ಕಾರ ನೀಡಬೇಕು. ಧರ್ಮ ರಕ್ಷಣೆಗೆ ಎಲ್ಲರೂ ಮುಂದಾಗಿ ಎಂದರು.

ವಾಗ್ಮಿ ಶ್ರೀಕಾಂತ ಹೊಸಕೇರಾ ಮಾತನಾಡಿ, ದೇಶದ ಸಂಸ್ಕೃತಿ ನಂಬಿಕೆ ಹಾಳು ಮಾಡಲು ಪ್ರಯತ್ನ ನಡೆದಿವೆ. ಎಡಪಂತಿಯರಿಂದ ನಂಬಿಕೆ ಕೆಡಿಸುವ ಕೆಲಸ ನಡೆದಿದೆ. ಪರಂಪರೆ ಉಳಿಸುವಲ್ಲಿ ಕೆಲವರು ಮೈಮರೆತರು, ಆದರೂ ಪರಂಪರೆ ನಾಶ ಆಗಿಲ್ಲ, ಕಾರಣ ಅಂತಹ ನಾಯಕರು ನಮ್ಮಲ್ಲಿ ಇದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಹುಟ್ಟಿಕೊಂಡ ಆರ್‌ಆರ್‌ಎಸ್ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಇತಿಹಾಸವಿದೆ ಎಂದರು.

ಹಿಂದೂ ಸಮ್ಮೇಳನ ಸಮಿತಿಯ ಅಧ್ಯಕ್ಷ ಶಶಿಧರ ಸುರಗಿಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದಕ್ಕೂ ಮುನ್ನ ತಾಲೂಕು ಕ್ರೀಡಾಂಗಣದ ಗ್ರಾಮದೇವಿ ಪಾದಗಟ್ಟಿಯಿಂದ ಆರಂಭವಾದ ಶೋಭಾಯಾತ್ರೆ ಪ್ರಮುಖ ಬೀದಿಗಳಲ್ಲಿ ಪೂರ್ಣಕುಂಭ ಹೊತ್ತ ಮಹಿಳೆಯರು ಹಾಗೂ ವಿವಿಧ ಶರಣರ ಭಾವಚಿತ್ರದ ಮೆರವಣಿಗೆ ಸಾಗಿ ಸಂತೆ ಮೈದಾನ ಸೇರಿತು.

ಸಮಿತಿ ಕಾರ್ಯದರ್ಶಿ ರಾಘವೇಂದ್ರ ದೇಶಪಾಂಡೆ, ಸಂಜನಾ ರಾಯ್ಕರ್ ಸೇರಿದಂತೆ ಹಿಂದೂ ಸಮ್ಮೇಳನ ಸಮಿತಿಯ ಸದಸ್ಯರು, ಹಿಂದೂ ಅಭಿಮಾನಿಗಳು ಇದ್ದರು. ರಾಜು ಕೆಂಬಾವಿ ಸ್ವಾಗತಿಸಿದರು. ಕಿತ್ತೂರಾಣಿ ಚನ್ನಮ್ಮ ಪ್ರಶಸ್ತಿ ಪುರಸ್ಕೃತೆ ಭಾರತಿ ಛಬ್ಬಿ ಸ್ವರಚಿತ ದೇಶಭಕ್ತಿ ಗೀತೆ ಹಾಡಿ ಪ್ರಾರ್ಥಿಸಿದರು.



ಗ್ರಾಮೀಣ ಕ್ರೀಡೆ ಪ್ರೋತ್ಸಾಹಿಸಿ: ಪ್ರಕಾಶಗೌಡ ಪಾಟೀಲ

ಹಾನಗಲ್ಲ: ಗ್ರಾಮೀಣ ಪ್ರದೇಶದ ಯುವಕರನ್ನು ಉತ್ತೇಜಿಸುವ ಮೂಲಕ ಗ್ರಾಮೀಣ ಸೊಗಡನ್ನು ಉಳಿಸಬಹುದಾಗಿದೆ. ದೇಶೀಯ ಕ್ರೀಡೆಗಳು ನಶಿಸಿ ಹೋಗದಂತೆ ಕಾಪಾಡುವ ಹೊಣೆ ನಮ್ಮೆಲ್ಲರದ್ದಾಗಿದೆ ಎಂದು ಕೆಪಿಸಿಸಿ ಕಾರ್ಯದರ್ಶಿ ಪ್ರಕಾಶಗೌಡ ಪಾಟೀಲ ಹೇಳಿದರು.

ತಾಲೂಕಿನ ರಾಮತೀರ್ಥ ಹೊಸಕೊಪ್ಪ ಗ್ರಾಮದಲ್ಲಿ ದುರ್ಗಾದೇವಿ ಜಾತ್ರೆ ಅಂಗವಾಗಿ ಗಜಾನನ ಸ್ಪೋರ್ಟ್ಸ್ ಕ್ಲಬ್ ಆಯೋಜಿಸಿದ್ದ ಹೊನಲು ಬೆಳಕಿನ ಮ್ಯಾಟ್ ಕಬಡ್ಡಿ ಪಂದ್ಯಾವಳಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚೆಗೆ ಯುವ ಸಮುದಾಯದಲ್ಲಿ ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳ ಆರ್ಭಟದಲ್ಲಿ ಕ್ರೀಡಾ ಮನೋಭಾವ ಕುಂಠಿತಗೊಳುತ್ತಿದೆ. ಮೊಬೈಲ್‌ನಲ್ಲಿ ಮುಳುಗುತ್ತಿರುವ ಯುವ ಸಮುದಾಯ ಮಾನಸಿಕ ಒತ್ತಡ ಹಾಗೂ ಖಿನ್ನತೆಗೆ ಒಳಗಾಗುತ್ತಿರುವ ಆತಂಕ ಎದುರಾಗಿದೆ. ಯುವಕರು ಕ್ರೀಡೆಗಳಲ್ಲಿ ತೊಡಗುವುದರಿಂದ ದೈಹಿಕ ಆರೋಗ್ಯ ಮತ್ತು ಮಾನಸಿಕ ಉಲ್ಲಾಸವನ್ನು ಪಡೆದುಕೊಳ್ಳಲು ಸಾಧ್ಯವಿದೆ.

ಯುವಕರು ತಮ್ಮಲ್ಲಿರುವ ಪ್ರತಿಭೆಯನ್ನು ಅಭಿವ್ಯಕ್ತಿಸಿ, ತಮ್ಮದೇಯಾದ ವಿಶೇಷ ಛಾಪನ್ನು ಮೂಡಿಸಬೇಕು ಎಂದು ಹೇಳಿದರು.

ಜಿಪಂ ಮಾಜಿ ಸದಸ್ಯ ರಾಘವೇಂದ್ರ ತಹಶೀಲ್ದಾರ ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಇಂಥ ಸ್ಪರ್ಧೆಗಳನ್ನು ಆಯೋಜಿಸುವ ಅಗತ್ಯವಿದೆ. ಯುವಕರು ದುಶ್ಚಟಗಳಿಗೆ ಬಲಿಯಾಗದಂತೆ ಕಾಪಾಡಲು ಕ್ರೀಡೆಗಳು ಸಹಕಾರಿಯಾಗುತ್ತವೆ. ತಮ್ಮ ಉದ್ಯೋಗ -ವ್ಯವಹಾರಗಳೊಂದಿಗೆ ಯುವ ಸಂಘಟನೆಗಳನ್ನು ಕಟ್ಟಿ ಕ್ರೀಡಾ ಕ್ಷೇತ್ರದಲ್ಲಿ ತೊಡಗಿಕೊಳ್ಳಬೇಕು. ಯುವಜನ ಕ್ರೀಡಾ ಇಲಾಖೆ ಯುವ ಸಂಘಟನೆಗಳಿಗೆ ಅವಕಾಶಗಳನ್ನು ಸೃಷ್ಟಿಸುವುದಲ್ಲದೇ ತರಬೇತಿಗಳನ್ನೂ ನೀಡುತ್ತದೆ. ಯುವಕರು ಇದರ ಸದುಪಯೋಗ ಪಡೆದುಕೊಳ್ಳಬೇಕಿದೆ ಎಂದು ಹೇಳಿದರು.

ಯುವ ಮುಖಂಡ ಅಣ್ಣಪ್ಪ ಚಾಕಾಪೂರ, ಸಂಘಟಕರಾದ ವಿಜಯಾನಂದ ಸುಬ್ಬಣ್ಣನವರ, ಕೇದಾರಪ್ಪ ಟಾಕಣ್ಣನವರ, ಶಿವಕುಮಾರ ಮಾಂಗ್ಲೇನವರ, ಜಗದೀಶ ಚನ್ನಯ್ಯನವರ, ಮಂಜುನಾಥ ಟಾಕಣ್ಣನವರ, ಮಂಜುನಾಥ ಸಾಲಿ ಇತರರಿದ್ದರು.



ಸರ್ಕಾರಿ ಶಾಲೆಗಳ ಕೊಡುಗೆ ಅಪಾರ: ಡಾ.ವೀರಾಪುರ

ಬ್ಯಾಡಗಿ: ಸರ್ಕಾರಿ ಶಾಲೆಗಳ ಮಕ್ಕಳು ವಿದ್ಯಾಭ್ಯಾಸದ ಸಂದರ್ಭದಲ್ಲಿ ದೊಡ್ಡ ದೊಡ್ಡ ಗುರಿಗಳನ್ನು ಇಟ್ಟುಕೊಳ್ಳಬೇಕೆಂದು ಡಾ. ಬಸವರಾಜ ವೀರಾಪುರ ಹೇಳಿದರು.

ತಾಲೂಕಿನ ಗುಂಡೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕ ಸ್ನೇಹ ಸಮಾರಂಭ ಉದ್ಘಾಟಿಸಿ ಮಾತನಾಡಿ, ಸರ್ಕಾರಿ ಶಾಲೆಗಳು ಸಮುದಾಯದ ಬಹು ದೊಡ್ಡ ಆಸ್ತಿಯಾಗಿದೆ. ದೇಶ ರಾಜ್ಯಕ್ಕೆ ಬೇಕಾದ ಮಾನವ ಸಂಪನ್ಮೂಲವನ್ನು ಒದಗಿಸುವಲ್ಲಿ ಸರ್ಕಾರಿ ಶಾಲೆಗಳು ಬಹುದೊಡ್ಡ ಕೊಡುಗೆಯನ್ನು ನೀಡಿವೆ. ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳು ವಿದ್ಯಾಭ್ಯಾಸದ ಸಂದರ್ಭದಲ್ಲಿ ಬಹುದೊಡ್ಡ ಗುರಿಯನ್ನು ಇಟ್ಟುಕೊಳ್ಳಬೇಕು. ಆ ನಿಟ್ಟಿನಲ್ಲಿ ವಿದ್ಯಾಭ್ಯಾಸವನ್ನು ಮಾಡಬೇಕು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ವಿರೂಪಾಕ್ಷಪ್ಪ ಬಳ್ಳಾರಿ ಮಾತನಾಡಿ, ಹಿಂದೆ ತೋಳ್ಬಲ, ಹಣ್ಬಲ ಇದ್ದವರು ಆಳ್ವಿಕೆ ಮಾಡುತ್ತಿದ್ದರು. ಈಗ ಕಾಲ ಬದಲಾಗಿದೆ. ಜ್ಞಾನವುಳ್ಳವರು ಆಳುವಂತಹ ಕಾಲವಾಗಿದೆ. ಸರ್ಕಾರಿ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಗಮನವಿಟ್ಟು ಅಧ್ಯಯನ ಮುಂದುವರೆಸಬೇಕು ಎಂದರು.

ಅಧ್ಯಕ್ಷತೆಯನ್ನು ಪ್ರಶಾಂತ ಹೊಸಮನಿ ವಹಿಸಿದ್ದರು. ಉಪಾಧ್ಯಕ್ಷರಾದ ಶ್ರುತಿ ಲಮಾಣಿ ಎಸ್ಡಿಎಂಸಿ ಸದಸ್ಯರಾದ ಮಲ್ಲಿಕಾರ್ಜುನಗೌಡ ಪಾಟೀಲ, ಕಲವೀರಪ್ಪ ಹುಣಸಿಕಟ್ಟಿ, ಕರಬಸಪ್ಪ ಆನ್ವೇರಿ, ಪ್ರಕಾಶಲಮಾಣಿ, ಫಕ್ಕೀರಪ್ಪ ಹೊಂಬರಡಿ, ಯಲ್ಲಪ್ಪ ಯರ್ಾವಣ್ಣನವರ, ಟೋಪಣ್ಣ ಲಮಾಣಿ, ಬಸವರಾಜ ಲಮಾಣಿ, ಮಂಗಳಾ ಶಿಗ್ಗಾವಿ, ನೇತ್ರಾವತಿ ಯತ್ನಳ್ಳಿ, ಶಿಲ್ಪಾ ಆನವಟ್ಟಿ, ಶೋಭಾ ಮಾಳಗಿ, ಈರಮ್ಮ ಮನ್ನಂಗಿ, ಶಾಂತಮ್ಮ ಲಮಾಣಿ, ಮರಿಯಪ್ಪ ಮಾಳಗಿ, ಪ್ರಮುಖರಾದ ಶಿವಾನಂದ ಹಟ್ಟಿಯವರ, ಚಂದ್ರಶೇಖರ ತಾವರಗೊಪ್ಪ , ಶಿಕ್ಷಕರಾದ ಜಿ ಬಿ ಮಾಗಳ, ವಿ ಡಿ ಅಕ್ಕೂರ, ಚಂದ್ರಶೇಖರ ಹೊನ್ನಪ್ಪನವರ, ಎನ್ ಬಿ ಅಬಲೂರು, ಚೈತ್ರರಾವ್ ಟಿ ಎಸ್, ಡಿ ಜಿ ಕಮದೋಡ, ಸುನಿತಾ ಟಿ, ಹೊನ್ನಪ್ಪ ತಳವಾರ, ಕೆ ಎಸ್ ಪಾಟೀಲ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಶಿಕ್ಷಕ ಮಲ್ಲಪ್ಪ ಕರೇಣ್ಣನವರ ಕಾರ್ಯಕ್ರಮ ನಿರ್ವಹಿಸಿದರು.



ಹೋಳಿ ಹಬ್ಬ: ವಿವಿಧೆಡೆ ಮದ್ಯ ಮಾರಾಟ ನಿಷೇಧ

ಹಾವೇರಿ: ರಂಗಪಂಚಮಿ ಅಂಗವಾಗಿ ಜಿಲ್ಲೆಯಲ್ಲಿ ಶಾಂತಿಪಾಲನೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವಸಲುವಾಗಿ ಮಾ.3ರಿಂದ13ರವರೆಗೆ ವಿವಿಧ ಸ್ಥಳಗಳಲ್ಲಿ ಮದ್ಯ ಮಾರಾಟ ನಿಷೇಧಿಸಿ ಜಿಲ್ಲಾಧಿ ಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ. ವಿಜಯ ಮಹಾಂತೇಶ ದಾನಮ್ಮನವರ ಆದೇಶ ಹೊರಡಿಸಿದ್ದಾರೆ.

ಮಾ.3ರ ಬೆಳಗ್ಗೆ 6ರಿಂದ ಮಾ.5ರ ಬೆಳಗ್ಗೆ 6 ರವರೆಗೆ ಹಾವೇರಿ ಶಹರದಲ್ಲಿ, ಮಾ.3ರ ಬೆಳಗ್ಗೆ 6ರಿಂದ ಮಾ.4ರ ಬೆಳಗ್ಗೆ 6ರವರೆಗೆ ಹಾವನೂರು, ಯಲಗಚ್ಚ, ದೇವಿಹೊಸೂರ, ಹಿರೇಹಳ್ಳಿ, ಕವಲೆತ್ತು, ಕರೂರು, ಕೋಡಿಯಾಲ, ಮಾಕನೂರು, ಕೂಸನೂರ, ಕಲಕೇರಿ, ಮುತ್ತಳ್ಳಿ, ಹಿರೇಮರಳಿಹಳ್ಳಿ, ಹುರಳಿಕೊಪ್ಪಿ, ಹಿರೇಬೆಂಡಿಗೇರಿ ಗ್ರಾಮಗಳಲ್ಲಿ, ಮಾ.4ರ ಬೆಳಗ್ಗೆ 6 ರಿಂದ ಮಾ.5ರ ಬೆಳಗ್ಗೆ 6ರವರೆಗೆ ರಾಣೇಬೆನ್ನೂರು ಶಹರ, ಗುತ್ತಲ, ಹೊಸರಿತ್ತಿ, ದೇವಗಿರಿ, ಕರ್ಜಗಿ, ಮೆಡ್ಲೇರಿ, ಅರೆಮಲ್ಲಾಪುರ, ಹಿರೇಬಿದರಿ, ಕಜ್ಜರಿ, ಕಾಕೋಳ, ಹಲಗೇರಿ, ಕುಪ್ಪೇಲೂರ, ತಡಸ, ಹತ್ತಿಮೂರು, ಯಲವಿಗಿ, ಕಡಕೋಳ ಹಾಗೂ ಹುಲಗೂರ ಗ್ರಾಮಗಳಲ್ಲಿ, ಮಾ.5ರ ಬೆಳಗ್ಗೆ 6 ರಿಂದ ಮಾ.6ರ ಬೆಳಗ್ಗೆ 6 ರವರೆಗೆ ಮಾಸೂರ, ನೀಡನೇಗಿಲು, ರಟ್ಟಿಹಳ್ಳಿ, ತುಮ್ಮಿನಕಟ್ಟಿ, ಕಂಚಿನೆಗಳೂರು, ಮಾ.6ರ ಬೆಳಗ್ಗೆ 6 ರಿಂದ ಮಾ.8ರ ಬೆಳಗ್ಗೆ 6ರವರೆಗೆ ಸವಣೂರು ಹಾಗೂ ಶಿಗ್ಗಾಂವ ಪಟ್ಟಣಗಳಲ್ಲಿ, ಮಾ.7ರ ಬೆಳಗ್ಗೆ 6 ರಿಂದ ಮಾ.8ರ ಬೆಳಗ್ಗೆ 6ರವರೆಗೆ ಮೋಟೆಬೆನ್ನೂರು, ಕೋಡ, ಬೆಟಕೇರೂರು, ಆಡೂರ, ತಿಳವಳ್ಳಿ, ಹೇರೂರ, ನರೇಗಲ್, ಕಲ್ಲಾಪುರ, ಬಂಕಾಪೂರ, ಮುನವಳ್ಳಿ ಗ್ರಾಮ ಹದ್ದಿನ ಪಂಚವಟಿ ಹೋಟೆಲ್ ಪ್ರದೇಶದಲ್ಲಿ, ಮಾ.7ರ ಬೆಳಗ್ಗೆ 6 ರಿಂದ ಮಾ.9ರ ಬೆಳಗ್ಗೆ 6ರವರೆಗೆ ಹಾನಗಲ್ ಪಟ್ಟಣದಲ್ಲಿ, ಮಾ.8ರ ಬೆಳಗ್ಗೆ 6ರಿಂದ ಮಾ.9ರ ಬೆಳಗ್ಗೆ 6 ರವರೆಗೆ ಬ್ಯಾಡಗಿ, ಹಂಸಭಾವಿ, ಚಿಕ್ಕೇರೂರ, ಬೊಮ್ಮನಹಳ್ಳಿ, ಚಿಕ್ಕಾಂಶಿ ಹೊಸೂರ, ಬೆಳಗಾಳಪೇಟೆ, ಮಾ.10ರ ಬೆಳಗ್ಗೆ 6 ರಿಂದ ಮಾ.12ರ ಬೆಳಗ್ಗೆ 6ರವರೆಗೆ ಅಕ್ಕಿಆಲೂರು ಹಾಗೂ ಮಾ.12ರ ಬೆಳಿಗ್ಗೆ 6 ರಿಂದ ಮಾ.13ರ ಬೆಳಗ್ಗೆ 6ರವರೆಗೆ ಹಿರೇಕೆರೂರು ಹಾಗೂ ತಾವರಗಿಯಲ್ಲಿ ಮದ್ಯ ಮಾರಾಟ ನಿಷೇಧಿಸಲಾಗಿದೆ.

ಜಿಲ್ಲಾ ಪೊಲೀಸ್ ಓಟಕ್ಕೆ ಎಸ್ಪಿ ವಂಟಗೋಡಿ ಚಾಲನೆ

ಹಾವೇರಿ: 'ನಮ್ಮ ಪೊಲೀಸ್ ನಮ್ಮ ಹೆಮ್ಮೆ' ಘೋಷವಾಕ್ಯದೊಂದಿಗೆ ಆಯೋಜಿಸಲಾಗಿದ್ದ ಹಾವೇರಿ ಜಿಲ್ಲಾ ಪೊಲೀಸ್ ಓಟಕ್ಕೆ ನಗರದ ಜಿಲ್ಲಾ ಪೊಲೀಸ್ ಕಚೇರಿ ಆವರಣದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ಚಾಲನೆ ನೀಡಿದರು.

ಪುರುಷರಿಗೆ 5 ಮತ್ತು 10ಕೆ ಹಾಗೂ ಮಹಿಳೆಯರಿಗೆ 5ಕೆ ಓಟ ಆಯೋಜಿಸಲಾಗಿತ್ತು. ಹಾವೇರಿ ನಗರ ಸೇರಿದಂತೆ ವಿವಿಧ ತಾಲುಕುಗಳಿಂದ ಆಗಮಿಸಿದ ಮಕ್ಕಳಾದಿಯಾಗಿ ಎಲ್ಲ ವಯೋಮಾನದ ಪುರುಷ ಹಾಗೂ ಮಹಿಳೆಯರು ಅತ್ಯಂತ ಉತ್ಸಾಹದಿಂದ ಓಟದಲ್ಲಿ ಭಾಗವಹಿಸಿದ್ದರು.

ಬಹುಮಾನ ವಿತರಣೆ: ಪುರುಷರ 10 ಕೆ ಓಟದಲ್ಲಿ ಮಂಜುನಾಥ್ ಬೇಲೂರಪ್ಪನವರ-ಪ್ರಥಮ, ಸಂಜೀವಕುಮಾರ ಬ್ಯಾಟಪ್ಪನವ -ದ್ವಿತೀಯ, ರಮೇಶ ಬೆಳ್ಳಟ್ಟಿ -ತೃತೀಯ, ಪುರು?ರ 5 ಕೆ ಓಟದಲ್ಲಿ ಪ್ರಭು ಲಮಾಣಿ - ಪ್ರಥಮ, ಕಿರಣ ಹೊನ್ನಳ್ಳಿ -ದ್ವಿತೀಯ, ಸುದೀಪ ಹರಿಜನ -ತೃತೀಯ ಹಾಗೂ ಮಹಿಳೆಯರ 5 ಕೆ ಓಟದಲ್ಲಿ ಶಿಲ್ಪಾ ಹೊಸಮನಿ -ಪ್ರಥಮ, ಸುಪ್ರಿತಾ ಸಿದ್ದಿ -ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ಸಾಕ್ಷಿ ಇವರುಗಳಿಗೆ ಪ್ರಶಸ್ತಿ ಪತ್ರ, ಪದಕ ಹಾಗೂ ನಗದು ಬಹುಮಾನ ನೀಡಲಾಯಿತು. ಅದೇ ರೀತಿ 4ರಿಂದ 10ರ ಸ್ಥಾನ ಪಡೆದವರಿಗೆ ಪ್ರಶಸ್ತಿ ಪತ್ರ ನೀಡಲಾಯಿತು.

ವಿಶೇಷ ಬಹುಮಾನ: ಓಟದಲ್ಲಿ ಭಾಗವಹಿಸಿದ ಕ್ರೀಡಾ ವಸತಿ ನಿಲಯದ ಬಾಲಕಿಗೆ ಹಾಗೂ ವಿವಿಡೆದೆ ಮ್ಯಾರಥಾನಗಳಲ್ಲಿ ಭಾಗವಹಿಸಿ ಪದಕ ಪಡೆದ ಬಾಲಕ ಮಹ್ಮದ ಮತ್ತಿಹಳ್ಳಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ಅವರು ವ್ಯಯಕ್ತಿಕವಾಗಿ ತಲಾ ಐದು ಸಾವಿರ ನಗದು ಬಹುಮಾನ ನೀಡಿ ಗೌರವಿಸಿದರು.

ಪ್ರಮುಖ ಬೀದಿಗಳಲ್ಲಿ ಓಟ : ನಗರದ ಜಿಲ್ಲಾ ಪೊಲೀಸ್ ಕಚೇರಿ ಆವರಣದಿಂದ ಆರಂಭವಾದ ಓಟ ನಗರದ ಹೊಸಮನಿ ಸಿದ್ದಪ್ಪ ವೃತ್ತ, ಹುಕ್ಕೇರಿಮಠ ರಸ್ತೆ, ರೈಲು ನಿಲ್ದಾಣ ಮಾರ್ಗ, ಅಂಬೇಡ್ಕರ್, ಸುಭಾಸ್, ಜೆ.ಎಚ್. ಪಟೇಲ್ ಹಾಗೂ ಕಿತ್ತೂರು ಚನ್ನಮ್ಮ ವೃತ್ತ ಮಾರ್ಗವಾಗಿ ಸಂಚರಿಸಿ ಜಿಲ್ಲಾ ಪೊಲೀಸ್ ಕಚೇರಿ ಆವರಣಕ್ಕೆ ಆಗಮಿಸಿತು.

ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರುಚಿ ಬಿಂದಲ್, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿ?ಾಧಿಕಾರಿ ಎಲ್. ವೈ. ಶಿರಕೋಳ, ಡಿವೈಎಸ್‌ಪಿ ಗಿರಿಮಲ್ಲಪ್ಪ ತಳಕಟ್ಟಿ, ಜಿಪಂ ಉಪಕಾರ್ಯದರ್ಶಿ ಡಾ.ಪುನೀತ್, ಪೊಲೀಸ್ ಇಲಾಖೆ ಅಧಿಕಾರಿಗಳು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಮುಖಂಡರು, ವಿದ್ಯಾರ್ಥಿಗಳು, ಭಾಗವಹಿದ್ದರು.



ಉತ್ಸವ ರಾಕ್ ಗಾರ್ಡನ್‌ಗೆ ಗವಿಸಿದ್ದೇಶ್ವರ ಶ್ರೀ ಭೇಟಿ

ಶಿಗ್ಗಾವಿ: ಯಾವ ಮನಸ್ಸು ಸೃಜನಾತ್ಮಕವಾಗಿರುವುದೋ ಅಲ್ಲಿ ಚಿಂತೆಗಳು ಇರುವುದಿಲ್ಲ. ದ್ವೇಷಗಳೂ ಇರುವುದಿಲ್ಲ. ದೇವರು ಸೃಜನಾತ್ಮಕವಾಗಿರುವುದಕ್ಕೆ ಮನಸ್ಸು ಕೊಟ್ಟಿರುವುದು ಆದರೆ ಅದನ್ನು ನಾವು ದುರ್ಬಳಕೆ ಮಾಡಿಕೊಳ್ಳುತ್ತಿದ್ದೇವೆ ಎಂದು ಕೊಪ್ಪಳ ಗವಿಸಿದ್ದೇಶ್ವರ ಮಠದ ಅಭಿನವ ಗವಿಸಿದ್ದೇಶ್ವರ ಶ್ರೀಗಳು ಹೇಳಿದರು.

ತಾಲೂಕಿನ ಗೊಟಗೋಡಿಯ ಉತ್ಸವ ರಾಕ್ ಗಾರ್ಡನ್‌ಗೆ ಭೇಟಿ ನೀಡಿ ಗಾರ್ಡನ್ ವೀಕ್ಷಿಸುತ್ತಾ ಕಲೆಯೊಂದಿಗೆ ಸಮ್ಮಿಲನಗೊಂಡ ನಿಸರ್ಗ ರಮ್ಯತೆಯನ್ನು ವರ್ಣಿಸಿದರು.

ಈ ಸಂದರ್ಭದಲ್ಲಿ ಗಾರ್ಡನ್‌ನ ಕಲಾ ನಿರ್ದೇಶಕಿ ವೇದಾರಾಣಿ ದಾಸನೂರ, ಪ್ರಕಾಶ ದಾಸನೂರ, ಉಳವಪ್ಪ ದಾಸನೂರ, ಸಾವಕ್ಕ ದಾಸನೂರ, ಆನಂದಗೌಡ ಪಾಟೀಲ, ತಿಪ್ಪಣ್ಣ ಸಾತಣ್ಣವರ, ಬವಸವಾಜ ಮಡಿವಾಳರ, ಅಶೋಕ ದೇಸಾಯಿ ಕಲಾವಿದರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.



ಹಾಸ್ಟೆಲ್ ಆಹಾರ ಭತ್ಯೆ ಏರಿಕೆಗೆ ಒತ್ತಾಯ

ಹಾವೇರಿ: ರಾಜ್ಯ ಬಜೆಟ್‌ನಲ್ಲಿ ಹಾಸ್ಟೆಲ್ ವಿದ್ಯಾರ್ಥಿಗಳ ಆಹಾರ ಭತ್ಯೆಯನ್ನು 4500ರೂ ಏರಿಕೆ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ಬಜೆಟ್‌ನ ಶೇ.30ರಷ್ಟು ಹಣವನ್ನು ಶಿಕ್ಷಣಕ್ಕೆ ಮೀಸಲಿಡಲು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ ರಾಜ್ಯಾದ್ಯಂತ ಹಾಸ್ಟೆಲ್ ಎದುರು ಪ್ರತಿಭಟನೆಗೆ ಕರೆ ನೀಡಿದ ಹಿನ್ನೆಲೆ ನಗರದ ವಿವಿಧ ಹಾಸ್ಟೆಲ್ ವಿದ್ಯಾರ್ಥಿಗಳಿಂದ ವಸತಿ ನಿಲಯದ ನಿಲಯ ಪಾಲಕರ ಮೂಲಕ ಸಿಎಂಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ಹಾಸ್ಟೆಲ್ ವಿದ್ಯಾರ್ಥಿಗಳ ರಾಜ್ಯ ಸಂಚಾಲಕ ಅರುಣ್ ನಾಗವತ್ ಮಾತನಾಡಿ, ರಾಜ್ಯದ ಶಿಕ್ಷಣ ವ್ಯವಸ್ಥೆಯ ಸಮಗ್ರ ಅಭಿವೃದ್ಧಿಗೆ ಮಾ.6ರಂದು ಮಂಡನೆಯಾಗಲಿರುವ ಬಜೆಟ್‌ನಲ್ಲಿ ಕೊಠಾರಿ ಆಯೋಗದ ಶಿಫಾರಸಿನಂತೆ ಕನಿಷ್ಠ ಶೇ.30ರಷ್ಟು ಹಣ ಶಿಕ್ಷಣ ಕ್ಷೇತ್ರಕ್ಕೆ ಮೀಸಲಿಡಬೇಕು. ಪ್ರತಿ ಬಜೆಟ್‌ನಲ್ಲಿ ಶಿಕ್ಷಣದ ಹಣ ಕಡಿತ ಮಾಡಿ ಸರಾಸರಿ ಕೇವಲ ಶೇ.11ರಷ್ಟು ಹಣ ನೀಡುತ್ತಿರುವುದು ಖಂಡನೀಯ. ಇಡೀ ದೇಶದಲ್ಲಿ ಉತ್ತಮ ಗುಣಮಟ್ಟದ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಹೊಂದಿರುವ ಕೇರಳ ರಾಜ್ಯ ಶೇ.27ರಷ್ಟು ಹಣ ನೀಡುತ್ತಿರುವುದು ಶ್ಲಾಘನೀಯ ಎಂದರು.

ರಾಜ್ಯದಲ್ಲಿ ಹಾಸ್ಟೆಲ್‌ಗೆ ಅರ್ಜಿ ಸಲ್ಲಿಸುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗಿದೆ. ಗ್ರಾಮೀಣ ಭಾಗದ ರೈತ, ಕೂಲಿ ಕಾರ್ಮಿಕ, ದಲಿತ, ಹಿಂದುಳಿದ ವರ್ಗದ ಬಡ ವಿದ್ಯಾರ್ಥಿಗಳ. ಹಾಸ್ಟೆಲ್ ಬಯಸಿ ಅರ್ಜಿ ಸಲ್ಲಿಸಿದರೆ ಪ್ರವೇಶ ಸಿಗುತ್ತಿಲ್ಲ. ಆದ್ದರಿಂದ ಹಾಸ್ಟೆಲ್‌ಗಳ ಸಂಖ್ಯೆಯನ್ನು ಹೆಚ್ಚಿಸಬೇಕು ಖಾಲಿ ಇರುವ ವಾರ್ಡನ್, ಪ್ರಾಂಶುಪಾಲರು, ಸಿಬ್ಬಂದಿ ಸೇರಿದಂತೆ ವಿವಿಧ ಹುದ್ದೆಗಳ ನೇಮಕಾತಿ, ಬಹುತೇಕ ಹಾಸ್ಟೆಲ್‌ಗಳು ಖಾಸಗಿ ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿದ್ದು ಇಲ್ಲಿ ಕನಿಷ್ಠ ಮೂಲ ಸೌಕರ್ಯ ಒದಗಿಸಲು ಬಜೆಟ್ ನಲ್ಲಿ ಹಣ ಮೀಸಲಿಡಬೇಕು. ಹಾಸ್ಟೆಲ್ ವಿದ್ಯಾರ್ಥಿಗಳ ಮಾಸಿಕ ಆಹಾರ ಭತ್ಯೆಯನ್ನು ಪ್ರಸ್ತುತ ತಿಂಗಳಿಗೆ 1750-1850 ಮಾತ್ರ ನೀಡಲಾಗುತ್ತಿದೆ ಅದನ್ನು ಕನಿಷ್ಠ 4500 ರೂ.ಗಳಿಗೆ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ಸುದೀಪ ಲಮಾಣಿ, ಮುಖಂಡರಾದ ಸೌಮ್ಯಾ ಕ್ಯಾತನ್, ಅಕ್ಷತಾ ಡವಗಿ, ವಿದ್ಯಾ ಮಾಸ್ಟೆರ್, ಪದ್ಮ ಹರಿಜನ, ಮಧು ಅಳಹಳ್ಳಿ, ವಿಜಯಲಕ್ಷ್ಮೀ ಅಡಿಯಪ್ಪನವರ್, ಪ್ರಿಯಾ ಲಮಾಣಿ, ಕಾವ್ಯ ದೊಡ್‌ಮಾಸ್ತಿ, ಕರಬಸಮ್ಮ ಹಿತ್ತಲಮನಿ, ದೀಪ ಮಲ್ಲಮ್ಮನವರ, ಮನೋಜ್ ಉಕುಂದ, ಸುನಿಲ್ ನೆಗಳೂರ್ ಇದ್ದರು.



ಕಿರುಸುದ್ದಿ

ಕೋಳಿ ಫಾರ್ಮ್‌ನಿಂದ ದುರ್ವಾಸನೆ :ಆರೋಪ

ಚನ್ನಮ್ಮನ ಕಿತ್ತೂರು: ಡಾ.ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆಯ ಪಕ್ಕದಲ್ಲಿರುವ ಕೋಳಿ ಫಾರ್ಮ್‌ನಿಂದ ಬರುತ್ತಿರುವ ದುರ್ವಾಸನೆಯಿಂದ ವಿದ್ಯಾರ್ಥಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಇದನ್ನು ತಡೆಗಟ್ಟಬೇಕು ಎಂದು ಅಂಬಡಗಟ್ಟಿ ಗ್ರಾಮ ಪಂಚಾಯತಿಗೆ ವಸತಿ ಶಾಲೆಯ ಪ್ರಭಾರ ಪ್ರಾಚಾರ್ಯ ಪ್ರಸಾದ ಮನವಿಯನ್ನು ಸಲ್ಲಿಸಿದ್ದಾರೆ. ತಾಲೂಕಿನ ಅಂಬಡಗಟ್ಟಿ ಕ್ರಾಸ್ ಹತ್ತಿರವಿರುವ ವಸತಿ ಶಾಲೆಯ ಪಕ್ಕಕ್ಕಿರುವ ರಿಸನಂ 32 ರಲ್ಲಿ ಮೊಟ್ಟೆಯ ಕೋಳಿಯ ಫಾರ್ಮ್ ಇದ್ದು, ಕಳೆದ ಹಲವಾರು ದಿವಸಗಳಿಂದ ವಿಪರೀತವಾದ ದುರ್ವಾಸನೆ ಹಾಗೂ ನೊಣಗಳು ಬರುತ್ತಿದ್ದು, ಶಾಲೆಯ ಆವರಣದಲ್ಲಿ ನಿಲ್ಲುವದು ಕಷ್ಟದ ಕೆಲಸವಾಗಿದೆ. ಈ ಗಲೀಜು ವಾಸನೆಯಿಂದ ಮಕ್ಕಳಿಗೆ ವಾಂತಿ, ತಲೆನೂವು, ಮತ್ತು ಉಸಿರಾಟದ ತೊಂದರೆ ಕಂಡು ಬರುತ್ತಿದೆ. ಕೂಡಲೇ ಪರಿಹಾರ ಒದಗಿಸಲು ಮನವಿಯಲ್ಲಿ ತಿಳಿಸಿದ್ದಾರೆ. **ಹೊಣೆ ಯಾರು?:**ಕೋಳಿ ಫಾರ್ಮ್ ಜನದಟ್ಟನೆಯ ಪ್ರದೇಶದಲ್ಲಿದ್ದು, ಡಾ. ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆ, ಸರ್ಕಾರಿ ಐಟಿಐ ಕಾಲೇಜ್, ಹೊಟೇಲ್, ಕಲ್ಯಾಣ ಮಂಟಪ ಮುಂತಾದ ಜನ ಸಂದಣಿ ಇರುವ ಪ್ರದೇಶದಲ್ಲಿದ್ದು, ಇದರ ದುರ್ವಾಸನೆಯಿಂದ ಜನರ ಹಾಗೂ ವಿದ್ಯಾರ್ಥಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಮತ್ತೆ ಪ್ರಾರಂಭವಾಗಿರುವ ಕೋಳಿ ಫಾರ್ಮನ್ನು ಬಂದ್ ಮಾಡಿಸಬೇಕು. ಇಲ್ಲದಿದ್ದರೆ ಆರೋಗ್ಯದ ಮೇಲೆ ಏನಾದರೂ ಘಟನೆ ಸಂಭವಿಸಿದರೆ ನೇರವಾಗಿ ಅಧಿಕಾರಿಗಳೆ ಹೊಣೆಗಾರರಾಗುತ್ತಾರೆ ಎಂದು ಕಾಂಗ್ರೆಸ್ ಮುಖಂಡ ಹಬೀಬ ಶಿಲೇದಾರ ತಿಳಿಸಿದ್ದಾರೆ.

ಮಾ.5ರಂದು ಲೋಕಾಯುಕ್ತ ಜನ ಸಂಪರ್ಕ ಸಭೆ

ಬೆಳಗಾವಿ: ಖಾನಾಪೂರ ತಾಲೂಕಿನ ತಾಲೂಕು ಪಂಚಾಯತಿ ಸಭಾಭವನದಲ್ಲಿ ಮಾರ್ಚ್ 5ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಬೆಳಗಾವಿ ಲೋಕಾಯುಕ್ತ ಅಧಿಕಾರಿಗಳು ಖಾನಾಪೂರ ತಾಲೂಕಿನ ಲೋಕಾಯುಕ್ತ ಜನ ಸಂಪರ್ಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಸರ್ಕಾರಿ ಅಧಿಕಾರಿಗಳು ಸಾರ್ವಜನಿಕರ ಅಧಿಕೃತ ಕೆಲಸಗಳನ್ನು ಮಾಡಿ ಕೊಡುವಲ್ಲಿ ವಿಳಂಬ ನೀತಿ ಅನುಸರಿಸುತ್ತಿದ್ದಲ್ಲಿ, ಅಂತಹ ಅಧಿಕಾರಿಗಳ ವಿರುದ್ಧ ದೂರು ಸಲ್ಲಿಸಿದಲ್ಲಿ, ಸ್ಥಳೀಯ ಅಧಿಕಾರಿಗಳಿಂದ ಪರಿಹರಿಸಿಕೊಳ್ಳಬಹುದು.

ನಿಗದಿತ ನಮೂನೆಯ ಅರ್ಜಿಯೊಂದಿಗೆ ಹಾಜರಿದ್ದು, ಸದರಿ ಸಭೆಯ ಸದುಪಯೋಗ ಪಡೆದುಕೊಳ್ಳಬಹುದಾಗಿದೆ ಎಂದು ಕರ್ನಾಟಕ ಲೋಕಾಯುಕ್ತ ಬೆಳಗಾವಿ ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪಘಾತ: ಸವಾರ ಸಾವು



ಸಂಕೇಶ್ವರ: ಅಪರಿಚಿತ ವಾಹನ ಡಿಕ್ಕಿಯಾದ ಪರಿಣಾಮ ದ್ವಿಚಕ್ರ ಸವಾರ ಮೃತಪಟ್ಟ ಘಟನೆ ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಹರಗಾಪೂರ ಕ್ರಾಸ್ ಬಳಿ ಸೋಮವಾರ ನಡೆದಿದೆ. ಹುಕ್ಕೇರಿ ನಿವಾಸಿ ಭೀರಪ್ಪ ಶಂಕರ ಹೆಗಡೆ(21) ಮೃತ ವ್ಯಕ್ತಿ.ಮೃತ ಯುವಕ ಹಾಗೂ ದ್ವಿಚಕ್ರ ಹಿಂಬದಿ ಕುಳಿತಿದ್ದ ಗಾಯಾಳು ರಾಜು ಸಿದ್ದಪ ಹೆಗಡೆ ಹುಕ್ಕೇರಿಯಿಂದ ಕಣಗಲಾ ಕಡೆಗೆ ಹೋಗುತ್ತಿರುವಾಗ ಹರಗಾಪೂರ ಕ್ರಾಸ್ ಬಳಿ ಹಿಂಬದಿಯಿಂದ ಬಂದ ವಾಹನ ಡಿಕ್ಕಿ ಹೊಡೆದಿದ್ದರಿಂದ ಅಪಘಾತ ಸಂಭವಿಸಿದೆ .ಈ ಕುರಿತು ಸಂಕೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ ಸುದ್ದಿ

ಲಕ್ಷ್ಮೀಬಾಯಿ ಕಾಂಬಳೆ



ಚಿಕ್ಕೋಡಿ: ತಾಲೂಕಿನ ಕರೋಶಿ ಗ್ರಾಮದ ನಿವಾಸಿ, ಶತಾಯುಷಿ ಲಕ್ಷ್ಮೀಬಾಯಿ ಕಲ್ಲಪ್ಪ ಕಾಂಬಳೆ (100) ಸೋಮವಾರ ನಿಧನರಾಗಿದ್ದಾರೆ. ಮೃತರು ಓರ್ವ ಪುತ್ರ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಹುಸ್ಮಾನ್ ಶೇಖಜಿ



ಚಿಕ್ಕೋಡಿ: ತಾಲೂಕಿನ ಸದಲಗಾ ಪಟ್ಟಣದ ನಿವಾಸಿ ಹುಸ್ಮಾನ ಬಂಡು ಶೇಖಜಿ (59) ಇತ್ತೀಚೆಗೆ ನಿಧನರಾಗಿದ್ದಾರೆ. ಮೃತರು ಪತ್ನಿ, ಅಬ್ದುಲ್ ಕಲಾಂ ಸಂಘದ ಅಧ್ಯಕ್ಷ ಅಜರುದ್ದೀನ್ ಶೇಖಜಿ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಬೆಳಗಾವಿ: ಮಹಾನಗರ ಪಾಲಿಕೆಯ ವ್ಯಾಪ್ತಿಯ ಬಸವನ ಕುಡಚಿ ಮಹಾಲಕ್ಷ್ಮೀ ನಗರ ಹಲವಾರು ವರ್ಷಗಳಿಂದ ಮೂಲ ಸೌಲಭ್ಯಗಳಿಂದ ವಂಚಿತವಾಗಿದ್ದು, ಕೂಡಲೇ ಅಲ್ಲಿ ಮೂಲ ಸೌಲಭ್ಯ ಕಲ್ಪಿಸಿಕೊಡುವಂತೆ ಆಗ್ರಹಿಸಿ ನಗರದ ನಿವಾಸಿಗಳು ಶಾಸಕ ಆಸೀಫ್ ಸೇಠ್ ಅವರಿಗೆ ಮನವಿ ಸಲ್ಲಿಸಿದರು.

ವಿದ್ಯಾರ್ಥಿಗಳಿಗೆ ರೈಟಿಂಗ್ ಪ್ಯಾಡ್ ವಿತರಣೆ

ತೆಲಸಂಗ: ತಾಲೂಕಿನ ಯಾವುದೇ ವಿದ್ಯಾರ್ಥಿ ಆರ್ಥಿಕ ಸಂಕಷ್ಟದಿಂದಾಗಿ ಉನ್ನತ ಶಿಕ್ಷಣದಿಂದ ವಂಚಿತರಾಗಬಾರದು. ಪ್ರತಿಭಾನ್ವಿತ ವಿದ್ಯಾರ್ಥಿಗಳ ಬೆನ್ನಿಗೆ ನಿಲ್ಲಲು ನಮ್ಮ ಕುಟುಂಬ ಸದಾ ಸಿದ್ಧವಿದೆ ಎಂದು ಯುವ ಮುಖಂಡ ಚಿದಾನಂದ ಸವದಿ ಹೇಳಿದರು.

ಸೋಮವಾರ ಗ್ರಾಮದ 5 ಪ್ರೌಢಶಾಲೆಗಳ ಮೂರು ನೂರಕ್ಕಿಂತ ಹೆಚ್ಚು ಹಾಗೂ ತಾಲೂಕಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುವ 10ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉಚಿತವಾಗಿ ರೈಟಿಂಗ್ ಪ್ಯಾಡ್ ವಿತರಿಸುವ ಕಾರ್ಯಕ್ರಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ಅಥಣಿ ತಾಲೂಕಿನಾದ್ಯಂತ ಈ ವರ್ಷ ಸುಮಾರು 10, ಸಾವಿರಕ್ಕೂ ಹೆಚ್ಚು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಾಮಗ್ರಿಗಳನ್ನು ವಿತರಿಸುವ ಗುರಿ ಹೊಂದಲಾಗಿದ್ದು, ಈಗಾಗಲೇ ಬಹುತೇಕ ಕಡೆ ವಿತರಣೆ ಪೂರ್ಣಗೊಂಡಿದೆ. ಸೇವೆ ಮಾಡುವಲ್ಲಿ ನಾವು ಜಾತಿ, ಮತ, ಪಂಥ ಅಥವಾ ರಾಜಕೀಯ ಪಕ್ಷಗಳನ್ನು ನೋಡುವುದಿಲ್ಲ ಎಂದರು.

ಪ್ರಾಚಾರ್ಯ ಸುರೇಶ ಸನಗೊಂಡ, ಹಿರಿಯ ಶಿಕ್ಷಕ ಎನ್.ಡಿ.ಅತ್ತಾರ, ದಾನಪ್ಪಾ ಹತ್ತಿ, ತಾಪಂ ಮಾಜಿ ಸದಸ್ಯ ಶ್ರೀಶೈಲ ಶೆಲ್ಲೆಪ್ಪಗೋಳ, ಧರೆಪ್ಪಾ ಮಾಳಿ, ಮಾದೇವ ಬಾಣಿ, ಗುಂಡುಬಾ ಪವಾರ, ಸಂದೀಪ ಉಂಡೋಡಿ, ಸಂಜು ಮಾದರ, ಸಿದ್ದಲಿಂಗ ಮಾದರ, ರಾಮು ನಿಡೋಣಿ, ಉಮೇಶ ಸೂರ್ಯವಂಶಿ, ಬುಡ್ಡು ಮುಜಾವರ, ಆನಂದ ಥೈಕಾರ, ಸಚಿನ ಸಾವಂತ, ಮೋಹೀನ ನಧಾಫ್, ಸುರೇಶ ಖೊಳಂಬಿ, ಅಪ್ಪು ಜಮಾದರ, ಸುನೀಲ ಮಾದರ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ತೆಲಸಂಗ: ಗ್ರಾಮದ 5 ಪ್ರೌಢಶಾಲೆಗಳ ಮೂರು ನೂರಕ್ಕಿಂತ ಹೆಚ್ಚು ಹಾಗೂ ತಾಲೂಕಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುವ 10ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉಚಿತವಾಗಿ ರೈಟಿಂಗ್ ಪ್ಯಾಡ್ ವಿತರಿಸುವ ಕಾರ್ಯಕ್ರಕ್ಕೆ ಯುವ ಮುಖಂಡ ಚಿದಾನಂದ ಸವದಿ ಚಾಲನೆ ನೀಡಿದರು.

ಪಾಲಿಕೆ ಸಮಾನ್ಯ ಸಭೆ | ಬಂಜಾರಾ ಭವನ ನಿರ್ಮಾಣ

ಖಾಲಿ ಜಾಗೆ ನೀಡಲು ತೀರ್ಮಾನ

ಬೆಳಗಾವಿ: ಮಹಾನಗರ ಪಾಲಿಕೆಯ ಸಾಮಾನ್ಯ ಸಭೆಯಲ್ಲಿ ಬಂಜಾರಾ ಸಮಾಜದ ಭವನ ನಿರ್ಮಾಣಕ್ಕೆ ಜಾಗ ನೀಡುವ ವಿಚಾರದ ಬಗ್ಗೆ ಗಂಭೀರ ಚರ್ಚೆ ನಡೆಯಿತು. ಇದರೊಂದಿಗೆ ಕಟ್ಟಡಗಳ ಕಾಮಗಾರಿ ಮುಕ್ತಾಯಕ್ಕೂ ಮುನ್ನವೇ ಪಿಐಡಿ ಶುಲ್ಕ ವಸೂಲಿ ಮಾಡುತ್ತಿರುವ ಅಧಿಕಾರಿಗಳ ನಡೆಯನ್ನು ಸದಸ್ಯರು ಪ್ರಶ್ನಿಸಿ ಆಕ್ರೋಶ ಹೊರಹಾಕಿದರು.

ಸೋಮವಾರ ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಮಹಾಪೌರ ಮಂಗೇಶ್ ಪವಾರ್ ಅವರ ಅಧ್ಯಕ್ಷತೆಯಲ್ಲಿ ಪರಿಷತ್ತಿನ ಸಾಮಾನ್ಯ ಸಭೆ ಕರೆಯಲಾಗಿತ್ತು. ಈ ಸಭೆಯಲ್ಲಿ ನಗರಸೇವಕಿ ಲಕ್ಷ್ಮೀ ರಾಠೋಡ್ ಅವರು ಬೆಳಗಾವಿಯ ಡಾ. ಬಾಬು ಜಗಜೀವನರಾಮ್ ವಿದ್ಯಾರ್ಥಿ ವಸತಿ ನಿಲಯದ ಬಳಿ ಕಳೆದ ಬಾರಿ ಮಹಾನಗರ ಪಾಲಿಕೆಯ ಸರ್ವೆ ನಂ 42 ರ 14 ಗುಂಟೆ ಜಾಗೆಯಲ್ಲಿ ತಾಂಡಾ ಅಭಿವೃದ್ಧಿ ನಿಗಮದಿಂದ ಜಿಲ್ಲಾ ಬಂಜಾರಾ ಭವನ ನಿರ್ಮಿಸಲು ಮಂಜೂರಾತಿ ನೀಡಿದ ಹಿನ್ನೆಲೆ ಕಳೆದ ಬಾರಿ ಮಾಜಿ ಶಾಸಕ ಅನೀಲ ಬೆನಕೆ ಭೂಮಿ ಪೂಜೆ ಸಲ್ಲಿಸಿದ್ದರು. ಆದರೆ, ಅದರ ಬದಲಿಗೆ ಬೇರೆಯ ಜಾಗೆಯನ್ನು ನೀಡುವುದಾಗಿ ಮಹಾನಗರ ಪಾಲಿಕೆ ಹೇಳಿತ್ತು. ಆದರೆ, ಏಕೆ ನೀಡಿಲ್ಲವೆಂದು ಪ್ರಶ್ನಿಸಿದರು. ಇದಕ್ಕೆ ಉತ್ತರ ಶಾಸಕ ಆಸೀಫ್ ಸೇಠ ಅವರು ಒಂದು ವೇಳೆ ಪರ್ಯಾಯ ಖುಲ್ಲಾ ಜಾಗೆಯಿದ್ದರೇ, ಭವನ ನಿರ್ಮಿಸಲು ಯಾವುದೇ ತೊಂದರೆಯಿಲ್ಲ ಎಂದರು.



ಪಿಐಡಿ ಶುಲ್ಕ?

ಕಟ್ಟಡ ಕಾಮಗಾರಿ ಮುಕ್ತಾಯ ಪ್ರಮಾಣಪತ್ರ ಪಡೆಯದೇ ಪಿಐಡಿ ನೀಡಲು ಯಾವ ಆಧಾರದ ಮೇಲೆ ಯಾವ ಆಧಾರದ ಮೇಲೆ ಶುಲ್ಕವನ್ನು ಪಡೆಯಲಾಗುತ್ತಿದೆ ಎಂದು ನಾಮನಿರ್ದೇಶಿತ ಸದಸ್ಯ ದಿನೇಶ್ ನಾಶಿಪುಡಿ ಅವರು ಪ್ರಶ್ನಿಸಿದರು. ಅಲ್ಲದೇ ನೀರಿನ ಶುಲ್ಕವನ್ನು ಎಲ್ ಆ್ಯಂಡ್ ಟಿ ಗೆ ನೀಡಿ, ಹೆಸ್ಕಾಂಗೆ ಭರಿಸುವ ಬಿಲ್ ಮಹಾನಗರ ಪಾಲಿಕೆಗೆ ಬರಲಿ ಎಂದರು.

ಇದಕ್ಕೆ ಆಡಳಿತಪಕ್ಷದ ನಾಯಕ ಹಣುಮಂತ ಕೊಂಗಾಲಿ ಅವರು ಬಂಜಾರಾ ಸಮಾಜದಿಂದ ಬಂಜಾರಾ ಭವನ ನಿರ್ಮಿಸುವುದಾಗಿ ನಿಗಮವು ಹೇಳಿದೆ. ಆದ್ದರಿಂದ ಪರ್ಯಾಯ ಜಾಗೆಯನ್ನು ಆದಷ್ಟು ಬೇಗ ಮಹಾನಗರ ಪಾಲಿಕೆ ಪರಭಾರೆ ಮಾಡಿಕೊಳ್ಳಲಿ ಎಂದರು. ಭವನ ನಿರ್ಮಾಣ ಮಾಡಲು ಸಮಾಜಕ್ಕೆ ಖಾಲಿ ಜಾಗ ನೀಡುವ ಬಗ್ಗೆ ಒಮ್ಮತದ ನಿರ್ಧಾರ ಕೈಗೊಳ್ಳಲಾಯಿತು.

ಪ್ರಮಾಣಪತ್ರಗಳ ವಿಳಂಬಕ್ಕೆ ಆಕ್ರೋಶ

ಬೆಳಗಾವಿ: ಮಹಾನಗರ ಪಾಲಿಕೆಯ ಮಹಾಪೌರ ಮಂಗೇಶ್ ಪವಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಜನನ ಮತ್ತು ಮರಣ ಪ್ರಮಾಣಪತ್ರ ಪಡೆಯಲು ಸಾರ್ವಜನಿಕರು ಸಾಕಷ್ಟು ತೊಂದರೆಯನ್ನು ಪಡುತ್ತಿರುವುದರ ಬಗ್ಗೆ ಗಂಭೀರ ಚರ್ಚೆ ನಡೆಯಿತು.

ಏಜೆಂಟರ ಹಾವಳಿ ಮತ್ತು ತಾಂತ್ರಿಕ ದೋಷಗಳಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ಶಾಸಕ ಅಭಯ್ ಪಾಟೀಲ ಅವರು ಪಾಲಿಕೆಯ ಆಯುಕ್ತರ ಹಾಗೂ ಮಹಾಪೌರರ ಗಮನಕ್ಕೆ ತಂದರು. ಉತ್ತರ ಶಾಸಕ ಆಸೀಫ್ ಸೇಠ್ ಅವರು ಜನನ ಮತ್ತು ಮರಣ ಪ್ರಮಾಣ ಪತ್ರಗಳಿಗೆ ಸಂಬಂಧಿದಂತೆ ಹೆಚ್ಚುತ್ತಿರುವ ಏಜೆಂಟರ ಹಾವಳಿಯನ್ನು ತಪ್ಪಿಸಬೇಕೆಂದರು. ಆಡಳಿತ ಪಕ್ಷದ ನಾಯಕ ಹನುಮಂತ ಕೊಂಗಾಲಿ ಮತ್ತು ಶಾಸಕ ಅಭಯ್ ಪಾಟೀಲ್ ಅವರು ಪ್ರಮಾಣಪತ್ರ ವಿತರಣೆಗೆ ಸ್ವೀಕರಿಸುವ ದಾಖಲಾತಿಗಳ ಮಾಹಿತಿಯನ್ನು ಕೇಳಿದರು. ಅಲ್ಲದೇ ಕಾನೂನುಬದ್ಧ ದಾಖಲಾತಿಗಳನ್ನು ಸ್ವೀಕರಿಸುವ ಸಲಹೆಯನ್ನು ನೀಡಿದರು.

ನಗರಸೇವಕ ರವಿ ಸಾಳುಂಕೆ ಅವರು ಜನನ ಮರಣ ಪ್ರಮಾಣ ಪತ್ರಕ್ಕೆ 70 ರೂಪಾಯಿ ಪ್ರತಿ ಹಣ ಪಡೆಯಲಾಗುತ್ತಿದೆ. ಅಲ್ಲದೇ ಹಳೆಯ ಕಂಪ್ಯೂಟರ್ ಮತ್ತು ಹಳೆಯ ತತ್ರಾಂಶಗಳಿಂದ ಪ್ರಕ್ರಿಯೆ ವಿಳಂಬವಾಗುತ್ತಿದೆ. ಅದನ್ನ ಬದಲಿಸಬೇಕು ಮತ್ತು ಸಿಬ್ಬಂದಿಯ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಆಗ್ರಹಿಸಿದರು. ಇದಕ್ಕೆ ಮಹಾಪಾಲಿಕೆ ಆಯುಕ್ತರಾದ ಕಾರ್ತಿಕ್ ಎಂ, ಅವರು ಈಗ ಜನನ ಪ್ರಮಾಣಪತ್ರದ ಅರ್ಜಿ ಸ್ವೀಕೃತಿಗೊಂಡ ಬಳಿಕ ಪ್ರಮಾಣ ಪತ್ರವನ್ನು ಪೋಸ್ಟಲ್ ಸೇವೆ ಮೂಲಕ ಜನರ ಮನೆ ಬಾಗಿಲಿಗೆ ತಲುಪಿಸಲಾಗುತ್ತಿದೆ ಎಂದರು. ಅಲ್ಲದೇ ಜನರಿಗೆ ತೊಂದರೆಯಾಗದಂತೆ ಜನಪರ ಸೇವೆಗಳನ್ನು ಸುಧಾರಿಸಲು ಕ್ರಮಕೈಗೊಳ್ಳುವುದಾಗಿ ಭರವಸೆಯನ್ನು ನೀಡಿದರು.

ಶಾಂತಿಯುತವಾಗಿ ಹಬ್ಬ ಆಚರಿಸಿ

ಅಥಣಿ: ಹೋಳಿ ಸ್ನೇಹ ಬಾಂಧವ್ಯ ತೋರುವ ಹಬ್ಬ, ಸಾರ್ವಜನಿಕರು ಶಾಂತಿಯುತವಾಗಿ ಹೋಳಿ ಹಬ್ಬವನ್ನು ಆಚರಣೆ ಮಾಡಬೇಕು' ಎಂದು ಸಿಪಿಐ ಸಂತೋಷ ಹಳ್ಳೂರ ಹೇಳಿದರು.

ಸ್ಥಳೀಯ ಪೊಲೀಸ್ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಅಥಣಿ ಪೊಲೀಸ್ ಠಾಣೆಯ ಹೋಳಿ ಹಬ್ಬದ ಶಾಂತಿ ಸಭೆಯಲ್ಲಿ ಮಾತನಾಡಿ, ಇದೇ ಸಮಯದಲ್ಲಿ ರಂಜಾನ್ ಹಬ್ಬ ಕೂಡ ಇದ್ದು, ಎಲ್ಲ ಹಬ್ಬವನ್ನೂ ಶಾಂತಿ ಮತ್ತು ಸೌಹಾರ್ದತೆಯಿಂದ ಆಚರಿಸಬೇಕು. ಗಲಾಟೆ, ಅಹಿತಕರ ಘಟನೆ ಕಂಡು ಬಂದಲ್ಲಿ ಅಂತವರ ಮೇಲೆ ಇಲಾಖೆಯಿಂದ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ಅಥಣಿ ಪಿಎಸ್‌ಐ ಗಿರಿಮಲ್ಲಪ್ಪ ಉಪ್ಪಾರ ಮಾತನಾಡಿ, ಸಹೋದರತ್ವ ಮತ್ತು ಸೌಹಾರ್ದಕ್ಕೆ ಪ್ರತೀಕವಾದ ಹೋಳಿ ಹಬ್ಬವನ್ನು ಶಾಂತಿಯುತವಾಗಿ, ಪರಸ್ಪರ ಗೌರವದಿಂದ ಹಬ್ಬ ಆಚರಿಸಬೇಕು. ಇಲಾಖೆಯೊಂದಿಗೆ ಸಾರ್ವಜನಿಕರ ಸಹಕಾರ ಅವಶ್ಯ. ಸಮಸ್ಯೆಗಳಿದ್ದರೆ ತಕ್ಷಣೆ ಗಮನಕ್ಕೆ ತನ್ನಿ, ಸರಿಪಡಿಸೋಣ. ಆದಷ್ಟು ರಾಸಾಯನಿಕ ಬಣ್ಣಗಳನ್ನು ತ್ಯಜಿಸಿ. ನಾಲಾ, ಕೆನಾಲ್, ಬಾವಿಯಲ್ಲಿ ಸ್ನಾನ ಮಾಡುವಾಗ ಎಚ್ಚರವಿರಲಿ ಎಂದು ಸಲಹೆ ನೀಡಿದರು. ಕರವೇ ಅಧ್ಯಕ್ಷ ಚಬ್ಬಿರ ಸಾತಬಚ್ಚೆ, ದಲಿತ ಮುಖಂಡ ಶಶಿಕಾಂತ್ ಸಾಳ್ವೆ, ಮುಖಂಡ ಹರ್ಷತ್ ಗದ್ಯಾಳ, ಸಾಮಾಜಿಕ ಹೋರಾಟಗಾರ ಪ್ರಶಾಂತ ತೋಡಕರ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

ಗೌರವಾಧ್ಯಕ್ಷರಾಗಿ ಹಬೀಬ ಶಿಲೇದಾರ ನೇಮಕ

ಚನ್ನಮ್ಮನ ಕಿತ್ತೂರು: ಕಿತ್ತೂರು ಕರ್ನಾಟಕ ರೈತ ಜಾಗೃತಿ ಸಂಘದ ರಾಜ್ಯ ಗೌರವಾಧ್ಯಕ್ಷರಾಗಿ ಸಮಾಜ ಸೇವಕ ಹಬೀಬ ಶಿಲೇದಾರ ನೇಮಕವಾಗಿದ್ದಾರೆ. ತಾಲೂಕಿನ ಅಂಬಡಗಟ್ಟಿಯಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ರಾಜ್ಯಾಧ್ಯಕ್ಷ ಎಂ ಎಫ್ ಜಕಾತಿ ಹಾಗೂ ಪದಾದಿಕಾರಿಗಳು ನೇಮಕಾತಿ ಆದೇಶ ಪತ್ರವನ್ನು ನೀಡಿದರು. ಕಿತ್ತೂರು ಕರ್ನಾಟಕ ರೈತ ಜಾಗೃತಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅಪ್ಪೇಶ ದಳವಾಯಿ, ರಾಜ್ಯ ಸಹ ಕಾರ್ಯದರ್ಶಿ ಜಿ ಎಸ್ ಹಿರೇಮಠ, ಮಡಿವಾಳಪ್ಪ ವರಗನ್ನವರ, ಜಿಲ್ಲಾ ಎಸ್ ಸಿ ಘಟಕದ ಅಧ್ಯಕ್ಷ ಫಕ್ಕೀರಪ್ಪ ಜಾಂಗಟಿ, ಜಿಲ್ಲಾ ಎಸ್ ಸಿ ಘಟಕದ ಪ್ರಧಾನ ಕಾರ್ಯದರ್ಶಿ ಮಲ್ಲಪ್ಪ ಮಾದರ, ತಾಲೂಕಾ ಘಟಕದ ಪ್ರಧಾನ ಕಾರ್ಯದರ್ಶಿ ಕಲ್ಲಪ್ಪ ಬುಡರಕಟ್ಟಿ ಸೇರಿದಂತೆ ಹಲವಾರು ರೈತ ಮುಖಂಡರು ಉಪಸ್ಥಿತರಿದ್ದರು.



ಮಲ್ಲಿಕಾರ್ಜುನ ಜಾತ್ರೆ: ಶ್ರೀಶೈಲಕ್ಕೆ ಪಾದಯಾತ್ರೆ ಆರಂಭ

ಯರಗಟ್ಟಿ : ಆಂಧ್ರದ ಶ್ರೀಶೈಲ ಕ್ಷೇತ್ರದಲ್ಲಿ ಯುಗಾದಿಯಂದು ಜರುಗುವ ಮಲ್ಲಿಕಾರ್ಜುನ ಜಾತ್ರೆಯಲ್ಲಿ ಪಾಲ್ಗೊಳ್ಳಲು ತಾಲೂಕಿನ ಸತ್ತಿಗೇರಿ, ಸೊಪ್ಪಡ್ಲ, ಕೋರಕೊಪ್ಪ, ತೋರಣಗಟ್ಟಿ ಗ್ರಾಮಗಳಿಂದ ಅಪಾರ ಸಂಖ್ಯೆಯ ಭಕ್ತರು ಸೋಮವಾರ ಪಾದಯಾತ್ರೆ ಕೈಗೊಂಡರು.

ಪಾದಯಾತ್ರೆ ಆರಂಭಕ್ಕೂ ಮುನ್ನ ಕ್ಷೇತ್ರಾಧಿಪತಿ ಮಲ್ಲಿಕಾರ್ಜುನ, ಮಳಿಮಲ್ಲೇಶ್ವರ, ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಕಂಬಿಯೊಂದಿಗೆ ಜಮಾಯಿಸಿದ ಭಕ್ತರು ಬಿರುಬಿಸಿಲನ್ನೂ ಲೆಕ್ಕಿಸದೆ ಒಂದು ತಾಸು ಮಂಗಳಾರತಿಯಲ್ಲಿ ಪಾಲ್ಗೊಂಡರು.

ಪಾದಯಾತ್ರಿಕರಿಗೆ ದಾರಿಯುದ್ದಕ್ಕೂ ನೀರು, ಪಾನಕ, ಮಜ್ಜಿಗೆ, ಅಂಬಲಿ, ದ್ರಾಕ್ಷಿ, ಬಾಳೆ ಹಣ್ಣು ಸೇರಿದಂತೆ ವಿವಿಧ ಪದಾರ್ಥಗಳನ್ನು ವಿತರಿಸುವ ಕಾರ್ಯದಲ್ಲಿ ಅನೇಕರು ತಮ್ಮ ಭಕ್ತಿ ಸಮರ್ಪಿಸಿದರು.

ಬಳಿಕ ಕೋರಕೊಪ್ಪ ಗ್ರಾಮದ ಮಲ್ಲಿಕಾರ್ಜುನ ದೇವಸ್ಥಾನದ ಬಳಿ ಮತ್ತೊಮ್ಮೆ ಮಂಗಳಾರತಿ ಮಾಡಿದ ಬಳಿಕ ಪಾದಯಾತ್ರೆ ಗ್ರಾಮದಿಂದ ಮುಂದೆ ಸಾಗಿತು.

ಈ ವೇಳೆ ಚಂದ್ರಯ್ಯ ಮಠಪತಿ, ದುಂಡಯ್ಯ ಸುಬ್ಬಾಪೂರಮಠ, ಕೋರಕಪ್ಪ ರೇವಣಸಿದ್ದೇಶ್ವರ ಸ್ವಾಮಿಜಿ, ಅಶೋಕ ನಂದಿ, ಸುರೇಶ ನಂದಿ, ಕಿರಣ ನರೇವಾಡಿ, ಹನಮಂತ ಮುನ್ಯಾಳ, ನಿಂಗನಗೌಡ ಪಾಟೀಲ, ಬಾಳಪ್ಪ ಕಾಶನ್ನವರ, ಗುರುನಾಥ ಮಟ್ಟಿ, ಪರಪ್ಪ ಶಿಂಗಾರಗೊಪ್ಪ, ಬಸನಗೌಡ ಪಾಟೀಲ, ಈರಣ್ಣಾ ಗೌಡರ, ಬಸವಂತ ಪಾಟೀಲ, ಭೀಮಶಿ ಇಟಗೌಡ್ರ, ಮಹಾಂತೇಶ ಕೊಟ್ರಶೆಟ್ಟಿ, ಬಾಳಪ್ಪ ಚಂದರಗಿ, ಲಕ್ಷ್ಮಣ ಬಡೆನ್ನವರ, ರಾಕೇಶ ಹೊಂಗಲ, ಬಸು ತೇಲಿ, ಶಿವಪ್ಪ ಕಾಡವಗೋಳ ಇದ್ದರು.



ಜನಪದ ಕಲೆಗಳು ನಮ್ಮ ಸಂಸ್ಕೃತಿಯ ಜೀವಾಳ

ಯಮಕನಮರಡಿ: ಜನಪದ ಕಲೆಗಳು ನಮ್ಮ ಸಂಸ್ಕೃತಿಯ ಜೀವಾಳವಾಗಿದ್ದು, ಅವುಗಳನ್ನು ಉಳಿಸಲು ಹಾಗೂ ಮುಂದಿನ ಪೀಳಿಗೆಗೆ ಸಾಗಲು ಜನಪದ ಕಲೆಗಳಿಗೆ ಪ್ರೋತ್ಸಾಹ ನೀಡುವುದು ಅತ್ಯಂತ ಅಗತ್ಯ, ಇಂದಿನ ಮೊಬೈಲ್ ಯುಗದಲ್ಲಿ ಜನಪದ ಕಲೆಗಳು ನಿಧಾನವಾಗಿ ನಶಿಸುತ್ತಿವೆ. ಅವುಗಳನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಸಾಮಾಜಿಕ ಹೊಣೆಗಾರಿಕೆ ಎಂದು ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಕಿರಣ ಚೌಗಲಾ ಅಭಿಪ್ರಾಯಪಟ್ಟರು

ಸಮೀಪದ ಯಲ್ಲಾಪುರ ಗ್ರಾಮದ ಮಹಿಳಾ ಕಲ್ಯಾಣ ಸಂಸ್ಥೆಯ ನಮ್ಮೂರ ಬಾನುಲಿ ಸಮುದಾಯ ರೇಡಿಯೋ ಕೇಂದ್ರದಲ್ಲಿ ಆಯೋಜಿಸಿದ್ದ ಜಾನಪದ ಕಲಾ ಮೇಳವನ್ನು ಉದ್ಘಾಟಿಸಿ ಮಾತನಾಡಿದರು. ಗ್ರಾಮೀಣ ಸಂಸ್ಕೃತಿ, ಜನಪದ ನೃತ್ಯಸಂಗೀತ,ಕಥನಪರಂಪರೆಗಳು ನಿಧಾನವಾಗಿ ಮಂಕಾಗುತ್ತಿವೆ. ಈ ಅಮೂಲ್ಯ ಕಲೆಗಳನ್ನು ಉಳಿಸಲು ನಮ್ಮೂರ ಬಾನುಲಿ ವೇದಿಕೆ ಕಲ್ಪಿಸುತ್ತಿದೆ ಎಂದರು.



ವಿವಿಧ ಗ್ರಾಮಗಳಿಂದ ಆಗಮಿಸಿದ ಹತ್ತಕ್ಕೂ ಹೆಚ್ಚು ಕಲಾತಂಡಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಜನಪದ ಗೀತೆ, ಹಂತಿ ಪದ, ಲಾವಣಿ, ಏಕಪಾತ್ರಾಭಿನಯ, ಹಾಡು ಹಾಗೂ ನೃತ್ಯ ಪ್ರದರ್ಶನಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದರು. ಪ್ರತಿಯೊಂದು ತಂಡವೂ ತಮ್ಮದೇ ಆದ ವೈಶಿಷ್ಟ್ಯಪೂರ್ಣ ಶೈಲಿಯಲ್ಲಿ ಪ್ರದರ್ಶನ ನೀಡಿ ಗ್ರಾಮೀಣ ಸಂಸ್ಕೃತಿಯ ವೈಭವವನ್ನು ಪರಿಚಯಿಸಿತು.

ಕಾರ್ಯಕ್ರಮಕ್ಕೆ ಸುತ್ತಮುತ್ತಲಿನ ಗ್ರಾಮಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸಿದ್ದರು. ಕೊನೆಗೆ ಮಹಾಂತೇಶ ವಂದಿಸಿದರು.

ಶ್ರೀಶೈಲ ಮಹಾಕ್ಷೇತ್ರದತ್ತ ಮುಗಳಖೋಡ ಕಂಬಿಗಳು

ಮುಗಳಖೋಡ: ಶ್ರೀಶೈಲ ಪುಣ್ಯಕ್ಷೇತ್ರದಲ್ಲಿ ನಡೆಯುವ ಯುಗಾದಿ ಮಹೋತ್ಸವಕ್ಕೆ ಮುಗಳಖೋಡ ಪಟ್ಟಣದ ಶ್ರೀ ಮಲ್ಲಿಕಾರ್ಜುನನ ಕಂಬಿಗಳು ಭಕ್ತರ ಸಮ್ಮುಖದಲ್ಲಿ ಶ್ರೀಶೈಲಕ್ಕೆ ತೆರಳಿದವು.

ಹನುಮಾನ ದೇವಸ್ಥಾನದ ಅಗಸಿಯಲ್ಲಿ ಕಂಬಿಗಳನ್ನು ಕೂಡಿಸಿ ಪಟ್ಟಣದ ಸ್ವಾಮಿಗಳು ವಿಶೇಷವಾಗಿ ಪೂಜಿಸಿ ಭಕ್ತರೆಲ್ಲ ನೈವೇದ್ಯ ಸಮರ್ಪಿಸಿ ಮಂಗಳಾರತಿ ಮಾಡಿ ಕರಡಿ ಮಜಲು, ನಾನಾ ವಾದ್ಯಗಳ ಮೂಲಕ ಶ್ರೀಶೈಲ ಮಹಾಕ್ಷೇತ್ರಕ್ಕೆ ಕಳುಹಿಸಿಕೊಟ್ಟರು.

ಪಾದಚಾರಿಗಳಾಗಿ ಪಟ್ಟಣದ ಮಾರ್ಗವಾಗಿ ಶ್ರೀಶೈಲ ಮಹಾಕ್ಷೇತ್ರಕ್ಕೆ ತೆರಳುವ ಎಲ್ಲ ಭಕ್ತಾದಿಗಳಿಗೆ ಪಟ್ಟಣದ ಪ್ರತಿಷ್ಠಿತ ವಿದ್ಯಾಸಂಸ್ಥೆಯಾದ ಶ್ರೀ ಚವಿವ ಸಂಘದ ಡಾ. ಸಿ.ಬಿ.ಕುಲಿಗೋಡ ಪದವಿ ಮಹಾವಿದ್ಯಾಲಯದ ಆವರಣದ ಮುಂದೆ ಎಲ್ಲ ಅಂಗ ಸಂಸ್ಥೆಗಳ ಸಹಯೋಗದೊಂದಿಗೆ ಭಕ್ತಾಧಿಗಳಿಗೆ ಯುವ ಬಳಗದವರು ಕೂಡಿಕೊಂಡು ದ್ರಾಕ್ಷಿ, ಶರಬತ್, ಮಜ್ಜಿಗೆಯನ್ನು ವಿತರಿಸಿದರು.ಪಟ್ಟಣದ ವಿವೇಕಾನಂದ ಸರ್ಕಲ್ ಹತ್ತಿರ ಕರ್ನಾಟಕ ಚಾಲಕರ ಒಕ್ಕೂಟ (ರಿ) ಹಾಗೂ ಶ್ರೀ ಸಿದ್ದರಾಮೇಶ್ವರ ವಾಹನ ಮಾಲಕರ, ಚಾಲಕರ ಸಂಘದವರು ರಾಗಿಅಂಬಲಿ, ಕಬ್ಬಿನ ಹಾಲು ವಿತರಿಸಿ ತಮ್ಮ ಭಕ್ತಿಯನ್ನು ಸಮರ್ಪಿಸಿದರು. ಹೀಗೆ ಪಟ್ಟಣದ ನಾನಾ ಭಾಗಗಳಲ್ಲಿ ಭಕ್ತರು ಹಣ್ಣು ಹಂಪಲು, ಎಳನೀರು, ತಂಪು ಪಾನೀಯಗಳನ್ನು ನೀಡಿ ಶ್ರೀ ಮಲ್ಲಿಕಾರ್ಜುನ ಕೃಪೆಗೆ ಪಾತ್ರರಾದರು. ಈ ಸಂದರ್ಭದಲ್ಲಿ ಪಟ್ಟಣದ ಎಲ್ಲ ಸ್ವಾಮೀಜಿಗಳು ಶ್ರೀ ಮಲ್ಲಿಕಾರ್ಜುನನ ಎಲ್ಲ ಭಕ್ತ ಸಮೂಹದವರು ಉಪಸ್ಥಿತರಿದ್ದರು.



ವಿಹಿಂಪದಿಂದ ಹಲಗಿ ಹಬ್ಬ



ಸುರೇಬಾನ: ಸ್ಥಳೀಯ ವಿಶ್ವಹಿಂದು ಪರಿಷತ್ ಭಜರಂಗದಳದ ವತಿಯಿಂದ ಹಲಗಿ ಹಬ್ಬವನ್ನು ನೆರವೇರಿಸಲಾಯಿತು.

ಗ್ರಾಮದ ಬನಶಂಕರಿ ದೇವಸ್ಥಾನದಿಂದ ಕೇಸರಿ ಬಾವುಟ ಹಿಡಿದು ಹಲಗಿ ಹಾಗೂ ಜಗ್ಗಲಗಿ ಬಾರಿಸುತ್ತಾ ಪ್ರಾರಂಭಗೊಂಡು ಹೊಸಪೇಟೆ ಓಣೆ, ಸವದತ್ತಿ ರಸ್ತೆ ಮಾರ್ಗವಾಗಿ ಬಜಾರ್ ರಸ್ತೆ, ಮನಿಹಾಳ ಗ್ರಾಮದ ನಡುವಿನ ಪೇಟೆ ಕಾಮನ ಕಟ್ಟೆ, ಆತ್ಮಾನಂದ ಮೈದಾನ, ಅಪ್ಪಯ್ಯ ಸ್ವಾಮಿ ದೇವಸ್ಥಾನ, ಹಳ್ಳಿಕೇರಿ ಕ್ರಾಸ್, ರಾಮದುರ್ಗ-ಕೊಣ್ಣೂರ ಮುಖ್ಯ ರಸ್ತೆ ಮಾರ್ಗವಾಗಿ ಸಂಗೊಳ್ಳಿ ರಾಯಣ್ಣ ಕ್ರಾಸ್ ದಿಂದ ಸುರೇಬಾನ ಮಾರುತೇಶ್ವರ ದೇವಸ್ಥಾನಕ್ಕೆ ಆಗಮಿಸಿ ಸಂಪನ್ನಗೊಂಡಿತು. ಕಾರ್ಯಕ್ರಮದಲ್ಲಿ ರಾಮದುರ್ಗ ವಿಶ್ವಹಿಂದೂ ಪರಿಷತ್ ವಿಭಾಗ ಸತ್ಸಂಗ್ ಪ್ರಮುಖರಾದ ವಿಜಯ ಜ್ಯೋಷಿ, ಮಂಜುನಾಥ ಹನಸಿ, ಹಿಂದು ಜಾಗರಣ ವೇದಿಕೆ ಜಿಲ್ಲಾ ಸಹ ಸಂಚಾಲಕ, ಶರತ್ ಬಡಿಗೇರ, ಮಾರುತಿ ಚುಳಕಿ, ಗೋಪಾಲ ಪಾತಾಳಿ, ಹನಮಂತ ದೇವಶೆಟ್ಟಿ ಸೇರಿದಂತೆ ನೂರಾರು ಹಿಂದು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಶೈಕ್ಷಣಿಕ ಪ್ರವಾಸಕ್ಕೆ ಚಾಲನೆ

ಹುಕ್ಕೇರಿ: ಮಕ್ಕಳ ಸುರಕ್ಷತೆಯ ಜತೆಗೆ ಪ್ರವಾಸಿ ಮತ್ತು ಐತಿಹಾಸಿಕ ಸ್ಥಳಗಳನ್ನು ತಿಳಿಸಿಕೊಡುವಲ್ಲಿ ಕರ್ನಾಟಕ ದರ್ಶನ ಪ್ರವಾಸಿ ಉಸ್ತುವಾರಿ ಶಿಕ್ಷಕರು ಆದ್ಯತೆ ನೀಡಬೇಕು ಎಂದು ತಾಪಂ ಇಒ ಟಿ.ಆರ್.ಮಲ್ಲಾಡದ ಹೇಳಿದರು.

ಗುರುವಾರದಂದು ಸ್ಥಳೀಯ ಸರಕಾರಿಉರ್ದು ಹೈಸ್ಕೂಲ ಆವರಣದಲ್ಲಿ ಕರ್ನಾಟಕ ದರ್ಶನ ಪ್ರವಾಸಿ ಬಸ್‌ಗಳ ಪ್ರಯಾಣಕ್ಕೆ ಹಸಿರು ನಿಶಾನೆ ತೋರಿಸಿ ಮಾತನಾಡಿದರು. ಐದು ದಿನಗಳ ಪ್ರವಾಸದಲ್ಲಿ ಮಕ್ಕಳು ನಿತ್ಯ ವೀಕ್ಷಿಸಿದ ಸ್ಥಳಗಳ ಪ್ರಮುಖಾಂಶಗಳನ್ನು ಬರೆದಿಟ್ಟುಕೊಳ್ಳುವಂತೆ ಸಲಹೆಯಿತ್ತರು.

ಬಿ.ಇ.ಒ ಪ್ರಭಾವತಿ ಪಾಟೀಲ ಮಾತನಾಡಿದರು. ಕ್ಷೇತ್ರ ಸಮನ್ವಯಾಧಿಕಾರಿ ಎ.ಎಸ್. ಪದ್ಮನವರ, ತಾಲೂಕಿನ ಚಿಣ್ಣರ ಕರ್ನಾಟಕ ದರ್ಶನ ನೋಡಲ್ ಅಧಿಕಾರಿ ಭರತ ಪಾರ್ಥನಳ್ಳಿ, ಉಸ್ತುವಾರಿ ಶಿಕ್ಷಕರಾದ ಸಂಜು ಹೊನಕುಪ್ಪಿ, ವೈ.ಪಿ.ಕದಮ, ವಿನಾಯಕಪೂಜೇರಿ, ರೇಷ್ಮಾರತ್ನಾಕರ, ತನುಜಾಗುಡಸಿ, ಮಹಾದೇವಿ ಪಾಟೀಲ ಮತ್ತಿತರರಿದ್ದರು.



ಬೇಡಿದ ವರ ಕೊಡುವ ಶ್ರೀಶೈಲ ಮಲ್ಲಯ್ಯ



ಹಲ್ಯಾಳ: ಗ್ರಾಮದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಮಲ್ಲಯ್ಯನ ಭಕ್ತಾಧಿಗಳು ಹಲ್ಯಾಳ ಗ್ರಾಮದಿಂದ ಶ್ರೀಶೈಲರವರೆಗೆ ಸುಮಾರು 700 ಕಿಲೋಮೀಟರ್ ಪಾದ ಯಾತ್ರೆಯನ್ನು ಈ ಬಿರು ಬೇಸಿಗೆಯಲ್ಲಿ ಮಾಡುತ್ತಾರೆ. ಭಕ್ತರಿಗೆ ಕಿಂಚಿತ್ತು ನೋವಾಗದ ರೀತಿ ನಮ್ಮನ್ನು ರಕ್ಷಿಸುತ್ತಾನೆ ಎನ್ನುವುದು ಪಾದಯಾತ್ರಿಗಳ ನಂಬಿಕೆಯಾಗಿದೆ.

ಪ್ರತಿ ದಿನ ಕಂಬಿ ಮಲ್ಲಯ್ಯಗೆ ಪೂಜೆ ಪುನಸ್ಕಾರ ಸಲ್ಲಿಸಿ ಮಂಗಳಾರತಿ ಮಾಡಿ ಪ್ರಸಾದವನ್ನು ಸ್ವೀಕರಿಸಿ ಪಾದಯಾತ್ರೆ ಮಾಡುತ್ತಾರೆ. ಪಾದಯಾತ್ರೆಯುದ್ದಕ್ಕೂ ಮಲ್ಲಯ್ಯನ ನಾಮಸ್ಮರಣೆ ಮಾಡುತ್ತಾ ಮುಂದೆ ಸಾಗುತ್ತಾರೆ.

ಶ್ರೀಶೈಲ ಮಲ್ಲಯ್ಯನ ದಾರಿಯುದ್ದಕ್ಕೂ ಪಾದಯಾತ್ರಾತ್ರಿಗಳಿಗೆ ಭಕ್ತಾದಿಗಳು ಅನ್ನ ಪ್ರಸಾದವನ್ನು ಕಲ್ಪಿಸಿ ಕೊಡುತ್ತಾರೆ. ಪಾದಯಾತ್ರಿಗಳು ತಮ್ಮ ನೋವನ್ನು ಮರೆತು ಮಲ್ಲಯ್ಯನ ಜಪ ಮಾಡುತ್ತಾ ಮುಂದೆ ಸಾಗುತ್ತಾರೆ. ಭಕ್ತಿಯಿಂದ ಮಾಡಿದ ಸೇವೆಗೆ ಮಲ್ಲಯ್ಯ ತಕ್ಕ ಫಲ ನೀಡುತ್ತಾನೆ ಎಂದು ಪಾದಯಾತ್ರಿಗಳು ಹೇಳಿದರು. ಈ ವೇಳೆ ಪಾದಯಾತ್ರೆಗಳನ್ನು ಕಳಿಸಿಕೊಡಲು ಊರಿನ ಗ್ರಾಮಸ್ಥರೆಲ್ಲರೂ ಸೇರಿದ್ದರು.

ಎಸ್ಸೆಸ್ಸೆಲ್ಸಿ ಮಹತ್ವದ ಘಟ್ಟ

ಗೋಕಾಕ: ವಿದ್ಯಾರ್ಥಿ ಜೀವನದಲ್ಲಿ ಎಸ್‌ಎಸ್‌ಎಲ್‌ಸಿ ಅತ್ಯಂತ ಮಹತ್ವದ ಘಟ್ಟವಾಗಿದೆ ಎಂದು ಮೆಳವಂಕಿಯ ಪಿಎಮ್‌ಎಸ್ ಸಿದ್ಧಾರೂಢ ಮಠದ ಶಾಲೆಯ ಮುಖ್ಯೋಪಾಧ್ಯಾಯ ಈರಣ್ಣ ಕಡಕೋಳ ಹೇಳಿದರು.

ಸೋಮವಾರದಂದು ನಗರದ ಕೆಎಲ್‌ಇ ಸಿ ಎಸ್ ಅಂಗಡಿ ಪ್ರೌಢ ಶಾಲೆಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬಿಳ್ಕೊಡುವ ಸಮಾರಂಭದ ಮುಖ್ಯಅತಿಥಿಗಳಾಗಿ ಪಾಲ್ಗೊಂಡು ಮಾತನಾಡುತ್ತ, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಹೆಚ್ಚಿನ ಸವಕಾಶಗಳಿವೆ. ಗುರುಗಳ ಮಾರ್ಗದರ್ಶನದಲ್ಲಿ ಕಠಿಣ ಪರಿಶ್ರಮದಿಂದ ವಿದ್ಯಾರ್ಥಿ ಜೀವನವನ್ನು ಸದುಪಯೋಗಪಡಿಸಿಕೊಳ್ಳಿ ಧೈರ್ಯದಿಂದ ಪರೀಕ್ಷೆಗಳನ್ನು ಎದುರಿಸಿ ಉನ್ನತ ಶಿಕ್ಷಣ ಪಡೆದು ತಮ್ಮ ಬದುಕನ್ನು ರೂಪಿಸಿಕೊಳ್ಳಿ ಎಂದರು.

ವೇದಿಕೆಯ ಮೇಲೆ ಕೆಎಲ್‌ಇ ಸಂಸ್ಥೆಯ ಸ್ಥಾನಿಕ ಆಡಳಿತ ಮಂಡಳಿ ಅಧ್ಯಕ್ಷ ಎಮ್ ಡಿ ಚುನಮರಿ, ಮುಖ್ಯೋಪಾಧ್ಯಾಯ ಜಿ.ಎಮ್. ಬಿರಾದಾರ, ಶಿಕ್ಷಕಿಯರಾದ ಎಸ್.ಓ. ಅಂಗಡಿ, ವೀಣಾ ಬಿಳ್ಳೂರ ಇದ್ದರು.



ಕಿರುಸುದ್ದಿ

ಇಂದು ರಕ್ತ ಚಂದ್ರಗ್ರಹಣ: ಕಪಿಲೇಶ್ವರ ದೇವಸ್ಥಾನ ಬಂದ್

ಬೆಳಗಾವಿ: ಮಂಗಳವಾರ ಸಂಭವಿಸಲಿರುವ ರಕ್ತ ಚಂದ್ರಗ್ರಹಣದ ಛಾಯೆ ಗಡಿ ಜಿಲ್ಲೆ ಬೆಳಗಾವಿಯ ಮೇಲೆಯೂ ಬೀರಿದೆ. ಗ್ರಹಣದ ಹಿನ್ನೆಲೆಯಲ್ಲಿ ನಗರದ ಸುಪ್ರಸಿದ್ಧ ಕಪಿಲೇಶ್ವರ ದೇವಸ್ಥಾನದಲ್ಲಿ ವಿಶೇಷ ನಿಯಮಗಳನ್ನು ಜಾರಿಗೊಳಿಸಲಾಗಿದ್ದು, ಗರ್ಭಗುಡಿಯ ಬಾಗಿಲನ್ನು ಮುಚ್ಚಲಾಗಿದೆ. ಗ್ರಹಣದ ವೇಳೆ ಹೋಳಿ ಬಣ್ಣದಾಟ ಆಡುವುದು ಸೂಕ್ತವಲ್ಲ ಎಂದು ಅರ್ಚಕರು ಭಕ್ತರಲ್ಲಿ ಮನವಿ ಮಾಡಿದ್ದಾರೆ.ಇಂದು ಮಂಗಳವಾರ ಸಂಭವಿಸಲಿರುವ ರಕ್ತ ಚಂದ್ರಗ್ರಹಣದ ಹಿನ್ನೆಲೆಯಲ್ಲಿ ಬೆಳಗಾವಿಯ ಕಪಿಲೇಶ್ವರ ದೇವಸ್ಥಾನದಲ್ಲಿ ಧಾರ್ಮಿಕ ವಿಧಿವಿಧಾನಗಳಲ್ಲಿ ಬದಲಾವಣೆ ಮಾಡಲಾಗಿದೆ.

ಬುಧವಾರ ಬೆಳಗ್ಗೆ ಎಂದಿನಂತೆ ಪೂಜೆ ನೆರವೇರಲಿದ್ದು, ಬಳಿಕ ಸ್ವಯಂಭೂ ಶಿವಲಿಂಗವನ್ನು ಬಿಲ್ವಪತ್ರೆಗಳಿಂದ ಸಂಪೂರ್ಣವಾಗಿ ಮುಚ್ಚಿಡಲಾಗುವುದು. ಗ್ರಹಣದ ಸೂತಕದ ಹಿನ್ನೆಲೆಯಲ್ಲಿ ಬೆಳಗ್ಗೆ 11 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ದೇವಸ್ಥಾನದ ಬಾಗಿಲನ್ನು ಮುಚ್ಚಲಾಗುವುದು. ಸಂಜೆ 7 ಗಂಟೆಗೆ ಮರು ಆರಂಭಗೊಂಡು, ಶುದ್ಧೀಕರಣ ಹಾಗೂ ಅಭಿಷೇಕದ ನಂತರ ರಾತ್ರಿ 9 ಗಂಟೆಗೆ ದರ್ಶನಕ್ಕೆ ತೆರೆ ಬೀಳಲಿದೆ.

ಗ್ರಹಣವು ಹೋಳಿ ಹುಣ್ಣಿಮೆಯಂದೇ ಬಂದಿರುವುದರಿಂದ ಭಕ್ತರಿಗೆ ಕಪಿಲೇಶ್ವರ ಮಂದಿರದ ಅರ್ಚಕರು ವಿಶೇಷ ಮನವಿ ಮಾಡಿದ್ದಾರೆ. ಗ್ರಹಣದ ಅವಧಿಯಲ್ಲಿ ಬಣ್ಣದಾಟ ಆಡುವುದು ಶಾಸ್ತ್ರೋಕ್ತವಾಗಿ ಸರಿಯಲ್ಲ, ಹೀಗಾಗಿ ಮಾರ್ಚ್ 4ರಂದು ಹೋಳಿ ಆಚರಿಸುವುದು ಉತ್ತಮ ಎಂದು ತಿಳಿಸಿದ್ದಾರೆ.

ಮಾ.8ರಿಂದ ಶ್ರೀ ಲಕ್ಷ್ಮೀ ದೇವಿ ಜಾತ್ರಾ ಮಹೋತ್ಸವ

ಸಂಕೇಶ್ವರ: ಸಮೀಪದ ಅಮ್ಮಣಗಿ, ಕಮತನೂರ ಮತ್ತು ನಿಡಸೋಸಿಯ ಸೀಮೆಯಲ್ಲಿರುವ ಸೀಮೆಯ ಶ್ರೀ ಲಕ್ಷ್ಮೀ ದೇವಿ ಜಾತ್ರಾ ಮಹೋತ್ಸವ ಮಾ.8 ರಿಂದ ಮಾ.12ರ ವರೆಗೆ ಸಡಗರ ಸಂಭ್ರಮದಿಂದ ಜರುಗಲಿದೆ.

ಪ್ರತಿ ದಿನ ಸಂಜೆ 6 ಗಂಟೆಯಿಂದ ಶ್ರೀ ಧರ್ಮದೇವತೆ ಇಟಗಿ ಶ್ರೀ ಭೀಮಾಂಬಿಕಾದೇವಿ ಮಹಾತ್ಮೆ ಪ್ರವಚನ ಬಳಿಕ ರಾತ್ರಿ 9 ಗಂಟೆಗೆ ನಿತ್ಯ ಮಹಾಪ್ರಸಾದ ವಿತರಣೆ ನಡೆಯಲಿದೆ. ಪ್ರವಚನ ಕಾರ್ಯಕ್ರಮದ ಸಾನ್ನಿಧ್ಯವನ್ನು ನಿಡಸೋಸಿಯ ಡಾ.ಶಿವಲಿಂಗೇಶ್ವರ ಸ್ವಾಮೀಜಿ, ವಿಜಯಪೂರದ ಬಬಲಾದಿಯ ಮಹಾ ಸಂಸ್ಥಾನ ಮಠದ ಸದಾಶಿವ ಮುತ್ಯಾ, ಕ.ನೂಲ ಸುರಗೇಶ್ವರ ಸಂಸ್ಥಾನ ಮಠದ ಶ್ರೀ ಸಿದ್ದೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಘಟಪ್ರಭಾದ ಗುಬ್ಬಲಗುಡ್ಡ ಕೇಂಪಯ್ಯಾ ಸ್ವಾಮಿಮಠ ಡಾ. ಮಲ್ಲಿಕಾರ್ಜುನ ಮಹಾಸ್ವಾಮಿಗಳು, ಚಿಕ್ಕೋಡಿ ಚರಮೂರ್ತಿಮಠದ ಸಂಪಾದನ ಸ್ವಾಮಿಜಿ, ಕಮತನೂರ ಅಡವಿಸಿದ್ದೇಶ್ವರ ಮಠದ ಕೃಪಾನಂದ ಸ್ವಾಮೀಜಿ ವಹಿಸಲಿದ್ದಾರೆ. ಪ್ರವಚನಕಾರರಾಗಿ ಬಾಗಲಕೋಟೆಯ ಇಳಕಲ್‌ನ ಅನ್ನದಾನ ಸ್ವಾಮಿಗಳು ಹೀರೆಮಠ, ಕುಷ್ಟಗಿಯ ಶಾಂತಾನಂದ ಗವಾಯಿಗಳು ಸಂಗೀತಗಾರರಾಗಿ ಬಸವ ಬೇಳವಿಯ ರೋಹಿತ ಮಗದುಮ್ಮ ತಬಲಾವಾದನಕ್ಕಾಗಿ ಆಗಮಿಸಲಿದ್ದಾರೆ. ಮಾ.10 ರಂದು ಬೆಳಿಗ್ಗೆ 9 ಗಂಟೆಗೆ ಶ್ರೀ ಲಕ್ಷ್ಮೀದೇವಿಗೆ ಹೊಸದಾಗಿ ತಯಾರಿಸಿದ ಪಲ್ಲಕ್ಕಿ ಮೆರವಣಿಗೆ ಹಾಗೂ ಮಧ್ಯಾಹ್ನ 12 ಗಂಟೆಗೆ ಮಹಾಪ್ರಸಾದ ಮತ್ತು ರಾತ್ರಿ 9.30 ಗಂಟೆಗೆ ಜಗದಾಳದ ಶ್ರೀ ದುರ್ಗಾದೇವಿ ಗಾಯನ ಸಂಘ ಹಾಗೂ ಬಾಗಲಕೋಟೆ ಜಿಲ್ಲೆಯ ಸಿದ್ಧಾಪೂರದ ಶ್ರೀ ವಿಠ್ಠಾಯ ಗಾಯನ ಸಂಘ ಇವರಿಂದ ಹರದೇಶಿ ಹಾಗೂ ನಾಗೇಶಿ ಮೇಳ ನಡೆಯಲಿದೆ. ಮಾ.13 ರಂದು ಮಧ್ಯಾಹ್ನ 12 ಗಂಟೆಗೆ ಮಹಾಪ್ರಸಾದ ಕಾರ್ಯಕ್ರಮ ರಾತ್ರಿ 9:30 ಗಂಟೆಗೆ ಮಂಜುನಾಥ ಶ್ರೀ ಕೃಷ್ಣ ಪಾರಿಜಾತ ಬೈಲಾಟ ಸಂಘದ ವತಿಯಿಂದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕಲಾವಿದೆ ಕಾಶಿಬಾಯಿ ದಾದನಟ್ಟಿ ಶ್ರೀ ಕೃಷ್ಣ ಪಾರಿಜಾತ ಜರಗುವುದು ಎಂದು ಸೀಮೆಯ ಲಕ್ಷ್ಮೀ ದೇವಿ ಕಮಿಟಿಯವರು ಪ್ರಕಟಣೆಗೆ ತಿಳಿಸಿದ್ದಾರೆ.

ಆಕಸ್ಮಿಕವಾಗಿ ಬೆಂಕಿ: ಸುಟ್ಟು ಕರಕಲಾದ ಗ್ಯಾರೇಜ್

ಬೆಳಗಾವಿ: ಸಮೀಪದಲ್ಲಿರುವ ಕಾಕತಿ ಗ್ರಾಮದಲ್ಲಿ ಆಕಸ್ಮಿಕವಾಗಿ ಗ್ಯಾರೇಜ್ ಗೆ ಬೆಂಕಿ ಹತ್ತಿಕೊಂಡಿರುವುದರಿಂದ ಸಂಪೂರ್ಣವಾಗಿ ಸುಟ್ಟು ಕರಕಲಾಗಿದೆ. ಬಡ ಯುವಕನೊಬ್ಬನ ಗ್ಯಾರೇಜ್ ನಲ್ಲಿದ್ದ ಲಕ್ಷಾಂತರ ರೂಪಾಯಿ ವಸ್ತುಗಳು ಬೆಂಕಿಗಾಹುತಿಯಾಗಿವೆ. ದಿನೇ ಬೆಳೆಯುತ್ತಿರುವ ಕಾಕತಿ ಗ್ರಾಮಕ್ಕೆ ಪ್ರತ್ಯೇಕ ಅಗ್ನಿಶಾಮಕ ಠಾಣೆ ಇಲ್ಲದಿರುವುದೇ ಇಷ್ಟೊಂದು ದೊಡ್ಡ ಅನಾಹುತಕ್ಕೆ ಕಾರಣ ಎಂದು ಇಲ್ಲಿನ ಜನತೆಯು ಆಕ್ರೋಶವನ್ನು ಹೊರ ಹಾಕುತ್ತಿದ್ದಾರೆ.ಕಾಕತಿ ಗ್ರಾಮದ ಹೆದ್ದಾರಿ ಪಕ್ಕದಲ್ಲಿರುವ ವಿಕ್ರಂ ಆನಂದಾಚೆ ಎಂಬುವವರಿಗೆ ಸೇರಿದ ದ್ವಿಚಕ್ರ ವಾಹನ ಗ್ಯಾರೇಜ್ಗೆ ಆಕಸ್ಮಿಕವಾಗಿ ಬೆಂಕಿ ತಗುಲಿದ್ದು, ಸುಮಾರು 6 ರಿಂದ 7 ಲಕ್ಷ ರೂಪಾಯಿ ಮೌಲ್ಯದ ಆಸ್ತಿಪಾಸ್ತಿ ಹಾನಿಯಾಗಿದೆ.

ವಿಕ್ರಂ ಅವರು ಸಾಲ ಮಾಡಿ ಈ ಗ್ಯಾರೇಜ್ ಆರಂಭಿಸಿದ್ದು, ಇಡೀ ಕುಟುಂಬ ಇದನ್ನೇ ನಂಬಿ ಜೀವನ ನಡೆಸುತ್ತಿತ್ತು ಎನ್ನಲಾಗಿದೆ.



ನೇಸರಗಿ: ಸಮೀಪದ ಹಣಬರಹಟ್ಟಿ ಗ್ರಾಮದ ಶ್ರೀ ಹಿರೇಮಠದ ಬಸವಲಿಂಗ ಶಿವಾಚಾರ್ಯರ ನೇತೃತ್ವದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮ ಆಚರಿಸಲಾಯಿತು. ಮಹಾಂತೇಶ ಹಿರೇಮಠ, ಗ್ರಾಮದ ಹಿರಿಯರಾದ ಈರಪ್ಪ ಬ ಉಳವಿ, ಶ್ರೀಧರ ಭಾಯಾಲ್, ಗಂಗಪ್ಪ ಸಿ ಉಳವಿ, ಲಕ್ಷ್ಮಣ ಕಡಬಿ, ನಿಂಗಪ್ಪರ ಬಡವಣ್ಣವರ, ಮಲ್ಲಪ್ಪ ಬನ್ನೂರ, ಅಡಿಯಪ್ಪ ಹಡಿಗಿನಾಳ, ಶಿವಲಿಂಗಪ್ಪ ಜಕಾತಿ, ಬಸಪ್ಪ ದೊಡ್ಡಲಿಂಗಣ್ಣವರ ಸೇರಿದಂತೆ ಗ್ರಾಮದ ಮಹಿಳೆಯರು ಉಪಸ್ಥಿತರಿದ್ದರು.

50ಕ್ಕೂ ಹೆಚ್ಚು ಕಾರ್ಯಕರ್ತರು ಬಿಜೆಪಿ ಸೇರ್ಪಡೆ

ಚಿಕ್ಕೋಡಿ: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಭಿವೃದ್ಧಿ ಕಾರ್ಯ ಹಾಗೂ ನಿಪ್ಪಾಣಿ ಕ್ಷೇತ್ರದಲ್ಲಿ ತಾನು ಕೈಗೊಂಡ ಅಭಿವೃದ್ಧಿ ಕಾರ್ಯ ಮೆಚ್ಚಿ ನಿಪ್ಪಾಣಿ ಮತಕ್ಷೇತ್ರದ ಕಾರದಗಾ ಗ್ರಾಮದ ಮಾಜಿ ಜಿಲ್ಲಾ ಪಂಚಾಯತ ಸದಸ್ಯೆ ಸುಮಿತ್ರಾ ಉಗಳೆ ನೇತೃತ್ವದಲ್ಲಿ 50ಕ್ಕೂ ಹೆಚ್ಚು ಕಾರ್ಯಕರ್ತರು ಬಿಜೆಪಿ ಸೇರ್ಪಡೆಯಾಗಿದ್ದು ಹೆಮ್ಮೆಯ ಸಂಗತಿಯಾಗಿದೆ ಎಂದು ನಿಪ್ಪಾಣಿ ಶಾಸಕಿ ಶಶಿಕಲಾ ಜೊಲ್ಲೆ ಹೇಳಿದರು.ನಿಪ್ಪಾಣಿ ತಾಲೂಕಿನ ಕಾರದಗಾ ಗ್ರಾಮದ ಕಾರ್ಯಕರ್ತರನ್ನು ಬಿಜೆಪಿ ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡಿ, ''ಮುಂಬರುವ ದಿನಗಳಲ್ಲಿ ಬಿಜೆಪಿ ಪಕ್ಷವನ್ನು ಕ್ಷೇತ್ರದಲ್ಲಿ ಇನ್ನಷ್ಟು ಬಲಪಡಿಸಲಾಗುತ್ತಿದೆ. ವಿವಿಧ ಚುನಾವಣೆಗಳನ್ನು ಯಶಸ್ವಿಯಾಗಿ ಎದುರಿಸಿ ಮತ್ತೆ ಬಿಜೆಪಿಯನ್ನು ಅಧಿಕಾರಕ್ಕೆ ತರಲಾಗುವದು'' ಎಂದರು.ಕಾರ್ಯಕ್ರಮದಲ್ಲಿ ಸುದೀಪ ಉಗಳೆ, ಕಿರಣ ಟಕಳೆ, ರಂಜಿತ ಕದಂ, ಅಪ್ಪಾಸಾಬ ಖೋತ, ಆನಂದ ಚವ್ಹಾನ, ಜ್ಯೋತಿಬಾ ಕಾಂಬಳೆ, ಸಾಗರ ಖೋತ, ನಾಗೇಶ ಉಗಳೆ, ಮಹಾಲಿಂಗ ಖೋತ, ಬಾಬಾಸಾಹೇಬ ಪಾಟೀಲ, ಪ್ರಥಮೇಶ ನೇಜೆ, ದೀಪಕ ಉಗಳೆ, ಅನಿಲ ಉಗಳೆ,ಹಾಗೂಅವರ ತಂಡದ ಸದಸ್ಯರು 50 ಕ್ಕೂ ಅಧಿಕ ಕಾರ್ಯಕರ್ತರು ರಾಷ್ಟ್ರವಾದಿ ಕಾಂಗ್ರೆಸ್ ಪಕ್ಷ ತೊರೆದು ಬಿಜೆಪಿ ಪಕ್ಷಕ್ಕೆ ಸೇರ್ಪಡೆಗೊಂಡರು. ನಿಪ್ಪಾಣಿ ಶಾಸಕಿ ಶಶಿಕಲಾ ಜೊಲ್ಲೆ ಹಾಗೂ ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆಯವರು ಭಾರತೀಯ ಜನತಾ ಪಕ್ಷಕ್ಕೆ ಬರಮಾಡಿಕೊಂಡರು.



ಚಿಕ್ಕೋಡಿ: ನಿಪ್ಪಾಣಿ ಮತಕ್ಷೇತ್ರದ ಕಾರದಗಾ ಗ್ರಾಮದ ಜಿಲ್ಲಾ ಪಂಚಾಯತಿ ಮಾಜಿ ಸದಸ್ಯೆ ಸುಮಿತ್ರಾ ಉಗಳೆ ನೇತೃತ್ವದಲ್ಲಿ 50ಕ್ಕೂ ಹೆಚ್ಚು ಕಾರ್ಯಕರ್ತರು ಬಿಜೆಪಿ ಸೇರ್ಪಡೆಯಾದರು.
ಈ ಸಂದರ್ಭದಲ್ಲಿ ನಿಪ್ಪಾಣಿಯ ಹಾಲಸಿದ್ದನಾಥ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಎಂ. ಪಿ ಪಾಟೀಲ, ಸಂಚಾಲಕರಾದ ಶರದ ಜಂಗಟೆ, ಶ್ರೀಕಾಂತ ಬನ್ನೇ, ಸಮಿತ ಸಾಸನೆ, ಬಾಳಾಸಾಹೇಬ ಕದಂ, ಪ್ರಕಾಶ ಶಿಂಧೆ, ಯುನೂಸ್ ಮುಲ್ಲಾ, ಸಾಗರ ದೇಸಾಯಿ, ದಿಲೀಪ ಖೋತ ಸೇರಿದಂತೆ ಬಿಜೆಪಿ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

ಅಧಿಕಾರಿಗಳಿಗೆ ಶಾಸಕ ಬಾಲಚಂದ್ರ ಜಾರಕಿಹೊಳಿ ಸೂಚನೆ
ಕುಡಿಯುವ ನೀರಿನ ತೊಂದರೆಯಾಗದಿರಲಿ

ಗೋಕಾಕ: ಬೇಸಿಗೆಯ ಸಮಯದಲ್ಲಿ ಸಾರ್ವಜನಿಕರು ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆಗಳು ಬರದಂತೆ ಈಗಿನಿಂದಲೇ ಕಾರ್ಯಪ್ರವೃತ್ತರಾಗುವಂತೆ ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿಯವರು ಅಧಿಕಾರಿಗಳಿಗೆ ಸೂಚಿಸಿದರು.

ಸೋಮವಾರದಂದು ತಾಲೂಕಿನ ದುರದುಂಡಿ ಗ್ರಾಮ ಪಂಚಾಯತಿ ಸಭಾ ಭವನದಲ್ಲಿ ಕರೆಯಲಾಗಿದ್ದ ಮೂಡಲಗಿ ಮತ್ತು ಗೋಕಾಕ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅವರು, ಸಂಭವನೀಯ ಕುಡಿಯುವ ನೀರಿನ ಸಮಸ್ಯೆಗಳು ಎದುರಾಗದಂತೆ ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಕೊಳ್ಳಲು ಶಾಸಕರು ಸೂಚನೆಗಳನ್ನು ನೀಡಿದರು.

ಈಗ ಆರಂಭವಾಗಿರುವ ಬೇಸಿಗೆಯು ಮೇ ತಿಂಗಳತನಕ ಮುಂದುವರೆಯಲಿದ್ದು, ಈ ಮೂರು ತಿಂಗಳ ಅವಧಿಯಲ್ಲಿ ಜನರಿಗೆ ಕುಡಿಯುವ ನೀರಿನ ಸಮಸ್ಯೆಗಳು ಬರದಂತೆ ಪ್ರತಿ ಗ್ರಾಮಗಳಲ್ಲಿ ಅಧಿಕಾರಿಗಳು ನೀಗಾ ವಹಿಸಬೇಕು. ಎಲ್ಲಿ ಯಾವ ಸಮಸ್ಯೆಗಳು ಉದ್ಭವವಾಗಿವೆ. ಅವುಗಳ ಪರಿಹಾರಕ್ಕೆ ಅಗತ್ಯವಿರುವ ಕ್ರಮಗಳು ಯಾವವು ಎಂಬುದನ್ನು ಚಿಂತಿಸಬೇಕು. ಕುಡಿಯುವ ನೀರು ಪೂರೈಸಲು ಮೇಲಾಧಿಕಾರಿಗಳ ಜತೆ ಸಮನ್ವಯ ಸಾಧಿಸಬೇಕು. ಬೇಸಿಗೆಯ ವೇಳೆಯಲ್ಲಿ ಕೆಲವೆಡೆ ಕುಡಿಯುವ ನೀರಿನ ಆಹಾಕಾರ ಉಂಟಾಗಬಹುದು. ಎಲ್ಲೆಲ್ಲಿ ಸಮಸ್ಯೆಗಳು ಆವರಿಸಬಹುದೆಂಬುದನ್ನು ಅಧಿಕಾರಿಗಳು ಪಟ್ಟಿಯನ್ನು ತಯಾರಿಸಬೇಕು. ಜನರಿಗೆ ಅಗತ್ಯ ಬಿದ್ದರೆ ಟ್ಯಾಂಕರ್ ಮೂಲಕ ನೀರು ಪೂರೈಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು. ಬೋರ್ವೆಲ್ ಗಳನ್ನು ದುರಸ್ತಿ ಮಾಡಿಸಿ ಜನರಿಗೆ ಅನುಕೂಲ ಕಲ್ಪಿಸಿಕೊಡುವಂತೆ ಅವರು ಸೂಚಿಸಿದರು.



ಅಕ್ರಮಕ್ಕೆ ಬ್ರೇಕ್ ಹಾಕಿ

ಅಕ್ರಮ ಮದ್ಯ ಮಾರಾಟಕ್ಕೆ ಪೋಲಿಸ್ ಅಧಿಕಾರಿಗಳು ಬ್ರೇಕ್ ಹಾಕಬೇಕು. ಪರವಾನಿಗೆ ಪಡೆದವರು ಮಾತ್ರ ಮದ್ಯ ಮಾರಾಟ ಮಾಡಬೇಕು. ಹಳ್ಳಿ- ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟದಿಂದ ಅನೇಕ ಸಮಸ್ಯೆಗಳು ಉದ್ಭವಿಸುತ್ತಿವೆ. ಕುಡಿತದಿಂದ ಅಪಘಾತಗಳು ಸಂಭವಿಸಬಹುದು. ಇದಕ್ಕೆಲ್ಲ ಅಧಿಕಾರಿಗಳು ಸೂಕ್ತ ಕ್ರಮಗಳನ್ನು ಕೈಕೊಳ್ಳಬೇಕು ಎಂದು ಶಾಸಕ ಬಾಲಚಂದ್ರ ಜಾರಕಿಹೊಳಿಯವರು ಅಧಿಕಾರಿಗಳಿಗೆ ಸೂಚಿಸಿದರು.

ರೈತರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡಲು ಅಧಿಕಾರಿಗಳು ಕ್ರಮಗಳನ್ನು ಕೈಗೊಳ್ಳಬೇಕು. ವಿದ್ಯಾರ್ಥಿಗಳ ವಾರ್ಷಿಕ ಪರೀಕ್ಷೆಗಳು ನಡೆಯುತ್ತಿರುವುದರಿಂದ ಅವರ ಅಭ್ಯಾಸಕ್ಕೆ ಅನುಕೂಲವಾಗಲು ವಿದ್ಯುತ್ ಪೂರೈಕೆ ಮಾಡಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿಲ್ಲ. ಇದರಿಂದ ರೋಗಿಗಳಿಗೆ ಸಮಸ್ಯೆಗಳು ಆಗುತ್ತಿವೆ ಎಂದು ಸಾರ್ವಜನಿಕರಿಂದ ವ್ಯಾಪಕವಾದ ದೂರುಗಳು ಬರುತ್ತಿವೆ. ತಕ್ಷಣವೇ ಕರ್ತವ್ಯಕ್ಕೆ ಗೈರಾಗುವ ವೈದ್ಯರ ವಿರುದ್ಧ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಲ್ಲದೇ ಸರಕಾರಿ ಆಸ್ಪತ್ರೆಗಳ ಮೇಲ್ವಿಚಾರಣೆಗಾಗಿ ಸ್ಥಳೀಯ ಮಟ್ಟದಲ್ಲಿ ಪಿಡಿಓ ಅವರು ಹೆಚ್ಚಿನ ಮುತುವರ್ಜಿ ವಹಿಸಬೇಕು. ಗೈರುಹಾಜರಾಗುವ ಸಿಬ್ಬಂದಿ ವಿರುದ್ಧ ಕ್ರಮಗಳನ್ನು ಕೈಕೊಳ್ಳಲು ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸುವಂತೆ ಅವರು ಸೂಚಿಸಿದರು.

ಮೂಡಲಗಿ ತಹಶೀಲ್ದಾರ ಶ್ರೀಶೈಲ ಗುಡುಮೆ, ಗೋಕಾಕ ತಾ.ಪಂ. ಇಓ ಪರಶುರಾಮ ಗಸ್ತೆ, ಮೂಡಲಗಿ ತಾ.ಪಂ.ಇಓ ನೇರ್ಲೇಕರ ಸೇರಿದಂತೆ ತಾಲೂಕು ಮಟ್ಟದ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

ಪುರಸಭೆ, ಪಟ್ಟಣ ಪಂಚಾಯತಿಗಳ ಮುಖ್ಯಾಧಿಕಾರಿಗಳು, ಮೂಡಲಗಿ- ಗೋಕಾಕ ತಾಲೂಕಿನ ಪಂಚಾಯತಿ ಅಭಿವೃದ್ಧಿ

ಅಧಿಕಾರಿಗಳು, ಗ್ರಾಮ ಆಡಳಿತ ಅಧಿಕಾರಿಗಳು, ಅಭಿಯಂತರರು, ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಕಾರ್ಯಕರ್ತರ ಪ್ರೇರಣೆಯೇ ಬೆಳವಣಿಗೆಗೆ ಕಾರಣ : ಪಾಟೀಲ

ಚಿಕ್ಕೋಡಿ: 2023ರ ಸಾರ್ವತ್ರಿಕ ವಿಧಾನಸಭೆ ಚುನಾವಣೆಯಲ್ಲಿ ನಿಪ್ಪಾಣಿ ಕ್ಷೇತ್ರದಿಂದ ಸ್ಪರ್ಧಿಸಿ 68 ಸಾವಿರ ಮತಗಳನ್ನು ಪಡೆದು ಪರಾಭವಗೊಂಡರೂ ಕಾರ್ಯಕರ್ತರ ಪ್ರೇರಣೆಯಿಂದ ಕ್ಷೇತ್ರದಲ್ಲಿ ಉತ್ಸಾಹದಿಂದ ಕೆಲಸ ಮಾಡುತ್ತಿದ್ದೇನೆ ಎಂದು ಯುವ ನಾಯಕ ಉತ್ತಮ ಪಾಟೀಲ ಹೇಳಿದರು.

ನಿಪ್ಪಾಣಿ ತಾಲೂಕಿನ ಬೋರಗಾಂವ ಪಟ್ಟಣದಲ್ಲಿ ಅಭಿಮಾನಿ ಬಳಗ ಭಾನುವಾರ ಹಮ್ಮಿಕೊಂಡಿದ್ದ ತಮ್ಮ 48ನೇ ಜನ್ಮದಿನಾಚರಣೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಸಹಕಾರ, ಸಾಮಾಜಿಕ, ಶೈಕ್ಷಣಿಕ, ಆರೋಗ್ಯ, ಕಲೆ, ಕ್ರೀಡಾ ಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಕಾರ್ಯಕರ್ತರ ಸೇವೆ ಮಾಡುತ್ತಿದ್ದು, ನಮ್ಮ ಬೆನ್ನಿಗೆ ಯಾವುದೇ ನಾಯಕ ನಿಲ್ಲದೇ ಇದ್ದರೂ ಕಾರ್ಯಕರ್ತರ ಆಶೀರ್ವಾದವೇ ನಮಗೆ ಪ್ರೇರಣೆಯಾಗಿದೆ ಎಂದರು.

ಯುವ ಮುಖಂಡ ಉತ್ತಮ ಪಾಟೀಲ ಅವರ ಜನ್ಮದಿನದ ನಿಮಿತ್ಯವಾಗಿ ಬೋರಗಾಂವ ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿವಿಧ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸ್ಥಳೀಯರಿಗೆ ಸಿಲಿಂಡರ್ ವಿತರಣೆ, ಗೃಹೋಪಯೋಗಿ ವಸ್ತುಗಳ ವಿತರಣೆ ಮಾಡಲಾಯಿತು. ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು. ನಿಪ್ಪಾಣಿ ಮತಕ್ಷೇತ್ರ ವ್ಯಾಪ್ತಿಯ ಸಹಸ್ರಾರು ಕಾರ್ಯಕರ್ತರು ಉತ್ತಮ ಪಾಟೀಲ ಅವರನ್ನು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಅರಿಹಂತ ಕಾರ್ಯಾಧ್ಯಕ್ಷ ಅಭಿನಂದನ ಪಾಟೀಲ, ಮೀನಾಕ್ಷಿ ಪಾಟೀಲ, ದಕ್ಷಿಣ ಭಾರತ ಜೈನಸಭಾ ಅಧ್ಯಕ್ಷ ಬಾಲಚಂದ್ರ ಪಾಟೀಲ, ಧರಿಖಾನ ಅಜ್ಜ, ಪಂಕಜ ಪಾಟೀಲ, ಪ್ರಕಾಶ ಪಾಟೀಲ, ಪಟ್ಟಣ ಪಂಚಾಯಿತಿ ಅಧ್ಯಕ್ಷ ದಿಗಂಬರ ಕಾಂಬಳೆ, ದತ್ತ ಸಕ್ಕರೆ ಕಾರ್ಖಾನೆ ಉಪಾಧ್ಯಕ್ಷ ಶರದಚದ್ರ ಪಾಠಕ, ಅರಿಹಂತ ಸೊಸೈಟಿ ಉಪಾಧ್ಯಕ್ಷ ಸತೀಶ ಪಾಟೀಲ, ಸಿಇಓ ಅಶೋಕ ಬಂಕಾಪೂರೆ, ಕೃಷಿ ಸಂಘದ ಸಿಇಓ ಆರ್ ಟಿ ಚೌಗಲಾ, ಶೋಭಾ ಹವಲೆ, ಶೀತಲ ಪಾಟೀಲ ಇತರರು ಇದ್ದರು.



ಉತ್ತಮ ಬದುಕು ರೂಪಿಸಿಕೊಳ್ಳಿ

ಬೈಲಹೊಂಗಲ: ಉತ್ತಮ ಶಿಕ್ಷಣ ಪಡೆದು ಸ್ವಾವಲಂಬಿಗಳಾಗಿ ಉತ್ತಮ ಬದುಕು ರೂಪಿಸಿಕೊಳ್ಳಿ ಎಂದು ಅಂಚಟಗೇರಿ ಪ್ರೌಢಶಾಲೆಯ ಮುಖ್ಯಶಿಕ್ಷಕರಾದ ಎಂ.ಎಸ್. ಶಿವಳ್ಳಿಮಠ ಹೇಳಿದರು.

ತಾಲೂಕಿನ ಬೂದಿಹಾಳ ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ನಡೆದ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಉದ್ಯಮಿ ಸುನೀಲ ವೆರ್ಣೇಕರ ಅವರು 2024-25ನೇ ಸಾಲಿನ ಎಸ್‌ಎಸ್ ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಗಳಿಸಿದ ಟಾಪರ್ ವಿದ್ಯಾರ್ಥಿ ವೃದ್ಧಿ ಗರಗದ ಅವರಿಗೆ ಸೈಕಲ್ ಬಹುಮಾನವಾಗಿ ನೀಡಿ ಪ್ರೋತ್ಸಾಹಿಸಿದರು. ಜೊತೆಗೆ ಇತರೆ ಮೇರು ವಿದ್ಯಾರ್ಥಿಗಳಿಗೆ ಸ್ಮಾರ್ಟ್ ವಾಚ್, ಶಾಲಾ ಬ್ಯಾಗ್, ನೋಟ್ ಪುಸ್ತಕಗಳು ಹಾಗೂ ಟ್ರೋಫಿಗಳನ್ನು ವಿತರಿಸಿದರು. ಮಕ್ಕಳಿಗೆ ಹೆತ್ತವರ ತ್ಯಾಗ ಮತ್ತು ಕಾಳಜಿಯ ಅರಿವು ಇರಬೇಕು. ಸಮಯ ವ್ಯರ್ಥ ಮಾಡದೆ ಓದಿನ ಕಡೆ ಗಮನಹರಿಸಬೇಕು ಎಂದು ಅವರು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಮುಖ್ಯ ಶಿಕ್ಷಕ ಎನ್. ಆರ್. ಠಕ್ಕಾಯಿ ಮಾತನಾಡಿದರು.

ನಿವೃತ್ತ ಶಿಕ್ಷಕ ಎಂ.ಬಿ. ಹೊಂಗಲ ಅವರು ಮಾತನಾಡಿದರು. ಎಸ್.ಡಿ.ಎಂ.ಸಿ ಸದಸ್ಯರಾದ ರಾಮು ಮೆಕ್ಕೇದ ಅವರು ಶಾಲೆಗೆ ಸೌಂಡ್ ಸಿಸ್ಟಮ್ ದೇಣಿಗೆ ನೀಡಿದರು.

ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ವಿನಾಯಕ ಬಡಿಗೇರ, ಸದಸ್ಯರಾದ ದುಂಡಪ್ಪ ಮಡಿವಾಳರ, ರವೀಂದ್ರ ಮನಗುತ್ತಿ, ಯಲ್ಲಪ್ಪ ಕುರಿ, ಮಂಜುಳಾ ಕುಲಕರ್ಣಿ, ಗ್ರಾಮದ ಹಿರಿಯರಾದ ಚನಬಸಯ್ಯ ಮಠದ, ಮಲ್ಲಪ್ಪ ಹೊಂಗಲ, ಈರಪ್ಪ ಗರಗದ, ಬಸಪ್ಪ ಸೊಗಲದ, ದೇಮಪ್ಪ ಜೋಗಿಗುಡ್ಡ, ಮಂಜುನಾಥ ಗುಡ್ಡದ, ಶಿಕ್ಷಕರಾದ ಪ್ರವೀಣ ಗುರುನಗೌಡರ, ವೀರೇಂದ್ರ ಪಾಟೀಲ, ಹೇಮಲತಾ ಪುರಾಣಿಕ, ಮಂಜುಳಾ ಕಾಳಿ, ಸಂತೋಷ ಸಾಳುಂಕೆ, ಪ್ರಾಥಮಿಕ ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು, ಪಾಲಕರು ಹಾಗೂ ಹಳೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶಿಕ್ಷಕ ಜಗದೀಶ ನರಿ ಸ್ವಾಗತಿಸಿದರು. ಶಿವಾನಂದ ಬಳಿಗಾರ ಕಾರ್ಯಕ್ರಮ ನಿರೂಪಿಸಿದರು.



ಪ್ರವಾಸಿ ಮಂದಿರ ಉದ್ಘಾಟನೆ

ಕುಡಚಿ: ಯಲ್ಪಾರಟ್ಟಿ ಹತ್ತಿರ ಕಾಗವಾಡ ಕಲಾದಗಿ ರಾಜ್ಯ ಹೆದ್ದಾರಿ ಪಕ್ಕ ಬ್ರಿಟೀಷ್ ಆಡಳಿತದಲ್ಲಿ ಸ್ವತಂತ್ರ ಪೂರ್ವದ 1941ರಲ್ಲಿ ನಿರ್ಮಾಣವಾದ ಯಲ್ಪಾರಟ್ಟಿ ಬಂಗ್ಲೆ ಎಂದೇ ಖ್ಯಾತಿ ಹೊಂದಿದ್ದ ಪ್ರವಾಸಿ ಮಂದಿರವನ್ನು ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ ಹಾಗೂ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಮೊಹ್ಮದ್ ಮುಸ್ತಫಾ ಅವರ ವಿಶೇಷ ಆಸಕ್ತಿ ಹಾಗೂ ಪ್ರಯತ್ನದಿಂದ ಐತಿಹಾಸಿಕ ಪ್ರವಾಸಿ ಮಂದಿರವನ್ನು ನವಿಕರಣಗೊಳಿಸಿ ಆಧುನಿಕ ಟಚ್ ನೀಡುವ ಮೂಲಕ ಸೌಂದರ್ಯಿಕರಣಗೊಳಿಸಿದ ಪ್ರವಾಸಿ ಮಂದಿರವನ್ನು ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಅಮೀನಭಾವಿ ಹಾಗೂ ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ ರಿಬ್ಬನ್ ಎಳೆಯುವ ಮೂಲಕ ಉದ್ಘಾಟಿಸಿ ಪ್ರವಾಸಿ ಮಂದಿರದ ನವೀಕರಣ ಹಾಗೂ ಸೌಂದರಿಕರಣದ ಕುರಿತು ಪ್ರಶಂಸೆ ವ್ಯಕ್ತಪಡಿಸಿದರು.

ನಂತರ ಕೃಷ್ಣಾನದಿ ಪ್ರವಾಹದಿಂದ ಮುಳುಗಡೆ ಗ್ರಾಮಗಳಾದ ಶಿರಗೂರ-ಗುಂಡವಾಡ ಸ್ಥಳಾಂತರದ ಬಗ್ಗೆ ಹಾಗೂ ಕುಡಚಿ ಗ್ರಾಮೀಣ ಗಡ್ಡೆ ಪ್ರದೇಶದಲ್ಲಿ ಇರುವ ಗಡ್ಡೆ ಶಿರಾಜಸಾಹೇಬರ ದರ್ಗಾ ಹತ್ತಿರ ತಡೆಗೋಡೆ ಹಾಗೂ ಘಾಟ ನಿರ್ಮಾಣದ ಕುರಿತು ಸ್ಥಳೀಯ ಮುಖಂಡರ ಜೊತೆ ಸುದೀರ್ಘ ಸಭೆ ನಡೆಸಿದರು.



ಈ ಸಂದರ್ಭದಲ್ಲಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರ ನಾಗೇಶ ಕೋಲಕಾರ, ಎಇಇ ಮೊಹ್ಮದ್ ಮುಸ್ತಫಾ, ಎಇ ಸತೀಶ ಪತ್ತಾರ, ಕಾಂಗ್ರೇಸ್ ಬ್ಲಾಕ್ ಅಧ್ಯಕ್ಷ ಪ್ರದೀಪ್ ಹಾಲಗುಣಿ, ಮುಖಂಡರಾದ ಸುಕುಮಾರ್ ಪಾಟೀಲ, ಸಾಹೇಬಲಾಲ ರೋಹಿಲೆ, ಅಲ್ಲಾವುದಿನ ರೋಹಿಲೆ, ಹಮಿದಿನ ರೋಹಿಲೆ, ಸುರೇಶ್ ಹೊಸಮನಿ, ಗಿರಿಗೌಡ ಪಾಟೀಲ, ಬಾಹುಬಲಿ ಬ್ಯಾಡಗಿ, ಡಾ.ಸಿದ್ಧಾರೂಡ ಕೌಲಗುಡ್ಡ, ಮಿಸಬಾ ಚಮನಮಲಿಕ, ಸುತ್ತ ಮುತ್ತಲಿನ ಗ್ರಾಮಗಳ ಹಿರಿಯರು ರೈತರು ಹಾಗೂ ಅಧಿಕಾರಿ ವರ್ಗದವರು ಉಪಸ್ಥಿತರಿದ್ದರು.

ರಸ್ತೆ ಕಾಮಗಾರಿಗೆ ಭೂಮಿಪೂಜೆ

ರಾಯಬಾಗ: ಮತಕ್ಷೇತ್ರದ ವ್ಯಾಪ್ತಿಯ ರಸ್ತೆಗಳನ್ನು ಸುಧಾರಣೆ ಮಾಡಿ ಸಾರ್ವಜನಿಕರಿಗೆ ಸಂಚಾರ ಹಾಗೂ ಸಾರಿಗೆಗೆ ಅನುಕೂಲ ಮಾಡಿಕೊಡಲಾಗುತ್ತದೆ ಎಂದು ಶಾಸಕ ಡಿ.ಎಂ.ಐಹೊಳೆ ಹೇಳಿದರು.

ತಾಲೂಕಿನ ಮೇಖಳಿ ಗ್ರಾಮದ ಜಾನ್ವೇಕರ ತೋಟದಿಂದ ಮೇಖಳಿ ಗ್ರಾಮದವರೆಗೆ ಹಾಗೂ ಮೇಖಳಿ ಗ್ರಾಮದಿಂದ ನಾಗರಮುನೋಳಿ ಮುಖ್ಯರಸ್ತೆಯ ಮುತಾರೆ ತೋಟದ ಸರಕಾರಿ ಶಾಲೆಯವರೆಗೆ ಜಿಲ್ಲಾ ಪಂಚಾಯತಿ ಇಲಾಖೆಯಿಂದ ಮಂಜೂರಾದ ತಲಾ 20 ಲಕ್ಷ ರೂ.ಗಳ ವೆಚ್ಚದ ರಸ್ತೆ ಸುಧಾರಣೆ ಕಾಮಗಾರಿಗೆ ಶಾಸಕ ಡಿ.ಎಮ್.ಐಹೊಳೆ ಭೂಮಿ ಪೂಜೆನೆರವೇರಿಸಿ ಮಾತನಾಡಿ, ಗ್ರಾಮಸ್ಥರು ತಮ್ಮದೇ ಆದ ರಸ್ತೆಯನ್ನು ಉತ್ತಮ ಗುಣಮಟ್ಟದಿಂದ ಮಾಡಿಸಿಕೊಳ್ಳಬೇಕೆಂದರು.

ಈ ಸಂದರ್ಭದಲ್ಲಿ ಸಂಗಣ್ಣದತ್ತವಾಡೆ, ಪಿ.ಎ.ನಾಯಿಕ, ಭೀಮಸೇನ ಮುತಾರೆ, ಮಹಾದೇವಜಾನ್ವೇಕರ, ಕುಮಾರ ಮರಭೀಮಗೋಳ,



ಸಂತೋಷಉಗಾರೆ, ಸತ್ತೆಪ್ಪಕುದುರೆ, ಶ್ರೀಧರ ಖಿಚಡೆ, ಪುಂಡಲೀಕ ಮುತಾರೆ, ಬಂಡುಜಾನ್ವೇಕರ, ಬಸವರಾಜ ಸುತಾರ, ಸದಾಶಿವ ಘೋರ್ಪಡೆ, ಅಭಿಯಂತರರಾಕೇಶಕಟ್ಟಿಮನಿ, ಗುತ್ತಿಗೆದಾರ ಮಲ್ಲಪ್ಪಅರಭಾಂವಿ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಬೆಳೆಸುವುದರಲ್ಲಿ ನನಗೆ ವಿಶ್ವಾಸ, ತುಳಿಯುವ ಸ್ವಭಾವ ನನ್ನದಲ್ಲ

ಬೆಳಗಾವಿ: ನಾನೂ ಬೆಳೆದು ಬೇರೆಯವರನ್ನೂ ಬೆಳೆಸುವುದರಲ್ಲಿ ನನಗೆ ವಿಶ್ವಾಸ, ನಾನು ಬೆಳೆದು ಬೇರೆಯವರನ್ನು ತುಳಿಯುವ ಸ್ವಭಾವ ನನ್ನದಲ್ಲ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಹಿರೇಬಾಗೇವಾಡಿಯಲ್ಲಿ ಭಾನುವಾರ ಸಂಜೆ ಬಾಲ ವಿಕಾಸ ಅಕಾಡೆಮಿಯ ನೂತನ ಅಧ್ಯಕ್ಷರಾಗಿ ನೇಮಕವಾಗಿರುವ ಅಡಿವೇಶ್ ಇಟಗಿ ಅವರ ಜನ್ಮದಿನದ ಹಿನ್ನೆಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಸತ್ಕಾರ ಸಮಾರಂಭದಲ್ಲಿ ಪಾಲ್ಗೊಂಡು, ಗೌರವ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು. ಬೆಳೆದು ತುಳಿಯುವವರನ್ನು ದೇವರೂ ಮೆಚ್ಚುವುದಿಲ್ಲ. ಎಲ್ಲರನ್ನೂ ಜೊತೆಯಾಗಿ ಕರೆದುಕೊಂಡು ಹೋಗವ ಸ್ವಭಾವ ನನ್ನದು. ನಿಜವಾದ ಕಾರ್ಯಕರ್ತರನ್ನು, ಮುಖಂಡರನ್ನು ಗುರುತಿಸಿ ಬೆಳೆಸುವವರೇ ನಿಜವಾದ ನಾಯಕರು ಎಂದು ಅವರು ಹೇಳಿದರು.

ಮಂತ್ರಿಯಾಗಿ ಕೆಲಸ ಮಾಡುವ ದೊಡ್ಡ ಜವಾಬ್ದಾರಿ ನನ್ನ ಗ್ರಾಮೀಣ



ಸಚಿವೆ ಹೆಬ್ಬಾಳಕರ್ ಹೇಳಿಕೆ

ಕ್ಷೇತ್ರದ ಜನರಿಂದ ನನಗೆ ಬಂದಿದೆ. ಮೂರು ಇಲಾಖೆಯಿಂದಾಗಿ ರಾಜ್ಯದ ಶೇ. 70 -80 ಜನರ ಸೇವೆ ಮಾಡುವ ಅವಕಾಶ ನನಗೆ ಸಿಕ್ಕಿದೆ. ರಾಜ್ಯದ ಮುಂಚೂಣಿಯಲ್ಲಿ ಬೆಳಗಾವಿ ಗ್ರಾಮೀಣ ಕ್ಷೇತ್ರದ ಹೆಸರು ಇರುವಂತೆ ಮಾಡುತ್ತೇನೆ. ನಾನು ಹೇಳಿದ್ದನ್ನು ಮಾಡುತ್ತೇನೆ, ಮಾಡುವುದನ್ನಷ್ಟೇ ಹೇಳುತ್ತೇನೆ. ಎಲ್ಲ ಜಾತಿಯವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇನೆ ಎಂದು ಅವರು ತಿಳಿಸಿದರು.

ಸಕಲ ಜೀವಿಗಳ ಕ್ಷೇಮ ಬಯಸುವವರೇ ಹಿಂದು. ನಾನು 154 ದೇವಸ್ಥಾನ, 31 ಅಂಬೇಡ್ಕರ್ ಭವನ, ಹಲವಾರು ಶಾದಿ ಮಹಲ್, ಜೈನ ಬಸದಿ, ಪ್ರಾರ್ಥನಾ ಮಂದಿರಗಳನ್ನು ಜೀರ್ಣೋದ್ಧಾರ ಮಾಡದ್ದೇನೆ. ಬೇರೆಯವರು ಬರೇ ಹಿಂದೂ ಎಂದು ಭಾಷಣ ಮಾಡುತ್ತಾರೆ. ನಾನು ಕೆಲಸ ಮಾಡುತ್ತೇನೆ. ಕೇವಲ ಭಾಷಣದಲ್ಲಿ ಹೇಳಿದರೆ ಹಿಂದು ಆಗುವುದಿಲ್ಲ. ಕಲ್ಲಿಗೂ ಪೂಜೆ ಮಾಡುವ, ಗಾಳಿಗೂ ಪೂಜೆ ಮಾಡುವ, ಬೆಂಕಿಗೂ ಪೂಜೆ ಮಾಡುವ, ಎಲ್ಲ ವಸ್ತುಗಳನ್ನು ಪೂಜೆ ಮಾಡುವ ನಾವು ಬೇರೆ ಮನುಷ್ಯರನ್ನು ದ್ವೇಷ ಮಾಡುವುದು ಎಷ್ಟು ಸರಿ? ಎಂದು ಲಕ್ಷ್ಮೀ ಹೆಬ್ಬಾಳಕರ್ ಪ್ರಶ್ನಿಸಿದರು.

ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಮಾತನಾಡಿ, ಕೇವಲ ತಾವು ಬೆಳೆದರೆ ನಾಯಕರಾಗುವುದಿಲ್ಲ. ಸಮಾಜದಲ್ಲಿರುವ ಮುಖಂಡರನ್ನು ಗುರುತಿಸಿ ಜವಾಬ್ದಾರಿ ಕೊಟ್ಟು ಬೆಳೆಸಬೇಕು. ಅಂತಹ ವಿಶಾಲ ಹೃದಯ ಲಕ್ಷ್ಮೀ ಹೆಬ್ಬಾಳಕರ್ ಅವರದ್ದು. ಎಲ್ಲ ಕೆಲಸ ಮಾಡುವ ಶಕ್ತಿಯನ್ನು ದೇವರು ಅವರಿಗೆ ಕೊಟ್ಟಿದ್ದಾನೆ. ಪ್ರಾಮಾಣಿಕ ಕೆಲಸಗಾರರಾಗಿರುವ ಅವರನ್ನು ಮುಂದಿನ ದಿನಗಳಲ್ಲೂ ಬೆಂಬಲಿಸಿ ಶಾಸಕರಾಗಿ ಉಳಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಬಡೇಕೊಳ್ಳಮಠದ ನಾಗೇಂದ್ರ ಮಹಾಸ್ವಾಮಿಗಳು, ಅರಳಿಕಟ್ಟಿಯ ಶಿವಮೂರ್ತಿ ಅಜ್ಜನವರು, ದರ್ಗಾ ಅಜ್ಜನವರು, ಬಡಸ್ ನ ಪ್ರಶಾಂತ ದೇವರು, ಜಾಲಿಕರೆಮ್ಮ ದೇವಿಯ ಆರಾಧಕರಾದ ಉಳವಪ್ಪ ಅಜ್ಜನವರು, ಕಲ್ಲಯ್ಯ ಶಾಸ್ತ್ರಿಗಳು, ಶ್ರೀ ಗಂಗಯ್ಯ ಹಿರೇಮಠ್ ಸ್ವಾಮಿಗಳು, ಹಿರೇಬಾಗೇವಾಡಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ರೈತ ಮುಖಂಡರು, ಪಕ್ಷದ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.


ಅಧ್ಯಾತ್ಮದಿಂದ ನೆಮ್ಮದಿ, ಶಾಂತಿ: ಮೃತ್ಯುಂಜಯ

ರಾಮದುರ್ಗ: ದೇಶದಲ್ಲಿ ಸಮಾಜದಲ್ಲಿ ಸಮಾನತೆ, ಶಾಂತಿ ಮತ್ತು ಸೌಹಾರ್ದತೆಗೆ ಶ್ರಮಿಸಿರುವ ಬುದ್ಧ, ಬಸವ ಮತ್ತು ಗಾಂಧೀಜಿಯವರನ್ನು ಜನರು ಮರೆತಿದ್ದಾರೆ. ಇಂದು ಮನುಷ್ಯನಿಗೆ ನೆಮ್ಮದಿ ದೊರೆಯಲು ಆಧ್ಯಾತ್ಮದ ಅವಶ್ಯಕತೆ ಇದೆ ಎಂದು ರಾಜಸ್ಥಾನದ ಮೌಂಟ್ ಅಬು ಹೆಚ್ಚುವರಿ ಪ್ರಧಾನ ಕಾರ್ಯದರ್ಶಿ ರಾಜಯೋಗಿ ಬ್ರಹ್ಮಾಕುಮಾರ ಮೃತ್ಯುಂಜಯ ಹೇಳಿದರು.

ಸೋಮವಾರ ಪಟ್ಟಣದಲ್ಲಿ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ರಾಜಯೋಗ ಅಭ್ಯಾಸ ಮಾಡಿದರೆ ಇಂದ್ರೀಯ ನಿಗ್ರಹ ಮಾಡುವ ಮುಖಾಂತರ ಜೀವನದಲ್ಲಿ ಸಂಪನ್ನರಾಗಿ ರಾಜನಂತೆ ಬದುಕು ಸಾಗಿಸಲು ಸಾಧ್ಯವಾಗುವುದು ಎಂದು ತಿಳಿಸಿದರು.

ವಿಶ್ವದಲ್ಲಿರುವ ಎಲ್ಲ ಧರ್ಮಗಳ ಸಾರ ಒಂದೇ ಅಹಿಂಸೆ ಪರಮೋಧರ್ಮ ಎನ್ನುವುದಾಗಿದೆ. ಆದರೆ, ಪ್ರಾಣಿಗಳ ಹತ್ಯೆ ಮಾಡಿ ಮಾಂಸವನ್ನು ಅಂಗಡಿಯಲ್ಲಿಟ್ಟು ಮಾರಲು ಎಲ್ಲ ಸರ್ಕಾರಗಳು ಅವಕಾಶ ನೀಡುತ್ತವೆ. ಅಲ್ಲದೆ, ಸಮಾಜವನ್ನು ನಶೆ ಮುಕ್ತ ಮಾಡುವ ಮಾತನ್ನಾಡುವ ಸರ್ಕಾರಗಳು ಆದಾಯಕ್ಕಾಗಿ ಮದ್ಯ ಮಾರಾಟಕ್ಕೆ ಅನುಮತಿ ನೀಡುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.ಮನುಷ್ಯನಿಗೆ ಸಿಟ್ಟು ಬರುವುದು ಸಹಜ ನಿಯಂತ್ರಣಕ್ಕೆ ರಾಜಯೋಗ ಮಾಡಬೇಕು ಅದಕ್ಕಾಗಿ ಈಶ್ವರಿಯ ವಿಶ್ವವಿದ್ಯಾಲಯದಲ್ಲಿ ಕ್ರೋಧಮುಕ್ತ ಜೀವನ ನಡೆಸಲು ಅವಶವಿರುವ ಸುಗಣ, ಸಂಪನ್ನ, ಚಾರಿತ್ರವಂತ ವ್ಯಕ್ತಿತ್ವ ನಿರ್ಮಾಣಕ್ಕೆ ಬೇಕಾಗುವ ವಿದ್ಯೆಯನ್ನು ಹೇಳಿಕೊಡುವ ಕೇಂದ್ರಕ್ಕೆ ಆಗಮಿಸಿ ರಾಮದುರ್ಗದ ಜನತೆ ಸದುಪಯೋಗ ಪಡೆದುಕೊಳ್ಳಬೇಕೆಂದು ಬ್ರಹ್ಮಾಕುಮಾರಿ ಮೃತ್ಯುಂಜಯ ಅಣ್ಣನವರು ಹೇಳಿದರು.

ಅತಿಥಿಗಳಾಗಿ ಆಗಮಿಸಿದ್ದ ಡಿಸಿಸಿ ಬ್ಯಾಂಕ್ ನಿರ್ದೇಶಕ ಮಲ್ಲಣ್ಣ ಯಾದವಾಡ ಮಾತನಾಡಿ, ದೇಶದಲ್ಲಿ ಶಾಂತಿ ಸಂದೇಶ ಸಾರುವ ಓಂಶಾಂತಿ ಮಂತ್ರ ಪಟಿಸುತ್ತ ಸಮಾಜದಲ್ಲಿ ಸದ್ಗುಣಗಳನ್ನು ಬಿತ್ತುವ ಕಾರ್ಯ ಮಾಡುವ ಪ್ರಜಾಪಿತ ಬ್ರಹ್ಮಕುಮಾರಿಯ ಈಶ್ವರಿಯ ವಿಶ್ವವಿದ್ಯಾಲಯದ ಕಾರ್ಯ ಶ್ಲಾಘನೀಯ ಎಂದರು.ತಹಶೀಲ್ದಾರ್ ಪ್ರಕಾಶ ಹೊಳೆಪ್ಪಗೋಳ, ಸಾನ್ನಿಧ್ಯ ವಹಿಸಿದ್ದ ಮನಗುಳಿ ವೀರಕ್ತಮಠದ ವೀರತೀಶಾನಂದ ಸ್ವಾಮೀಜಿ ಮಾತನಾಡಿದರು. ತೋಂಡಿಕಟ್ಟಿಯ ಭಿನವ ವೆಂಕಟೇಶ್ವರ ಮಹಾರಾಜರು ಮಾತನಾಡಿದರು. ರಾಜಯೋಗಿನಿ ಅಂಬಿಕಾ ಅಕ್ಕನವರು ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಜಯಸಿಂಹ ಶಿಂಧೆ, ಪಿಎಸ್‌ಐ ಸವಿತಾ ಮುನ್ಯಾಳ, ಚನ್ನಬಸು ಹಿರೇರಡ್ಡಿ, ಬ್ರಹ್ಮಾಕುಮಾರಿಸ್ ಅಕ್ಕನವರಾದ ಮೀರಾ, ಪ್ರಭಾ, ಸರೋಜಾ, ಉಮಾ, ಕಲಾ, ಮಹಾದೇವಿ ಸೇರಿದಂತೆ ಹಲವರಿದ್ದರು. ಸಹೋದರಿ ಮಂಜುಳಾ ಸ್ವಾಗತಿಸಿದರು. ಸಹೋದರಿ ಅಚ್ಯುತನ್ ಪ್ರಾಸ್ತಾವಿಕವಾಗಿ ಮಾತನಾಡಿದರು.



ಕಿರುಸುದ್ದಿ

ಹಾಲಮ್ಮದೇವಿ, ಯಲ್ಲಮ್ಮದೇವಿ ಜಾತ್ರಾ ಮಹೋತ್ಸವ ಇಂದು



ಬೀಳಗಿ: ತಾಲೂಕಿನ ಹೊಸರೊಳ್ಳಿ ಗ್ರಾಮದಲ್ಲಿ ಕೃಷ್ಣಾ ತೀರದಲ್ಲಿ ನೆಲೆಸಿರುವ ಗುರು ಪದ್ಮರಾಜ ಶಿವಾಚಾರ್ಯರ ಸದ್ಭಕ್ತೆ ಹಾಲಮ್ಮದೇವಿ ಹಾಗೂ ಯಲ್ಲಮ್ಮದೇವಿ ಜಾತ್ರಾ ಮಹೋತ್ಸವ ಮಾ.3ರಂದು ಹೋಳಿ ಹುಣ್ಣಿಮೆ ದಿನದಂದು ಸಡಗರ ಸಂಭ್ರಮದಿಂದ ಜರುಗಲಿದೆ.

ಸ್ಥಳೀಯ ಗುರು ಪದ್ಮರಾಜ ಹಿರೇಮಠದ ಶಂಕರಯ್ಯನವರು ಬೆಳಗ್ಗೆ 6ಕ್ಕೆ ಪದ್ಮರಾಜ ಕರ್ತೃ ಗದ್ದುಗೆಗೆ, ಹಾಲಮ್ಮದೇವಿ, ಯಲ್ಲಮ್ಮದೇವಿ ಹಾಗೂ ಮಲ್ಲಿಕಾರ್ಜುನ ದೇವರುಗಳಿಗೆ ಮಹಾರುದ್ರಾಭಿಷೇಕ ನೇರವೇರಿಸುವುದು. ಬೆಳಗ್ಗೆ 7:30ಕ್ಕೆ ಹೋಮ ಜರಗುವುದು. ಹಾಲಮ್ಮದೇವಿ ದೇವಸ್ಥಾನದಿಂದ ಬೆಳಗ್ಗೆ 8ಕ್ಕೆ ಕೃಷ್ಣಾ ನದಿಗೆ ಸ್ನಾನಕ್ಕೆ ತೆರಳುವುದು. ಹಾಲಮ್ಮದೇವಿ ಪಲ್ಲಕ್ಕಿಯನ್ನು ವಾದ್ಯ ವೈಭವಗಳೊಂದಿಗೆ ಬರಮಾಡಿಕೊಂಡು, ಗ್ರಾಮದ ಮುಖ್ಯ ದ್ವಾರದ ಮೂಲಕ ಪ್ರಮುಖ ಬೀದಿಯಲ್ಲಿ ಸಂಚರಿಸಿ ಹಿರೇಮಠದ ಗುರು ಪದ್ಮರಾಜರ ಕರ್ತೃ ಗದ್ದುಗೆಯ ಸನ್ನಿಧಿಗೆ ಸುಮಂಗಲೆಯರ ಆರತಿಯೊಂದಿಗೆ ತೆರಳುವುದು.

ಅಲ್ಲಿ ಉಡಿ ತುಂಬಿಸಿಕೊಂಡು ದರ್ಶನ ಪಡೆದು ಅ ನಂತರ ಮರಳಿ ಸದ್ಭಕ್ತರ ಮನೆಗಳಿಗೆ ಬೇಟಿ ನೀಡಿ ಪುನಃ ದೇವಸ್ಥಾನಕ್ಕೆ ಪಲ್ಲಕ್ಕಿ ಉತ್ಸವ ತೆರಳುವುದು.

ಮಧ್ಯಾಹ್ನ 1ಕ್ಕೆ ಸದ್ಭಕ್ತ ಉಪ್ಪಲದಿನ್ನಿ ಗ್ರಾಮದ ಈರಸಂಗಪ್ಪ ಸಂಗಪ್ಪ ಗಾಣಿಗೇರ ಇವರ ಸ್ಮರಣಾರ್ಥ ಶ್ರೀಶೈಲ ಈರಸಂಗಪ್ಪ ಗಾಣಿಗೇರ, ಕುಟುಂಬದವರಿಂದ ಅನ್ನ ಪ್ರಸಾದ ಜರುಗಲಿದೆ. ಸದ್ಭಕ್ತರೆಲ್ಲರೂ ಆಗಮಿಸಿ ದೇವಿಯ ದರ್ಶನಾಶೀರ್ವಾದ ಪಡೆದು, ಪ್ರಸಾದ ಸ್ವೀಕರಿಸಿ ಪುಣ್ಯ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಹಾಲಮ್ಮದೇವಿ ದೇವಸ್ಥಾನ ಜೀರ್ಣೋದ್ದಾರ ಸಮಿತಿ ತಿಳಿಸಿದೆ.

ಮಹೇಶಕುಮಾರ ನೇಮಕ



ರಬಕವಿ-ಬನಹಟ್ಟಿ: ರಬಕವಿಯ ಮಹೇಶಕುಮಾರ ಬಿ.ಕೆ.ಅವರು ನಾಡಿನ ಭಾಷೆ, ನೆಲ ಮತ್ತು ಜಲ ಕ್ಷೇತ್ರದಲ್ಲಿ ಅತಿ ಹೆಚ್ಚು ತಮ್ಮನ್ನು ತಾವು ತೊಡಗಿಸಿಕೊಂಡು ಹೋರಾಟ ಮಾಡಿರುವುದನ್ನು ಗಮನಿಸಿ ಕನ್ನಡ ಸೇನೆಗೆ '' ರಾಜ್ಯ ಉಪಾಧ್ಯಕ್ಷರು ಹಾಗೂ ಉತ್ತರ ಕರ್ನಾಟಕದ ಉಸ್ತುವಾರಿ''ಯನ್ನಾಗಿ ನೇಮಕ ಮಾಡಲಾಗಿದೆಯೆಂದು ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಕನ್ನಡ ಸಿರಿ ಆನಂದಕುಮಾರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರದ್ಧೆಯಿಂದ ಪರೀಕ್ಷೆ ಬರೆಯಿರಿ: ಗುರುವಿನಮಠ



ಕಮತಗಿ: ಜೀವನವೇ ಒಂದು ಪರೀಕ್ಷೆ, ಈ ಪರೀಕ್ಷೆಯು ಯುದ್ಧಭೂಮಿ ಇದ್ದಂತೆ. ವಿದ್ಯಾರ್ಥಿಗಳು ಲೇಖನಿಯನ್ನು ಖಡ್ಗದಂತೆ ಬಳಸಿಕೊಂಡು ಶ್ರದ್ಧೆಯಿಂದ ಪರೀಕ್ಷೆ ಬರೆಯಬೇಕು ಎಂದು ಶ್ರೀ ಹುಚ್ಚೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಪ್ರಾಚಾರ್ಯ ಡಾ. ಪಿ.ಎಂ. ಗುರುವಿನಮಠ ಹೇಳಿದರು.

ಪಟ್ಟಣದ ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ಸಭಾಭವನದಲ್ಲಿ ಹೆಜ್ಜೆ ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಂಸ್ಥೆ ಹಾಗೂ ವಿವಿಧ ಪ್ರೌಢಶಾಲೆಗಳ ಸಹಯೋಗದಲ್ಲಿ ನಡೆದ ಪರೀಕ್ಷಾ ಭಯ ನಿವಾರಣಾ ಕಾರ್ಯಕ್ರಮದಲ್ಲಿ ಮಾತನಾಡಿ, ಗುರುಗಳು ಹೇಳಿದ ಪಾಠದ ಜೊತೆಗೆ ವಿದ್ಯಾರ್ಥಿಗಳು ನಿಯಮಿತ ಅಭ್ಯಾಸ ಮತ್ತು ನಿರಂತರವಾಗಿ ಚರ್ಚಾಕೂಟಗಳು, ತಮ್ಮ ಆತ್ಮ ಮನೋಬಲದಿಂದ ಉತ್ತಮ ಫಲಿತಾಂಶ ಸಾಧಿಸಬಹುದು ಎಂದರು. ಕಾರ್ಯಕ್ರಮದಲ್ಲಿ ಶ್ರೀ ಹುಚ್ಚೇಶ್ವರ ಪ್ರೌಢಶಾಲೆ ಮುಖ್ಯೋಪಾಧ್ಯಾಯ ಎಚ್. ಎಂ. ಪಾಟೀಲ, ಶ್ರೀ ಬಸವೇಶ್ವರ ಶಿಕ್ಷಕರ ತರಬೇತಿ ಸಂಸ್ಥೆ ಬಾಗಲಕೋಟ ನಿವೃತ್ತ ಉಪನ್ಯಾಸಕ ಜಿ.ಕೆ. ತಳವಾರ, ಎಸ್ ಕೆ ಪ್ರೌಢಶಾಲೆ ಕಮತಗಿ ವಾಯ್ ಬಿ ಬಿಜಕಲ್, ಸೇವಾಲಾಲ್ ಪ್ರೌಢಶಾಲೆ ಕಮತಗಿ ಜೆ.ಪಿ. ಲಮಾಣಿ ಹಾಗೂ ಮರಡಿ ಮಲ್ಲೇಶ್ವರ ಪ್ರೌಢಶಾಲೆ ಮೂಗನೂರ್ ಎ.ಎಚ್. ರಾಯಬಾಗಿ ಹಾಗೂ ಹೆಜ್ಜೆ ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು.



ಕೆರೂರ : ಸಮೀಪದ ಜಮ್ಮನಕಟ್ಟಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ 50 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಸಿರುಮನೆ ಇಕೋ- ಕ್ಲಬ್ ಯೋಜನೆಯಡಿ ಗ್ರಾಮದ ರೈತರೊಬ್ಬರ ಕೃಷಿ ಜಮೀನಿಗೆ ಸೋಮವಾರ ಭೇಟಿ ನೀಡಿದರು. ಈ ವೇಳೆ ಶಾಲೆಯ ಮುಖ್ಯ ಶಿಕ್ಷಕ ಬಿ.ಎಸ್.ಅಂಬನ್ನವರ, ಆರ್.ಟಿ.ಚೆನಿವಾಲರ, ಎಂ.ಕೆ. ವಾಲಿಕರ, ಯುವ ರೈತ ಸಂಜು ಹೊಸಗೌಡ್ರ, ರೈತ ವಿಶ್ವನಾಥ ಹೊಸಗೌಡ್ರ, ಸಹ ಶಿಕ್ಷಕರು, ವಿದ್ಯಾರ್ಥಿಗಳು ಹಾಜರಿದ್ದರು.

ಮಧ್ಯಪ್ರಾಚ್ಯದಲ್ಲಿ ಬಿಕ್ಕಟ್ಟು: ನೆರವಿಗಾಗಿ ಸಹಾಯವಾಣಿ

ಬಾಗಲಕೋಟೆ: ಮಧ್ಯಪ್ರಾಚ್ಯದ ಕೆಲವು ದೇಶಗಳಲ್ಲಿ ಪ್ರಚಲಿತದಲ್ಲಿರುವ ಅಸ್ಥಿರ ಪರಿಸ್ಥಿತಿಯಿಂದಾಗಿ ಅಂತರಾಷ್ಟ್ರೀಯ ವಿಮಾನಯಾನ ಸೇವೆಗಳಲ್ಲಿ ವ್ಯತ್ಯಯ ಉಂಟಾಗಿದೆ. ಈ ಹಿನ್ನೆಲೆಯಲ್ಲಿಬಾಗಲಕೋಟೆಜಿಲ್ಲೆಯಸಾರ್ವಜನಿಕರಹಿತದೃಷ್ಟಿಯಿಂದಜಿಲ್ಲಾಡಳಿತವುಮಾಹಿತಿ ಹಂಚಿಕೊಂಡಿದೆ. ವೈಮಾನಿಕ ನಿರ್ಬಂಧ ಮತ್ತು ಪ್ರಚಲಿತ ಸ್ಥಿತಿಯಿಂದಾಗಿ ಇರಾನ್, ಇಸ್ರೇಲ್, ಲೆಬನಾನ್, ಸೌದಿ ಅರೇಬಿಯಾ ಸೇರಿದಂತೆ ಒಟ್ಟು 11 ದೇಶಗಳ ವೈಮಾನಿಕ ಮಾರ್ಗಗಳನ್ನು ಮಾ.2ರವರೆಗೆ ಮುಚ್ಚಲಾಗಿದೆ. ಮುಖ್ಯಮಂತ್ರಿಗಳು, ಕಂದಾಯ ಸಚಿವರ ನಿರ್ದೇಶನದಂತೆ, ರಾಜ್ಯ ಮತ್ತು ಜಿಲ್ಲಾ ತುರ್ತು ಕಾರ್ಯಾಚರಣೆ ಕೇಂದ್ರ 24★7 ಕಾರ್ಯನಿರ್ವಹಿಸುತ್ತಿವೆ. ಈ ಕೆಳಗಿನ ಸಹಾಯವಾಣಿ ಸಂಖ್ಯೆಗಳಿಗೆ ಬಾಗಲಕೋಟೆ ಜಿಲ್ಲೆಯ ನಿವಾಸಿಗಳು ಅಥವಾ ಅವರ ಸಂಬಂಧಿಕರು ಹೆಚ್ಚಿನ ಮಾಹಿತಿಗಾಗಿ ಮತ್ತು ಸಹಾಯಕ್ಕಾಗಿ ಸಂಪರ್ಕಿಸಬಹುದಾಗಿದೆ. ಬಾಗಲಕೋಟೆ ಜಿಲ್ಲಾ ತುರ್ತು ಕಾರ್ಯಾಚರಣೆ ಕೇಂದ್ರ 08354-252100, ರಾಜ್ಯ ತುರ್ತು ಕಾರ್ಯಾಚರಣೆಕೇಂದ್ರ 080-22340676, 080-22253707, ಟೋಲ್ ಫ್ರೀಸಂಖ್ಯೆ 1070ಗೆ ಕರೆ ಮಾಡಿ ಮಾಹಿತಿ, ಸಹಾಯ ಪಡೆಯಬಹುದು. ಸಾರ್ವಜನಿಕರಿಗೆ ಪ್ರಮುಖ ಸೂಚನೆಗಳು: ಮಧ್ಯಪ್ರಾಚ್ಯ ದೇಶಗಳಲ್ಲಿರುವ ಕರ್ನಾಟಕದ ನಿವಾಸಿಗಳು ಹಾಗೂ ಜಿಲ್ಲೆಯವರಿದ್ದಲ್ಲಿ ಅಲ್ಲಿನ ಸ್ಥಳೀಯ ಸರ್ಕಾರಗಳು ನೀಡುವ ಸುರಕ್ಷತಾ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಸಂಕಷ್ಟದಲ್ಲಿರುವವರು ಆಯಾ ದೇಶದ ಭಾರತೀಯ ರಾಯಭಾರಿ ಕಚೇರಿಯ ಸಹಾಯವಾಣಿಗೆ ಕರೆ ಮಾಡಬೇಕು ಅಥವಾ 'ಸಾರಥಿ ಸಹಾಯತಾ' (Sarthi Sahayata) ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ವಿಸಾ ಸಂಬಂಧಿತ ಸಮಸ್ಯೆಗಳಿದ್ದಲ್ಲಿ ಹತ್ತಿರದ ಎಫ್‌ಆರ್‌ಆರ್‌ಒ (FRRO) ಕಚೇರಿ ಸಂಪರ್ಕಿಸಬೇಕೆಂದು ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದ್ದಾರೆ.



ಸಾವಳಗಿ: ಸೋಮವಾರ ನಗರ ಪೊಲೀಸ್ ಠಾಣೆಯಲ್ಲಿ ಹೋಳಿ ಹಬ್ಬದ ಪ್ರಯುಕ್ತ ಪೂರ್ವಭಾವಿಯಾಗಿ ನಡೆದ ಶಾಂತಿ ಸಭೆ ನಡೆಯಿತು. ಸಾವಳಗಿ ಪೊಲೀಸ್ ಠಾಣೆ ಪಿಎಸ್‌ಐ ಅಪ್ಪಣ್ಣ ಐಗಳಿ, ವಿವಿಧ ಸಮಾಜದ ಮುಖಂಡರು, ಹಿರಿಯರು, ಯುವಕರು ಸೇರಿದಂತೆ ಪೊಲೀಸ್ ಸಿಬ್ಬಂದಿ ಶಿವಾನಂದ ಭಜಂತ್ರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಹಿರಿಯ ಸಾಹಿತಿ ವೈ.ಎಂ.ಯಾಕೊಳ್ಳಿ ಹೇಳಿಕೆ

ಸಾಹಿತ್ಯ ಸಮ್ಮೇಳನ ನೆಲದ ಚಿಂತನೆಗೆ ವೇದಿಕೆ

ಬಾದಾಮಿ: ಸಾಹಿತ್ಯ ಸಮ್ಮೇಳನ ಜಾತ್ರೆಯಲ್ಲ, ನೆಲದ ಬಗ್ಗೆ ಚಿಂತನೆ ಮಾಡುವ ವೇದಿಕೆಯಾಗಿದೆ. ನೆಲಕ್ಕೆ ಬೇಕಾಗುವ ಚಿಂತನೆ ಮಾಡುವುದು ಸಾಹಿತ್ಯದ ಕೆಲಸವಾಗಿದೆ ಎಂದು ಹಿರಿಯ ಸಾಹಿತಿ ವೈ. ಎಂ.ಯಾಕೊಳ್ಳಿ ಹೇಳಿದರು.

ಸೋಮವಾರ ಪಟ್ಟಣದ ಎಸ್.ವಿ.ಪಿ.ಸಂಸ್ಥೆಯ ಬಸವಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಹಾಗೂ ತಾಲೂಕಾ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ತಾಲೂಕಾ 10ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಜಾಗಟೆ ಬಾರಿಸಿ ಉದ್ಘಾಟಿಸಿ ಮಾತನಾಡಿದರು.

ತಾಲೂಕಾ 10 ನೇ ಕನ್ನಡ ಸಾಹಿತ್ಯ ಸಮ್ಮೇಳನ

ಸಾಹಿತಿಗಳು ನೆಲ ಜಲ ಅವಲೋಕಿಸಿ ಸಾಹಿತ್ಯವನ್ನು ಬರೆಯಬೇಕು. ರವಿ ಕಾಣದ್ದನ್ನು ರವಿ ಕಾಣುತ್ತಾನೆ ಎಂಬಂತೆ ಸಾಹಿತಿಗಳು ಅನುಭವಿಕವಾಗಿ ಪುಸ್ತಕವನ್ನು ಬರೆಯಬೇಕು. ಸಾಹಿತಿ ಪುಸ್ತಕಕ್ಕೆ ಸೀಮಿತವಾಗಬಾರದು. ವ್ಯಾಸ, ವಾಲ್ಮೀಕಿಯವರಿಂದ ಇಲ್ಲಿಯವರೆಗಿನ ಸಾಹಿತಿಗಳ ಸಾಹಿತ್ಯವನ್ನು ಅವರ ಚಿಂತನೆ ಮತ್ತು ಅವಲೋಕನ ಕುರಿತಾಗಿ ಅನುಕರಣೆ ಮಾಡಿ ಯುವ ಸಾಹಿತಿಗಳು ಬರವಣಿಗೆ ಮೂಲಕ ಹೊರ ಹೊಮ್ಮಬೇಕು ಎಂದು ಯುವ ಸಾಹಿತಿಗಳಿಗೆ ಸಲಹೆ ನೀಡಿದರು.

ಶಾಸಕ ಭೀಮಸೇನ ಚಿಮ್ಮನಕಟ್ಟಿ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚಣೆ ಮಾಡಿ ಮಾತನಾಡಿ, ಬಾದಾಮಿ, ಗುಳೇದಗುಡ್ಡ ತಾಲೂಕಿಗೆ ಮಹತ್ವದ ಯೋಜನೆಯಾದ ರೂ.3.75 ಕೋಟಿ ವೆಚ್ಚದಲ್ಲಿ ಗ್ರಂಥಾಲಯ ನಿರ್ಮಾಣ ಮಾಡಿ ಪ್ರತಿಯೊಬ್ಬರಿಗೆ ಓದುವ ಹವ್ಯಾಸವನ್ನು ಬೆಳೆಸುವ ಉದ್ದೇಶದಿಂದ ಬೃಹತ್ ಗ್ರಂಥಾಲಯವನ್ನು ನಿರ್ಮಾಣ ಮಾಡುವ ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.

ಪ್ರೊ.ಜಿ.ಬಿ.ಶೀಲವಂತರ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ನಿಕಟಪೂರ್ವ ಸಮ್ಮೇಳನದ ಅಧ್ಯಕ್ಷ ಜೆ.ದಾಜೀಬಾ ಜಗದಾಳೆ ಅವರು 10 ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪ್ರೊ.ಜಿ.ಬಿ.ಶೀಲವಂತರ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಧ್ವಜವನ್ನು ಹಸ್ತಾಂತರಿಸಿದರು.

ನಂತರ ಜೆ.ದಾಜೀಬಾ ಜಗದಾಳೆ, ನಿಂಗಪ್ಪ ಬನ್ನೂರ ಮಾತನಾಡಿದರು. ವೇದಿಕೆಯ ಮೇಲೆ ಬಾಗಲಕೋಟೆ-ವಿಜಯಪೂರ ಅವಳಿ ಜಿಲ್ಲೆಯ ಹಾಲು ಒಕ್ಕೂಟದ ಅಧ್ಯಕ್ಷ ಈರಣ್ಣ ಕರಿಗೌಡರ, ಹೊನ್ನಯ್ಯ ಹಿರೇಮಠ, ಶಿವಕುಮಾರ ಹಿರೇಮಠ, ಮಹಾಂತೇಶ ಹಟ್ಟಿ, ಡಾ.ಕೆ.ವಿ.ಕ್ಯಾಲಕೊಂಡ, ಮಹಾಂತೇಶ ಈಳಗೇರ, ಆರ್.ಎಂ.ಸಾರವಾಡ, ಆರ್.ಎಂ.ದಾದಿ, ಎಫ್.ಆರ್.ಪಾಟೀಲ(ಮಣ್ಣೇರಿ), ಸಿ.ಎಸ್.ನಾಗನೂರ ಹಾಜರಿದ್ದರು. ಜಿಲ್ಲಾ ಕಸಾಪ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಪ್ರಸ್ತಾವಿಕವಾಗಿ ಮಾತನಾಡಿದರು. ತಾಲೂಕಾ ಕಸಾಪ ಅಧ್ಯಕ್ಷ ಬಿ.ಎಫ್. ಹೊರಕೇರಿ ಸ್ವಾಗತಿಸಿದರು. ಬಸಮ್ಮಾ ನರಸಾಪೂರ, ಡಿ.ಬಿ.ಹಡಗಲಿ ಕಾರ್ಯಕ್ರಮವನ್ನು ನಿರೂಪಿಸಿದರು.

ಪುಸ್ತಕ ಮಳಿಗೆ ಉದ್ಘಾಟನೆ: ಪುಸ್ತಕ ಮಳಿಗೆಗಳನ್ನು ಶಾಸಕ ಭೀಮಸೇನ ಚಿಮ್ಮನಕಟ್ಟಿ ಉದ್ಘಾಟನೆ ಮಾಡಿದರು. ಜಿಲ್ಲಾ ಕಸಾಪ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಸೇರಿದಂತೆ ಇತರರು ಹಾಜರಿದ್ದರು.

ಪುಸ್ತಕ ಬಿಡುಗಡೆ: ಶಾಸಕ ಭಿಮಸೇನ ಚಿಮ್ಮನಕಟ್ಟಿ, ನಿಂಗಪ್ಪ ಬನ್ನೂರ, ಈರಣ್ಣ ಕರಿಗೌಡರ ಇವರು ಇದೇ ಸಂದರ್ಭದಲ್ಲಿ ಶಾರದಾ ಮೇಟಿ ಇವರ ಮುಸ್ಸಂಜೆಯ ಹೊತ್ತಿನಲ್ಲಿ ಮತ್ತು ಇತರೆ ಲೇಖನಗಳು ಮತ್ತು ಅನಸೂಯಾ ಯಲಿಗಾರ ಇವರ ನನ್ನ ಕೂಸು ನನ್ನ ನನಸು ಮತ್ತು ಸುಭಾಸಚಂದ್ರ ಭಜಂತ್ರಿ ಇವರ ಕಪ್ಪೆ ಅರಭಟ್ಟ ಯಾರು? ಎಂಬ ಕೃತಿಗಳು ಬಿಡುಗಡೆಗೊಳಿಸಿದರು.



ತಾಯಿ ಭುವನೇಶ್ವರಿ ದೇವಿ ಮೆರವಣಿಗೆ

ಸಮ್ಮೇಳನದ ಅಂಗವಾಗಿ ಬೆಳಿಗ್ಗೆ ಸಮ್ಮೇಳನಾಧ್ಯಕ್ಷರ ನೇತೃತ್ವದಲ್ಲಿ ಭುವನೇಶ್ವರಿ ಮೆರವಣಿಗೆಯು ಕರಡಿ ಮಜಲು, ಡೊಳ್ಳು ಸಂಗೀತ ವಾದ್ಯಗಳ ಮೂಲಕ ಪಿಕಾರ್ಡ್ ಬ್ಯಾಂಕ್ ಆವರಣದಿಂದ ಆರಂಭವಾಗಿ ಶಿವಾಜಿ ಸರ್ಕಲ್, ಪುಲಿಕೇಶಿ ಸರ್ಕಲ್ ಮುಖ್ಯ ರಸ್ತೆಯ ಮೂಲಕ ಬಸವಮಂಟಪದ ವೇದಿಕೆಯವರೆಗೆ ನಡೆಯಿತು. ಮೆರವಣಿಗೆಯಲ್ಲಿ ಕನ್ನಡ ಅಭಿಮಾನಿಗಳು, ಸಾಹಿತ್ಯಾಸಕ್ತರು, ಸರಕಾರಿ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಗುಂಡಪ್ಪ ತೀರ್ಥಪ್ಪನ್ನವರ, ಅಶೋಕ ಕೋಟನಕರ ಮೆರವಣಿಗೆಗೆ ಚಾಲನೆ ನೀಡಿದರು. ಈ ಸಂಧರ್ಭದಲ್ಲಿ ಶೇಖರಗೌಡ ಪಾಟೀಲ, ಹೊನ್ನಯ್ಯ ಹಿರೇಮಠ, ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು, ಕನ್ನಡ ಮನಸುಗಳು ಉಪಸ್ಥಿತರಿದ್ದರು.

ಸಮಗ್ರ ಅಭಿವೃದ್ಧಿಗೆ ಬಜೆಟ್‌ನಲ್ಲಿ ಅನುದಾನ ಮೀಸಲಿಡಲು ಸಿಎಂಗೆ ಮನವಿ

ಬಾಗಲಕೋಟೆ : ಬರಲಿರುವ ಬಜೆಟ್ ನಲ್ಲಿ ಬಾಗಲಕೋಟೆ ವಿಧಾನಸಭೆ ಮತಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹಲವು ಯೋಜನೆಗೆ ಅನುದಾನ ಮೀಸಲಿಡುವಂತೆ ಸಿದ್ದರಾಮಯ್ಯ ಅಭಿಮಾನಿಗಳ ಬಳಗದ ಸಂಚಾಲಕ, ಕಾಂಗ್ರೆಸ್ ಮುಖಂಡ ಹೊಳಬಸು ಶೆಟ್ಟರ ಮುಖ್ಯಮಂತ್ರಿಯವರನ್ನು ಒತ್ತಾಯಿಸಿದರು.

ಬೆಂಗಳೂರಿನಲ್ಲಿ ಸಿಎಂ ಸಿದ್ದರಾಮಯ್ಯ ಅವರಿಗೆ ಬಾಗಲಕೋಟೆ ಕ್ಷೇತ್ರಕ್ಕೆ ಸಂಬಂಧಿಸಿದ ಹಲವು ಯೋಜನೆಗಳ ಪಟ್ಟಿಯನ್ನು ಸಲ್ಲಿಸಿರುವ ಅವರು, ಐತಿಹಾಸಿಕ ಪರಂಪರೆ, ವಿಶೇಷ ಸಂಸ್ಕೃತಿ ಹೊಂದಿರುವ ಬಾಗಲಕೋಟೆ ಹೋಳಿ ಆಚರಣೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ವಿಶೇಷ ಪ್ರೋತ್ಸಾಹಧನ ಹಾಗೂ ವಾರ್ಷಿಕ ನೆರವು ನೀಡುವಂತೆ ಮನವಿ ಮಾಡಿದ್ದಾರೆ.

ಬಾಗಲಕೋಟೆಯ ಐತಿಹಾಸಿಕ ರಾಷ್ಟ್ರೀಯ ಪ್ರವಾಸಿ ತಾಣವಾದ ಐಹೊಳೆಯ ಸಮಗ್ರ ಅಭಿವೃದ್ಧಿ ಮತ್ತು ಐಹೊಳೆ ಗ್ರಾಮವನ್ನು ಸಂಪೂರ್ಣ ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳಬೇಕು. ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯ ಸಣ್ಣ ನೀರಾವರಿ ಇಲಾಖೆಯ ಕೆರೆಗಳಿಗೆ ನೀರು ತುಂಬಿಸಲು ಯೋಜನೆ ಅನುಷ್ಠಾನಗೊಳಿಸಲು ಅಗತ್ಯ ಅನುದಾನ ಮೀಸಲಿಡಬೇಕು. ಬಾಗಲಕೋಟೆ ನಗರ, ಏಷ್ಯಾದಲ್ಲೇ ಮುಳುಗಡೆಯಾದ 2ನೇ ದೊಡ್ಡ ನಗರವಾಗಿದ್ದು ಹಾಗೂ ಬಾಗಲಕೋಟೆ ನಗರ, ನವನಗರ, ಅಮೀನಗಡ, ಕಮತಗಿ, ಶಿರೂರ ಸೇರಿದಂತೆ ಈ ಎಲ್ಲ ನಗರಗಳ ರಸ್ತೆ, ಇನ್ನಿತರ ಮೂಲಭೂತ ಸೌಕರ್ಯ ಅಭಿವೃದ್ಧಿಗೆ 150 ಕೋಟಿ ವಿಶೇಷ ಅನುದಾನ ಘೋಷಣೆ ಮಾಡುವಂತೆ ಆಗ್ರಹಿಸಿದ್ದಾರೆ.



> ಬಾಗಲಕೋಟೆ ವಿಧಾನಸಭೆ ಮತಕ್ಷೇತ್ರ ವ್ಯಾಪ್ತಿಯ ಹಲವು ಪ್ರಮುಖ ಯೋಜನೆಗಳ ಅನುಷ್ಠಾನಕ್ಕೆ ಬಜೆಟ್‌ನಲ್ಲಿ ಹಣ ಮೀಸಲಿಡಲು ಮುಖ್ಯಮಂತ್ರಿಗಳಿಗೆ ಮತ್ತು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರಿಗೆ ಮನವಿ ಮಾಡಿದ್ದೇನೆ.
>
> ■ **ಹೊಳಬಸು ಷ. ಶೆಟ್ಟರ,** ಕಾಂಗ್ರೆಸ್ ಮುಖಂಡ

ಬಾಗಲಕೋಟೆ ನಗರದಲ್ಲಿ ಸಾಂಸ್ಕೃತಿಕ ನಾಯಕ- ಜಗಜ್ಯೋತಿ ಬಸವೇಶ್ವರ ಮತ್ತು ಛತ್ರಪತಿ ಶಿವಾಜಿ ಮಹಾರಾಜರ ಮತ್ಥಳಿಯನ್ನು ರಾಜ್ಯ ಸರ್ಕಾರದಿಂದ ನಿರ್ಮಾಣ ಮಾಡಬೇಕು, ಬಾಗಲಕೋಟೆ ನಗರ ಹೊರ ವಲಯದ ಸುಕ್ಷೇತ್ರ ಗುಡ್ಡದಮಲ್ಲಾಪುರ ಧಾರ್ಮಿಕ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ವಿಶೇಷ ಒತ್ತು ನೀಡಬೇಕು. ಬಾಗಲಕೋಟೆಯ ನವನಗರ ಮತ್ತು ಅಮೀನಗಡ ಪಟ್ಟಣದಲ್ಲಿ ಸರ್ಕಾರಿ ಪದವಿಪೂರ್ವ ಮಹಾ ವಿದ್ಯಾಲಯ ಸ್ಥಾಪಿಸಲು, ಅಲ್ಲದೇ ಗುಳೇದಗುಡ್ಡ ತಾಲೂಕು ಕ್ರೀಡಾಂಗಣ ನಿರ್ಮಿಸಲು ಬಜೆಟ್ ನಲ್ಲಿ ಅಗತ್ಯ ಅನುದಾನ ನೀಡಬೇಕು ಎಂದು ಕೋರಿದ್ದಾರೆ.

ಉನ್ನತ ಶಿಕ್ಷಣ ಪಡೆದುಕೊಳ್ಳಿ: ಶಾಸಕ ಗುಡಗುಂಟಿ

ಜಮಖಂಡಿ: ಶಾಲೆ ಒಂದು ದೇವಾಲಯವಾಗಬೇಕು. ಅಲ್ಲಿ ಭ್ರಾತೃತ್ವ ಉಂಟಾಗಬೇಕು. ಉನ್ನತ ಶಿಕ್ಷಣದತ್ತ ಮನಸ್ಸು ಮಾಡಿ ದೇಶದ ಉತ್ತಮ ಪ್ರಜೆಯಾಗಬೇಕು. ಶಿಕ್ಷಣ ಒಂದು ಹಂತದಲ್ಲಿ ಪ್ರಮುಖ ಘಟ್ಟವಾಗಿದೆ. ಎಲ್ಲರೂ ಇಂದಿನ ಆಧುನಿಕ ಯುಗದಲ್ಲಿ ಶಿಕ್ಷಣವಂತರಾಗಬೇಕು ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು.

ತಾಲೂಕಿನ ಮುತ್ತೂರು ಗ್ರಾಮದಲ್ಲಿ ಜಿಲ್ಲಾ ಪಂಚಾಯತಿ, ಜಿಲ್ಲಾಡಳಿತ, ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯ ಅಧಿಕಾರಿಗಳ ಕಚೇರಿ ಸಹಯೋಗದಲ್ಲಿ ದುಂಡಪ್ಪ ಗಂಗಪ್ಪ ಹಿಪ್ಪರಗಿ ಸರಕಾರಿ ಪ್ರೌಢ ಶಾಲೆ ಆರ್‌ಎಂಎಸ್‌ಎ ನೂತನ ಶಾಲಾ ಕಟ್ಟಡ ಉದ್ಘಾಟಿಸಿ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಅತಿ ವೇಗದಲ್ಲಿ ಜೀವನ ಸಾಗುತ್ತಿದೆ ಆದರತ್ತ ಹೆಜ್ಜೆ ಹಾಕಬೇಕು. ಮಕ್ಕಳಿಗೆ ಸರ್ವತೋಮುಖ ಬೆಳವಣಿಗೆ ನೀಡುವರ ಶಿಕ್ಷಕರು ಸಂಶೋಧನೆಯಿಂದ ಕಲಿಸುವ ಕಲಿಕೆ ಶಿಕ್ಷಕರಲ್ಲಿರಬೇಕು. ಶಿಕ್ಷಕರೇ ನಿಜವಾದ ದೇವರು ಎಂದರು.

ಅಧಿಕಾರ ಬರುತ್ತದೆ ಹೋಗುತ್ತದೆ. ಅಧಿಕಾರ ಬಂದಾಗ ಸಮರ್ಪಕ ಕರ್ತವ್ಯ ಮಾಡಬೇಕು. ನಾವು ಜ್ಯಾತ್ಯಾತೀತ, ಪಕ್ಷಾತೀತವಾಗಿ ಕೆಲಸ ಮಾಡುತ್ತಿದ್ದೇವೆ. ಇನ್ನು ಈ ಶಾಲೆಗೆ ಏನು ಬೇಕೋ ಅದನ್ನು ನೀಡುತ್ತೇವೆ. ಅದರ ಜೊತೆಗೆ ಈ ಸಂಸ್ಥೆಗೆ ಭೂದಾನ ನೀಡಿದ ಹಿಪ್ಪರಗಿ ಪರಿವಾರಕ್ಕೆ ಶುಭ ಕೋರುತ್ತೇವೆ ಎಂದರು.

ರಾಚೋಟೇಶ್ವರ ಮಠದ ಗುರುಸಿದ್ದೇಶ್ವರ ಶ್ರೀಗಳು, ಸಿದ್ಧಾರೂಡ ಮಠದ ಪರಿಪೂರ್ಣಾನಂದ ಭಾರತಿ ಶ್ರೀಗಳು, ರುದ್ರಾಕ್ಷಿಮಠದ ಭೈರವನಾಥ ಶ್ರೀಗಳು, ಸಿದ್ಧಾರೂಡ ಶರಣರು ಆಶೀರ್ವಚನ ನೀಡಿದರು. ವೇದಿಕೆಯಲ್ಲಿ ಗ್ರಾಪಂ ಆಡಳಿತಾಧಿಕಾರಿ ಆನಂದ ರತ್ನಾಕರ, ಬಿಇಒ ಅಶೋಕ ಬಸಣ್ಣವರ, ವರ್ಧಮಾನ ನ್ಯಾಮಗೌಡ, ಗ್ಯಾರಂಟಿ ಅನುಷ್ಠಾನ ತಾಲೂಕಾಧ್ಯಕ್ಷ ಮಲ್ಲಪ್ಪ ಗಿರಡ್ಡಿ, ಸಂತೋಷ ತಳಕೇರಿ, ನರಸಿಂಹ ಕಲ್ಲೊಳ್ಳಿ, ಬಸವಂತ ಹಿಪ್ಪರಗಿ, ಸುರೇಶಗೌಡ ಪಾಟೀಲ, ಮುಖ್ಯಗುರುಮಾತೆ ಎನ್.ಎಮ್. ಚೌರ, ಭೀಮು ಹಿಪ್ಪರಗಿ, ಮಲ್ಲು ದಾನಗೌಡ, ಭೂದಾನಿ ಸದಾಶಿವ ಹಿಪ್ಪರಗಿ, ಪಿ.ಟಿ.ಪಾಟೀಲ, ಬಿ.ಜಿ.ಪಾಟೀಲ, ಶಶಿ ಗಲಗಲಿ, ಸುಜೀತಗೌಡ ಪಾಟೀಲ, ಮಹೇಂದ್ರ ಮಗದುಮ, ಮಹಾವೀರ ಪಾಟೀಲ, ಪಿಡಿಒ ಗೋಪಾಲ ಕುರ್ತಕೋಟಿ, ಅರುಣ ದೇವಮಾನೆ, ನಿಖಿಲ್ ಮಹಾಬಳಶೆಟ್ಟಿ ಇನ್ನಿತರರಿದ್ದರು. ಬಿಇಒ ಅಶೋಕ ಬಸಣ್ಣವರ ಸ್ವಾಗತಿಸಿದರು. ಮುತ್ತಣ್ಣ ಹಿಪ್ಪರಗಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ಚಿದಾನಂದ ಜಡೀಮಠ ನಿರೂಪಿಸಿದರು, ದೈಹಿಕ ಶಿಕ್ಷಕ ವಿನೋದ ದೇಶಪಾಂಡೆ ವಂದಿಸಿದರು.



ಉಚಿತ ಹತ್ತು ಸಾವಿರ ಬಣ್ಣದ ಪಾಕೇಟ್ ವಿತರಣೆ



ಬಾಗಲಕೋಟೆ: ಭಾವೈಕ್ಯತೆಯ ಹೋಳಿ ಹಬ್ಬದ ಬಣ್ಣದಾಟದಲ್ಲಿ ಭಾಗವಹಿಸುವ ಯುವ ಜನತೆಯನ್ನು ಪ್ರೋತ್ಸಾಹಿಸಲು ಮುಖ್ಯಮಂತ್ರಿ ಸಿದ್ಧರಾಮಯ್ಯ ಅಭಿಮಾನಿಗಳ ಬಳಗ, ದಿ.ಎಚ್.ವೈ.ಮೇಟಿ ಅಭಿಮಾನಿಗಳ ಬಳಗದಿಂದ ಸೋಗಿನ ಬಂಡಿ ಹಾಗೂ ಹೆಚ್ಚು ಬಣ್ಣದ ಗಾಡಿಗಳನ್ನು ತಯಾರಿಸುವ ಓಣಿಗೆ ಬಹುಮಾನ ನೀಡಲಾಗುವುದು. ಬಣ್ಣದಲ್ಲಿ ಭಾಗವಹಿಸುವ ಯುವಕರಿಗೆ ಹತ್ತು ಸಾವಿರ ಬಣ್ಣದ ಪಾಕೇಟ್‌ಗಳನ್ನು ಉಚಿತವಾಗಿ ವಿತರಿಸಲಾಗುವುದು ಎಂದು ಕಾಂಗ್ರೆಸ್ ಪಕ್ಷದ ಯುವ ಮುಖಂಡ ಮಲ್ಲಿಕಾರ್ಜುನ ಮೇಟಿ ಹೇಳಿದರು.

ನವನಗರದ ಪತ್ರಿಕಾಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾಜಕ್ಕೆ ಒಳ್ಳೆಯ ಸಂದೇಶವನ್ನು ನೀಡುವಂತಹ ಸೋಗಿನ ಬಂಡಿಗೆ ಮೊದಲನೇ ಬಹುಮಾನ 25 ಸಾವಿರ ರೂ., ದ್ವಿತೀಯ 10 ಸಾವಿರ ರೂ., ತೃತೀಯ 5 ಸಾವಿರ ರೂ. ನೀಡಲಾಗುವುದು. ಅತಿ ಹೆಚ್ಚು ಬಣ್ಣದ ಗಾಡಿಗಳನ್ನು ತಯಾರಿಸುವ ಓಣಿಗೆ ಮೊದಲನೇ ಬಹುಮಾನ 15 ಸಾವಿರ ರೂ., ದ್ವಿತೀಯ 10 ಸಾವಿರ ರೂ., ತೃತೀಯ 5 ಸಾವಿರ ರೂ., ನೀಡಲಾಗುವುದು. ಚುನಾವಣೆಗೋಸ್ಕರ ಕಾರ್ಯಕ್ರಮ ಮಾಡುತ್ತಿಲ್ಲ ಪ್ರತಿವರ್ಷ ಇನ್ನು ಮುಂದೆ ಹೋಳಿ ಉತ್ಸವಕ್ಕೆ ಪ್ರೋತ್ಸಾಹ ನೀಡಲಾಗುವುದು ಎಂದರು. ಹಳೆಯ ನಗರ, ವಿದ್ಯಾಗಿರಿ ಹಾಗೂ ನವನಗರದ ಪ್ರಮುಖ ಸ್ಥಳಗಳಲ್ಲಿ 10 ಕೌಂಟರಗಳನ್ನು ಮಾಡಿ, ಉಚಿತವಾಗಿ ಬಣ್ಣ, ಶುದ್ಧ ಕುಡಿಯುವ ನೀರು ಪೂರೈಸಲಾಗುವುದು. ಕಿಲ್ಲಾ ಪ್ರದೇಶ, ಬಸವೇಶ್ವರ ವೃತ್ತ, ವಿದ್ಯಾ ಗಿರಿ ಎಂಜಿನಿಯರಿಂಗ್ ಕಾಲೇಜ್ ವೃತ್ತ, ನವಗರ ಜಿಲ್ಲಾ ಆಸ್ಪತ್ರೆ ಸೇರಿದ ವಿವಿಧ ಕಡೆ ಕೌಂಟರ ಕಾರ್ಯನಿರ್ವಹಿಸಲಿವೆ ಎಂದರು.

ಸಂಜೀವ ವಾಡಕರ, ಗಣಪತಸಾ ದಾನಿ, ಶಿವುಕುಮಾರ ನಂದಿಕೋಲಮಠ, ಶರಣವಣ ಪತ್ರಿಕಾಗೋಷ್ಠಿಯಲ್ಲಿದ್ದರು.

ಹೋಳಿ ಉತವ ಉದ್ಘಾಟನೆ ಇಂದು

ಬಾಗಲಕೋಟೆ: ಬಾಗಲಕೋಟೆ ಹೋಳಿ ಹಬ್ಬ ಆಚರಣಾ ಸಮಿತಿ ವತಿಯಿಂದ ಮಾ.3ರಂದು ಸಂಜೆ 7.ಗಂಟೆಗೆ ನಗರದ ಹೊಳೆ ಆಂಜನೇಯ ದೇವಸ್ಥಾನ ಆವರಣದಲ್ಲಿ ಹೋಳಿ ಉತ್ಸವದ ಉದ್ಘಾಟನಾ ಸಮಾರಂಭ ನಡೆಯಲಿದೆ ಎಂದು ಹೋಳಿ ಹಬ್ಬ ಆಚರಣಾ ಸಮಿತಿ ಅಧ್ಯಕ್ಷ ಕಳಕಪ್ಪ ಬಾದೋಡಗಿ ತಿಳಿಸಿದರು.

ನವನಗರದ ಪತ್ರಿಕಾಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮೂರ ಹೋಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲು ನಗರದ ಎಲ್ಲ ಜನತೆ ಪಾಲ್ಗೊಳ್ಳಬೇಕು ಎಂದು ಹೇಳಿದರು.

ಹೋಳಿ ಹಬ್ಬ ಆಚರಣಾ ಸಮಿತಿ ಪ್ರಧಾನ ಕಾರ್ಯದರ್ಶಿ ಮಹಾಬಳೇಶ ಗುಡಗುಂಟಿ ಮಾತನಾಡಿ, ಹೋಳಿ ಉತ್ಸವದ ಉದ್ಘಾಟನೆಯನ್ನು ಯುವ ಮುಖಂಡ ಮಲ್ಲಿಕಾರ್ಜುನ ಮೇಟಿ ನೆರವೇರಿಸುವರು. ಅಧ್ಯಕ್ಷತೆಯನ್ನು ಹೋಳಿ ಹಬ್ಬ ಆಚರಣಾ ಸಮಿತಿ ಅಧ್ಯಕ್ಷ ಕಳಕಪ್ಪ ಬಾದೋಡಗಿ ವಹಿಸುವರು. ಮುಖ್ಯ ಅತಿಥಿಗಳಾಗಿ ಉದ್ಯಮಿ ಎಂ.ಆರ್.ಸಿಂಧೆ, ಬಾಬುದಾರ ನರಸಿಂಹ ಕುಲಕರ್ಣಿ, ಪತ್ರಕರ್ತ ರವಿ ಹಳ್ಳೂರ, ಉಪನ್ಯಾಸಕ ಮೋಹನ ದೇಶಪಾಂಡೆ ಆಗಮಿಸುವರು ಎಂದರು. ಐದು ಓಣಿಗಳು ಹಾಗೂ ವಿದ್ಯಾಗಿರಿ ಮತ್ತು ನವನಗರ ಭಾಗದ ಹಲಗೆ ಮೇಳದ ಪ್ರದರ್ಶನ ಮತ್ತು ಸ್ಪರ್ಧೆ ಏರ್ಪಡಿಸಲಾಗಿದೆ. ಕಳೆದ ವರ್ಷ ಹೆಚ್ಚಿನ ಸೋಗಿನ ಬಂಡಿ ಮಾಡಿದ ಓಣಿಗಳಿಗೆ ಬಹುಮಾನ ವಿತರಣೆ ಉತ್ಸವ ಉದ್ಘಾಟನೆ ಸಮಾರಂಭದಲ್ಲಿ ನೀಡಲಾಗುವುದು ಎಂದರು.



ಸಂಘಟನಾ ಕಾರ್ಯದರ್ಶಿ ಸಂಜೀವ ವಾಡಕರ, ಶಿವು ಮೇಲ್ನಾಡ, ಸಮಿತಿ ಮುಖಂಡ ವೀರಣ್ಣ ಬಂಗಾರಶೆಟ್ಟರ ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ಸಮಿತಿ ಖಜಾಂಚಿ ರಾಜು ನಾಯಕ, ಬಾಬುದಾರ ಶರವಣ ಪತ್ರಿಕಾಗೋಷ್ಠಿಯಲ್ಲಿದ್ದರು.

ಎಂ.ಎನ್ ಪಾಟೀಲರಿಂದ ಸಂಸ್ಥೆ ಅಭಿವೃದ್ಧಿ: ಶ್ರೀಗಳು

ಬೀಳಗಿ: ಬಾಗಲಕೋಟೆಯ ಬಸವೇಶ್ವರ ವಿದ್ಯಾ ಸಂಸ್ಥೆಯು ಹೇಗೆ ಉತ್ತರ ಕರ್ನಾಟಕದ ಶೈಕ್ಷಣಿಕ ಕಾಶಿ ಎನಿಸಿಕೊಂಡಿದೆಯೋ, ಅದೇ ಶಿಸ್ತು ಮತ್ತು ಕರ್ತವ್ಯನಿಷ್ಠೆಯನ್ನು ನಾನು ಇಲ್ಲಿ ಕಾಣುತ್ತಿದ್ದೇನೆ. ಎಂ. ಎನ್. ಪಾಟೀಲರ ನೇತೃತ್ವದಲ್ಲಿ ಈ ಸಂಸ್ಥೆಯು ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವುದು ಹೆಮ್ಮೆಯ ವಿಷಯ ಎಂದು ಮರೇಗುದ್ದಿ-ಜಾನಮಟ್ಟಿ ಅಡವಿ ಸಿದ್ದೇಶ್ವರ ಮಠದ ಡಾ. ನಿರೂಪಧೀಶ ಸ್ವಾಮೀಜಿ ಸಂತಸ ವ್ಯಕ್ತಪಡಿಸಿದರು.

ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ ಆವರಣದಲ್ಲಿ ಹಮ್ಮಿಕೊಂಡಿದ್ದ ಸಿಬ್ಬಂದಿ ವರ್ಗದ ಸೌಹಾರ್ದ ಸಮ್ಮಿಲನ ಕಾರ್ಯಕ್ರಮದಲ್ಲಿ ಮಾತನಾಡಿ, ಕೇವಲ ಪಠ್ಯಪುಸ್ತಕದ ಶಿಕ್ಷಣಕ್ಕೆ ಸೀಮಿತವಾಗದೆ, ಈ ಸಂಸ್ಥೆ ಸಾಹಿತ್ಯ ಲೋಕಕ್ಕೂ ತನ್ನದೇ ಆದ ಪ್ರೋತ್ಸಾಹ ನೀಡುತ್ತಿದೆ. ಲೇಖಕರಿಗೆ, ಕವಿಗಳಿಗೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ವೇದಿಕೆ ಕಲ್ಪಿಸುವ ಮೂಲಕ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗಿದೆ ಎಂದರು.

ಗಿರಿಸಾಗರದ ಕಲ್ಯಾಣ ಹಿರೇಮಠದ ರುದ್ರಮುನಿ ಶಿವಾಚಾರ್ಯ ಶ್ರೀಗಳು ಮಾತನಾಡಿ, ನಂಜುಂಡಪ್ಪ ವರದಿಯಲ್ಲಿ ಅತ್ಯಂತ ಹಿಂದುಳಿದ ತಾಲೂಕು ಎಂದು ಗುರುತಿಸಲ್ಪಟ್ಟ ಪ್ರದೇಶದಲ್ಲಿ ಶೈಕ್ಷಣಿಕ ಕ್ರಾಂತಿ ಮಾಡಿದ ಕೀರ್ತಿ ಎಂ. ಎನ್. ಪಾಟೀಲರಿಗೆ ಸಲ್ಲುತ್ತದೆ ಎಂದರು.

ಬೂದಿಹಾಳ (ಎಸ್.ಜಿ.) ಫಕೀರೇಶ್ವರ ಮಠದ ಪ್ರಭು ಸ್ವಾಮಿಜಿ ಮಾತನಾಡಿ, ಬೀಳಗಿಯ ಈ ವಿವೇಕಾನಂದ ವಿದ್ಯಾ ಸಂಸ್ಥೆಯು ಕೇವಲ ಒಂದು ವಿದ್ಯಾಕೇಂದ್ರವಾಗಿ ಉಳಿದಿಲ್ಲ, ಅದು ಈ ಭಾಗದ ಜನರಿಗೆ ನೆರಳು ನೀಡುವ ಸಂಜೀವಿನಿ ಮರವಿದ್ದಂತೆ. ಎಂ. ಎನ್. ಪಾಟೀಲರು ತಮ್ಮ ಸಿಬ್ಬಂದಿಯನ್ನು ಕೇವಲ ನೌಕರರು ಎಂದು ಪರಿಗಣಿಸದೆ, ತಮ್ಮ ಕುಟುಂಬದ ಸದಸ್ಯರಂತೆ ಕಾಣುತ್ತಾರೆ ಎಂದರು.

ಸಂಸ್ಥೆಯ ಸಂಸ್ಥಾಪಕ ಎಂ. ಎನ್. ಪಾಟೀಲ ಮಾತನಾಡಿ, ತಾಲೂಕಿನ ಎಲ್ಲ ಮಠಾಧೀಶರನ್ನು ಒಂದೇ ವೇದಿಕೆಯಲ್ಲಿ ಸೇರಿಸುವುದು ತನ್ನ ಆಶಯವಾಗಿತ್ತು ಎಂದು ತಿಳಿಸಿದ ಅವರು, ಸಂಸ್ಥೆಯಲ್ಲಿ 180ಕ್ಕೂ ಹೆಚ್ಚು ಶಿಕ್ಷಕರು ಮತ್ತು ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದು, ಬೀಳಗಿ ಶಿಕ್ಷಣ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ವಿಶಿಷ್ಟ ಕೊಡುಗೆ ನೀಡಿದೆ. ಗ್ರಾಮೀಣ ಪ್ರದೇಶದಲ್ಲಿಯೇ ಬೃಹತ್ ಹಾಗೂ ಸದೃಢ ಶೈಕ್ಷಣಿಕ ಕೇಂದ್ರವಾಗಿ ಬೆಳೆದಿದೆ ಎಂದರು.

ಕಲ್ಮಠದ ಗುರುಪಾದ ಶಿವಾಚಾರ್ಯ ಶ್ರೀಗಳು, ಕುಂದರಗಿಯ ವೀರಸಂಗಮೇಶ್ವರ ಶಿವಾಚಾರ್ಯ ಶ್ರೀಗಳು, ಆರಕೇರಿಯ ಮಾಧವಾನಂದ ಸ್ವಾಮೀಜಿ, ಚಿಕ್ಕಾಲಗುಂಡಿ ಶಿವಶರಣಾನಂದ ಸ್ವಾಮಿಗಳು, ಅನ್ನಪೂರ್ಣೇಶ್ವರಿ ಬ್ರಹನ್ಮಠದ ಶಿವಾನಂದ ದೇವರು, ಹುಚ್ಚೇಶ್ವರ ಮಠದ ಫಕೀರಯ್ಯ ಸ್ವಾಮಿಗಳು, ಅನಗವಾಡಿಯ ಮಾತೋಶ್ರೀ ಅನಸೂಯಾ ತಾಯಿ, ಅಮಲಝುರಿ-ಮೆಳ್ಳಿಗೇರಿಯ ಜ್ಞಾನಮಯಾನಂದ ಸ್ವಾಮೀಜಿ ಹಾಗೂ ವಿಜಯಪುರ ಷಣ್ಮುಖಾರೂಢ ಮಠದ ರಾಮಕೃಷ್ಣ ದೇವರು, ಕರವೀರಮಠ, ಬಾಡಗಂಡಿಯ ಮಾತೋಶ್ರೀ ಬಸಮ್ಮತಾಯಿ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಮುಖಂಡರಾದ ರಾಮನಗೌಡ ಜಕ್ಕನಗೌಡರು ಉಪಸ್ಥಿತರಿದ್ದರು. ಸಂಸ್ಥೆಯ ಆಡಳಿತಾಧಿಕಾರಿ ವಿವೇಕಾನಂದ ಮೇಟಿ ವಂದಿಸಿದರು.



ಕೊಂಕಣಕೊಪ್ಪ ಗ್ರಾಮದಲ್ಲಿ ಬೃಹತ್ ಶೋಭಾಯಾತ್ರೆ

ಗುಳೇದಗುಡ್ಡ: ಹಿಂದೂ ಸಮ್ಮೇಳನದ ಅಂಗವಾಗಿ ಕಟಗೇರಿ ಮಂಡಲದ ಹಿಂದೂ ಸಮ್ಮೇಳನ ಸಂಚಲನಾ ಸಮಿತಿ ವತಿಯಿಂದ ಸಮೀಪದ ಕೊಂಕಣಕೊಪ್ಪ ಗ್ರಾಮದಲ್ಲಿ ಬೃಹತ್ ಭವ್ಯ ಶೋಭಾಯಾತ್ರೆ ಭಾನುವಾರ ಸಂಜೆ ನಡೆಯಿತು.

ಕೊಂಕಣಕೊಪ್ಪ ಗ್ರಾಮದ ಶ್ರೀ ದುರ್ಗಾದೇವಿ ಕಟ್ಟೆಯಿಂದ ಭಾರತಮಾತೆಯ ಭಾವಚಿತ್ರದೊಂದಿಗೆ ಆರಂಭಗೊಂಡ ಬೃಹತ್ ಶೋಭಾ ಯಾತ್ರೆ, ಇಯಲ್ಲಿ ಕರಡಿ ಮಜಲು, ಭಜನಾ ಮಂಡಳಿ, ಡೊಳ್ಳು ಕುಣಿತ, ಸೇರಿದಂತೆ ವಿವಿಧ ವಾದ್ಯಮೇಳಗಳು ಶೋಭಾ ಯಾತ್ರೆಯಲ್ಲಿ ಭಾಗವಹಿಸಿದ್ದವು. ಇಡೀ ಕೊಂಕಣಕೊಪ್ಪ ಗ್ರಾಮ ಕೇಸರಿಮಯವಾಗಿತ್ತು. ಶೋಭಾ ಯಾತ್ರೆ ಕಲ್ಲೇಶ್ವರ ದೇವಸ್ಥಾನದ ಆವರಣಕ್ಕೆ ಬಂದು ತಲುಪಿತು.

ಭವ್ಯ ಶೋಭಾಯಾತ್ರೆಗೆ ಅಮರೇಶ್ವರ ಮಠದ ಡಾ. ನೀಲಕಂಠ ಶಿವಾಚಾರ್ಯ ಶ್ರೀಗಳು ಚಾಲನೆ ನೀಡಿದರು.



ಶೋಭಾಯಾತ್ರೆಯಲ್ಲಿ ಗುಳೇದಗುಡ್ಡ ಮರಡಿಮಠದ ಅಭಿನವ ಕಾಡಸಿದ್ದೇಶ್ವರ ಶ್ರೀಗಳು, ಆರೋಗ್ಯ ಭಾರತಿ ಕರ್ನಾಟಕ ಉತ್ತರ ಪ್ರಾಂತ ಕಾರ್ಯದರ್ಶಿ ಡಾ. ಬಸವರಾಜ ಬೊಂಬ್ಲೆ, ಅಮರೇಶ ಸಾರಂಗಮಠ, ಭುವನೇಶ ಪೂಜಾರ, ಮಂಜು ಹಲಗಲಿ, ಮುತ್ತು ಹೊದ್ಲೂರಮಠ, ಮೋನೇಶ ಬಡಿಗೇರ, ಮಂಜುನಾಥ ಕದಾಂಪೂರ, ಭೀಮಸಿ ಕಾರನ್ನವರ, ರವಿ ಕಿವುಡಜಾಡರ, ಬಸು ಹಲಗಲಿ, ಆತ್ಮನಂದ ಕುಡಕಿ, ಬಸವರಾಜ ಗುರ್ಲಹೊಸೂರ, ಪ್ರಭು ಕಳ್ಳಿಗುಡ್ಡ, ಮಹೇಶ ಸೂಳಿಭಾವಿ, ಕೃಷ್ಣ ಬೀಳಗಿ, ಮಹಾಂತೇಶ ಪೂಜಾರ, ಆದಪ್ಪ ಕಲ್ಬುರ್ಗಿ, ಸುರೇಶ ಗೌಡ್ರ, ಶಿವಾನಂದ ಬಡಿಗೇರ, ರಾಜು ಚಿಕ್ಕನಗುಂದ, ಗುರು ಅಂಗಡಿ ಮತ್ತಿತರರು ಇದ್ದರು.

ಕಿರುಸುದ್ದಿ

ದ್ವಿತೀಯ ಪಿಯುಸಿ ಪರೀಕ್ಷೆ: 94 ವಿದ್ಯಾರ್ಥಿಗಳು ಗೈರು

ವಿಜಯಪುರ: ಜಿಲ್ಲೆಯಲ್ಲಿ ಸೋಮವಾರ ನಡೆದ ದ್ವಿತೀಯ ಪಿಯುಸಿಯ ಭೂಗೋಳ ಶಾಸ್ತ್ರ, ಸಂಖ್ಯಾಶಾಸ್ತ್ರ ಹಾಗೂ ಮನಃಶಾಸ್ತ್ರ ವಿಷಯಗಳ ಪರೀಕ್ಷೆಗೆ 1,439 ವಿದ್ಯಾರ್ಥಿಗಳ ನೋಂದಣಿ ಪೈಕಿ 1,345 ವಿದ್ಯಾರ್ಥಿಗಳು ಹಾಜರಾಗಿದ್ದು, 94 ವಿದ್ಯಾರ್ಥಿಗಳು ಗೈರಾಗಿದ್ದಾರೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೀವಿತ ಪ್ರಮಾಣ ಪತ್ರ ಸಲ್ಲಿಸಲು ಸೂಚನೆ

ವಿಜಯಪುರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಾಸಾಶನ ಪಡೆಯುತ್ತಿರುವ ಸಾಹಿತಿ, ಕಲಾವಿದರು ಮಾರ್ಚ್ ತಿಂಗಳೊಳಗಾಗಿ ಜೀವಿತ ಪ್ರಮಾಣ ಪತ್ರ ಸಲ್ಲಿಸಬೇಕೆಂದು ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ. ಇಲಾಖೆಯಿಂದ ಈಗಾಗಲೇ ಮಾಸಾಶನ ಪಡೆಯುತ್ತಿರುವ ಕಷ್ಟ ಪರಿಸ್ಥಿತಿಯಲ್ಲಿರುವ ಸಾಹಿತಿ, ಕಲಾವಿದರಿಗೆ ಹಾಗೂ ಮೃತಪಟ್ಟ ಕಲಾವಿದರ ಪತ್ನಿಯರಿಗೆ ನೀಡುವ ಮಾಸಾಶನಕ್ಕೆ ಸಂಬಂಧಿಸಿದಂತೆ ಪ್ರತಿ 6 ತಿಂಗಳಿಗೊಮ್ಮೆ ಆರ್ಥಿಕ ವರ್ಷದ ಮಾರ್ಚ್ ಹಾಗೂ ಸೆಪ್ಟೆಂಬರ್ ತಿಂಗಳಲ್ಲಿ ಜೀವಿತ ಪ್ರಮಾಣ ಪತ್ರ ಪಡೆದು ವಿಭಾಗೀಯ ಜಂಟಿ ನಿರ್ದೇಶಕರ ಮೂಲಕ ಕೇಂದ್ರ ಕಚೇರಿಗೆ ವರದಿ ನೀಡಬೇಕಾಗಿರುತ್ತದೆ.

ಹಾಗಾಗಿ ಮಾಸಾಶನ ಪಡೆಯುವವರು ಅಗತ್ಯ ದಾಖಲೆಗಳೊಂದಿಗೆ ಆಧಾರ್ ಕಾರ್ಡ್ ಪ್ರತಿ, ಪಿಂಚಣಿ ಪುಸ್ತಕ ಪ್ರತಿ, ಬ್ಯಾಂಕ್ ಪಾಸ್ ಬುಕ್ ಪ್ರತಿ ಹಾಗೂ ಐಡೆಂಟಿಟಿ ಅಳತೆಯ ಫೋಟೋ, ಜೀವಿತ ಪ್ರಮಾಣ ಪತ್ರವನ್ನು ಖುದ್ದಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಸಲ್ಲಿಸಬೇಕು ಎಂದು ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸದಸ್ಯರ ಪ್ರವಾಸ

ವಿಜಯಪುರ: ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯೆ ಎಸ್. ಮಂಜು ಅವರು ಮಾ. 5 ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಮಾ.4 ರಂದು ಸಂಜೆ 6.30 ಕ್ಕೆ ಬೆಂಗಳೂರಿನಿಂದ ಹೊರಟು ಮಾ.5 ರಂದು ವಿಜಯಪುರಕ್ಕೆ ಆಗಮಿಸುವರು. ಮಾ.5 ರಂದು ಬೆಳಗ್ಗೆ 9 ಗಂಟೆಗೆ ವಿಜಯಪುರ ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡುವರು. ಬಳಿಕ ವಿಚಾರಣಾಧೀನ ಕೈದಿಗಳಿಗೆ ಮಕ್ಕಳ ಹಕ್ಕುಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 1 ಗಂಟೆಗೆ ಬೆಳಗಾವಿಗೆ ಪ್ರಯಾಣ ಬೆಳೆಸುವರು ಎಂದು ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ವಿಜಯಪುರ: ದೌರ್ಜನ್ಯ ತಡೆ ಅಧಿನಿಯಮ, ನಾಗರಿಕ ಹಕ್ಕು ರಕ್ಷಣಾ ಕಾಯ್ದೆ ಹಾಗೂ ಇಲಾಖೆಯ ಕಾರ್ಯಕ್ರಮಗಳ ಕುರಿತಾಗಿ ಜಾಗೃತಿ ಹಾಗೂ ಅರಿವು ಕಾರ್ಯಕ್ರಮ ಮತ್ತು ವಿಚಾರಗೋಷ್ಠಿ ಮತ್ತು ಕಾರ್ಯಗಾರ ನಡೆಸಲು ಜಿಲ್ಲೆಯ ಅರ್ಹ ಸರ್ಕಾರೇತರ ಸಂಘ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಹಾಗೂ ತಾಲೂಕಾ ಸಮಾಜ ಕಲ್ಯಾಣ ಇಲಾಖೆಯ ಕಚೇರಿಯಿಂದ ನಿಗದಿತ ಅರ್ಜಿ ನಮೂನೆ ಪಡೆದುಕೊಂಡು, ಭರ್ತಿ ಮಾಡಿ ಮಾ. 6 ರೊಳಗಾಗಿ ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಅವರ ಕಚೇರಿಗೆ ಸಲ್ಲಿಸಬಹುದಾಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆಯನ್ನು ಸಂಪರ್ಕಿಸುವಂತೆ ಇಲಾಖೆಯು ಪ್ರಕಟಣೆ ತಿಳಿಸಿದೆ.

ನಿಧನ ಸುದ್ದಿ

ರಾಮಣ್ಣ ಪಡಸಲಗಿ



ಕೊಲ್ಹಾರ: ಪಟ್ಟಣದ ಗಂಗಾಮತ ಸಮಾಜದ ಹಿರಿಯ ಜೀವಿ ರಾಮಣ್ಣ ಹಣಮಂತಪ್ಪ ಪಡಸಲಗಿ (70) ನಿಧನರಾದರು. ಮೃತರು ಪತ್ನಿ, ಬೀಳಗಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರದ ಕಿರಿಯ ತರಬೇತಿ ಅಧಿಕಾರಿಯಾದ ಶ್ರೀಶೈಲ್ ಪಡಸಲಗಿ ಸೇರಿದಂತೆ ಮೂರು ಜನ ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಚಿದಾನಂದ ಶಹಾಪುರ



ತಾಳಿಕೋಟೆ : ತಾಲೂಕಿನ ತುಂಬಗಿ ಗ್ರಾಮದ ನಿವಾಸಿ ಚಿದಾನಂದ ಮ. ಶಹಾಪುರ (63) ನಿಧರಾಗಿದರು. ಮೃತರಿಗೆ ಓರ್ವ ಪುತ್ರ ಕಾನಿಪ ತಾಳಿಕೋಟಿ ತಾಲೂಕು ಸಂಘದ ಖಜಾಂಚಿ ಹಾಗೂ ವರದಿಗಾರ ಸಂತೋಷ ಹಾಗೂ ಐದು ಜನ ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ನಾಲತವಾಡ: ಸ್ಥಳೀಯ ಕೆಇಬಿ ಕಚೇರಿಯಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತ್ಯುತ್ಸವವನ್ನು ಪುಷ್ಪಾರ್ಚನೆ ಮೂಲಕ ಜಯಂತಿ ಆಚರಣೆ ಮಾಡಲಾಯಿತು. ಈ ವೇಳೆ ಶಾಖಾಧಿಕಾರಿ ಪ್ರಭುಗೌಡ ಗುರಡ್ಡಿ, ಎಸ್.ಬಿ. ಗಣಾಚಾರಿ, ಶಿವಶಂಕರ್ ಗುಳಿ, ಮಾಂತೇಶ್ ಸಜ್ಜನ ಕೋರಿ ಸರ್ ಮೌನೇಶ್ ಗುರಿಕಾರ, ಸಂತೋಷ್ ನಾಡಗೌಡ, ಬಸವರಾಜ್ ಮಂಜನಾಳ, ಎಲ್ಲಾ ಸಿಬ್ಬಂದಿ ವರ್ಗದವರು ಇತರರು ಇದ್ದರು.

ಬಾಲಮೇಳ ಸಮ್ಮೇಳನ ಕಾರ್ಯಕ್ರಮ

ಬಸವನಬಾಗೇವಾಡಿ: ಅಂಗನವಾಡಿ ಕೇಂದ್ರಗಳನ್ನು ಉನ್ನತಮಟ್ಟಕ್ಕೆರಿಸಲು ಬಾಲಮೇಳ ಸಮ್ಮೇಳನ ಕಾರ್ಯಕ್ರಮಗಳು ಮಾಡುವುದರೊಂದಿಗೆ ಶಾಲಾ ಪೂರ್ವ ಶಿಕ್ಷಣ ನೀಡುವುದು ಅವಶ್ಯಕವಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿ ಮನೋಹರಮ್ಮ ಆಹೇರಿ ಹೇಳಿದರು.

ತಾಲೂಕಿನ ಹೂವಿನಹಿಪ್ಪರಗಿ ಗ್ರಾಮದ ಸರಕಾರಿ ಕನ್ನಡ ಗಂಡು ಮಕ್ಕಳ ಶಾಲಾ ಆವರಣದಲ್ಲಿ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಬಸವನಬಾಗೇವಾಡಿ ಸಹಯೋಗದಲ್ಲಿ ಅಂಗನವಾಡಿಯ 32ಕೇಂದ್ರಗಳನ್ನು ಒಳಗೊಂಡು ಮಕ್ಕಳ ಬಾಲ ಮೇಳ ಸಮ್ಮೇಳನ ಕಾರ್ಯಕ್ರಮದಲ್ಲಿ ಮಾತನಾಡಿ, ಸರಕಾರ ಅಂಗನವಾಡಿ ಕೇಂದ್ರಗಳಿಗೆ ಸೌಲಭ್ಯ ಒದಗಿಸಿ ವಿವಿಧ ಯೋಜನೆಗಳನ್ನು ತರುವುದರ ಮೂಲಕ ಮಕ್ಕಳ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿದೆ. ಕೆಲವೊಂದು ಸಮುದಾಯ ಆಧಾರಿತ ಕಾರ್ಯಕ್ರಮಗಳನ್ನು ಮಾಡುವುದರಿಂದ ಇನ್ನೂ ಪರಿಣಾಮಕಾರಿಯಾಗಿ ಶಾಲಾ ಪೂರ್ವ ಶಿಕ್ಷಣವನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾಪಂ ಪಿಡಿಒ ಶ್ರೀಶೈಲ ತಳವಾರ ವಹಿಸಿದ್ದರು. ಕೆ.ಆರ್.ಡಿ.ಎಸ್. ಎಸ್. ಜಿಲ್ಲಾ ಸಂಚಾಲಕ ಗುರುರಾಜ ಗುಡಿಮನಿ, ಶಾಲಾ ಮುಖ್ಯಗುರುಮಾತೆ ಗುಂಡಾನವರ, ಮಕಾಂದಾರ ಗ್ರಾಪಂ ಅಕೌಂಟೆಂಟ್ ಚಂದ್ರು ಗಿರಿನಿವಾಸ, ಅಂಗನವಾಡಿಯ ಕಾರ್ಯಕರ್ತರು, ಸಹಾಯಕಿಯರು, ಮಕ್ಕಳ ತಾಯಂದಿರು ಭಾಗವಹಿಸಿದ್ದರು.



ಬಸವನಬಾಗೇವಾಡಿ: ತಾಲೂಕಿನ ಹೂವಿನಹಿಪ್ಪರಗಿ ಗ್ರಾಮದ ಸರಕಾರಿ ಕನ್ನಡ ಗಂಡು ಮಕ್ಕಳ ಶಾಲಾ ಆವರಣದಲ್ಲಿ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಬಸವನಬಾಗೇವಾಡಿ ಸಹಯೋಗದಲ್ಲಿ ಅಂಗನವಾಡಿಯ 32ಕೇಂದ್ರಗಳನ್ನು ಒಳಗೊಂಡು ಮಕ್ಕಳ ಬಾಲ ಮೇಳ ಸಮ್ಮೇಳನ ಕಾರ್ಯಕ್ರಮ ನಡೆಯಿತು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿ ಮನೋಹರಮ್ಮ ಆಹೇರಿ, ಗ್ರಾಪಂ ಪಿಡಿಒ ಶ್ರೀಶೈಲ ತಳವಾರ ವಹಿಸಿದ್ದರು. ಕೆ.ಆರ್.ಡಿ.ಎಸ್. ಎಸ್. ಜಿಲ್ಲಾ ಸಂಚಾಲಕ ಗುರುರಾಜ ಗುಡಿಮನಿ ಸೇರಿದಂತೆ ಇತರರಿದ್ದರು.

ಭಾರತ ಜನಗಣತಿ-2027ಕ್ಕೆ ಅಗತ್ಯ ಸಿದ್ಧತೆ ಕೈಗೊಳ್ಳಿ : ಡಿಸಿ ಡಾ. ಆನಂದ

ವಿಜಯಪುರ: 2027ರ ಭಾರತೀಯ ಜನಗಣತಿ ಎರಡು ಹಂತದಲ್ಲಿ ನಡೆಯಲಿದ್ದು, ಹಂತ 1ರಲ್ಲಿ ಮನೆಪಟ್ಟಿ ಮತ್ತು ಮನೆ ಗಣತಿ ನಡೆಯಲಿದ್ದು, 2026ರ ಏಪ್ರಿಲ್ 1 ರಿಂದ ಏಪ್ರಿಲ್ 15 ದಿನಗಳವರೆಗೆ ಸ್ವಯಂ ಗಣತಿ ಅವಧಿ ನಿಗದಿಪಡಿಸಲಾಗಿದೆ. ಮೊದಲ ಬಾರಿಗೆ ಸ್ವಯಂ ಗಣತಿಗೆ ಡಿಜಿಟಲ್ ವ್ಯವಸ್ಥೆ ತರಲಾಗಿದ್ದು, ಈ ವ್ಯವಸ್ಥೆ ಅನುಷ್ಠಾನಕ್ಕೆ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಹೇಳಿದರು.

ಇಲ್ಲಿನ ಜಿಪಂ ಸಭಾಂಗಣದಲ್ಲಿ ಭಾರತ ಜನಗಣತಿ 2027ರ ನಿಮಿತ್ತ ಸೋಮವಾರ ಜಿಲ್ಲಾ ಅಧಿಕಾರಿಗಳು, ಚಾರ್ಜ್ ಅಧಿಕಾರಿಗಳು, ಇತರೆ ಸಿಬ್ಬಂದಿಗೆ ಹಮ್ಮಿಕೊಂಡಿದ್ದ ಮೂರು ದಿನಗಳ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಇದು ಸಂಪೂರ್ಣ ಡಿಜಿಟಲ್ ರೂಪದಲ್ಲಿ ನಡೆಯಲಿದೆ. 2026ರ ಏ.16ರಿಂದ ಮೇ 16ರ ವರೆಗೆ ಭಾರತದ ಜನಗಣತಿ-2027ರ ನಿಮಿತ್ತ ಮನೆಪಟ್ಟಿ ಕ್ಷೇತ್ರ ಕಾರ್ಯ ನಡೆಯಲಿದೆ. 150 ರಿಂದ 200 ಮನೆಗಳು ಅಥವಾ 700 ರಿಂದ 800 ಜನ ಸಂಖ್ಯೆಗೆ ಓರ್ವ ಗಣತಿದಾರರನ್ನು ಮತ್ತು ಪ್ರತಿ ಆರು ಜನ ಗಣತಿದಾರರಿಗೆ ಓರ್ವ ಮೇಲ್ವಿಚಾರಕರನ್ನು ನೇಮಿಸಲಾಗುವುದು ಎಂದರು.

ಮನೆ ಪಟ್ಟಿ ಮಾಡುವಾಗ ಸರಿಯಾಗಿ ನಿರ್ವಹಿಸಬೇಕು. ಇದೊಂದು ಮಹತ್ವದ ಜವಾಬ್ದಾರಿಯಾಗಿದೆ. ಮೊದಲ ಹಂತದಲ್ಲಿ ಈ ಕಾರ್ಯವನ್ನು ಅತ್ಯಂತ ಸುಸೂತ್ರವಾಗಿ ನಿರ್ವಹಿಸಬೇಕು. ಜನಗಣತಿ ಯೋಜನೆ ಹಾಗೂ ನೀತಿ ನಿರೂಪಣೆಯಲ್ಲಿ ಅದರ ಮಹತ್ವ ಬಹಳಷ್ಟಿದೆ. ಯಾವುದೇ ಮಾಹಿತಿ ಕೈಬಿಟ್ಟು ಹೋಗದಂತೆ ಎಚ್ಚರಿಕೆ ವಹಿಸಬೇಕು ಎಂದರು.

ಜಿಲ್ಲೆಯ ಗ್ರಾಮೀಣ ಪ್ರದೇಶಕ್ಕೆ 13 ಹಾಗೂ ನಗರ ಪ್ರದೇಶಕ್ಕೆ 14 ಸೇರಿದಂತೆ ಜಿಲ್ಲೆಯಲ್ಲಿ ಒಟ್ಟಾರೆ 31 ಚಾರ್ಜ್ ಅಧಿಕಾರಿಗಳಿರಲಿದ್ದಾರೆ. ಪಾಲಿಕೆ ವ್ಯಾಪ್ತಿಯಲ್ಲಿ ನಾಲ್ಕು ಚಾರ್ಜ್ ಅಧಿಕಾರಿಗಳನ್ನಾಗಿ ರಚಿಸಲಾಗಿದೆ ಎಂದು ಮಾಹಿತಿ ನೀಡಿದರು.

ಜಿಲ್ಲಾ ನೋಡಲ್ ಅಧಿಕಾರಿ ವಿಮೇಶ ಪಿ., ಭಾರತ ಸರ್ಕಾರದ ಸಹಾಯಕ ನಿರ್ದೇಶಕ ಬ್ರಿಜೇಶ ಎ., ವಿಜಯಪುರ ಉಪವಿಭಾಗಾಧಿಕಾರಿ ಗುರುನಾಥ ದಡ್ಡೆ, ಇಂಡಿ ಉಪವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ, ಪಾಲಿಕೆ ಆಯುಕ್ತ ವಿಜಯ ಮೆಕ್ಕಳಕಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬದ್ರುದ್ದೀನ್ ಸೌದಾಗರ್, ಜಿಪಂ ಮುಖ್ಯ ಯೋಜನಾಧಿಕಾರಿ ಚಂದ್ರಕಾಂತ ಕುಂಬಾರ, ಡಿಡಿಪಿಐ ವೀರಯ್ಯ ಸಾಲಿಮಠ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಜ್ಯೋತಿ ದೇಶಪಾಂಡೆ, ಚಾರ್ಜ್ ಅಧಿಕಾರಿಗಳು, ಶಿರಸ್ತೇದಾರರು, ತಾಂತ್ರಿಕ ಸಹಾಯಕರು ಇದ್ದರು. ಜಿಪಂಯ ಸಿ.ಸಿ ಕುಲಕರ್ಣಿ ನಿರೂಪಿಸಿ, ಜಿಲ್ಲಾಧಿಕಾರಿ ಕಚೇರಿಯ ಶಿರಸ್ತೇದಾರ ಸಚ್ಚಿದಾನಂದ ತೇರದಾಳ ವಂದಿಸಿದರು.



> **ಜನಗಣತಿ ಸಮರ್ಪಕವಾಗಿ ನಡೆಸಲು ಜಿಲ್ಲಾಡಳಿತ ಮುಂಚೆಯೇ ಎಲ್ಲ ರೀತಿಯ ಸಿದ್ಧತೆ ಕೈಗೊಳ್ಳುವ ನಿಟ್ಟಿನಲ್ಲಿ ಮೂರು ದಿನಗಳ ಈ ತರಬೇತಿ ಶಿಬಿರ ಆಯೋಜಿಸಿದೆ. ಹಾಗಾಗಿ ಈ ಕಾರ್ಯದಲ್ಲಿ ಯಾವುದೇ ಗೊಂದಲಗಳಿಗೆ ಅವಕಾಶ ನೀಡದಂತೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.**
> ■ ಡಾ. ಆನಂದ ಕೆ. ಜಿಲ್ಲಾಧಿಕಾರಿ, ವಿಜಯಪುರ

ವಿಜ್ಞಾನ ವಸ್ತು ಪ್ರದರ್ಶನ: ಪ್ರತಿಭೆ ಅನಾವರಣ

ಸಿಂದಗಿ: ವಿಜ್ಞಾನ ಹಾಗೂ ಪರಿಸರ ವಸ್ತು ಪ್ರದರ್ಶನಗಳಲ್ಲಿ ವಿದ್ಯಾರ್ಥಿಗಳ ಪ್ರತಿಭೆ ಅನಾವರಣಗೊಳ್ಳುತ್ತದೆ ಎಂದು ಬಿಜೆಪಿ ಮುಖಂಡ ಶ್ರೀಶೈಲಗೌಡ ಬಿರಾದಾರ ಮಾಗಣಗೇರಿ ಹೇಳಿದರು.

ಸಿಂದಗಿ ನಗರದ ಶಾಂತವೀರ ನಗರದಲ್ಲಿರುವ ಸಂಗಮೇಶ್ವರ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಹಮ್ಮಿಕೊಂಡ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ನಿಮಿತ್ಯ ವಿಜ್ಞಾನ ವಸ್ತು ಪ್ರದರ್ಶನ ಹಾಗೂ ಸಾಧಕರ ಸನ್ಮಾನಸಮಾರಂಭಉದ್ಘಾಟಿಸಿಮಾತನಾಡಿ, ಮಕ್ಕಳಿಗೆ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಗಳನ್ನು ಹಮ್ಮಿಕೊಳ್ಳುವುದರಿಂದ ಮಕ್ಕಳ ಪ್ರತಿಭೆಗಳನ್ನು ಹೊರಹಾಕುವ ವೇದಿಕೆಯಾಗುತ್ತದೆ. ಮಕ್ಕಳು ಸಂಸ್ಕಾರದ ಜೊತೆಗೆ ಸಂಸ್ಕೃತಿಯನ್ನು ಬೆಳೆಸಿಕೊಳ್ಳಬೇಕು. ಮಕ್ಕಳು ತಂದೆ-ತಾಯಿಗಳ ಕನಸನ್ನು ಈಡೇಸುವಲ್ಲಿ ಶ್ರಮವಹಿಸಬೇಕು ಎಂದರು.

ಈ ವೇಳೆ ಶಿಕ್ಷಕ ಸಿದ್ಧಲಿಂಗ ಚೌಧರಿ ಮಾತನಾಡಿ, ವಿದ್ಯಾರ್ಥಿಗಳು ವಿಜ್ಞಾನ ವಿಷಯದ ತತ್ವಗಳನ್ನು ಅರ್ಥ ಮಾಡಿಕೊಳ್ಳಲು ವಿಜ್ಞಾನ ಮತ್ತು ವಸ್ತು ಪ್ರದರ್ಶನ ಮೇಳ ಕಾರ್ಯಕ್ರಮ ಸಹಕಾರಿಯಾಗುತ್ತದೆ. ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನಗಳಿಸುವ ಸಂಗಮೇಶ್ವರ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳಿಗೆ 2000 ಹಾಗೂ ತಾಲೂಕಿಗೆ ಪ್ರಥಮ ಬರುವ ವಿದ್ಯಾರ್ಥಿಗೆ ರೂ.10ಸಾವಿರ ಪ್ರೋತ್ಸಾಹಧನ ನೀಡುವುದಾಗಿ ವಾಗ್ದಾನ ಮಾಡಿದರು.

ಈ ವೇಳೆ ಶಿಕ್ಷಣ ಇಲಾಖೆಯ ಶಿಕ್ಷಣ ಸಂಯೋಜಕ ಡಿ.ಡಿ.ಮುಲ್ಲಾ ಮಾತನಾಡಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲೂಕಿಗೆ ಪ್ರಥಮ ಬರುವ ವಿದ್ಯಾರ್ಥಿಗಳಿಗೆ ಸರಕಾರದ ರೂ.50ಸಾವಿರ ನಗದು ಬಹುಮಾನ ಸೇರಿ ದಾನಿಗಳು ನೀಡಿರುವ ರೂ.4ಲಕ್ಷ 80ಸಾವಿರ ಹಣ ನೀಡಲು ಮುಂದಾಗಿರುವುದು ಸಂತಸದ ವಿಷಯ ಎಂದರು. ಗಣಿತ ಮನೆ, ಹಗಲು ರಾತ್ರಿ, ಜ್ವಾಲಾಮುಖಿ, ಸುಂದರವಾದ ಹಸಿರು ಮನೆ, ತಂತ್ರಜ್ಞಾನ, ನೀರಿನಲ್ಲಿ ವಿದ್ಯುತ್ ಸೇರಿದಂತೆ 45 ವಿವಿಧ ಮಾದರಿಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸಿ, ಅವುಗಳ ಕಾರ್ಯ ವಿಧಾನ ವಿವರಿಸಿ, ಪ್ರಶಂಸೆ ಪಡೆದರು. ಅಲ್ಲಾಪೂರ ಶಾಲಾ ಮುಖ್ಯ ಶಿಕ್ಷಕ ಲಕ್ಷ್ಮಣ ದೊಡಮನಿ, ಶಿಕ್ಷಕ ಗುರುನಾಥ ಅರಳಗುಂಡಗಿ, ಪವನ ಕುಲಕರ್ಣಿ, ಬಸವರಾಜ ಅಗಸರ, ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು.



ಏಳನೇ ದಿನಕ್ಕೆ ಮುಂದುವರಿದ ಸತ್ಯಾಗ್ರಹ

ತಾಳಿಕೋಟೆ: ತಾಲೂಕಿನ ಮೇಲೆಶ್ವರ ಗ್ರಾಮದ ಹತ್ತಿರ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಗುರುತಿಸಲಾದ ಸ್ಥಳವನ್ನು ವಿರೋಧಿಸಿ, ತಾಳಿಕೋಟಿ ಪಟ್ಟಣದಲ್ಲಿಯೇ ಪ್ರಜಾಸೌಧ ಕಟ್ಟಡ ನಿರ್ಮಿಸುವಂತೆ ಒತ್ತಾಯಿಸಿ ತಾಳಿಕೋಟೆ ತಾಲೂಕು ಹೋರಾಟ ಸಮಿತಿಯಿಂದ ಪಟ್ಟಣದ ಬಸವೇಶ್ವರ ವೃತ್ತದ ಬಳಿ ನಡೆಸುತ್ತಿರುವ ಅನಿರ್ದಿಷ್ಟ ಅವಧಿ ಧರಣಿ ಸತ್ಯಾಗ್ರಹವು ಸೋಮುವಾರ ಆರನೇ ದಿನದ ಸತ್ಯಾಗ್ರಹವು ಶ್ರೀ ಸಿದ್ದರಾಮೇಶ್ವರ ಭೋವಿ ವಡ್ಡರ ಕ್ಷೇಮಾಭಿವೃದ್ಧಿ ಸಂಘ ತಾಳಿಕೋಟೆಯಿಂದ ಧರಣಿ ಸತ್ಯಾಗ್ರಹಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ.

ಈ ವೇಳೆಭೋವಿ ಸಮಾಜದ ಹಿರಿಯ ಹುಲಗಪ್ಪ ಕಟ್ಟಿಮನಿ ಮಾತನಾಡಿ, ಈ ಹೋರಾಟ ತಾಲೂಕಿನ ಎಲ್ಲಾ ಸಾರ್ವಜನಿಕರಿಗೆ ಅನಕೂಲವಾಗುವ ಹಾಗೆ ತಾಳಿಕೋಟಿ ಪಟ್ಟಣದಲ್ಲಿಯೇ ಪ್ರಜಾಸೌಧ ನಿರ್ಮಾಣವಾಗಬೇಕು. ತಾಲೂಕು, ಜಿಲ್ಲಾಡಳಿತ ಕೂಡಲೇ ಈಗ ನಿಗದಿಪಡಿಸಿದ ಸ್ಥಳ ರದ್ದುಪಡಿಸಬೇಕು. ಪಟ್ಟಣದಲ್ಲಿರುವ ಜಾಗೆಗಳಲ್ಲಿ ಪ್ರಜಾಸೌಧ ನಿರ್ಮಾಣ ಮಾಡಿ ಎಂದು ಆಗ್ರಹಿಸಿದರು.

ಈ ವೇಳೆ ಸಮಾಜದ ಹಿರಿಯರಾದ ಹಣಮಂತ ಕಟ್ಟಿಮನಿ, ನಾಗಪ್ಪ ಬಳವಾಟ, ದುರ್ಗಪ್ಪ ಕುಲಕರ್ಣಿ ಮುದುಕಪ್ಪ ಡವಳಗಿ, ತಿಮ್ಮಣ್ಣ ಹಗ್ಗಟಗಿ ಹುಲುಗಪ್ಪ ಗಿಡದಮನಿ, ದೇವಪ್ಪ ಹಗಟಗಿ ಬಸವರಾಜ್ ಕಾರಕೂರ, ದುರ್ಗಪ್ಪ ಕಾರ್ಕೂರ, ಪರಸಪ್ಪ ಕಾರ್ಕೂರ, ದುರ್ಗಪ್ಪ ಹಾದಿಮನಿ, ಶ್ರೀಕಾಂತ್ ಚಿಂಚೋಳಿ ಭೀಮಶಿ ಕಾರ್ಕೂರ, ರಾಜು ಹಾದಿಮನಿ, ಶಿವರಾಜ ಬಲವಾಟ ನಾಗರಾಜ್ ಕಟ್ಟಿಮನಿ, ನಾಗಪ್ಪ ಕಟ್ಟಿಮನಿ, ನಿಂಗರಾಜ್ ಬಂಡಿ ವಡ್ಡರ್, ಭೀಮಣ್ಣ ನಾಲತವಾಡ, ಶರಣಪ್ಪ ಬಂಡಿವಡ್ಡರ ಶ್ರೀನಿವಾಸ್ ಕುಲಕರ್ಣಿ, ದೇವಪ್ಪ ಕುಚಬಾಳ, ಸಾಬಣ್ಣ ಕಟ್ಟಿಮನಿ ಹೋರಾಟ ಸಮಿತಿ ಅಧ್ಯಕ್ಷ ದಶರತಸಿಂಗ್ ಮನಗೂಳಿ, ಎಸ್.ಬಿ. ಕಟ್ಟಿಮನಿ, ಆರ್.ಎಸ್. ಪಾಟೀಲ (ಕೂಚಬಾಳ)ಮುತ್ತಪ್ಪ ಚಮಲಾಪುರ, ಕಾಶೀನಾಥ ಮುರಾಳ, ಮುರಿಗೆಪ್ಪ ಸರಶೆಟ್ಟಿ, ಮಸೂಮಸಾಬ್ ಕೆಂಬಾವಿ, ಮೆಹಬೂಬ ಚೋರಗಸ್ತಿ, ಕೊಡೇಕಲ್ ಸರ್, ಪ್ರಕಾಶ್ ಹಜೇರಿ, ದತ್ತು ಹೇಬಸೂರ, ವಿಜಯಸಿಂಗ್ ಹಜೇರಿ, ಮುದಕಪ್ಪ ಬಡಿಗೇರ, ಮಹೇಶ್ ಚಲವಾದಿ, ಅಮಿತ್ ಮನಗೂಳಿ, ರವಿ ಕಟ್ಟಿಮನಿ, ಮಂಜುನಾಥ್ ಶೆಟ್ಟಿ, ತಿಪ್ಪಣ್ಣ ಸಜ್ಜನ್, ರಾಮಣ್ಣ ಕಟ್ಟಿಮನಿ, ಸಂಜು ಬರದೇನಾಳ, ರಾಜು ಹಜೇರಿ, ನಿಂಗನಗೌಡ ದೇಸಾಯಿ, ಪ್ರಸಾದ್ ತಿವಾರಿ, ನಿತಿನ್ ವಿಜಾಪುರ, ಸಿರಸಕುಮಾರ್ ಹಜೇರಿ, ಪಟ್ಟಣದ ಎಲ್ಲಾ ಸಮಾಜದ ಗುರುಹಿರಿಯರು ಹಾಜರಿದ್ದರು.



ಸಿಕ್ಕ ಅವಕಾಶ ಸದುಪಯೋಗಪಡಿಸಿಕೊಳ್ಳಿ: ನಾಗರತ್ನ

ಆಲಮೇಲ: ಮಹಿಳೆಯರಿಗೆ ಸಮಾನ ಅವಕಾಶ ಸಿಕ್ಕಿದೆ ಸರಿಯಾಗಿ ಸದುಪಯೋಗ ಪಡೆದುಕೊಳ್ಳಬೇಕು ಎಂದು ಶಾಸಕರ ಪತ್ನಿ, ಸಿಂದಗಿ ವಿನ್ನರ ವಿಲ್ ಕ್ಲಬ್ ಅಧ್ಯಕ್ಷೆ ನಾಗರತ್ನ ಮನಗೂಳಿ ಹೇಳಿದರು.

ಭಾನುವಾರ ಪಟ್ಟಣದ ನಿರ್ಮಲಾಯ ಸಮಾಜ ಸೇವಾ ಸಂಸ್ಥೆ ಹಾಗೂ ಬಾಂದವ್ಯ ಮಹಿಳಾ ಸ್ವಸಹಾಯ ಸಂಘನೆ ಒಕ್ಕೂಟದಿಂದ ಹಮ್ಮಿಕೊಂಡ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮನೆ ಗೆದ್ದು ಮಾರು ಗೆಲ್ಲು ಎನ್ನುವಂತೆ ಮಹಿಳೆಯರು ಮೊದಲು ಮನೆಯವರ ಮನಸು ಗೆದ್ದು ನಂತರ ಸಮಾಜ ನಾಡು ಗೆಲ್ಲುವಂತ ಸಾದದನೆ ಮಾಡಬೇಕು. ಆನಲೈನ್ ವಂಚನೆಗಳು ಹೆಚ್ಚಾಗುತ್ತಿವೆ ಮಹಿಳೆಯರು ಎಚ್ಚರಿಕೆಯಿಂದ ಅವಶ್ಯಕತೆ ಬೇಕಾದಾಗ ಮಾತ್ರ ಆನ್‌ಲೈನ್ ಬಳಕೆ ಮಾಡಬೇಕು. ಬಾಲ್ಯ ವಿವಾಹ ತಡೆಗಟ್ಟಲು ಮಹಿಳೆಯರೆ ಮುಂದಾಗಬೇಕು ಎಂದರು.



ಕೆನರಾ ಬ್ಯಾಂಕಿನ ಕ್ಷೇತ್ರಾಧಿಕಾರಿ ಓಂಕಾರ ಭೋಸಲೆ ಮಾತನಾಡಿ, ಕೇಂದ್ರ ಸರ್ಕಾರ ಸ್ವ ಉದ್ಯೋಗ ಮಾಡುವ ಮಹಿಳಾ ಸಂಘಟನೆಗಳಿಗೆ ಅನೇಕ ಸೌಲಭ್ಯ ಕಲ್ಪಿಸಿದೆ ಅದಕ್ಕೆ ಸರಿಯಾಗಿ ಉದ್ಯೋಗ ಮಾಡುವ ಸಂಘಗಳಿಗೆ ಕೆನರಾ ಬ್ಯಾಂಕಿನಿಂದ 1 ಲಕ್ಷದಿಂದ 5 ಕೋಟಿ ವರೆಗೂ ಸಾಲ ನೀಡಲಾಗುತ್ತಿದ್ದು, ವಿಮಾ ಸೌಲಭ್ಯಇದ್ದು ಸದುಪಯೋಗ ಪಡೆದುಕೊಳ್ಳಿ ಎಂದರು.

ಟಿಪ್ಪು ಕ್ರಾಂತಿ ಸೇನೆಯ ರಾಜ್ಯಾಧ್ಯಕ್ಷ ದಸಗಿರ ಮುಲ್ಲಾ, ದಕ್ಷಿಣ ಭಾರತದ ಪ್ರಾಂತ್ಯಾಧಿಕಾರಿ ಶಿಜಿ ವರ್ಗಿಸ್, ಬಳಗಾನೂರದ ಶಾಂತಾಬಾಯಿ ಹುಲ್ಲೂರ ಮಾತನಾಡಿದರು. ಬೆಂಗಳೂರಿನ ಮರಿಯಂ ನಿಲಯ ಶಾಲೆಯ ಮುಖ್ಯ ಶಿಕ್ಷಕಿ ಸಿಸಿಲಿಯಾ ಟರ್ಕಿ, ಎಲ್ರಲಿ ವಿನ್ನರಿಸಿ, ಕಾನಿಪ ಅಧ್ಯಕ್ಷ ಅವಧೂತ ಬಂಡಗಾರ, ಪತ್ರಕರ್ತ ಗಾಂದಿಗೌಡ ಪಾಟೀಲ, ನಿರ್ಮಲಾಲಯ ಸಮಾಜ ಸೇವಾ ಸಂಸ್ತೆಯ ಸಂಚಾಲಕಿ ಒಲಿವಾ ಸಲ್ಡಾನ, ಸಮಾಜ ಸೇವಕ ಆನಂದ ಕುಮಸಗಿ, ಅನುಸುಯಾ ಪ್ಯಾಟಿ ಇದ್ದರು. ಕಲಾವತಿ ಕುಮಸಗಿ ಸ್ವಾಗತಿಸಿ, ಪುಷ್ಪಾ ಮೂಲಿಮನಿ ನಿರೂಪಿಸಿದರು.

ಮೂಲಸೌಲಭ್ಯದಿಂದ ಗ್ರಾಮ ಆಡಳಿತಕ್ಕೆ ಬಲ: ಸಚಿವ ಎಂಬಿಪಾ

ವಿಜಯಪುರ: ಗ್ರಾಮ ಪಂಚಾಯತಿಗಳಲ್ಲಿ ಮೂಲಸೌಲಭ್ಯಗಳನ್ನು ಒದಗಿಸುವ ಮೂಲಕ ಗ್ರಾಮ ಆಡಳಿತವನ್ನು ಮತ್ತಷ್ಟು ಬಲಪಡಿಸಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿದರು.

ಬಬಲೇಶ್ವರ ತಾಲೂಕಿನ ಮಮದಾಪುರದಲ್ಲಿ ಸೋಮವಾರ ಗ್ರಾಮ ಪಂಚಾಯಿತಿ ಕಾರ್ಯಾಲಯ, ಗೋದಾಮು ಕಟ್ಟಡ, ಅಗಸಿ ಬಾಗಿಲು ಹಾಗೂ ಬಸ್ ತಂಗುದಾಣ ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

ಗ್ರಾಮೀಣ ಭಾಗದಲ್ಲೂ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಮಮದಾಪುರದಲ್ಲಿ ಸಿಎಸ್‌ಆರ್ ಅನುದಾನದಡಿ ಶಾಲೆಗಳು, ಕೆರೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಇದರಿಂದ ಗ್ರಾಮ ಆಡಳಿತವನ್ನು ಮತ್ತಷ್ಟು ಬಲಪಡಿಸಿ, ಸಾರ್ವಜನಿಕರಿಗೆ ಸುಲಭ ಮತ್ತು ಸಮರ್ಥ ಸೇವೆ ದೊರಕುವಂತೆ ಮಾಡಲಾಗುತ್ತಿದೆ. ಗ್ರಾಮಾಭಿವೃದ್ಧಿಯ ದಿಸೆಯಲ್ಲಿ ಇದು ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ. ಮಮದಾಪುರ ಗ್ರಾಮ ವಿದ್ಯಾಕೇಂದ್ರವಾಗಿ ಅಭಿವೃದ್ಧಿಯಾಗುತ್ತಿದೆ. ರೈತರು ಮತ್ತು ರೈತ ಮಹಿಳೆಯರು ಕೃಷಿಯ ಜೊತೆಗೆ ಆರೋಗ್ಯದ ಕಡೆಗೂ ಗಮನ ನೀಡಬೇಕು. ಸುಂದರ ಪರಿಸರದಲ್ಲಿ ವಾಯುವಿಹಾರ ಮಾಡಬೇಕು ಎಂದರು.



ಈ ಸಂದರ್ಭದಲ್ಲಿ ಮಮದಾಪುರ ವಿರಕ್ತಮಠದ ಮುರುಘೇಂದ್ರ ಮಹಾಸ್ವಾಮಿಗಳು, ಮುಖಂಡರಾದ ಬಸವರಾಜ ದೇಸಾಯಿ, ಕುಮಾರ ದೇಸಾಯಿ, ಈರಣ್ಣ ಕೊಪ್ಪದ, ಎಚ್.ಬಿ. ಹರನಟ್ಟಿ ಕೊಡಬಾಗಿ, ಬಿ.ಡಿ. ಪಾಟೀಲ ಹೊಸೂರ, ಮಧುರಾಜ ಕುಲಕರ್ಣಿ, ಕಿಟ್ಟು ಕುಲಕರ್ಣಿ, ರಫೀಕ್ ಅಹ್ಮದ್ ಕಾಣಿ, ಚಾಂದಸಾಬ ಟಕ್ಕಳಕಿ, ಕೌಸರ್ ನಿಯಾಜ್ ಅತ್ತಾರ, ಮಲ್ಲಿಕಾರ್ಜುನ ಗಂಗೂರ, ಹುಸೇನ್ ಕೇಜಿ ಶಬ್ಬೀರ್ ಕೇಜಿ ಮಲ್ಲು ಗಡ್ಡದಮಠ ಇದ್ದರು.

ಪುಸ್ತಕದಂತಹ ಉತ್ತಮ ಸ್ನೇಹಿತನಿಲ್ಲ: ಡಾ.ಮಾನಸ

ವಿಜಯಪುರ: ಪುಸ್ತಕಗಳಿಗಿಂತ ಉತ್ತಮ ಸ್ನೇಹಿತ ಮತ್ತೊಬ್ಬರಿಲ್ಲ, ಮನುಷ್ಯನನ್ನು ಮನುಷ್ಯನನ್ನಾಗಿಸುವ ಶಕ್ತಿ ಪುಸ್ತಕಗಳಿಗಿವೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಹೇಳಿದರು.

ನಗರದ ಸಾಯಿ ಪಾರ್ಕ್ ಬಳಿಯ ಹಿರಿಯ ಸಾಹಿತಿ ಡಾ. ಸರಸ್ವತಿ ಚಿಮ್ಮಲಗಿ ಅವರ ನಿವಾಸದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರದ ಜಿಲ್ಲಾ ಜಾಗೃತ ಸಮಿತಿ ಆಶ್ರಯದಲ್ಲಿ ಹಮ್ಮಿಕೊಂಡ ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಾರಂಭದಲ್ಲಿ ಗ್ರಂಥಾಲಯ ಉದ್ಘಾಟಿಸಿ ಅವರು ಮಾತನಾಡಿದರು.

ಇಂದು ಮೊಬೈಲ್ ಸೇರಿದಂತೆ ಸಾಮಾಜಿಕ ಜಾಲತಾಣಗಳ ಸುಳಿಗೆ ಸಿಲುಕಿ ಪುಸ್ತಕ ಓದುವವರ ಸಂಖ್ಯೆ ಕ್ಷೀಣಿಸುತ್ತಿದೆ. ಈ ನಿಟ್ಟಿನಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ರಾಜ್ಯಾದ್ಯಂತ ವಿನೂತನ ಯೋಜನೆ ಹಮ್ಮಿಕೊಂಡು, ಮನೆಗೊಂದು ಗ್ರಂಥಾಲಯ ಅನುಷ್ಠಾನಕ್ಕೆ ಮುಂದಾಗಿದೆ ಎಂದರು.

ಹಿರಿಯ ಸಾಹಿತಿ ಸರಸ್ವತಿ ಚಿಮ್ಮಲಗಿ ಅವರು ಈ ಪುಸ್ತಕ ಪ್ರೇಮ ನೋಡಿದರೆ ಸಾಕು, ತುಂಬಾ ಸಂತೋಷವಾಗುತ್ತದೆ. ಸಹಸ್ರಾರು ಪುಸ್ತಕಗಳನ್ನು ಹೊಂದಿರುವ ಸರಸ್ವತಿ ಚಿಮ್ಮಲಗಿ ಅವರು ನಿಜವಾಗಲೂ ಪುಸ್ತಕ ಗುಮ್ಮಟರಾಗಿದ್ದಾರೆ ಎಂದರು.

ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯ ಡಾ. ಕುಶಾಲ ಬರಗೂರ ಮಾತನಾಡಿ, ಪುಸ್ತಕಗಳು ಮಸ್ತಕಕ್ಕೆ ಬೌದ್ಧಿಕ ಚಿಂತನೆ ತೋರುವ ಜೊತೆಗೆ ಮನಸ್ಸು ಅರಳಿಸುತ್ತವೆ. ಸಾಹಿತಿ ಸರಸ್ವತಿ ಚಿಮ್ಮಲಗಿ ಅವರು ತಮ್ಮ ಮನೆಯಲ್ಲಿ ಪುಸ್ತಕ ಭಂಡಾರವನ್ನೆ ಹೊಂದಿದ್ದಾರೆ. ಇದು ಪ್ರತಿಯೊಬ್ಬರಿಗೂ ಮಾದರಿಯಾಗಿದೆ ಎಂದರು.

ಪಾಲಿಕೆ ಉಪ ಆಯುಕ್ತ ಮಹಾವೀರ ಬೋರಣ್ಣವರ, ಜಿಲ್ಲಾ ಜಾಗೃತ ಸಮಿತಿ ಸಂಚಾಲಕ, ಸಾಹಿತಿ ಶಂಕರ ಬೈಚಬಾಳ ಮಾತನಾಡಿ, ಜಿಲ್ಲೆ ಜಾನಪದ ಸಾಹಿತಿ, ಮಕ್ಕಳ ಸಾಹಿತಿ, ನಾಟಕಕಾರರು, ಕವಿಗಳು, ಕಾದಂಬರಿಕಾರರ ಆಗರವಾಗಿದೆ. ಇಂತಹವರ ಸಾಲಿನಲ್ಲಿ ಹಿರಿಯ ಸಾಹಿತಿ ಸರಸ್ವತಿ ಚಿಮ್ಮಲಗಿಯರಿದ್ದು, ಸಾರಸ್ವತ ಲೋಕಕ್ಕೆ ಅವರ ಕೊಡುಗೆ ಅಪಾರ ಎಂದರು.



ಹಿರಿಯ ಸಾಹಿತಿ ಸರಸ್ವತಿ ಚಿಮ್ಮಲಗಿ ಮಾತನಾಡಿ, ಮನೆಗೊಂದು ಗ್ರಂಥಾಲಯದಂತಹ ಯೋಜನೆ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಹಮ್ಮಿಕೊಂಡಿರುವುದು ತುಂಬಾ ಸಂತೋಷದ ಸಂಗತಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಮಹೇಶ ಪೋದ್ದಾರ, ಭಾವಗೀತೆ ಹಾಡಿ ಮನಸೂರೆಗೊಂಡರು. ಗಣ್ಯರನ್ನು ಸನ್ಮಾನಿಸಲಾಯಿತು. ಮನಗೊಂದು ಗ್ರಂಥಾಲಯ ಜಿಲ್ಲಾ ಜಾಗೃತ ಸಮಿತಿ ಸದಸ್ಯರಾದ ಪರಶುರಾಮ ಶಿವಶರಣ, ಎ.ಎಚ್. ಕೊಳಮಲಿ, ಸುಜ್ಞಾನಿ ಪಾಟೀಲ, ರಾಜಶ್ರೀ ಜೋಶಿ, ನಿವೃತ್ತ ಅಧಿಕಾರಿ ವಿಠ್ಠಲ ಪೂಜಾರ, ಎನ್.ಆರ್.ಕುಲಕರ್ಣಿ, ವೈ.ಎಚ್. ಲಂಬು, ಪ್ರಕಾಶ ಖಾಡೆ, ಗೌರಾಬಾಯಿ ಕುಬಕಡ್ಡಿ, ಸಾವಿತ್ರಿಬಾಯಿ ಮುಂಡಾಸ, ಶ್ರೀವಿಜಯ ಪೂಜಾರ ಇದ್ದರು.

ಶಿಕ್ಷಣದಿಂದ ಬದುಕು ಸುಂದರ: ಬಸವರಾಜ

ಝಳಕಿ: ಶಿಕ್ಷಣದಿಂದ ಬದುಕು ಸುಂದರವಾಗಿರುತ್ತದೆ ಎಂದು ಉಪನ್ಯಾಸಕ ಬಸವರಾಜ ಕುಂಬಾರ ಹೇಳಿದರು. ಸ್ಥಳೀಯ ಮಹರ್ಷಿ ವಾಲ್ಮೀಕಿ ಪ್ರಾಥಮಿಕ, ಪ್ರೌಢ, ಹಾಗೂ ಪ್ರಾರ್ಥನಾ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯಲ್ಲಿ ನಡೆದ 2025-26 ಸಾಲಿನ ವಾರ್ಷಿಕ ಸ್ನೇಹ ಸಮ್ಮೇಳನ ಸಮಾರಂಭದಲ್ಲಿ ಮಾತನಾಡಿ, ವಿದ್ಯಾರ್ಥಿಗಳಿಗೆ ಗುರು ಇದ್ದರೆ ಏನ್ನಾದರು ಸಾಧನೆ ಮಾಡಬಹುದು. ನೀವು ಶಿಕ್ಷಣವಂತ ಆದರೆ ನೀವು ಜೀವಂತ ಅನ್ನದಾತರು. ಪಾಲಕರಿಗೆ ಕಿವಿ ಮಾತು ನಿಮ್ಮ ಮಕ್ಕಳ ಭವಿಷ್ಯ ನಿಮ್ಮ ಕೈಯಲ್ಲಿ ಇದೆ. ನಿಮ್ಮ ಮಕ್ಕಳು ಏನು ಮಾಡುತ್ತಾರೆ ಏನಿಲ್ಲ ಎಂಬುದು ನೀವು ಗುರುತಿಸಿ, ನಿಮ್ಮ ಮಕ್ಕಳ ಮೇಲೆ ಗಮನಹರಿಸಿ ಎಂದರು. ನಿಮ್ಮಗೆ ಮಕ್ಕಳೆ ನಿಮ್ಮ ಆಸ್ತಿ. ಮಕ್ಕಳಿಗೆ ಒಳ್ಳೆಯ ಶಿಕ್ಷಣ ಜೊತೆಗೆ ಒಳ್ಳೆಯ ಸಂಸ್ಕಾರ ಸಂಸ್ಕೃತಿ ಬೆಳಸಿ ಎಂದರು. ಈ ಸಂದರ್ಭದಲ್ಲಿ ಕೆ.ಎಲ್. ನಾಯ್ಕೋಡಿ, ಮಹರ್ಷಿ ವಾಲ್ಮೀಕಿ ಶಿಕ್ಷಣ ಸಂಸ್ಥೆ ಅಧ್ಯಕ್ಷೆ ರೂಪಾ ರ. ನಾಯ್ಕೋಡಿ, ನಾರಾಯಣ ಜಹಾಗೀರದಾರ, ಡಾ. ಲಕ್ಷ್ಮೀಕಾಂತ ಮೇತ್ರಿ, ಪಿಎಸ್‌ಐ ಮಂಜುನಾಥ ತೀರಕ್ಕನ್ನವರ, ವೀರುಪಾಕ್ಷಿ ಸಿಂಪಿ, ಎಚ್. ಎ. ನಾಯ್ಕೋಡಿ, ಸುನೀತಾ ರಾಜಣ್ಣ, ಪ್ರವೀಣ ನಾಯ್ಕೋಡಿ, ವಿ. ಎಸ್. ಕರಿಗುಡ್ಡ್, ಸಿದ್ದು ಲಚಾಣ, ಶಂಕರಗೌಡ ಬಿರಾದಾರ, ಹಣಮಂತ ಕೋಳಿ, ಸಿದ್ದು ಸಾಹುಕಾರ ಕಾಪಸೆ, ಸಂಜಯ ಕೋಳಿ ಉಪಸ್ಥಿತರಿದ್ದರು.



ಜಾತೀಯತೆ ನಿರ್ಮೂಲನೆ ಅಗತ್ಯ: ಹನುಮಂತ



ನಿಡಗುಂದಿ: ಭಾರತ ಸಶಕ್ತ ಆಗಬೇಕಾದರೆ ಜಾತೀಯತೆಯನ್ನು ನಿರ್ಮೂಲನೆ ಮಾಡಬೇಕು ಇಲ್ಲವಾದರೆ ಹಿಂದುತ್ವ ಉಳಿಯುವುದಿಲ್ಲ. ಓಂಕಾರ ಹೇಳುವವರು ಪುನರ್ಜನ್ಮ ಒಪ್ಪುವವರು ಗೋಮಾತೆಯನ್ನು ಪೂಜಿಸುವರು ಗಂಗೆಯನ್ನು ಪೂಜಿಸುವವರು ಹಿಂಸೆ ಮಾಡದವರು ಹಿಂದುಗಳು. ಹಿಂದುಗಳಿಗೆ ಇರುವುದು ಒಂದೇ ಭಾರತ. ಇದನ್ನು ಉಳಿಸಿ ಬೆಳೆಸೋಣ ಎಂದು ಪಾರಂಪರಿಕ ವೈದ್ಯ ಡಾ.ಹನುಮಂತ ಮಳಲಿ ಹೇಳಿದರು. ಪಟ್ಟಣದ ವಿನಾಯಕ ನಗರದ ಗಣಪತಿ ಗುಡಿ ಹತ್ತಿರ ಹಿಂದೂ ಸಮ್ಮೇಳನ ಸಂಚಲನಾ ಸಮಿತಿಯಿಂದ ಭಾನುವಾರ ಹಮ್ಮಿಕೊಂಡ ಹಿಂದೂ ಸಮ್ಮೇಳನ, ಬೃಹತ್ ಶೋಭಾಯಾತ್ರೆ ಕಾರ್ಯಕ್ರಮದಲ್ಲಿ ಮಾತನಾಡಿ, ದೇಶವನ್ನು ನೂರಾರು ವರ್ಷಗಳ ಕಾಲ ಬ್ರಿಟಿಷರು ಆಳಿದರು ಹಿಂದುಗಳು ತಮ್ಮ ಅಸ್ತಿತ್ವ ಉಳಿಸಿಕೊಂಡಿದ್ದಾರೆ ಹಿಂದುಸ್ತಾನದಲ್ಲಿ ಅಂತಹ ದೈವಿಶಕ್ತಿ ಅಡಗಿರುವ ಕಾರಣ ಇಂದು ಇಡೀ ಜಗತ್ತು ಭಾರತದತ್ತ ಬೆರಗುಗಣ್ಣಿನಿಂದ ನೋಡುತ್ತಿದೆ ಎಂದರು. ಶಿವಾಜಿ ಮಹಾರಾಜರ ಶೋಭಾಯಾತ್ರೆ ಮೇಲೆ ಹೂವು ಹಾಕಬೇಕಿತ್ತು ಆದರೆ ಅವರು ಚಪ್ಪಲಿ ಎಸೆಯುತ್ತಿದ್ದಾರೆ. ಹಿಂದೂ ಸಮಾಜ ಕಲ್ಲೆತ್ತುವುದಿಲ್ಲ, ಸಾವಿರಾರು ವರ್ಷಗಳಿಂದ ಇನ್ನೊಂದು ಸಮಾಜದ ಒಂದಿಂಚೂ ಜಾಗ ಕಬಳಿಸಿಲ್ಲ, ಸರಕಾರ, ಮಿಲಟರಿ, ಪೊಲೀಸರಿಗೆ ಭಾರತವನ್ನು ಉಳಿಸಲು ಸಾಧ್ಯವಾಗದಿದ್ದರೆ ನಾವು ಇದ್ದೇವೆ ಎಂದು ತೋರಿಸಲು ರಾಷ್ಟ್ರೀಯ ಸ್ವಯಂ ಸೇವಕ ಸಂಘದಿಂದ ಸಂಚಲನ ಮಾಡುತ್ತೇವೆ ಎಂದರು. ರುದ್ರೇಶ್ವರ ಮಠದ ರುದ್ರಮುನಿ ಶ್ರೀಗಳು ಅಧ್ಯಕ್ಷತೆ ವಹಿಸಿದ್ದರು. ಮನಗೂಳಿಯ ಅಭಿನವ ಸಂಗನಬಸವ ಶ್ರೀಗಳು, ಮುರನಾಳದ ಜಗನ್ನಾಥ ಶ್ರೀಗಳು, ಮುತ್ತಗಿಯ ನರಹರಿ ಆಚಾರ್ಯ, ಸರೂರಿನ ಮೃತ್ಯುಂಜಯ ಶ್ರೀಗಳು, ರೇಣುಕಾ ಅಕ್ಕನವರು ಸಾನ್ನಿಧ್ಯ ವಹಿಸಿದ್ದರು.

ಕಿರುಸುದ್ದಿ

ಮೊರಾರ್ಜಿ ದೇಸಾಯಿ ಪರೀಕ್ಷೆ

ಸಿಂಧನೂರು: ಮೊರಾರ್ಜಿ ದೇಸಾಯಿ ವಸತಿ ಮಕ್ಕಳ ಪರೀಕ್ಷೆಗಳು ಸುಗಮವಾಗಿ ನಡೆದವು, ಮಕ್ಕಳು ಖುಷಿಯಿಂದ ಪರೀಕ್ಷೆ ಕೊಠಡಿ ಒಳಗೆ ಹೋಗಿ ಪರೀಕ್ಷೆಯನ್ನು ಬರೆದರು. ನಗರದ ಸರ್ಕಾರಿ ಪಿಯು ಬಾಲಕರ ಕಾಲೇಜ್ ನ ಪರೀಕ್ಷೆ ಕೇಂದ್ರದಲ್ಲಿ 360 ಮಕ್ಕಳು ನೋಂದಣೆಯಾಗಿದ್ದು 359 ಮಕ್ಕಳು ಪರೀಕ್ಷೆ ಬರೆದರೆ, ಒಂದು ಮಗು ಗೈರು ಹಾಜರಾಗಿದ್ದು, ಆರ್‌ಜಿಎಂ ಶಾಲಾ ಕೇಂದ್ರದಲ್ಲಿ 360 ಮಕ್ಕಳಲ್ಲಿ 357 ಮಕ್ಕಳು ಹಾಜರು, 3 ಮಕ್ಕಳು ಗೈರಾಗಿದ್ದರು. ಸರ್ಕಾರಿ ಬಾಲಕಿಯರ ಪಿಯು ಕಾಲೇಜ್ ಕೇಂದ್ರದಲ್ಲಿ 216 ಮಕ್ಕಳಲ್ಲಿ 214 ಮಕ್ಕಳು ಪರೀಕ್ಷೆ ಬರೆದರೆ, ಇಬ್ಬರು ಗೈರು ಹಾಗೂ ವಾಸವಿ ಪಿಯು ಕಾಲೇಜ್ ಕೇಂದ್ರದಲ್ಲಿ 240 ಮಕ್ಕಳಲ್ಲಿ 236 ಮಕ್ಕಳು ಹಾಜರಾದರೆ 4 ಮಕ್ಕಳು ಗೈರಾಗಿದ್ದರು. ಎವಿಎಸ್ ಬ್ರಿಲಿಯಂಟ್ ಕೇಂದ್ರದಲ್ಲಿ 406 ಮಕ್ಕಳಲ್ಲಿ 405, ಹಾಜರಾದರೆ ಒಂದು ಮಗು ಗೈರು ಆಗಿದೆ. ಇನ್ನೂ ಈ ಪರೀಕ್ಷೆಯು ಪಾಲಕರ ಹಾಗೂ ಪೋಲೀಸರ ಸಹಕಾರದಿಂದ ಯಾವುದೇ ಗೊಂದಲವಿಲ್ಲದೆ ಪರೀಕ್ಷೆಗಳು ಸುಗಮವಾಗಿ ನಡೆದವು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಬಸಲಿಂಗಪ್ಪ ಜವಳಗೇರಾ ಮಾಹಿತಿ ನೀಡಿದರು.

ಹೋಳಿ ಹಬ್ಬ: ಶಾಂತಿಸಭೆ



ಕುಷ್ಟಗಿ: ಪಟ್ಟಣದ ಪೊಲೀಸ್ ಠಾಣೆಯ ಆವರಣದಲ್ಲಿ ಹೋಳಿ ಹಬ್ಬದ ಪ್ರಯುಕ್ತ ಶಾಂತಿಸಭೆ ಸೋಮವಾರ ಜರುಗಿತು. ಸಿಪಿಐ ವಿಶ್ವನಾಥ ಹಿರೇಗೌಡ್ರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಭದ್ರತೆ ಮತ್ತು ಸುರಕ್ಷತೆ ದೃಷ್ಟಿಯಿಂದ ಆಚರಣೆ ಮಾಡಬೇಕು. ಪರೀಕ್ಷೆಗೆ, ಸಂಚಾರಕ್ಕೆ , ತೊಂದರೆಯಾಗಲಾರದಂತೆ ಆಚರಿಸಬೇಕು. ಎಲ್ಲ ವರ್ಗದವರು ಮತ್ತು ಎಲ್ಲಾ ಜನಾಂಗದವರಿಗೆ ಮಾದರಿಯಾಗಿ ಹೋಳಿ ಆಚರಣೆ ಮಾಡುತ್ತಿರುವುದು ಸಾಮರಸ್ಯದ ಸಂಕೇತವಾಗಿದೆ. ಕೆಲವೊಂದು ಮಕ್ಕಳು ಒತ್ತಾಯ ಪೂರ್ವಕವಾಗಿ ಸುವ್ಯವಸ್ಥಿತವಾಗಿ ಅದ್ದೂರಿಯಾಗಿ ಆಚರಣೆ ಮಾಡರಿ ಏನು ಸಹ ತೊಂದರೆ ಆಗಬಾರದು ಎಂದರು. ಪಿಎಸ್ಐ ಹನಮಂತಪ್ಪ ತಳವಾರ ಮಾತನಾಡಿ, ಪರೀಕ್ಷೆ ಸಮಯವಾಗಿರುವದರಿಂದ ವಿದ್ಯಾರ್ಥಿಗಳಿಗೆ ಏನು ತೊಂದರೆಯಾಗಂತೆ, ಸಂಚಾರಕ್ಕೆ ತೊಂದರೆಯಾಗದಂತೆ. ಎಲ್ಲರೂ ಶಾಂತಿ ಹಾಗೂ ಸೌಹಾರ್ದತೆಯಿಂದ ಹೋಳಿ ಆಚರಣೆ ಮಾಡಬೇಕು, ಯಾರಿಗೂ ಸಹ ತೊಂದರೆಯಾಗಬಾರದು ಅದರಂತೆ ಹೋಳಿ ಆಚರಿಸಬೇಕು ಎಂದರು. ಪುರಸಭೆ ಮಾಜಿ ಸದಸ್ಯ ರಾಜೇಶ ಪತ್ತಾರ, ಕಲ್ಲೇಶ ತಾಳದ, ಬಸವರಾಜ ಬುಡಕುಂಟಿ, ಜಿ.ಕೆ.ಹಿರೇಮಠ, ಮುಖಂಡರಾದ ವಜೀರ್ ಅಲಿ ಗೋನಾಳ, ಪರಶುರಾಮ ನಾಗರಾಳ, ಬಸನಗೌಡ ಪಾಟೀಲ ಶಶಿಧರ ಕವಲಿ, ಬಸನಗೌಡ ಪಾಟೀಲ, ಪುರಸಭೆಯ ಹುಲ್ಲಪ್ಪ ಗಾಂಜಿ, ಕೆಇಬಿ ಮಹಿಬೂಬ ಸೇರಿದಂತೆ ಮುಖಂಡರು ಇದ್ದರು.

ರೇಣುಕಾಚಾರ್ಯರ ಜಯಂತ್ಯುತ್ಸವ

ಯಲಬುರ್ಗಾ: ಪಟ್ಟಣದ ರೇಣುಕಾಚಾರ್ಯರ ವೃತ್ತ ಬಳಿ ಭಾನುವಾರ ನಡೆದ ಜಗದ್ಗುರು ರೇಣುಕಾಚಾರ್ಯರ ಜಯಂತ್ಯೋತ್ಸವ ಕಾರ್ಯಕ್ರಮ ನಡೆಯಿತು. ಸ್ಥಳೀಯ ಶ್ರೀಧರ ಮುರಡಿ ಹಿರೇಮಠದ ಪೀಠಾಧಿಪತಿ ಶ್ರೀಬಸವಲಿಂಗೇಶ್ವರ ಸ್ವಾಮೀಜಿ ರೇಣುಕಾಚಾರ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ಸಂದೇಶಗಳನ್ನು ಜಗದ್ಗುರು ರೇಣುಕಾಚಾರ್ಯರು ಸಾರಿದವರು.,ರೇಣುಕಾಚಾರ್ಯರು ಮಾನವ ಕುಲದ ಉದ್ದಾರಕ್ಕಾಗಿಯೇ ಅವತರಿಸಿದ್ದರು ಎಂದರು. ತಾಲೂಕಾ ಜಂಗಮ ಸಮಾಜದ ಕ್ಷೇಮಾಭಿವೃದ್ದಿ ಸಂಘದ ಅಧ್ಯಕ್ಷ ಹಂಪಯ್ಯಸ್ವಾಮಿ ಹಿರೇಮಠ, ಗೌರವಾಧ್ಯಕ್ಷ ಡಾ.ಅಂದಾನಯ್ಯ ಶ್ಯಾಡ್ಲಗೇರಿಮಠ ಮಾತನಾಡಿದರು. ಆಹಾರ ಇಲಾಖೆಯ ಶಿರಸ್ತೆದಾರ ದೇವರಡ್ಡಿ, ಸಚಿನಕುಮಾರ, ರಹಿಮಾನಸಾಬ,ಪಪಂಯ ವೆಂಕಣ್ಣ ಜೋಷಿ, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕಾಧ್ಯಕ್ಷ ಸಂಗಣ್ಣ ಟೆಂಗಿನಕಾಯಿ, ಸಮಾಜದ ಕಳಕಯ್ಯ ಹಿರೇಮಠ, ಶರಣಯ್ಯ ಮೂಳ್ಳೂರುಮಠ, ವೀರುಪಾಕ್ಷಯ್ಯ ಗಂಧದ, ವೀರುಪಾಕ್ಷಯ್ಯ ಪರಯ್ಯನಮಠ, ಬಸವಲಿಂಗಯ್ಯ ಜಡಿಮಠ, ಕಲ್ಯಾಣಯ್ಯ ಕೋಚಲಾಪೂರಮಠ, ಬಸಯ್ಯ ಶಾಸ್ತ್ರೀಮಠ, ಶರಣಯ್ಯ ಸಾಲಿಮಠ, ಶಿವಮೂರ್ತಯ್ಯ ಜೂಲಕಟ್ಟಿ, ಶ್ರೀಕಾಂತಗೌಡ ಪಾಟೀಲ್, ಬಸವರಾಜ ಹೂಗಾರ, ಅಯ್ಯಪ್ಪ ಸಜ್ಜನ, ಡಾ.ಅನ್ನದಾನೇಶ ಗದ್ದಿ, ನಾಗರಾಜ ಬನ್ನಿಕೊಪ್ಪ, ವಿಶ್ವನಾಥ ಮಲ್ಕಸಮುದ್ರ, ಗವಿಸಿದ್ದಯ್ಯ ಕಲ್ಲೂರು, ಶಿವಾನಂದಯ್ಯ ಗೆದಗೇರಿ, ಮಲ್ಲಯ್ಯ ಕಲ್ಲೂರು, ಕಳಕಯ್ಯ ಪುರಾಣಿಕಮಠ, ಕೊಟ್ರಯ್ಯ ಹಿರೇಮಠ ಸೇರಿದಂತೆ ಮತ್ತಿತರರಿದ್ದರು.



ಕಲಬುರಗಿ: ನಗರದ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ಐಟಿಎಫ್ ಮಹಿಳಾ ಓಪನ್ ಟೂರ್ನಿಯ ಮುಖ್ಯ ಪಂದ್ಯಗಳ ಡ್ರಾ ಸೆರೆಮನಿ ಕಾರ್ಯಕ್ರಮಕ್ಕೆ ಡಿಸಿ ಫೌಜಿಯಾ ತರನ್ನುಮ್ ಚಾಲನೆ ನೀಡಿದರು. ಸಿಇಒ ಭನ್ವರ್ ಸಿಂಗ್ ಮೀನಾ, ಪಾಲಿಕೆ ಆಯುಕ್ತ ಶಿಂದೆ ಅವಿನಾಶ್ ಉಪಸ್ಥಿತರಿದ್ದರು. 30,000 ಅಮೆರಿಕನ್ ಡಾಲರ್ ಬಹುಮಾನ ಮೊತ್ತದ ಈ ಟೂರ್ನಿಯಲ್ಲಿ ಐದು ಭಾರತೀಯ ಆಟಗಾರ್ತಿಯರು ಅರ್ಹತಾ ಸುತ್ತು ಜಯಿಸಿ ಮುಖ್ಯ ಡ್ರಾಗೆ ಪ್ರವೇಶ ಪಡೆದರು.

ಹನುಮಸಾಗರ: ಸಂಕಲ್ಪ ಸಿದ್ದಿ ಪಾದಯಾತ್ರೆ

ಹನುಮಸಾಗರ: ಪಟ್ಟಣದಲ್ಲಿನ ಶಿವನ ಜ್ಯೋತಿರ್ಲಿಂಗ ಹಾಗೂ ಶಕ್ತಿ ಪೀಠ ಇರುವ ಪ್ರಸಿದ್ಧ ಶ್ರೀಶೈಲ ಮಲ್ಲಿಕಾರ್ಜುನ ಭ್ರಮರಾಂಭ ಸಾನಿಧ್ಯಕ್ಕೆ ಯುಗಾದಿಯ ಜಾತ್ರೆ ಪ್ರಯುಕ್ತವಾಗಿ ವಿರೂಪಾಕ್ಷಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಕೃಪಾಶೀರ್ವಾದದಿಂದ ಹನುಮಸಾಗರದ ಶ್ರೀಮಲ್ಲಿಕಾರ್ಜುನ ದೇವಸ್ಥಾನದಿಂದ ಮಲ್ಲಯ್ಯನ ಕಂಬಿಯ ಜೊತೆಗೆ 32 ವರ್ಷದ ಸಂಕಲ್ಪ ಸಿದ್ದಿ ಪಾದಯಾತ್ರೆಯನ್ನು ಹನುಮಸಾಗರ, ಇಳಕಲ್ಲ ತಾಲೂಕಿನ ಗೊರೆಬಾಳ ಕಂಬಿ ಸದ್ಭಕ್ತರು ಹಾಗೂ ಜಹಾಗೀರಗುಡದೂರ, ಜುಂಜಲಕೊಪ್ಪ, ಬೆನಕನಾಳ, ಚಳಗೇರಿ, ಅಡವಿಭಾವಿ, ಮಿಯಾಪುರ, ಮಲಕಾಪುರ, ಬೀಳಗಿ, ಅಂಟರಠಾಣಾ, ಪೂರ್ತಗೇರಿ, ಕಾಟಾಪುರ, ಕಬ್ಬರಗಿ, ಜಾಲಾಪುರ ಸದ್ಭಕ್ತರು ಪಾದಯಾತ್ರೆ ಕೈಗೊಂಡರು.

ಶ್ರೀಶೈಲ ತಲುಪಿದ ನಂತರ ಹನುಮಸಾಗರ ಸದ್ಭಕ್ತರಿಂದ ಶ್ರೀಶೈಲ ಮಲ್ಲಿಕಾರ್ಜುನ ಸಾನಿಧ್ಯದಲ್ಲಿ ಎಲ್ಲಾ ಭಕ್ತರಿಗೆ ಒಂದು ದಿನದ ಅನ್ನ ಸಂತರ್ಪಣೆ ನಡೆಯಲಿದೆ ಎಂದು ಮಲ್ಲಯ್ಯನ ಭಕ್ತರು ತಿಳಿಸಿದರು. ಗುರುಸಿದ್ದಯ್ಯ ನಡುವಿನಮಠ, ಶರಣಯ್ಯ ಚಂದಯ್ಯ ಕೆಂಭಾವಿಮಠ, ಬಸಣ್ಣ ಅಗಸಿಮುಂದಿನ, ರಾಚಪ್ಪ ಚಿನಿವಾಲರ, ಬಸಮ್ಮ ಹಿರೇಮಠ, ದೇವೇಂದ್ರಪ್ಪ ಕಮತರ, ಬಸವರಾಜ ಚಿನಿವಾಲರ, ಶ್ರೀನಿವಾಸ ಜಹಗೀರದಾರ, ಈರಪ್ಪ ಕರಂಡಿ, ಗಿರೀಶ ಪಟವಾರಿ, ಮಲ್ಲಪ್ಪ ಕೋಳೂರು, ಮಹಾಂತೇಶ ಅಗಸಿಮುಂದಿನ, ಬಸಪ್ಪ ದೋಟಿಹಾಳ, ವಾಸುದೇವ ನಾಗೂರ, ವಿಠ್ಠಲಶ್ರೇಷ್ಠಿ ನಾಗೂರ, ವಿನಾಯಕ ಹಿರೇಮಠ, ವಿಶ್ವನಾಥ ನಾಗೂರ, ಶ್ರೀಶೈಲ ಮಲ್ಲಿಕಾರ್ಜುನ ದೇವಸ್ಥಾನ ಸಮಿತಿಯ ಸರ್ವ ಸದಸ್ಯರು, ಗೋರೆಬಾಳ ಕಂಬಿ ಸರ್ವ ಸದ್ಭಕ್ತರು ಉಪಸ್ಥಿತರಿದ್ದು, ಶುಭಕೋರಿ ಬೀಳ್ಕೊಟ್ಟರು.



ಹನುಮಸಾಗರ: ಪಟ್ಟಣದಲ್ಲಿನ ಶಿವನ ಜ್ಯೋತಿರ್ಲಿಂಗ ಹಾಗೂ ಶಕ್ತಿ ಪೀಠ ಇರುವ ಪ್ರಸಿದ್ಧ ಶ್ರೀಶೈಲ ಮಲ್ಲಿಕಾರ್ಜುನ ಭ್ರಮರಾಂಭ ಸಾನಿಧ್ಯಕ್ಕೆ ಯುಗಾದಿಯ ಜಾತ್ರೆ ಪ್ರಯುಕ್ತವಾಗಿ ವಿರೂಪಾಕ್ಷಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಕೃಪಾಶೀರ್ವಾದದಿಂದ ಹನುಮಸಾಗರದ ಶ್ರೀಮಲ್ಲಿಕಾರ್ಜುನ ದೇವಸ್ಥಾನದಿಂದ ಮಲ್ಲಯ್ಯನ ಸಂಕಲ್ಪ ಸಿದ್ಧಿ ಪಾದಯಾತ್ರೆ ಕೈಗೊಳ್ಳಲಾಯಿತು.

ಮಾತೋಶ್ರೀ ಡಾ.ದಾಕ್ಷಾಯಿಣಿ ಅವ್ವಾಜಿ ಮಾಹಿತಿ

ಮಾ.8ಕ್ಕೆ ಶರಣಬಸವೇಶ್ವರರ ಜಾತ್ರೆ

ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದ ಆರಾಧ್ಯ ದೈವ,ದಾಸೋಹ ಮೂರ್ತಿ ಶರಣಬಸವೇಶ್ವರರ 204ನೇ ಪುಣ್ಯತಿಥಿಯ ಸ್ಮರಣಾರ್ಥ ದೇವಸ್ಥಾನದ ಆವರಣದಲ್ಲಿ ಇದೆ ಮಾ.7ರಂದು ಉಚ್ಚಾಯಿ ಯಾತ್ರೆ ಹಾಗೂ 8ರಂದು ಸಂಜೆ 6 ಗಂಟೆಗೆ ಮಹಾ ರಥೋತ್ಸವವು ಅತ್ಯಂತ ವೈಭವದಿಂದ ನಡೆಯಲಿದೆ ಎಂದು ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ ಮಾತೋಶ್ರೀ ಡಾ.ದಾಕ್ಷಾಯಿಣಿ ಅವ್ವಾಜಿ ತಿಳಿಸಿದರು.

ನಗರದ ಶರಣಬಸವೇಶ್ವರರ ದೇವಸ್ಥಾನದ ದಾಸೋಹ ಮಹಾ ಮನೆಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು,9ನೇ ಪೀಠಾಧಿಪತಿ ದೊಡ್ಡಪ್ಪ ಅಪ್ಪಾಜಿ ಮತ್ತು ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ ಉಪಸ್ಥಿತಿಯಲ್ಲಿ ಯಾತ್ರೆ ಮತ್ತು ರಥೋತ್ಸವವು ಶರಣಬಸವೇಶ್ವರ ಸಂಸ್ಥಾನದ ಕ್ಯಾಲೆಂಡರ್‌ನಲ್ಲಿ ಪ್ರಮುಖ ದಿನಗಳಲ್ಲಿ ಒಂದಾಗಿದ್ದು, ಯಾತ್ರೆ ಮತ್ತು ರಥೋತ್ಸವ ಪ್ರಾರಂಭವಾಗುವ ಮೊದಲು ದೇವಾಲಯದಲ್ಲಿ ಅಲಂಕರಿಸಲಾದ ರಥದಲ್ಲಿ ಸಾಂಪ್ರದಾಯಿಕ ಆಚರಣೆ ಮತ್ತು ಪೂಜೆ ನಡೆಸಲಾಗುವುದು ಎಂದರು.

ಕಳೆದ ನಾಲ್ಕು ದಶಕಗಳಿಗೂ ಹೆಚ್ಚು ಕಾಲದ ನಂತರ ಇದೇ ಮೊದಲ ಬಾರಿಗೆ,ಲಿಂಗೈಕ್ಯ ಪೂಜ್ಯ ಅಪ್ಪಾಜಿಯಯವರ ವರ್ಚಸ್ವಿ ಉಪಸ್ಥಿತಿಯನ್ನು ಯಾತ್ರೆ ಕಳೆದುಕೊಳ್ಳುತ್ತಿದೆ ಎಂದು ಭಾವನಾತ್ಮಕವಾಗಿ ನುಡಿದ ಅವರು, ಲಿಂಗೈಕ್ಯ ಡಾ. ಅಪ್ಪಾಜಿ ಆಶಯದಂತೆ ದೇವಾಲಯ ಸಂಕೀರ್ಣದಲ್ಲಿರುವ ಸಂಸ್ಥಾನದ ಎಲ್ಲಾ ಪೀಠಾಧಿಪತಿಗಳ ಸಮಾಧಿಗಳ ಮೇಲೆ ಅಮೃತ ಶಿಲೆಯ ಮೇಲಾವರಣ ನಿರ್ಮಿಸಲಾಗುತ್ತಿದ್ದು,ಈ ಬಾರಿ ಲಿಂಗೈಕ್ಯ ಪೂಜ್ಯ ಅಪ್ಪಾಜಿಯ 30 ಅಡಿ ಎತ್ತರದ ಕಟೌಟ್ ನಿರ್ಮಿಸಲಾಗುತ್ತಿದೆ ಎಂದರು.



> ವೈಭವದಿಂದ ರಥೋತ್ಸವ ಮಾಡೋಣ. ಹಿರಿಯರಿಗೆ, ಮಕ್ಕಳ ರಕ್ಷಣೆ ಎಲ್ಲರೂ ಗಮನದಲ್ಲಿಟ್ಟುಕೊಂಡು ಪ್ರಸಾದ್ ಎಲ್ಲೆಂದರಲ್ಲಿ ಬಿಸಾಡದೇ ಎಲ್ಲರೂ ಸೇರಿ ಜಾತ್ರೆ ಮಾಡಿಕೊಂಡು ಹೋಗೋಣ.
>
> ■ ಡಾ.ದಾಕ್ಷಾಯಿಣಿ ಎಸ್.ಅಪ್ಪ, ಸಂಸ್ಥಾನದ ಅಧ್ಯಕ್ಷೆ, ಶರಣಬಸವ ವಿವಿ ಕುಲಾಧಿಪತಿ

ಜಿಲ್ಲೆಯ ಚಿತ್ತಾಪುರ ತಾಲೂಕಿನ ಮುಗಳನಾಗಾವಿಯ ಕಟ್ಟಿಮನಿ ಹಿರೇಮಠದ ಅಭಿನವ ಸಿದ್ದಲಿಂಗ ಶಿವಾಚಾರ್ಯರು ಪ್ರತಿಷ್ಠಿತ ಅಪ್ಪಾಜಿ ಪ್ರಶಸ್ತಿ, ಅರಣ್ಯ ಸಚಿವ ಈಶ್ವರ ಖಂಡ್ರೆಗೆ ದಾಸೋಹ ಜ್ಞಾನ ರತ್ನ ಪ್ರಶಸ್ತಿ, ಈಶ್ವರ್ ಖಂಡ್ರೆ ಅವರ ಪತ್ನಿಯವರ ಸಮಾಜ ಸೇವೆ ಗುರುತಿಸಿ ಅವ್ವ ಪ್ರಶಸ್ತಿ ನೀಡಲಾಗುತ್ತಿದೆ ಎಂದು ತಿಳಿಸಿದ ಅವರು ಫೆ.6ರಂದು ಮಹಾ ಮನೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ದಿ ಹಿಂದೂ ಪ್ರಕಟಿಸಿದ ದಾಸೋಹ ಮತ್ತು ಮಾನವೀಯತೆ ಸೇರಿದಂತೆ ಇನ್ನೊಂದು ಪುಸ್ತಕ ಬಿಡುಗಡೆಯಾಗಲಿದೆ. ಮಾ.6ರಂದು ಖಂಡ್ರೆ ಅವರ ಪೂರ್ವಾನುಮತಿ ಮೇರೆಗೆ ದಾಸೋಹ ಜ್ಞಾನ ರತ್ನ ಪ್ರಶಸ್ತಿ ಮತ್ತೊಂದು ದಿನದಂದು ಪ್ರದಾನ ಮಾಡಲಾಗುವುದು ಮಾರ್ಚ್ 6ರಂದು ಒಟ್ಟು ಹತ್ತು ವೈದ್ಯ ದಂಪತಿಗಳಿಗೆ ವೈದ್ಯರತ್ನ ಪ್ರಶಸ್ತಿ ನೀಡಿ ಗೌರವಿಸಲು ನಿರ್ಧರಿಸಿದೆ. ಈ ಬಾರಿ ವಿಶೇಷವಾಗಿ ನೆರೆಯ ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಮತ್ತು ಕರ್ನಾಟಕದ ಮೂಲೆಗಳಿಂದ ಆಗಮಿಸುವ ಭಕ್ತಾದಿಗಳಿಗೆ ಈ ವರ್ಷ ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರಾದ ಸಚಿವ ಈಶ್ವರ್ ಖಂಡ್ರೆ ದೇಣಿಗೆ ನೀಡಿದ ಅಮೂಲ್ಯವಾದ ಕರುಂಗಲಿ ಮರ ಬಳಸಿ ಹೊಸದಾಗಿ ರಥ ನಿರ್ಮಿಸಲಾಗಿದೆ ಎಂದು ಮಾಹಿತಿ ನೀಡಿದರು.

ಕು.ಭವಾನಿಅಪ್ಪಾ,ಕು.ಶಿವಾನಿಅಪ್ಪ,ಕು.ಮಹೇಶ್ವರಿ ಎಸ್.ಅಪ್ಪ,ಡಾ. ಅಲ್ಲಮಪ್ರಭು ದೇಶಮುಖ ವಿವಿಯ ಉಪಕುಲಪತಿ ಡಾ. ಅನಿಲಕುಮಾರ ಬಿಡವೆ ಉಪಸ್ಥಿತರಿದ್ದರು.

ಬಲ್ಡೋಟ ಹಟಾವೋ ಕೊಪ್ಪಳ ಬಚಾವೋ ಎಲ್‌ಕೆಜಿ ವಿದ್ಯಾರ್ಥಿನಿ ಪಾಠ

ಕೊಪ್ಪಳ: ನಗರಸಭೆ ಮುಂದುಗಡೆ ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಮತ್ತು ಪರಿಸರ ಹಿತರಕ್ಷಣಾ ವೇದಿಕೆಯ ಜಂಟಿ ಕ್ರಿಯಾ ವೇದಿಕೆ ನಡೆಸಿರುವ 123ನೇ ದಿನದ ಬಲ್ಡೋಟ ಹಟಾವೋ ಧರಣಿಯನ್ನು ನಗರದ ಬಿ.ಟಿ.ಪಾಟೀಲ ನಗರದ ಶ್ರೀಸಿದ್ಧಿವಿನಾಯಕ ದೇವಸ್ಥಾನ ಮಂಡಳಿಯವರು ನಡೆಸಿದರು.

ಇಂದಿನ ಧರಣಿ ವೇದಿಕೆಯಲ್ಲಿ ಎಸ್.ಎ.ನಿಂಗೋಜಿ ಇಂಟರ್ ನ್ಯಾಶನಲ್ ಶಾಲೆ, ದದೇಗಲ್ ವಿದ್ಯಾರ್ಥಿಗಳು ಶಿಕ್ಷಕ ಈಶಪ್ಪ ಅವರು ನಿರ್ದೇಶಿಸಿದ 'ಭೂತಾಯಿ' ಕಿರು ನಾಟಕ ಪ್ರದರ್ಶನ ಮಾಡಿದರು. ಕಾರ್ಖಾನೆ ಮಾಲೀಕರು ಮುಗ್ಧ ರೈತರಿಗೆ ಆಮಿಷ ಒಡ್ಡಿ, ಹಣದ ಆಸೆ ಹುಟ್ಟಿಸಿ, ಬೆದರಿಕೆ ಹಾಕಿ ಭೂಮಿ ಕಿತ್ತುಕೊಳ್ಳುವ ಸಂಚನ್ನು ಅನಾವರಣಗೊಳಿಸುವ ಪಾತ್ರಗಳು ಭೂತಾಯಿ ನೇಣಿಗೆ ಶರಣಾಗಲು ಮುಂದಾದ ರೈತನನ್ನು ಸಂತೈಸಿ, ಮಗನೆ ನನ್ನನು ನೀನು ಬಿಡಬೇಡ, ನಿನ್ನನು ನಾನು ಕಾಪಾಡುತ್ತೇನೆ. ಈ ಕಾರ್ಖಾನೆ ದುರುಳರು ನನ್ನನು ವಶಕ್ಕೆ ತೆಗೆದುಕೊಂಡು ಅನ್ನ ಸಿಗದಂತೆ ಮಾಡುತ್ತಾರೆ ನಾನು ನಿನ್ನಲ್ಲಿಯೇ ಇರುತ್ತೇನೆ ಎನ್ನುವ ವಾಗ್ದಾನ ಕಣ್ಣೀರಿಳಿಯುವಂತೆ ಮಾಡಿತು. ಪಾತ್ರ ನಿರ್ವಹಿಸಿದ ಮಕ್ಕಳು ಮನೋಜ್ಞವಾಗಿ ಅಭಿನಯಿಸಿದರು.

ಪ್ರಿನ್ಸಿಪಾಲ್ ಸಂಪತ್ ಆಕಳವಾಡಿ, ನಗರದ ಶ್ರೀಸಾಯಿ ಸಮರ್ಥ ಇಂಗ್ಲಿಷ್ ಮಾಧ್ಯಮ ಪೂರ್ವ ಪ್ರಾಥಮಿಕ ಶಾಲೆಯ ಕೆ.ಜಿ. ಮಕ್ಕಳಿಗೆ ವಿಜ್ಞಾನ ವಸ್ತು ಪ್ರದರ್ಶನ ಏರ್ಪಡಿಸಿದ ಅಲ್ಲಿನ ಮುಖ್ಯಸ್ಥರಾದ ಕವಿತಾ ಮಾಟೂರು ಅವರು ಮಾತನಾಡಿದರು.

ಬಿ.ಟಿ.ಪಾಟೀಲ ನಗರದ ಶ್ರೀ ಸಿದ್ಧಿವಿನಾಯಕ ದೇವಸ್ಥಾನ ಮಂಡಳಿಯ ಟ್ರಸ್ಟಿ ಸುರೇಶ ನಾಡಿಗೇರ ಮಾತನಾಡಿ, ನಮ್ಮ ಬಿ.ಟಿ. ಪಾಟೀಲ್ ನಗರ ಸಂಪೂರ್ಣ ದೂಳು ಬಾಧಿತವಾಗಿ ನಲುಗಿ ಹೋಗಿದೆ. ಅಲ್ಲೊಂದು ಇಲ್ಲೊಂದು ಬೆಂಚ್ ಹಾಕಿ, ಟ್ರೀ ಗಾರ್ಡ್ ಗಿಡವಿಲ್ಲದಿದ್ದರೂ ಇಟ್ಟು ಬಲ್ಡೋಟ ಅನುಕಂಪ ಪಡೆಯುವುದನ್ನು ನಂಬಲು ಯಾರೂ ದಡ್ಡರಲ್ಲ ಎಂದರು.

ಧರಣಿಯಲ್ಲಿ ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು, ಸಾಹಿತಿ ಎ.ಎಂ.ಮದರಿ, ಸಂಚಾಲಕರಾದ ಮಲ್ಲಿಕಾರ್ಜುನ ಬಿ. ಗೋನಾಳ, ಮಂಜುನಾಥ ಜಿ. ಗೊಂಡಬಾಳ, ಮಹಿಳಾ ಮುಖಂಡರಾದ ಕಾವ್ಯ ಗಡಾದ, ಪ್ರಕಾಶಕ ಡಿ.ಎಂ.ಬಡಿಗೇರ ಇತರರಿದ್ದರು.



ಅಕ್ರಮ ಗಣಿಗಾರಿಕೆ ಮೇಲೆ ದಾಳಿ: ಪ್ರಕರಣ ದಾಖಲು

ಮುನಿರಾಬಾದ್: ಸಮೀಪದ ಶಿವಪುರ, ಬಂಡಿ ಹರ್ಲಾಪುರ, ಹುಸೇನ್‌ಪುರ, ಗ್ರಾಮಗಳ ಸುತ್ತಮುತ್ತಲಿನ ಅರಣ್ಯ ಪ್ರದೇಶದಲ್ಲಿ ನಡೆಯುತ್ತಿರುವ ಅಕ್ರಮ ಗ್ರಾನೈಟ್ ಗಣಿಗಾರಿಕೆಗೆ ಕಡಿವಾಣ ಹಾಕಲು ಭಾನುವಾರ ಬೆಳಿಗ್ಗೆ ದಾಳಿ ನಡೆಸಿ ಗಣಿಗಾರಿಕೆಯಲ್ಲಿ ತೊಡಗಿದ್ದ 13 ಹಿಟಾಚಿ ಯಂತ್ರ, 10 ಲಾರಿ ಹಾಗೂ 14 ಟ್ರ್ಯಾಕ್ಟರ್ ಗಳನ್ನು ವಶಪಡಿಸಿಕೊಳ್ಳಲಾಯಿತು.

ಜಿಲ್ಲಾಡಳಿತ, ಗಣಿ ಮತ್ತು ಭೂ ವಿಜ್ಞಾನ ಅಧಿಕಾರಿಗಳು ಮತ್ತು ಎಸ್ಪಿ ನೇತೃತ್ವದಲ್ಲಿ ದಿಢೀರ್ ದಾಳಿ ನಡೆಸಿ ಅಕ್ರಮ ಗಣಿಗಾರಿಕೆ ದಂಧೆ ಕೋರರಿಗೆ ಬಿಸಿ ಮುಟ್ಟಿಸುವ ಕೆಲಸ ಮಾಡಿದ್ದಾರೆ.

ಅಕ್ರಮವಾಗಿ ಗಣಿಗಾರಿಕೆ ಮಾಡುವ ಸ್ಥಳದಲ್ಲಿ ಕಾರ್ಯನಿರ್ವಹಿಸುವ ವಾಹನಗಳನ್ನು ಸೀಸ್ ಮಾಡಲಾಗಿದೆ. ಮಾಲೀಕರ ವಿರುದ್ಧ ಪ್ರಕರಣ ದಾಖಲಾಗಿದೆ.

ಈ ಭಾಗದಲ್ಲಿ ಕಲ್ಲು ಗ್ರಾನೈಟ್ ದಂಧೆ ಬಳ್ಳಾರಿ ಮೈನಿಂಗ್‌ನಂತೆ ನಡೆಯುತ್ತದೆ. ಅಕ್ರಮ ಗಣಿಗಾರಿಕೆ ಸಂಪೂರ್ಣವಾಗಿ ನಿಲ್ಲಬೇಕು. ಇಂದು ಅಧಿಕಾರಿಗಳು ಬಂದು ಕೆಲವು ವಾಹನಗಳನ್ನು ಜಪ್ತಿ ಮಾಡಿ ಸಂಬಂಧಿಸಿದವರ ಮೇಲೆ ಪ್ರಕರಣ ದಾಖಲಿಸಿದ್ದಾರೆ. ಇಲ್ಲಿ ಕಲ್ಲು ಗ್ರಾನೈಟ್ ದಂಧೆ ನಡೆಯುತ್ತಿದ್ದು, ಇದು ಕೆಲವೇ ದಿನಗಳಲ್ಲಿ ಪುನಃ ಆರಂಭವಾದರೂ ಆಗಬಹುದು . ಈ ಭಾಗದ ಅಕ್ರಮ ಗಣಿಗಾರಿಕೆ ಸಂಪೂರ್ಣ ನಿಲ್ಲದೆ ಹೋದರೆ ಲೋಕಾಯುಕ್ತರಿಗೆ ದೂರು ದಾಖಲಿಸಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಧರಣಿ ನಡೆಸುತ್ತೇವೆ ಎಂದು ರೈತ ಹುಲುಗಪ್ಪ ತಳವಾರ ತಮ್ಮ ಆಕ್ರೋಶ ಹೊರಹಾಕಿದ್ದಾರೆ.

ಪದೇ ಪದೇ ಅಕ್ರಮದ ಗ್ರಾನೆಟ್ ಕಲ್ಲುಗಳು ಮೇಲ್ನೋಟಕ್ಕೆ ಕಂಡುಬಂದಿದ್ದು, ಪರಿಶೀಲಿನೆ ಮಾಡಿ ಸೂಪರ್ ತನಿಖೆ ಮಾಡಲಾಗುವುದು ಹಾಗೂ ಅಕ್ರಮ ಗಣಿಗಾರಿಕೆ ಮಾಡುವವರ ವಿರುದ್ಧ ದೂರು ದಾಖಲಿಸಿ, ಅರಣ್ಯ ಪ್ರದೇಶದಲ್ಲಿ ಆದ ನಷ್ಟಕ್ಕೆ ದಂಡ ವಿಧಿಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಸ್ಪಿ ಡಾ.ರಾಮ್ ಎಲ್.ಅರಸಿದ್ದಿ ಹೇಳಿದ್ದಾರೆ.



ಎಸ್‌ಎಸ್‌ಕೆ ಸಮಾಜದ ಸಾವಜಿ ಹೋಟೆಲ್ ಮಾಲೀಕರ ಸಂಘ ಅಸ್ತಿತ್ವಕ್ಕೆ

ಕುಷ್ಟಗಿ: ಎಸ್.ಎಸ್.ಕೆ.ಸಮಾಜದ ಶ್ರೀಅಂಭಾಭವಾನಿ ದೇವಸ್ಥಾನದಲ್ಲಿ ಸ್ಥಳೀಯ ಸಾವಜಿ ಹೋಟೆಲ್ ಮಾಲೀಕರ ಸಭೆ ಸೇರಿ ಸಂಘಟಿತರಾಗಿ ಸಾವಜಿ ಹೊಟೇಲ್ ಮಾಲಿಕರ ಸಂಘ ಅಸ್ತಿತ್ವಕ್ಕೆ ತರಲಾಯಿತು.

ರಾಜ್ಯ ಸಾವಜಿ ಹೊಟೇಲ್ ಮಾಲಿಕರ ಸಂಘದ ಸಂಘಟನಾ ಕಾರ್ಯದರ್ಶಿ ಯಲ್ಲಪ್ಪ ಕಾಟವಾ ಅವರ ನೇತೃತ್ವದಲ್ಲಿ ಪದಾಧಿಕಾರಿಗಳ ಆಯ್ಕೆ ನಡೆಯಿತು.

ಅಧ್ಯಕ್ಷರಾಗಿ ಶಕ್ತಿ ಖಾನವಳಿಯ ವಿಠ್ಠಲಸಾ ದಲಬಂಜನ, ಉಪಾಧ್ಯಕ್ಷ ರಾಗಿ ಆನಂದಸಾ ರಾಯಬಾಗಿ, ಖಜಾಂಚಿಯಾಗಿ ಗಣಪತಿಸಾ (ಗದಗ ಸಾವಜಿ ಖಾನಾವಳಿ) ಹಬೀಬ್, ಪ್ರಧಾನ ಕಾರ್ಯದರ್ಶಿಯಾಗಿ ಪರಶುರಾಮ ಪವಾರ,ಮತ್ತು ಸಹ ಕಾರ್ಯದರ್ಶಿ ಯಾಗಿ ವಿನೋದ ವೇಣು ರಂಗರೇಜಿ, ಕಾರ್ಯಕಾರಿ ಸಮಿತಿಗೆ ಭಾಸ್ಕರ ರಾಯಬಾಗಿ, ಶಿವಾಜಿ ಸಿಂಗ್ರಿ, ಸಂಜಯ ಅರಸಿದ್ದಿ, ಪ್ರಮೋದ ನಿರಂಜನ, ಬಾಬು ದಲಬಂಜನ, ನಾಗರಾಜ ದಲಬಂಜನ, ಆಯ್ಕೆಯಾದರು.

ರಾಜ್ಯ ಸಮಿತಿಯ ಯಲ್ಲಪ್ಪ ಕಾಟವಾ ಮಾತನಾಡಿ ಸಂಘಟನೆಯ ಅವಶ್ಯಕತೆ ಏಕೆ ಬೇಕು ಮತ್ತು ಗ್ರಾಹಕರ ಜೊತೆಗೆ ನಮ್ಮ ನಡೆ ನುಡಿ ಹೇಗಿರಬೇಕು ಎಂಬುವ ಬಗ್ಗೆ ಮತ್ತು ಅನಗತ್ಯವಾಗಿ ಖಾನಾವಳಿ ವ್ಯವಹಾರದಲ್ಲಿ ತೊಂದರೆ ಕೊಡುವ ವ್ಯಕ್ತಿಗಳ ಕುರಿತು ನಿಗಾವಹಿಸಿ ಕಾನೂನು ಕ್ರಮ ಕೈಗೊಳ್ಳುವ ಕುರಿತು ಚಿಂತನೆ ಮಾಡಬೇಕು. ಕೆಲವು ಜನರು ಸಾವಜೀ ಖಾನಾವಳಿ ಹೆಸರನ್ನು ದುರುಪಯೋಗ ಪಡಿಸಿಕೊಳ್ಳುವದು ಪತ್ತೆ ಹಚ್ಚಿ ಅಂತವರ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಸಲಹೆ ನೀಡಿದರು. ಹೊಸಪೇಟೆ ಸಾವಜಿ ಹೋಟೆಲ್ ಮಾಲಿಕರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು. ಕುಷ್ಟಗಿಯ ಎಸ್ ಎಸ್.ಕೆ.ಸಮಾಜದ ಅಧ್ಯಕ್ಷ ರವಿಂದ್ರ ಬಾಕಳೆ ಗೌರವ ಸಲಹೆಗಾರರಾಗಿ ನೇಮಕಗೊಂಡರು. ನೂತನ ಪದಾಧಿಕಾರಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ವೆಂಕಟೇಶ ಕಾಟವಾ, ಅನಿಲ್ ರಂಗರೇಜಿ, ಶ್ರೀಧರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ವಿದ್ಯಾರ್ಥಿಗಳಿಗೆ ವಿಶೇಷ ಬೇಸಿಗೆ ತರಬೇತಿ ಶಿಬಿರ: ಅರುಣಚಂದಾ

ಮಾನ್ವಿ: ಅಖಿಲ ಭಾರತ ವೀರಶೈವಲಿಂಗಾಯತ ಮಹಾಸಭಾ ತಾ.ಘಟಕ. ಹಾಗೂ ತಾಲೂಕು ವೀರಶೈವ ಲಿಂಗಾಯತ ಸಮಾಜದ ವತಿಯಿಂದ ಹಮ್ಮಿಕೊಳ್ಳಲಾದ 2ನೇ ವರ್ಷದ ಬೇಸಿಗೆ ಶಿಬಿರವನ್ನು ಏ.5ರಂದು ರಾಜ್ಯ ಸಚಿವರಾದ ಎನ್.ಎಸ್.ಬೋಸರಾಜು ಚಾಲನೆ ನೀಡಲಿದ್ದಾರೆ ಎಂದು ಅಖಿಲ ಭಾರತ ವೀರಶೈವಲಿಂಗಾಯತ ಮಹಾಸಭಾ ತಾಲೂಕು ಘಟಕದ ಅಧ್ಯಕ್ಷರಾದ ಅರುಣಚಂದಾ ತಿಳಿಸಿದರು. ಪಟ್ಟಣದ ಪತ್ರಿಕಾ ಭವನದಲ್ಲಿ ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗವು ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವುದರಿಂದ ಈ ಭಾಗದ ವಿದ್ಯಾರ್ಥಿಗಳಿಗೆ ಹೆಚ್ಚಿನ ತರಬೇತಿಯ ಅವಶ್ಯಕತೆ ಇರುವುದರಿಂದ ತಾಲೂಕಿನ ಆಸಕ್ತ ಎಲ್ಲಾ ಸಮುದಾಯದ ಪಾಲಕರು ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ 9 ನೇ ತರಗತಿಯಲ್ಲಿ ಉತ್ತೀರ್ಣರಾದ ತಮ್ಮ ಮಕ್ಕಳನ್ನು 10 ನೇ ತರಗತಿಯ ತರಬೇತಿಗೆ ಕಳುಹಿಸಿದಲ್ಲಿ ವಿಷಯವಾರು ಉಪನ್ಯಾಸಕರಿಂದ ಹಾಗೂ ಸಂಪನ್ಮೂಲ ವ್ಯಕ್ತಿಗಳಿಂದ 2 ತಿಂಗಳ ಕಾಲ 2ನೂರು ವಿದ್ಯಾರ್ಥಿಗಳಿಗೆ ಉಚಿತವಾಗಿ ಬೇಸಿಗೆ ತರಬೇತಿಯನ್ನು ನೀಡಲಾಗುವುದು ಹಾಗೂ ಅಗತ್ಯ ಪಠ್ಯವನ್ನು ಕೂಡ ಉಚಿತವಾಗಿ ನೀಡಲಾಗುವುದು. ಶಿಬಿರದಲ್ಲಿ ಪ್ರತಿದಿನ ವಿಶೇಷ ಉಪನ್ಯಾಸ ಹಾಗೂ ವಿವಿಧ ಮಠಗಳ ಶ್ರೀಗಳಿಂದ ಮಾರ್ಗದರ್ಶನವಿರುತ್ತದೆ ಎಂದು ತಿಳಿಸಿದರು. ತಾಲೂಕು ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರಾದ ಹರಿಹರಪಾಟೀಲ್, ಗೌ.ಅಧ್ಯಕ್ಷರಾದ ಶ್ರೀಧರಸ್ವಾಮಿ, ಪ್ರ.ಕಾರ್ಯದರ್ಶಿ ಜಗದೀಶ ಒತ್ತೂರ್, ತಾ.ಅಖಿಲ ಭಾರತ ವೀರಶೈವಲಿಂಗಾಯತ ಮಹಾಸಭಾ ರಾಜ್ಯ ಕಾರ್ಯಕಾರಣಿ ಸದಸ್ಯರಾದ ಸಿದ್ದಲಿಂಗಪ್ಪ ವಕೀಲರು, ಟಿ.ಎ.ಪಿ.,ಸಿ.ಎಂ.ಸಿ. ಅಧ್ಯಕ್ಷರಾದ ತಿಮ್ಮರೆಡ್ಡಿ ಭೋಗವತಿ, ಗಣೇಕಲ್ ಮಲ್ಲಯ್ಯ, ರೇವಣಸಿದ್ದಯ್ಯಸ್ವಾಮಿ, ಹೋಯ್ಸಳ ಸ್ವಾಮಿ, ಶಿವಕುಮಾರ ಪಾಟೀಲ್ ಭೋಗವತಿ ಇದ್ದರು.



ಯಲಬುರ್ಗಾದಲ್ಲಿ ಹೋಳಿ ಹಬ್ಬಕ್ಕೆ ಅದ್ದೂರಿ ಚಾಲನೆ

ಶಿವಮೂರ್ತಿ ಇಟಗಿ

ಯಲಬುರ್ಗಾ: ಪಟ್ಟಣದ ವಿವಿಧೆಡೆಗಳಲ್ಲಿ ಕಾಮಣ್ಣನನ್ನು ಪ್ರತಿಷ್ಠಾಪಿಸುವ ಮೂಲಕ ಹೋಳಿ ಹಬ್ಬ ಆಚರಣೆಗೆ ಚಾಲನೆ ದೊರೆತಿದೆ.

ಕೊಪ್ಪಳ ಜಿಲ್ಲೆಯಲ್ಲಿ ವಿಶಿಷ್ಟ ರೀತಿಯಲ್ಲಿ ಆಚರಿಸಲಾಗುವ ಹೋಳಿ ಹಬ್ಬ ನೋಡಲು ವಿವಿಧ ಗ್ರಾಮಗಳ ಜನರು ಇಲ್ಲಿಗೆ ತಂಡೋಪತಂಡವಾಗಿ ಬರುತ್ತಾರೆ. ಭಾನುವಾರ ರಾತ್ರಿ ಕಾಮಣ್ಣನನ್ನು ಪ್ರತಿಷ್ಠಾಪಿಸುವ ಮೂಲಕ ಆರಂಭಗೊಂಡ ಹೋಳಿ ಹಬ್ಬ ಬುಧವಾರ ಬೆಳಿಗ್ಗೆ ಕಾಮದಹನ,ಅಂದು ಮಧ್ಯಾಹ್ನ ಬಣ್ಣದೋಕುಳಿ ನಡೆದು ಅಂತ್ಯಗೊಳ್ಳಲಿದೆ.

ಗಾಳಿಯರ್ ಕಾಮ, ಕಂಡೇರ್ ಕಾಮ, ದೈವದಕಾಮ ಹಾಗೂ ಸರ್ಕಾರಿ ಕಾಮ ಹೀಗೆ ನಾಲ್ಕು ಕಡೆಗಳಲ್ಲಿ ಸ್ಥಾಪಿಸಲ್ಪಡುವ ಕಾಮನನ್ನು ನೆಲ್ಲು ಹುಲ್ಲಿನಿಂದ ತಯಾರಿಸಿ ಅದಕ್ಕೆ ವಸ್ತ್ರ ಹಾಗೂ ಆಭರಣಗಳಿಂದ ಅಲಂಕರಿಸಲಾಗುತ್ತದೆ. ಬಣ್ಣದ ಮುಖವಾಡ ತೊಡಸಿ ಕೂಡಿಸಿರುತ್ತಾರೆ. ಪಕ್ಕದಲ್ಲಿ ರತಿದೇವಿ ಹಾಗೂ ಭೀಮನನ್ನು ಕೂರಿಸುವ ಪದ್ಧತಿ ಇದೆ.



ದಿಗಂತ ವಿಶೇಷ

ಕಳಬೇಡ: ಮಂಗಳವಾರ ಸಂಜೆಯಿಂದ ಬುಧವಾರ ಬೆಳಗಿನ ಜಾವದವರೆಗೆ ಕಳಬೇಡದ ನರ್ತನ ನೋಡುಗರನ್ನು ಆಕರ್ಷಿಸುತ್ತದೆ. ಕಳಬೇಡ ಎನ್ನುವ ರಾಕ್ಷಸ ವೇಷಧರಿಸಿ ತಮ್ಮದೇ ಶೈಲಿಯಲ್ಲಿ ಹೆಚ್ಚೆ ಕುಣಿತದಿಂದ ಜನರನ್ನು ರಂಜಿಸುತ್ತಾರೆ. ಇದರ ಹಿಂದೆ ಕೆಲವರು ಹೆಣದ ಬಂಡಿ ಮಾಡಿ ಪುರುಷರು ಹೆಣ್ಣು ವೇಷಧಾರಿಯಾಗಿ ಅಳುತ್ತಾ ಸಾಗುವುದು ಇಲ್ಲಿಯ ಸಂಪ್ರದಾಯ.

ಕಾಮದಹನ: ಬುಧವಾರ ಬೆಳ್ಳಿಗೆ 7-30 ಹೊತ್ತಿಗೆ ನಾಲ್ಕು ಕಾಮದವರು ತಂತಮ್ಮ ಕಾಮಣ್ಣ ಸಮ್ಮೇತ ಮೊದಲಿಗೆ ದೈವದ ಕಾಮನನ್ನು ಸುಡಲು ಅದರ ಅಧಿಕೃತ ಸ್ಥಳಕ್ಕೆ (ಉಸುಕಿನ ಕಟ್ಟೆ)ಗೆ ಬಂದು ಸೇರುತ್ತಾರೆ.ಆಗ ದೈವದ ಕಾಮದವರು ಕದ್ದು ಹಾಕಿರುವ ಕಟ್ಟೆಗೆ ಹಾಗೂ ಕುಳ್ಳಗಳ ರಾಶಿಯನ್ನು 5 ಸುತ್ತು ಹಾಕಿ ಕಾಮನ ಮುಖವಾಡವನ್ನು ತಗೆದು ಆ ಜಾಗಕ್ಕೆ ಗಡುಗೆಯನ್ನು ಇಡುತ್ತಾರೆ.

ತಕ್ಷಣವೇ ಕಾಮಣ್ಣನಿಗೆ ಬೆಂಕಿ ಇಡುತ್ತಾರೆ. ಇದಾದ ನಂತರವೇ ಉಳಿದ ಕಾಮದವರು ತಂತಮ್ಮ ಸ್ಥಳಕ್ಕೆ ಹೋಗಿ ಅಲ್ಲಿಯೂ ಹೋಗಿ ಇದೇ ಪದ್ಧತಿ ಅನುಸರಿಸಿ ವಿಶಿಷ್ಟ ಪದ್ಧತಿ ಮೂಲಕ ಸುಡುತ್ತಾರೆ.ನೆರೆದಿದ್ದ ಜನರು ಅಲ್ಲಿಯ ಬೆಂಕಿಯನ್ನು ಮನೆಗೆ ತಂದು ಕಡಲೆ ಕಾಳು ಸುಟ್ಟು ತಿನ್ನುತ್ತಾರೆ.ಕಾಮ ಸುಟ್ಟ ಬೂದಿಯನ್ನು ರೈತಾಪಿ ಜನರು ತಮ್ಮ ಹೊಲದಲ್ಲಿ ಚಲ್ಲುತ್ತಾರೆ.ಇದರಿಂದ ಹೊಲ ಸಮೃದ್ದಿಯಾಗುತ್ತದೆ ಎಂಬುದು ನಂಬಿಕೆ.

ಓಕುಳಿ: ಕಾಮಣ್ಣನನ್ನು ದಹಿಸಿದ ಬಳಿಕ ಪಟ್ಟಣದ ಪುರುಷರು, ಮಹಿಳೆಯರು, ಯುವಕರು,ಯುವತಿಯರು,ಮಕ್ಕಳು ಮನೆ ಮನೆಗೆ ಸುತ್ತಿ ಬಣ್ಣದೋಕುಳಿಯಲ್ಲಿ ನಿರತರಾಗುತ್ತಾರೆ.

ಬೋಧಕರ ಕಠಿಣ ಶ್ರಮದಿಂದ ಮಾತ್ರ ಸಂಸ್ಥೆ ಬೆಳೆಯಲು ಸಾಧ್ಯ

ಕುಕನೂರು: ಸಮಾಜದಲ್ಲಿ ಉತ್ತಮ ಶಿಕ್ಷಣ ಸಂಸ್ಥೆ ಹುಟ್ಟು ಹಾಕುವುದು ಸಣ್ಣ ಮಾತಲ್ಲಾ, ಅದರ ಹಿಂದೆ ಕಾಣದ ಕೈಗಳ ಸಹಾಯ, ಸಹಕಾರದ ಜೊತೆಗೆ ಬೋಧಕ ವರ್ಗದ ಕಠಿಣ ಪರಿಶ್ರಮವಿದ್ದಾಗ ಮಾತ್ರ ಉತ್ತಮ ಶಿಕ್ಷಣ ಸಂಸ್ಥೆಯಾಗಲು ಸಾಧ್ಯವಾಗುತ್ತದೆ ಎಂದು ವಿದ್ಯಾಶ್ರೀ ಶಾಲಾ ಸಂಸ್ಥಾಪಕ ಸತ್ಯನಾರಾಯಣಪ್ಪ ಹರಪನಹಳ್ಳಿ ಹೇಳಿದರು.

ಅವರು ಪಟ್ಟಣದ ವಿದ್ಯಾಶ್ರೀ ಶಿಕ್ಷಣ ಸಂಸ್ಥೆಯಲ್ಲಿ ರವಿವಾರದಂದು ಆಯೋಜಿಸಿದ್ದ ಶಾಲಾ ವಾರ್ಷಿಕ ವೈಭವ ಕಾರ್ಯಕ್ರಮದಲ್ಲಿ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಶಾಲೆಯ ಅಭಿವೃದ್ದಿಗೆ ಶಾಸಕ ರಾಯರೆಡ್ಡಿ ಅನುದಾನ ನೀಡಿದ್ದಾರೆ. ಹಾಗೂ ಮಾಜಿ ಶಾಸಕ ಹಾಲಪ್ಪ ಆಚಾರ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಿಸಿಕೊಟ್ಟಿದ್ದಾರೆ. ಹೀಗೆ ಅನೇಕ ಮಹನೀಯರು ಸಹಾಯ, ಸಹಕಾರ ಮನೋಭಾವದಿಂದ ನಮ್ಮ ಶಾಲೆ ಪ್ರಗತಿಯಲ್ಲಿದೆ ಎಂದರು.



ರಾಜ್ಯದಲ್ಲಿ ಎಲ್ಲಾ ಇಲಾಖೆಗಳಲ್ಲಿ ಸಾಕಷ್ಟು ಹುದ್ದೆಗಳು ಖಾಲಿ ಇದ್ದರು ತುಂಬಿಕೊಳ್ಳಲಾಗುತ್ತಿಲ್ಲ, ಇಂದಿನ ವಿದ್ಯಾವಂತ ಯುವಕರು ವ್ಯವಸಾಯ ಮಾಡಲು ಆಗುತಿಲ್ಲ, ಅಂತಹ ಸನ್ನಿವೇಶಗಳು ಎದುರಾಗುತ್ತಿದ್ದು, ಪ್ರತಿಯೊಬ್ಬ ಯುವಕರು ಜ್ಞಾನಾರ್ಜನೆ ಜೊತೆಗೆ ಕೃಷಿಗೆ ಮಹತ್ವ ನೀಡಬೇಕು ಎಂದರು.ನಂತರ ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಜಶವಂತರಾಜ್ ಜೈನ್ ಮಾತನಾಡಿ, ನಮ್ಮ ಶಾಲೆ ಇಷ್ಟೊಂದು ಪ್ರಗತಿಯತ್ತ ಸಾಗಲು, ಇಲ್ಲಿನ ಆಡಳಿತ ಮಂಡಳಿಯವರು ಹಾಗೂ ವಿಶ್ವಸ್ತ ಮಂಡಳಿಯವರ ಪರಿಶ್ರಮ ಹಾಗೂ ವಿವಿಧ ಗಣ್ಯ ಮಹನೀಯರ ಸಹಕಾರ ಸಾಕಷ್ಟಿದೆ. ಇಂತಹ ವೈಭವ ಕಾರ್ಯಕ್ರಮ ಐದು ವರ್ಷಗಳ ನಂತರ ನಡೆಯುತ್ತಿರುವುದರಿಂದ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ, ಪಾಲಕರಿಗೆ ಸಂತೋಷ ಮೂಡಿಸಿದೆ ಎಂದರು. ನಮ್ಮ ಶಾಲೆಯಲ್ಲಿ ಇನ್ನೂ ಹೆಚ್ಚಿನ ರೀತಿಯ ವಿವಿಧ ಕೊರ್ಸ್‌ಗಳನ್ನು ಹೆಚ್ಚಿಸುವ ಮೂಲಕ ಶಾಲೆಯ ಶಿಕ್ಷಣದಲ್ಲಿ ಇನ್ನೂ ಉತ್ತಮ ಪ್ರಗತಿ ಸಾಧಿಸಲಿದ್ದೇವೆ ಎಂದು ತಿಳಿಸಿದರು.

ಶರಣಪ್ಪ ಅರಕೇರಿ, ಶರಣಪ್ಪ ಮುತ್ತಾಳ, ನವೀನ ನವಲೆ, ವೀರಯ್ಯ ಉಳ್ಳಾಗಡ್ಡಿ, ರವಿ ನಾಲ್ವಾಡ, ಗೌರಮ್ಮ ಅಂಗಡಿ, ದೊಡ್ಡಪ್ಪ ಭಾವಿಕಟ್ಟಿ, ಮುಖ್ಯೋಪಾಧ್ಯ ಮಧು ಸೂಧನ ದೇಸಾಯಿ, ರಾಜಶೇಖರ್ ಹೊಸಮನಿ, ಶಿಕ್ಷಕರಾದ ಕೃಷ್ಣ ವಿಧ್ಯಾಪತಿ, ಪ್ರಭು ಬುಕೆಟಗಾರ ಇನ್ನೀತರರು ವೇದಿಕೆ ಮೇಲಿದ್ದರು. ಕಾರ್ಯಕ್ರಮದ ಪರಿಚಯವನ್ನು ಶಿಕ್ಷಕ ಮಂಜುನಾಥ ಗದಗ ನೆಡೆಸಿಕೊಟ್ಟರು.ವಿದ್ಯಾರ್ಥಿನಿಯರು ಸ್ವಾಗತಿಸಿ ನಿರೂಪಿಸಿದರು. ಅಧ್ಯಕ್ಷ ಜಶವಂತರಾಜ್ ಜೈನ್ ವಂದಿಸಿದರು.

ಕಿರುಸುದ್ದಿ

ಅಂತಾರಾಷ್ಟ್ರೀಯ ವಿಜ್ಞಾನ ದಿನಾಚರಣೆ



ಕುರುಗೋಡು: ತಾಲೂಕಿನ ಮುಷ್ಟಗಟ್ಟೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಅಂತಾರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊಟ್ರೇಶ್ ಮಕಾರಿ ಪ್ರಾಂಶುಪಾಲರು ಮಾತನಾಡಿ. ಜನರ ಮೌಡ್ಯ ಗಳನ್ನ ಹೊಡೆದೊಡಿಸುವಲ್ಲಿ ವಿಜ್ಞಾನದ ಪಾತ್ರ ಮಹತ್ತರವಾಗಿದೆ. ವಿಶ್ವದಲ್ಲಿ ಭಾರತವನ್ನು ತಿರುಗಿ ನೋಡುವಂತೆ ಮಾಡಿರುವುದು ಎಂದರು. ಉಪ ಪ್ರಾಂಶುಪಾಲರು ಬಳಗನೂರು ಬಸವರಾಜ, ನಿಲಯಪಾಲಕ ಶ್ರೀಕಾಂತ್, ವಿಜ್ಞಾನ ಶಿಕ್ಷಕ ಪೀರ್ ಭಾಷಾ, ಸಿಬ್ಬಂದಿ ಇತರರಿದ್ದರು.

ಪ್ರಯಾಣಿಕರ ನೆರವಿಗಾಗಿ ಸಹಾಯವಾಣಿ

ವಿಜಯನಗರ: ಮಧ್ಯಪ್ರಾಚ್ಯದ ಕೆಲವು ದೇಶಗಳಲ್ಲಿ ಯುದ್ಧದ ಪರಿಸ್ಥಿತಿಯಿಂದ ಅಂತಾರಾಷ್ಟ್ರೀಯ ವಿಮಾನಯಾನ ಸೇವೆಗಳಲ್ಲಿ ವ್ಯತ್ಯಯ ಉಂಟಾಗಿದೆ. ಈ ಹಿನ್ನೆಲೆಯಲ್ಲಿ, ವಿಜಯನಗರ ಜಿಲ್ಲೆಯ ಸಾರ್ವಜನಿಕರ ಹಿತದೃಷ್ಟಿಯಿಂದ ಜಿಲ್ಲಾಡಳಿತ ಸಹಾಯವಾಣಿ ಸ್ಥಾಪಿಸಿದೆ. ಇರಾನ್, ಇಸ್ರೇಲ್, ಲೆಬನಾನ್, ಸೌದಿ ಅರೇಬಿಯಾ ಸೇರಿದಂತೆ ಒಟ್ಟು 11 ದೇಶಗಳ ವೈಮಾನಿಕ ಮಾರ್ಗಗಳನ್ನು ಮಾರ್ಚ್ 2ರವರೆಗೆ ಮುಚ್ಚಲಾಗಿದ್ದು, ಇದರಿಂದಾಗಿ ದುಬೈ ಸೇರಿದಂತೆ ವಿವಿಧ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಅನೇಕ ಪ್ರಯಾಣಿಕರು ಸಿಲುಕಿಕೊಂಡಿದ್ದಾರೆ. ಜಿಲ್ಲೆಯ ನಾಗರಿಕರು ಆಯಾ ದೇಶಗಳಲ್ಲಿ ಸಿಲುಕಿಕೊಂಡಿದ್ದರೆ. ಅವರ ರಕ್ಷಣೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಡಳಿತದಿಂದ ಸಹಾಯವಾಣಿ ಸ್ಥಾಪಿಸಲಾಗಿದೆ. ಜಿಲ್ಲಾ ತುರ್ತು ಕಾರ್ಯಾಚರಣೆ ಕೇಂದ್ರ ದೂ, 08394-295655, ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ. 9480805700, ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರ 080-22340676, 080-22253707, ಟೋಲ್ ಫ್ರೀ ಸಂಖ್ಯೆ: 1070 ಗೆ ಕರೆ ಮಾಡಬಹುದು. ವೀಸಾ ಸಂಬಂಧಿತ ಸಮಸ್ಯೆಗಳಿದ್ದಲ್ಲಿ ಹತ್ತಿರದ ಎಫ್‌ಆರ್‌ಆರ್‌ಒ ಕಚೇರಿಯನ್ನು ಸಂಪರ್ಕಿಸಬೇಕೆಂದು ವಿಜಯನಗರ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಸವರಾಜ್ ಸ್ವಾಮಿಗೆ ಸನ್ಮಾನ



ಬಳ್ಳಾರಿ: ನಗರದ ಜೆಸ್ಕಾಂ ಇಲಾಖೆಯ ಪಿಂಚಣಿದಾರರ ಸಂಘದ ಕಟ್ಟಡದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಇಲ್ಲಿನ ಕರ್ನಾಟಕ ಇತಿಹಾಸ ಅಕಾಡೆಮಿಯ ಜಿಲ್ಲಾಧ್ಯಕ್ಷ, ಜೆಸ್ಕಾಂ ಇಲಾಖೆಯ ನಿವೃತ್ತ ಅಧಿಕಾರಿ ಟಿಎಚ್‌ಎಂ ಬಸವರಾಜ್ ಸ್ವಾಮಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಜೆಸ್ಕಾಂ ಇಲಾಖೆಯ ಪಿಂಚಣಿದಾರರ ಸಂಘದ ರಾಜ್ಯಾಧ್ಯಕ್ಷ ಕುಮಾರಸ್ವಾಮಿ ಅವರು, ಬಸವರಾಜ್ ಸ್ವಾಮಿ ಅವರನ್ನು ಅಭಿನಂದಿಸಿ, ಸನ್ಮಾನಿಸಿ ಗೌರವಿಸಿದರು. ಸಂಘದ ಕಾರ್ಯದರ್ಶಿ ಭೋಜಗೌಡ್ರು ಶಾಮರಾವ್, ಖಜಾಂಜಿ ಜಿ.ವಿಶ್ವನಾಥ್, ಕೆ.ಬಂಡೆಪ್ಪ, ಕೆ.ಹೊನ್ನೂರ್ ಸ್ವಾಮಿ, ಬಿಟಿ ನಾಗರಾಜ್, ಹನುಮಂತಪ್ಪ, ಬಸರೆಡ್ಡಿ, ಸೇರಿದಂತೆ ರಾಜ್ಯ ಮಟ್ಟದ ಪದಾಧಿಕಾರಿಗಳು ಹಾಗೂ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಇತರರು ಉಪಸಿದ್ಧರಿದ್ದರು.

ಮನರೇಗಾ: ಎನ್‌ಎಂಎಂಎಸ್ ಹಾಜರಾತಿ ಕಡ್ಡಾಯ

ವಿಜಯನಗರ: ಹೊಸಪೇಟೆ ತಾಲೂಕು ಪಂಚಾಯತ್ ಕಚೇರಿಯಲ್ಲಿ ಜಿ.ಪಂ. ಉಪ ಕಾರ್ಯದರ್ಶಿ ಕೆ.ತಿಮ್ಮಪ್ಪ ಅಧ್ಯಕ್ಷತೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಎನ್‌ಎಂಎಂಎಸ್ ಫೇಸ್ ಅಥಂಟಿಕೇಷನ್ ಕುರಿತು ಜಿಲ್ಲಾ ಮಟ್ಟದ ತರಬೇತಿ ಕಾರ್ಯಾಗಾರ ಸೋಮವಾರ ನಡೆಯಿತು. ಕೇಂದ್ರ ಸರ್ಕಾರ ಅಭಿವೃದ್ಧಿ ಪಡಿಸಿರುವ ಎನ್‌ಎಂಎಂಎಸ್ ಮೊಬೈಲ್ ತಂತ್ರಾಂಶದಲ್ಲೇ ಮನರೇಗಾ ಕಾರ್ಮಿಕರ ಹಾಜರಾತಿಯನ್ನು ಫೇಸ್ ಅಥಂಟಿಕೇಷನ್ ಮೂಲಕ ದಾಖಲಿಸಬೇಕು. ಜಿಲ್ಲೆಯ ಎಲ್ಲಾ ತಾಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಇದನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕು. ಇದರಿಂದ ಯೋಜನೆಯಲ್ಲಿ ಸಾಕಷ್ಟು ಪಾರದರ್ಶಕತೆ ಹಾಗೂ ಪ್ರಗತಿ ಕಾಣಲು ಸಾಧ್ಯವಾಗಲಿದೆ ಎಂದು ತಿಳಿಸಿದರು. ತರಬೇತಿಯನ್ನು ಪಡೆದ ಸಿಬ್ಬಂದಿಗಳು ತಮ್ಮ ತಾಲೂಕು ಮಟ್ಟದಲ್ಲಿ ಹಾಗೂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ, ಸಿಬ್ಬಂದಿಗೆ ತರಬೇತಿ ನೀಡಬೇಕು ಎಂದು ತಿಳಿಸಿದರು. ಜಿಪಂ ವ್ಯವಸ್ಥಾಪಕ ಲೋಕೇಶ್ ಬಾಬು, ಹೊಸಪೇಟೆ ತಾಲೂಕು ಪಂಚಾಯತ್ ಇಒ ಎಂ.ಡಿ.ಆಲಂಭಾಷಾ, ಹೂವಿನಹಡಗಲಿ ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಪರಮೇಶ್ವರಪ್ಪ, ಎಡಿಪಿಸಿ ಬಸವರಾಜ ಕೆ., ಡಿಎಂಐಎಸ್ ಏಕಾಂತ, ಡಿಐಇಸಿ ಪಾಟೀಲ್ ಉಪಸ್ಥಿತರಿದ್ದರು.



ವಿಜಯನಗರ: ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸೋಮವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಜಗದ್ಗುರು ಶ್ರೀರೇಣುಕಾಚಾರ್ಯರ ಜಯಂತಿಯನ್ನು ಆಚರಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ ರಂಗಣ್ಣನವರ್ ಹಾಗೂ ಸಮುದಾಯದ ಮುಖಂಡರು ಇದ್ದರು.

ಹೋಳಿ ಹಬ್ಬ, ರಂಜಾನ್: ಶಾಂತಿ ಸಭೆ

ಕೆಂಭಾವಿ: ಪಟ್ಟಣದ ಪೊಲೀಸ್ ಠಾಣೆಯಲ್ಲಿ ಹೋಳಿ ಹಬ್ಬ ಹಾಗೂ ರಂಜಾನ್ ಪ್ರಯುಕ್ತ ಶಾಂತಿ ಸಭೆ ಆಯೋಜಿಸಲಾಗಿತ್ತು. ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಕ್ರೈಂ ಪಿಎಸ್‌ಐ ಹಣಮಂತ್ರಾಯ ಸಿದ್ದಾಪುರ, ಹೋಳಿ ಹಬ್ಬದಲ್ಲಿ ಯಾವುದೇ ಧರ್ಮಗಳಿಗೆ ಧಕ್ಕೆಯಾಗದಂತೆ ನಡೆದುಕೊಳ್ಳಬೇಕು. ಇಂತಹ ಶಾಂತಿ, ಸಭೆಗಳು ತೊಂದರೆಗಳನ್ನು ತಡೆಯಲು ಸಹಾಯ ಮಾಡುತ್ತವೆ. ಪೊಲೀಸ್ ಗಸ್ತು ಹೆಚ್ಚಿಸಿ, ನಿಮಗೆ ಬೇಕಾದ ರೀತಿಯಲ್ಲಿ ರಕ್ಷಣೆ ನೀಡುಲು ಇಲಾಖೆ ಸಿದ್ಧವಿದೆ ಎಂದರು. ಶಾಂತಿ ಸೌಹಾರ್ದತೆಯಿಂದ ಒಬ್ಬರಿಗೊಬ್ಬರಂತೆ ಸಹಬಾಳ್ವೆಯಿಂದ ಆಚರಣೆ ಮಾಡುವುದು ನಿಜವಾದ ಹಬ್ಬವವಿದಂತೆ ಎಂದರು. ದಲಿತ ಮುಖಂಡ ದೇವಿಂದ್ರಪ್ಪ ವಠಾರ (ಮಾಸ್ತರ) ಮಾತನಾಡಿ, ನಮ್ಮ ವಲಯದಲ್ಲಿ ಎಲ್ಲೂ ಕೂಡ ಹೋಳಿಹಬ್ಬದಂದು ಅಹಿತಕರ ಘಟನೆ ನಡೆದಿಲ್ಲ. ಮುಂದೆಯೂ ನಡೆಯುವುದಿಲ್ಲ. ಆದ್ದರಿಂದ ಮೊದಲಿನಿಂದಲೂ ಎಲ್ಲರೂ ಒಗ್ಗಟ್ಟಿನಿಂದ ಹಬ್ಬ ಆಚರಿಸುವದು ನಮ್ಮ ಕರ್ತವ್ಯ ಮುಂದೆಯೂ ಅದೇ ರೀತಿ ಹಬ್ಬಗಳನ್ನು ಆಚರಸುತ್ತೇವೆ ಎಂದು ಹೇಳಿದರು. ಮಾಜಿ ತಾಪಂ ಸದಸ್ಯ ಖಾಜ ಪಟೇಲ್ ಕಾಚೂರು, ದಲಿತ ಮುಖಂಡ ದೇವಿಂದ್ರಪ್ಪ ವಠಾರ, ಮೌಲಾನ ಸೈಯದ್ ಹುಸೇನ್, ನಯಿಮಖಾಜಿ, ಮಮ್ಮದ ನಾಸಿ, ಸಿದ್ದು ಜಮಖಂಡಿ, ನಿಂಗಣ್ಣ ಕಟ್ಟಿಮನಿ, ಸೇರಿದಂತೆ ಪೊಲೀಸ್ ಸಿಬ್ಬಂದಿಗಳಾದ ಎಎಸ್‌ಐ ಬಸನಗೌಡ, ಎಚ್.ಸಿ.ಅಂಬರೀಶ್, ಎಚ್.ಸಿ.ಪ್ರಭುಗೌಡ, ಎಚ್.ಸಿ.ಶಂಕರಗೌಡ, ಪಿ.ಸಿ.ಪೂಜಾ ಇತರರಿದ್ದರು.



ಸಿರುಗುಪ್ಪ: ತಾಲೂಕಿನ ದೇಶನೂರು ಗ್ರಾಮದಲ್ಲಿ ಶ್ರೀಕೈವಾರ ತಾತಯ್ಯ ಅವರ ಜಯಂತ್ಯುತ್ಸವವನ್ನು ಸೋಮವಾರ ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು. ಜಯಂತ್ಯುತ್ಸವ ನಿಮಿತ್ತ ಗ್ರಾಮದಲ್ಲಿ ಶ್ರೀಕೈವಾರ ತಾತಯ್ಯ ಅವರ ಭಾವಚಿತ್ರ ಮೆರವಣಿಗೆ ಅದ್ದೂರಿಯಾಗಿ ನೆರವೇರಿತು.

ನರ್ಸಿಂಗ್ ಕಾಲೇಜು ಕಟ್ಟಡ ಕಾಮಗಾರಿಗೆ ಅಡಿಗಲ್ಲು | ಸಚಿವ ಡಾ.ಶರಣಪ್ರಕಾಶ ಹೇಳಿಕೆ

ಜಿಲ್ಲೆಗೊಂದು ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣ

ಯಾದಗಿರಿ: ರಾಜ್ಯದಲ್ಲಿ ಸ್ಥಾಪಿತವಾಗಿರುವ ವೈದ್ಯಕೀಯ ಕಾಲೇಜುಗಳ ವ್ಯಾಪ್ತಿಯಲ್ಲಿ, ನರ್ಸಿಂಗ್ ಕಾಲೇಜು ಸ್ಥಾಪಿಸುವ ಸದುದ್ದೇಶ ರಾಜ್ಯ ಸರ್ಕಾರ ಹೊಂದಿದೆ ಎಂದು ವೈದ್ಯಕೀಯ ಸಚಿವ ಡಾ. ಶರಣಪ್ರಕಾಶ್ ಪಾಟೀಲ ಹೇಳಿದರು.

ನಗರದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆವರಣದಲ್ಲಿ ಸೋಮವಾರ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅನುದಾನದಡಿ ಒಟ್ಟು 9.86 ಕೋ.ರೂ ವೆಚ್ಚದ ನೂತನ ನರ್ಸಿಂಗ್ ಕಾಲೇಜು ಕಟ್ಟಡ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿ, ಭಾರತ ಸೇರಿದಂತೆ ವಿದೇಶದಲ್ಲಿ ನರ್ಸಿಂಗ್ ಸೇವೆಗೆ ಹೆಚ್ಚಿನ ಬೇಡಿಕೆ ಇದೆ. ಇದನ್ನು ಮನಗಂಡು ಎಲ್ಲೆಲ್ಲಿ ವೈದ್ಯಕೀಯ ಕಾಲೇಜುಗಳವೆಯೋ ಅಲ್ಲಿ ನರ್ಸಿಂಗ್ ಕಾಲೇಜು ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಸರ್ಕಾರಿ ವೈದ್ಯಕೀಯ ಕಾಲೇಜುಗಳ ವ್ಯಾಪ್ತಿಯಲ್ಲಿ ನರ್ಸಿಂಗ್ ಕಾಲೇಜುಗಳ ಸ್ಥಾಪನೆಯಿಂದ ಸರ್ಕಾರಿ ಉಚಿತ ಸೀಟು ಸಹ ಸಿಗಲು ನೆರವಾಗಲಿದೆ. ಇದರಿಂದ ಜನಸಾಮಾನ್ಯ ಹಾಗೂ ಬಡ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಅತ್ಯುತ್ತಮ ತರಬೇತಿ, ಮೂಲಸೌಕರ್ಯ ಹಾಗೂ ಆಸ್ಪತ್ರೆಗಳಿಗೂ ನೆರವಾಗಲಿದೆ. ಈ ಹಿನ್ನೆಲೆಯಲ್ಲಿ ಜೇವರ್ಗಿ, ಸೇಡಂಗಳಲ್ಲಿ ಸಹ ಆರಂಭಿಸಿದ್ದು, ಇಂದು ಯಾದಗಿರಿ ಯಲ್ಲಿಯೂ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.

ನರ್ಸಿಂಗ್ ವಿದ್ಯಾರ್ಥಿಗಳು ಈಗಿನಿಂದಲೇ ಭಾಷಾಜ್ಞಾನ, ಕೌಶಲ್ಯಾಭಿವೃದ್ಧಿ, ಉತ್ತಮ ಸಂವಹನ ಹಾಗೂ ರೋಗಿಗಳೊಂದಿಗೆ ಉತ್ತಮ ವರ್ತನೆ, ಸೇವಾ ಮನೋಭಾವನೆ ಬೆಳೆಸಿಕೊಳ್ಳಬೇಕು. ವೈದ್ಯರ ನಿರ್ದೇಶನಗಳನ್ನು ಸಮಯಕ್ಕೆ ಸರಿಯಾಗಿ ಪಾಲಿಸಿ, ಶಿಸ್ತುಬದ್ಧತೆ ಮೈಗೂಡಿಸಿಕೊಂಡಲ್ಲಿ ಪ್ರತಿಫಲ ಸಿಗಲು ಸಾಧ್ಯ ಎಂದು ಅವರು ಕಿವಿಮಾತು ಹೇಳಿದರು.



> ನರ್ಸಿಂಗ್ ಸೇವೆಗೆ ವಿಶೇಷವಾಗಿ ಜರ್ಮನಿ, ಜಪಾನ್, ಇಟಲಿ ಹಾಗೂ ಆಸ್ಟ್ರೇಲಿಯಾಗಳಲ್ಲಿ ಅಪಾರ ಬೇಡಿಕೆಯಿದೆ. ಆದರೆ ಆಯಾ ದೇಶಗಳ ಭಾಷೆಗಳ ಜ್ಞಾನ ಹಾಗೂ ಇಂಗ್ಲೀಷ್ ಜ್ಞಾನ ಹೊಂದುವುದು ಮುಖ್ಯವಾಗಿರುವದರಿಂದ ಕೆಲವು ವೈದ್ಯಕೀಯ ಕಾಲೇಜುಗಳಲ್ಲಿ ಲ್ಯಾಂಗ್ವೇಜ್ ಲ್ಯಾಬ್ ಸ್ಥಾಪಿಸಲಾಗುತ್ತಿದೆ.
> ■ ಡಾ.ಶರಣಪ್ರಕಾಶ್ ಪಾಟೀಲ, ಸಚಿವ

ಮುಂಬರುವ ಐದು ವರ್ಷಗಳ ಯೋಜನೆ ,ರೂಪಿಸಿ ಪ್ರತಿ ಜಿಲ್ಲೆಯಲ್ಲಿ ಸುಪರ್ ಸ್ಪೆಷಾಲಿಟಿ ಆಸ್ಪತ್ರೆ, ಟ್ರಾಮಾ ಸೆಂಟರ್ ಹಾಗೂ ಕ್ಯಾನ್ಸರ್ ಆಸ್ಪತ್ರೆ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ. ಕಲ್ಬುರ್ಗಿ,ಮೈಸೂರು ಹಾಗೂ ಬೆಳಗಾವಿ, ಕೊಪ್ಪಳ,ಬಳ್ಳಾರಿ, ಹುಬ್ಬಳ್ಳಿ, ಶಿವಮೊಗ್ಗ, ಚಿಕ್ಕಮಗಳೂರು ಗಳಲ್ಲಿ ಸುಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ನ್ನು ಕೆಲವೆಡೆ ಸ್ಥಾಪಿಸಿ ಇನ್ನೂ ಕೆಲವು ಉದ್ಘಾಟನೆ ಹಂತದಲ್ಲಿವೆ.ಯಾದಗಿರಿ, ಕಾರವಾರ, ಗದಗಗಳಲ್ಲಿ ಹಣಕಾಸು ಲಭ್ಯತೆ ಮೇಲೆ ನಿರ್ಣಯ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ಅದರಂತೆ ಕಲ್ಬುರ್ಗಿ,ಮೈಸೂರು,ತುಮಕೂರು, ಮಂಡ್ಯ ಹಾಗೂ ಬೀದರ,ರಾಯಚೂರು ಹಾಗೂ ಕಾರವಾರಗಳಲ್ಲಿ ಕ್ಯಾನ್ಸರ್ ಆಸ್ಪತ್ರೆಗಳ ಸ್ಥಾಪನೆಗೂ ಕ್ರಮ ಕೈಗೊಂಡಿದೆ. ಕಲ್ಬುರ್ಗಿ, ಹಾವೇರಿ ಹಾಗೂ ಹುಬ್ಬಳ್ಳಿ ಗಳಲ್ಲಿ ಟ್ರಾಮಾ ಸೆಂಟರ್ ಸಹ ಸ್ಥಾಪಿಸಲಾಗಿದೆ. ಹೀಗೆ ರಾಜ್ಯದ ಎಲ್ಲ ಜನರಿಗೆ ಉಚಿತ ಹಾಗೂ ಗುಣಮಟ್ಟದ ವೈದ್ಯಕೀಯ ಚಿಕಿತ್ಸಾ ಸೌಲಭ್ಯ ಒದಗಿಸುವ ಸದುದ್ದೇಶವನ್ನು ರಾಜ್ಯ ಸರ್ಕಾರ ಹೊಂದಿದೆ ಎಂದರು.

ಶಾಸಕಚೆನ್ನಾರೆಡ್ಡಿಪಾಟೀಲ್‌ತುನ್ನೂರಅಧ್ಯಕ್ಷತೆವಹಿಸಿ ಮಾತನಾಡಿದರು. ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಹಾಗೂ ಡೀನ್ ಸಂದೀಪ್ ಹೆಚ್.ವಿ ಪ್ರಾಸ್ತಾವಿಕವಾಗಿ ಮಾತನಾಡಿದರು.ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಕಾಡ್ಲೂರ್ ಉಪಸ್ಥಿತರಿದ್ದರು, ಉಪಪ್ರಾಂಶುಪಾಲ ಸಿದ್ದರಾಮಪ್ಪ ಸಜ್ಜನ್ ವಂದಿಸಿದರು.

ಲಾ, ಮೆಡಿಕಲ್ ಕಾಲೇಜು ಸ್ಥಾಪಿಸಿ

ವಿಜಯನಗರ: ಕೋಠಾರಿ ಆಯೋಗದ ಶಿಫಾರಸ್ಸಿನಂತೆ ರಾಜ್ಯ ಬಜೆಟ್‌ನಲ್ಲಿ ಶಿಕ್ಷಣಕ್ಕಾಗಿ ಶೇ.30ರಷ್ಟು ಹಣ ಮೀಸಲಿಡಬೇಕು. ಹೊಸಪೇಟೆ ನಗರದಲ್ಲಿ ಸರ್ಕಾರಿ ಕಾನೂನು ಪದವಿ ಮತ್ತು ಮೆಡಿಕಲ್ ಕಾಲೇಜು ಸ್ಥಾಪಿಸುವ ಬಗ್ಗೆ ಬಜೆಟ್‌ನಲ್ಲಿ ಘೋಷಿಸುವಂತೆ ಸರ್ಕಾರದ ಮೇಲೆ ಒತ್ತಡ ತರಬೇಕು ಎಂದು ಸ್ಥಳೀಯ ಶಾಸಕ ಎಚ್.ಆರ್.ಗವಿಯಪ್ಪ ಅವರಿಗೆ ಎಸ್ ಎಫ್‌ಐ ಕಾರ್ಯಕರ್ತರು ಒತ್ತಾಯಿಸಿದರು.

ಈ ಕುರಿತು ಶಾಸಕ ಎಚ್.ಆರ್. ಗವಿಯಪ್ಪ ಅವರನ್ನು ಸೋಮವಾರ ಭೇಟಿ ಮಾಡಿ ಮನವಿ ಸಲ್ಲಿಸಿ, ರಾಜ್ಯದಲ್ಲಿ ಕಳೆದ 11 ವರ್ಷದಲ್ಲಿ 25,489 ಸರ್ಕಾರಿ ಶಾಲೆಗಳು ಬಾಗಿಲು ಮುಚ್ಚಿದ್ದು, 1,00,011 ಶಿಕ್ಷಕ ಹುದ್ದೆಗಳು ಕುಂಟಿತಗೊಂಡಿವೆ. ಸರ್ಕಾರ ಸರ್ಕಾರಿ ಶಾಲೆಗಳಿಗೆ ಸರಿಯಾದ ಮೂಲಭೂತ ಸೌಕರ್ಯ ಮತ್ತು ಗುಣಮಟ್ಟದ ಶಿಕ್ಷಣ ನೀಡಲು ವಿಫಲವಾದ ಕಾರಣ. ಪರಿಣಾಮ ವರ್ಷದಿಂದ ವರ್ಷಕ್ಕೆ ಮಕ್ಕಳ ಸಂಖ್ಯೆ ಯಾಕೆ ಕಡಿಮೆಯಾಗುತ್ತಿವೆ ಎಂಬುದರ ಬಗ್ಗೆ ಅಧ್ಯಯನ ನಡೆಸಿಲ್ಲ, ಮಕ್ಕಳ ದಾಖಲಾತಿ ನೆಪದಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವುದು ಖಂಡನೀಯ.

ಸರ್ಕಾರಿ ಶಾಲಾ ಕಾಲೇಜುಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಖಾಲಿ ಇರುವ ಶಿಕ್ಷಕರು, ತಾಂತ್ರಿಕ ಉದ್ದೆಗಳು, ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಬೇಕು. ಶಾಲಾ ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಬೇಕು. ಮತ್ತು ಸರ್ಕಾರ ಮುಚ್ಚಲು ಮುಂದಾಗಿರುವ ಸರ್ಕಾರಿ ಶಾಲೆಗಳನ್ನು ಮುಚ್ಚಬಾರದು, ಸರ್ಕಾರಿ ಶಾಲಾ ಕಾಲೇಜುಗಳನ್ನು ಬಳಪಡಿಸಬೇಕು ಹಾಗೂ ಪದವಿ ಶಿಕ್ಷಣದ ಉಚಿತ ಕಡ್ಡಾಯ ಶಿಕ್ಷಣ ನೀಡಬೇಕು.

2006-07 ರಿಂದ ಗ್ರಾಮೀಣ ಪ್ರದೇಶದ 8 ನೇ ತರಗತಿ ವಿದ್ಯಾರ್ಥಿಗಳಿಗೆ ನೀಡುವ ಸೈಕಲ್ ಯೋಜನೆಯನ್ನು 2018 ರಿಂದ ನಿಲ್ಲಿಸಲಾಗಿದೆ. ಈ ಹಿಂದೆ ಪದವಿ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಲ್ಯಾಪ್ ಟಾಪ್ ಯೋಜನೆಯನ್ನು ಮರುಜಾರಿಗೊಳಿಸಬೇಕು. ಈಕುರಿತಂತೆತಕ್ಷಣಮುಖ್ಯಮಂತ್ರಿಗಳಗಮನ ಸೆಳೆದು, ಜನರಿಗೆ ನ್ಯಾಯ ಒದಗಿಸಬೇಕು ಎಂದು ಎಸ್‌ಐ ಕಾರ್ಯಕರ್ತರು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಎಸ್ ಎಫ್‌ಐ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವರೆಡ್ಡಿ, ಜಿಲ್ಲಾ ಅಧ್ಯಕ್ಷ ಜಯಸೂರ್ಯ, ಜಿಲ್ಲಾ ಸಹ ಕಾರ್ಯದರ್ಶಿ ಕೆ.ಎ.ಪವನ್ ಕುಮಾರ್‌ಇದ್ದರು.



ವಚನ ಸಾಹಿತ್ಯ ಸಂರಕ್ಷಣೆಯ ಪಿತಾಮಹ ಫ.ಗು.ಹಳಕಟ್ಟಿ

ಕೊಟ್ಟೂರು: 12ನೇ ಶತಮಾನದ ಬಸವಾದಿ ಶರಣರ ತಾಡೋಲೆಗಳಲ್ಲಿದ್ದ ವಚನ ಸಾಹಿತ್ಯವನ್ನು ಸಂರಕ್ಷಿಸಿ, ಪುಸ್ತಕ ರೂಪದಲ್ಲಿ ಮುದ್ರಿಸಿ, ಜನಸಾಮಾನ್ಯರಿಗೆ ತಲುಪಿಸಿದ ಕೀರ್ತಿ ಫ.ಗು. ಹಳಕಟ್ಟಿ ಅವರಿಗೆ ಸಲ್ಲುತ್ತದೆ ಎಂದು ಶಿಕ್ಷಕ ಟಿ.ಕೆ. ಸಿದ್ದರಾಮೇಶ್ವರ ಹೇಳಿದರು.

ಪಟ್ಟಣದಲ್ಲಿ ನಡೆದ ಶರಣ ಸಾಹಿತ್ಯ ಪರಿಷತ್ತಿನ 'ಲಿಂಗೈಕ್ಯ ಅನುಸೂಯ ಹೊಳೆಸ್ವಾಮಿ ಚರಂತಿಮಠ ದತ್ತಿ ಉಪನ್ಯಾಸಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು. ಫ.ಗು.ಹಳಕಟ್ಟಿಯವರು ಆಗಿನ ಕಾಲದಲ್ಲಿ ತಮ್ಮ ಸ್ವಂತ ಮನೆಯನ್ನು ಮಾರಿ ಪ್ರಿಂಟಿಂಗ್ ಪ್ರೆಸ್ ಹಾಕಿ, ವಚನಗಳನ್ನು ಮುದ್ರಿಸಿ, ಜನಸಾಮಾನ್ಯರಿಗೆ ಉಚಿತವಾಗಿ ಹಂಚಿ, ವಚನ ಸಾಹಿತ್ಯದ ಮೌಲ್ಯಗಳನ್ನು ತಿಳಿಸಿದರು.

ಕಾರ್ಯಕ್ರಮ ಉದ್ಘಾಟನೆ ನೆರವೇರಿಸಿ ಮಾತನಾಡಿದ ಜೆ.ಎಂ.ಶಶಿಕುಮಾರ, ವಚನಕಾರರು ನಿಜವಾದ ತತ್ವಜ್ಞಾನಿಗಳಾಗಿದ್ದರು, ಶರಣರ 'ಕಾಯಕ-ದಾಸೋಹ ತತ್ವ' ವಿಶ್ವ ಮಾನ್ಯವಾದ, ಸರ್ವಕಾಲಕ್ಕೂ ಸಲ್ಲುವ, ಶ್ರೇಷ್ಠ ಮಾದರಿಯಾಗಿದೆ, ಲಂಡನ್‌ನ ಥೇಮ್ಸ್ ನದಿಯ ದಂಡೆಯಲ್ಲಿ ವಿಶ್ವಗುರು ಬಸವಣ್ಣನವರ ಪುತ್ಥಳಿ ಇದೆ ಎಂದು ಹೇಳಿದರು.

ದತ್ತಿ ದಾಸೋಹಿಗಳಾದ ಜೆ.ಎಂ.ಧನಂಜಯ ನಮ್ಮ ಲೌಕಿಕ ಜೀವನದಲ್ಲಿ ವಚನ ಸಾಹಿತ್ಯದಲ್ಲಿನ ಸಾರವನ್ನು ಅಳವಡಿಸಿಕೊಂಡು, ದ್ವೇಷ ಅಸೂಯೆಗಳನ್ನು ತೊಲಗಿಸಿ ನೆಮ್ಮದಿಯುತ ಜೀವನ ಸಾಗಿಸಬೇಕು ಎಂದು ಹೇಳಿದರು. ಶರಣ ಸಾಹಿತ್ಯ ಪರಿಷತ್ ನಡೆದು ಬಂದ ದಾರಿಯನ್ನು ಪ್ರಾಸ್ತಾವಿಕವಾಗಿ ಪರಿಷತ್ತಿನ ಸಹ ಕಾರ್ಯದರ್ಶಿ ಜಿ.ಸಿದ್ದಣ್ಣ ತಿಳಿಸಿದರು. ದತ್ತಿ ಪರಿಚಯವನ್ನು ಪ್ರೌಢಶಾಲಾ ಶಿಕ್ಷಕರಾದ ಜೆ.ಎಂ.ರೇವಣಾರಾಧ್ಯ ಮಾಡಿದರು. ಶರಣ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಹೊಂಬಾಳೆ ಮಂಜುನಾಥ ನಿರ್ವಹಿಸಿದರು. ಶರಣ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷರಾದ ದೇವರಮನಿ ಕರಿಯಪ್ಪ, ದತ್ತಿ ದಾಸೋಹಿಗಳಾದ ವಿಶ್ವಾರಾಧ್ಯ ಹೊಳೆಸ್ವಾಮಿ ಚರಂತಿಮಠ, ಡಾ.ಜೆ.ಎಂ.ಶಿವಕರುಣ ನಾಗರಾಜ ಮಾತನಾಡಿದರು. ದತ್ತಿ ದಾಸೋಹಿಗಳನ್ನು ಸನ್ಮಾನಿಸಲಾಯಿತು.

ಪ್ರೌಢಶಾಲಾ ಶಿಕ್ಷಕರಾದ ಮತ್ತಿಹಳ್ಳಿ ನಾಗರಾಜ, ಜೆ.ಎಂ.ಸುಧೀಂದ್ರ, ದೇವರಮನಿ ಪಿನಾಕಪಾಣಿ, ದೇವರಮನಿ ಕೊಟ್ರೇಶ, ಪತ್ರಿಕಾವಿತರಕ ದೇವರಮನಿ ಮಲ್ಲಿಕಾರ್ಜುನ, ಜಿ.ಷಡಕ್ಷರಿಗೌಡ, ಜಿ.ಮಲ್ಲಿಕಾರ್ಜುನ, ಎಚ್.ಪಂಪಾಪತಿ, ಬಸವರಾಜ, ಕರ್ಣಂ ಮಹಾಂತಪ್ಪ, ಶಿವಮೂರ್ತೆಪ್ಪ, ಜ್ಯೋತಿ ಪ್ರಕಾಶ, ವಿ.ಅನುರಾಧ, ಪುಷ್ಪಾವತಿ, ವಿ.ಕನ್ನಿಕಾ, ಸುವರ್ಣ ಇತರರಿದ್ದರು.



ಹಿಂದೂಗಳು ಸಂಘಟಿತರಾಗಲಿ: ಗುರುಪ್ರಸಾದ ಗೌಡ

ಹಗರಿಬೊಮ್ಮನಹಳ್ಳಿ: ಸರ್ವೇ ಜನ ಸುಖಿನೋ ಭವಂತು ಎಲ್ಲ ಜನಾಂಗ ಸುಖ ಜೀವನ ನಡೆಸಬೇಕು ಎನ್ನುವುದು ಸನಾತನ ಧರ್ಮದ ಉದ್ದೇಶವಾಗಿದ್ದು, ಧರ್ಮ ಸ್ಥಾಪನೆಗಾಗಿ ಜಾತಿ-ಪಂಥ ಮರೆತು ಹಿಂದೂಗಳು ಸಂಘಟಿತರಾಗಬೇಕು ಎಂದು ಗುರುಪ್ರಸಾದ ಗೌಡ ಹೇಳಿದರು.

ಪಟ್ಟಣದ ರಾಷ್ಟ್ರೋತ್ಥಾನ ವಿದ್ಯಾ ಪರಿಷತ್‌ನ ವಿದ್ಯಾರಣ್ಯ ಸಭಾ ಭವನದಲ್ಲಿ ಎಂದು ಜನ ಜಾಗೃತಿ ವೇದಿಕೆ ಕಾರ್ಯಕರ್ತರು ಆಯೋಜಿಸಿದ್ದ 'ಹಿಂದೂ ರಾಷ್ಟ್ರ-ಜನ ಜಾಗೃತಿ ಸಭೆಯನ್ನು ದೀಪಾ ಪ್ರಜ್ವಾಲನೆ, ಶಂಖನಾದದೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಹಿಂದೂ ಜನಜಾಗೃತಿ ಸಮಿತಿಯು ಕಳೆದ 23 ವರ್ಷಗಳಿಂದ ಧರ್ಮಜಾಗೃತಿ ಕಾರ್ಯಕ್ರಮಗಳನ್ನು ಆಯೋಜನೆಮಾಡುತ್ತಿದೆ. ಬಲವಂತದ ಮತಾಂತರದ ಮೂಲಕ ಹಿಂದೂ ಸಮಾಜದ ಮೇಲೆ ಆಘಾತಗಳು ಹೆಚ್ಚುತ್ತಿವೆ ಎಂದರು.



ಅಯೋಧ್ಯೆ ರಾಮಮಂದಿರದ ಮೇಲೆ ಭಗವದ್ ಧ್ವಜ ಸ್ಥಾಪನೆ ಬಳಿಕ ನಾವೆಲ್ಲರೂ ಹಿಂದೂರಾಷ್ಟ್ರ ಸ್ಥಾಪನೆಯ ಯುಗದ ಪ್ರಾರಂಭದ ಹೆಜ್ಜೆಯನ್ನು ಇಟ್ಟಿದ್ದೇವೆ. ಹಿಂದೂ ದೇವಸ್ಥಾನಗಳ ರಕ್ಷಣೆ, ಧಾರ್ಮಿಕ ಸ್ವಾತಂತ್ರ್ಯ, ಸಾಂಸ್ಕೃತಿಕ ಮೌಲ್ಯಗಳ ಸಂರಕ್ಷಣೆಗಾಗಿ ಪ್ರತಿದಿನ ಒಂದು ಗಂಟೆ ಧರ್ಮ ಕಾರ್ಯಕ್ಕಾಗಿ ಸಮಯ ಮೀಸಲಿಡಿ ಎಂದು ಸಲಹೆ ನೀಡಿದರು.

ನಿವೃತ್ತ ಶಿಕ್ಷಕ ಸೋಮನಗೌಡ ಪಾಟೀಲ ಮಾತನಾಡಿ, ಇನ್ನಾದರೂ ಹಿಂದೂ ಸಮಾಜ ಜಾತಿ ಜಾತಿಯಲ್ಲಿ ಸಿಲುಕಿ ಹಾಕಿಕೊಳ್ಳದೆ ನಾವೆಲ್ಲ ಒಂದು ಅಂತ ಮುಂದೆ ಬಂದರೆ ಹಿಂದೂ ಸಮಾಜದ ಮೇಲೆ ಆಗುತ್ತಿರುವ ಅತ್ಯಾಚಾರ, ಹಲ್ಲೆ, ಅಪಮಾನಗಳ ವಿರುದ್ಧ ಹೋರಾಡಲು ಸಾಧ್ಯ ಎಂದು ಹೇಳಿದರು.

ಹಿಂದೂಜನಜಾಗೃತಿಸಮಿತಿಯಸಮನ್ವಯಕರಾದ ವೆಂಕಟರಮಣ, ನಾಯಕ್, ನೂರಾರು ಹಿಂದೂ ಸಮಾಜದ ಬಾಂಧವರು ಹಿಂದೂ ಜನಜಾಗ್ರತಾ ವೇದಿಕೆಯ ಕಾರ್ಯಕರ್ತರು ಪಾಲ್ಗೊಂಡಿದ್ದರು. ಸುಮಾ ಕುಂಬಾರ ನಿರ್ವಹಿಸಿದರು.

ಸಾರಿ ದುರ್ಗಾದೇವಿ ದೇವಸ್ಥಾನದಲ್ಲಿ ಮೂಲ ಸೌಕರ್ಯ ಕಲ್ಪಿಸಿ

ಹೂವಿನಹಡಗಲಿ: ತಾಲೂಕಿನ ಮಾಗಳ ಗ್ರಾಮದಲ್ಲಿರುವ ಶ್ರೀಸಾರಿ ದುರ್ಗಾದೇವಿ ದೇವಸ್ಥಾನದ ಪಕ್ಕದಲ್ಲಿನ ಸರ್ಕಾರಿ ಜಾಗದಲ್ಲಿ ಕುಡಿಯುವ ನೀರು, ಶೌಚಾಲಯ ಹಾಗೂ ಸ್ನಾನಗೃಹ ನಿರ್ಮಾಣ ಮಾಡಲು ಶ್ರೀಸಾರಿ ದುರ್ಗಾ ದೇವಿ ದೇವಸ್ಥಾನದ ದೀಪೋತ್ಸವ ಸೇವಾ ಸಮಿತಿಯ ವತಿಯಿಂದ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಜಿ.ಪರಮೇಶ್ವರ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ದೇವಸ್ಥಾನದಲ್ಲಿ ಪ್ರತಿವರ್ಷ ದಸರಾ ಹಾಗೂ ಕಾರ್ತೀಕೋತವ ಕಾರ್ಯಕ್ರಮಗಳು ವಿಜೃಂಭಣೆಯಿಂದ ನಡೆಯುತ್ತಿದ್ದು, ಸಾವಿರಾರು ಭಕ್ತರು ಭಾಗವಹಿಸುತ್ತಾರೆ. ಧಾರ್ಮಿಕ ಕಾರ್ಯಕ್ರಮಗಳ ಸಂದರ್ಭದಲ್ಲಿ ಭಾಗವಹಿಸುವ ಭಕ್ತರಿಗೆ ಮೂಲ ಸೌಕರ್ಯಗಳ ಕೊರತೆ ಉಂಟಾಗುತ್ತಿರುವ ಹಿನ್ನೆಲೆ, ಕುಡಿಯುವ ನೀರು ಹಾಗೂ ಶೌಚಾಲಯ ವ್ಯವಸ್ಥೆ ಕಲ್ಪಿಸುವಂತೆ ತಾಪಂ ಇಒಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ.



ಭಕ್ತರ ಅನುಕೂಲಕ್ಕಾಗಿ ಶುದ್ಧ ಕುಡಿಯುವ ನೀರಿನ ಟ್ಯಾಂಕ್, ಮಹಿಳಾ ಹಾಗೂ ಪುರುಷರಿಗಾಗಿ ಪ್ರತ್ಯೇಕ ಶೌಚಾಲಯಗಳು ಮತ್ತು ಸ್ನಾನಗೃಹಗಳನ್ನು ನಿರ್ಮಿಸುವ ಅಗತ್ಯವಿದೆ ಎಂದು ಸಮಿತಿಯ ಪದಾಧಿಕಾರಿಗಳು ಮನವಿಯಲ್ಲಿ ತಿಳಿಸಿದ್ದಾರೆ. ದೇವಸ್ಥಾನದ ಸುತ್ತಮುತ್ತ ಸ್ವಚ್ಛತೆ ಕಾಪಾಡಲು ತ್ಯಾಜ್ಯ ವಿಲೇವಾರಿ ವ್ಯವಸ್ಥೆ, ಬೆಳಕು ವ್ಯವಸ್ಥೆ ಹಾಗೂ ರಸ್ತೆ ಸುಧಾರಣೆ ಮಾಡುವಂತೆಯೂ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಗ್ರಾಮಸ್ಥರು ಹಾಗೂ ಭಕ್ತರು ಸಹ ಸರ್ಕಾರದಿಂದ ಶೀಘ್ರದಲ್ಲೇ ಅನುಮೋದನೆ ದೊರೆಯುವ ನಿರೀಕ್ಷೆಯನ್ನು ವ್ಯಕ್ತಪಡಿಸಿದ್ದಾರೆ.

ಈ ವೇಳೆ ಗ್ರಾಪಂ ಪಿಡಿಒ ಗುತ್ತೆಪ್ಪ ತಳವಾರ, ದಾದಪುರ ರಮೇಶ್, ಈಟಿ ಕೋಟೆಪ್ಪ, ಭಾಷಾ ಸಾಬ್, ಕಾಶಿನಾಥ, ಶಂಭುನಾಥ, ಪ್ರಕಾಶ ಸೇರಿದಂತೆ ಸಮಿತಿಯ ಪದಾಧಿಕಾರಿಗಳು ಮತ್ತು ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ರೈತರ ಬಗ್ಗೆ ಕಾಳಜಿ ಇಲ್ಲದ ಕಾಂಗ್ರೆಸ್ ಸರ್ಕಾರ

ಹಗರಿಬೊಮ್ಮನಹಳ್ಳಿ: ರಾಜ್ಯದಲ್ಲಿ 2800ಕ್ಕೂ ಹೆಚ್ಚು ರೈತರ ಆತ್ಮಹತ್ಯೆಯಾಗಿದೆ. ಕಲ್ಯಾಣ ಕರ್ನಾಟಕದಲ್ಲಿ ಅತಿವೃಷ್ಟಿಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇಷ್ಟಾದರೂ ಅನ್ನದಾತನ ಅಳಲನ್ನು ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ ಆಲಿಸುತ್ತಿಲ್ಲ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರ್ ಸ್ವಾಮಿ ಹೇಳಿದರು.

ಭಾನುವಾರ ಜೆಡಿಎಸ್ ಪಕ್ಷದ ಬೆಳ್ಳಿ ಹಬ್ಬದ ಅಂಗವಾಗಿ ಜನರೊಂದಿಗೆ ಜನತಾದಳ ಕಾರ್ಯಕ್ರಮ ಜಿಲ್ಲಾಧ್ಯಕ್ಷರ ಪದಗ್ರಹಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

25 ವರ್ಷದಲ್ಲಿ ಜೆಡಿಎಸ್‌ನಿಂದ 54 ಜನ ಶಾಸಕ, ಸಚಿವ, ಉಪ ಮುಖ್ಯಮಂತ್ರಿ ಸ್ಥಾನ ಪಡೆದು ಪಕ್ಷ ತ್ಯಜಿಸಿದ್ದಾರೆ. ನಿಷ್ಠಾವಂತ ಕಾರ್ಯಕರ್ತರು ಪಕ್ಷದ ಬಾವುಟವನ್ನು ಹೃದಯಲ್ಲಿಟ್ಟುಕೊಂಡುಪ್ರೀತಿಸುತ್ತಿರುವ ಪರಿಣಾಮ ಜೆಡಿಎಸ್ ಪ್ರಾದೇಶಿಕ ಪಕ್ಷವಾಗಿ ಗಟ್ಟಿಯಾಗಿ ನಿಲ್ಲಲು ಸಾಧ್ಯವಾಗಿದೆ ಎಂದರು. ಪಕ್ಷ ಸುವರ್ಣ ಮಹೋತ್ಸವದತ್ತ ಮುನ್ನಡೆಸುವ ಆತ್ಮಸ್ಥೈರ್ಯವನ್ನು ತುಂಬುವ ಕೆಲಸ ಪಕ್ಷದ ಕಾರ್ಯಕರ್ತರು ರಾಜ್ಯದ ಜನರು ಮಾಡಬೇಕು ಎಂದರು.



ಗ್ಯಾರಂಟಿ ಹೆಸರಿನಲ್ಲಿ ರಾಜ್ಯವನ್ನು ಲೂಟಿ ಮಾಡಲು ಹೊರಟಿರುವ ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮೀಸಲಿಟ್ಟ ಹಣವನ್ನು ಗ್ಯಾರಂಟಿಗಳಿಗಾಗಿ ಪ್ರತಿವರ್ಷ ಒಂದು ಲಕ್ಷ ಕೋಟಿ ಸಾಲ ಮಾಡುವ ರಾಜ್ಯ ಸರ್ಕಾರ ರಾಜ್ಯದ ಜನತೆಗೆ ಸಾಲದ ಹೊರೆಯನ್ನು ಕೊಡುಗೆಯಾಗಿ ನೀಡಿದೆ ಎಂದರು. ಕುಮಾರಣ್ಣ ಅಲ್ಪ ಸಮಯ ಮುಖ್ಯಮಂತ್ರಿ ಆಗಿದ್ದ ಸಮಯದಲ್ಲಿ 27 ಸಾವಿರ ಕೋಟಿ ರೈತರ ಸಾಲಮನ್ನಾ ಮಾಡಿದ್ದಾರೆ ಎಂದರು.

ಶಾಸಕ ಕೆ ನೇಮಿರಾಜ್ ನಾಯ್ಕ್ ಮಾತನಾಡಿ, ರಾಜ್ಯ ಸರ್ಕಾರ ಗ್ಯಾರಂಟಿ ಹೆಸರಿನಲ್ಲಿ ಕೊಳ್ಳೆ ಹೊಡೆಯುವ ಕೆಲಸ ಮಾಡುತ್ತಿದೆ. ಮುಂಬರುವ ದಿನಗಳಲ್ಲಿ ಕ್ಷೇತ್ರದ 17 ಕೆರೆಗಳನ್ನು ತುಂಬಿಸಲು ಕುಮಾರಣ್ಣ ಮತ್ತೆ ರಾಜ್ಯದ ಮುಖ್ಯಮಂತ್ರಿ ಆಗಲು ಜನತೆಯ ಆಶೀರ್ವಾದ ಬೇಕಿದೆ ಎಂದರು. ನೂತನ ಜಿಲ್ಲಾಧ್ಯಕ್ಷರಾಗಿ ಆಯ್ಕೆ ಆಗಿರುವ ಬಾದಾಮಿ ಮೃತ್ಯುಂಜಯ ಅವರಿಗೆ ಪಕ್ಷದ ಬಾವುಟ ನೀಡಿ ಪದಗ್ರಹಣ ಮಾಡಿಲಾಯಿತು. ಜಿಲ್ಲಾಧ್ಯಕ್ಷ ಬಾದಾಮಿ ಮೃತ್ಯುಂಜಯ ಮಾತನಾಡಿದರು.

ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಮಾಜಿ ಶಾಸಕರಾದ ಶಿವಶಂಕರ್ ಎಚ್.ಎಸ್., ಅನಿಲ್ ಲಾಡ್, ಜಿಲ್ಲಾಧ್ಯಕ್ಷ ಬಾದಾಮಿ ಮೃತ್ಯುಂಜಯ, ಮಾಜಿ ಜಿಪಂ ಸದಸ್ಯ ಹರ್ಷವರ್ಧನ್, ಜೆಡಿಎಸ್ ಜಿಲ್ಲಾ ಉಪಾಧ್ಯಕ್ಷ ಕೃಷ್ಣಮೂರ್ತಿ ಶೆಟ್ರು, ಪುರಸಭೆ ಸದಸ್ಯರಾದ ಗಂಗಣ್ಣ, ನಾಗರಾಜ ಜನ್ನು ಇತರರಿದ್ದರು.

ಶಾರದಮ್ಮ ಸಂಗಡಿಗರು ಪ್ರಾರ್ಥಿಸಿದರು. ಜೆಡಿಎಸ್ ತಾಲೂಕು ಅಧ್ಯಕ್ಷ ವೈ.ಮಲ್ಲಿಕಾರ್ಜುನ ಸ್ವಾಗತಿಸಿದರು. ಕನ್ನಿಹಳ್ಳಿ ಚಂದ್ರಶೇಖರ್ ಶಿವಶಂಕರ್ ಸ್ವಾಮಿ ಮತ್ತು ಗವಿಸಿದ್ದಯ್ಯ ಬ್ಯಾಟಿ ನಾಗರಾಜ ನಿರ್ವಹಿಸಿದರು.

ಮಾದಕ ವ್ಯಸನ ಮುಕ್ತ ಸಮಾಜಕ್ಕೆ ಮ್ಯಾರಾಥಾನ್

ಬಳ್ಳಾರಿ: ಸಮಾಜದಲ್ಲಿ ಹೆಚ್ಚುತ್ತಿರುವ ಮಾದಕ ವಸ್ತುಗಳ ಬಳಕೆ, ರಸ್ತೆ ಅಪಘಾತಗಳು ಹಾಗೂ ಸೈಬರ್ ಅಪರಾಧ, ಬಾಲ್ಯ ವಿವಾಹ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಮ್ಯಾರಾಥಾನ್ ಆಯೋಜಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪನ್ನೇಕರ್ ಹೇಳಿದರು. ನಗರದ ಡಿಎಆರ್ ಮೈದಾನದಲ್ಲಿ ಮಾದಕ ವಸ್ತುಗಳ ಬಳಕೆ ತಡೆಗಟ್ಟುವಿಕೆ, ರಸ್ತೆ ಸುರಕ್ಷತೆ ಹಾಗೂ ಸೈಬರ್ ಅಪರಾಧ, ಬಾಲ್ಯ ವಿವಾಹ ವಿರುದ್ಧ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಹಮ್ಮಿಕೊಂಡಿದ್ದ ಬಳ್ಳಾರಿ ಪೊಲೀಸ್ ರನ್(ಮ್ಯಾರಥಾನ್ ಮತ್ತು ವಾಕಾಥಾನ್)ಗೆ ಚಾಲನೆ ನೀಡಿ ಮಾತನಾಡಿದರು. ಯುವಕರನ್ನು ಡ್ರಗ್ಸ್‌ನಿಂದ ದೂರವಿರಿಸಿ, ಕ್ರೀಡೆ ಮತ್ತು ಆರೋಗ್ಯಕರ ಜೀವನಶೈಲಿಯತ್ತ ಒಲಿಸುವುದು. ಜೊತೆಗೆ ರಸ್ತೆ ಸುರಕ್ಷತೆ ನಿಯಮಗಳ ಪಾಲನೆ, ಮಹಿಳೆ, ಮಕ್ಕಳ ರಕ್ಷಣೆ, ಬಾಲ್ಯ ವಿವಾಹ ಹಾಗೂ ಸೈಬರ್ ಅಪರಾಧಗಳ ಬಗ್ಗೆ ಎಚ್ಚರಿಕೆ ಮೂಡಿಸುವುದು ಮ್ಯಾರಥಾನ್‌ನ ಮುಖ್ಯ ಉದ್ದೇಶವಾಗಿದೆ ಎಂದು ಅವರು ಹೇಳಿದರು.



ಈ ಜಾಗೃತಿ ಮ್ಯಾರಥಾನ್ ಅಭಿಯಾನವು ರಾಜ್ಯಾದ್ಯಂತ ನಡೆಯುತ್ತಿದ್ದು, ಬಳ್ಳಾರಿಯಲ್ಲಿ ಸತತವಾಗಿ ಇದು ಮೂರನೇ ಬಾರಿಯ ಆಯೋಜನೆಯಾಗಿದೆ. 5ಕೆ ಮತ್ತು 10ಕೆ ರನ್ ವಿಭಾಗದಲ್ಲಿ ಸಾವಿರಕ್ಕೂ ಅಧಿಕ ಮಂದಿ ಉತ್ಸಾಹದಿಂದ ನೋಂದಣಿ ಮಾಡಿಕೊಂಡು ಭಾಗವಹಿಸಿರುವುದು ಬಹಳ ಸಂತಸ ತಂದಿದೆ. ಹಿರಿಯ ನಾಗರಿಕರಿಗಾಗಿ ಪ್ರತ್ಯೇಕವಾಗಿ 2ಕೆ ವಾಕಥಾನ್ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಓಟದ ಮಾರ್ಗದುದ್ದಕ್ಕೂ ಸೈಬರ್ ಕ್ರೈಮ್ ಜಾಗೃತಿ ಹಾಗೂ ರಸ್ತೆ ಸುರಕ್ಷತೆಯ ಕುರಿತಾದ ಘೋಷಣೆಗಳು ಗಮನ ಸೆಳೆದವು. ಸಾರ್ವಜನಿಕರುಮತ್ತು ಯುವಜನತೆ ಉತ್ಸಾಹದಿಂದ ಪಾಲ್ಗೊಂಡು ಜಾಗೃತಿ ಸಂದೇಶಕ್ಕೆ ಬೆಂಬಲ ಸೂಚಿಸಿದರು. ಮ್ಯಾರಥಾನ್‌ನ ವಿವಿಧ ವಿಭಾಗಗಳಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ವಿಜೇತರಿಗೆ ನಗದು, ಪದಕ, ಪ್ರಶಸ್ತಿ ಪತ್ರ ಹಾಗೂ ಓಟದ ನಂತರ ಏರ್ಪಡಿಸಲಾಗಿದ್ದ ಕ್ವಿಜ್ ಸ್ಪರ್ಧೆಯಲ್ಲಿ ಸರಿಯಾದ ಉತ್ತರ ನೀಡಿದವರಿಗೆ ಬಹುಮಾನವಾಗಿ ಹೆಲ್ಮೆಟ್ ವಿತರಿಸಲಾಯಿತು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್. ಹೊಸಮನೆ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಎನ್., ಬಳ್ಳಾರಿ ವಲಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ.ಎನ್. ಬಸವರಾಜ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎನ್.ನವೀನ್ ಕುಮಾರ್ ಸೇರಿದಂತೆ ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಇತರರು ಭಾಗವಹಿಸಿದ್ದರು.